# ಕರ್ನಾಟಕ ವಿಧಾನ ಪರಿಷತ್ತು

## ಸೋಮವಾರ, 26ನೇ ಮಾರ್ಚ್ 2012

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 21 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ. ಹೆಚ್. ಶಂಕರಮೂರ್ತಿ) ಅವರು**

**ಪೀಠದಲ್ಲಿ ಉಪಸ್ಥಿತರಿದ್ದರು.**

## 1. ಪ್ರಕಟಣೆಗಳು

### i) ಮುಖ್ಯ ಮಂತ್ರಿಯವರನ್ನು ಸದನದ ಸಭಾನಾಯಕರೆಂದು ಘೋಷಿಸುವ ಬಗ್ಗೆ

**ಸಭಾಪತಿಯವರು** : ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧನ ಹಾಗೂ ನಡವಳಿಕೆಗಳ ನಿಯಮ 2(1)ರ ರಿತ್ಯ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರು ಹಾಗೂ ಮುಖ್ಯಮಂತ್ರಿಯವರು ಆದ **ಶ್ರೀ ಡಿ. ವಿ. ಸದಾನಂದಗೌಡ** ರವರು ವಿಧಾನ ಪರಿಷತ್ತಿನ ಸಭಾನಾಯಕರು ಎಂದು ಘೋಷಿಸುತ್ತಿದ್ದೇನೆ.

(ಸದರಿ ಸಂದರ್ಭದಲ್ಲಿ ಕೆಲವು ಮಾನ್ಯ ಸದಸ್ಯರುಗಳು ಮೇಜುಕುಟ್ಟಿ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)

**ಶ್ರೀ ವೀರಣ್ಣ ಮತ್ತೀಕಟ್ಟಿ** : ಮಾನ್ಯ ಸಭಾಪತಿಯವರೆ, ಒಬ್ಬ ಮುಖ್ಯಮಂತ್ರಿಯವರು ಈ ಸದನದ ಸಭಾನಾಯಕರಾಗಿದ್ದಕ್ಕಾಗಿ ಅವರು ಸ್ವಾಗತ ಮಾಡಲಿಲ್ಲ. ನಾವು ಸ್ವಾಗತ ಮಾಡಿದ್ದೇವೆ.

**ಶ್ರಿ ಯಂ. ಸಿ. ನಾಣಯ್ಯ** : ಮಾನ್ಯ ಸಭಾಪತಿಯವರೆ ಅವರ ಬಗ್ಗೆ ಪ್ರತ್ಯಕ್ಷವಾಗಿಯಲ್ಲದಿದ್ದರೂ ಪರೋಕ್ಷವಾಗಿ ಏನಾದರು ಅಸಮಾಧಾನ ನಿಮ್ಮ ಪಕ್ಷದಲ್ಲಿ ಇದೆಯೇ ಎನ್ನುವ ಸೂಚಕ ಅದು ಇದೆಯೇ ಎಂದು ಅವರು ಹೇಳಿದ್ದಾರೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ಮಾನ್ಯ ಸಭಾಪತಿಯವರೆ, ಈ ವಿಷಯ ಎಲ್ಲೆಲ್ಲೋ ತೆಗೆದುಕೊಂಡು ಹೋಗುವುದು ಬೇಡ, ನಾವೆಲ್ಲರೂ ಅತ್ಯಂತ ಸಂತೋಷದಿಂದ ಇಡೀ ಸದನ ಹೆಮ್ಮೆ ಪಡುವಂಥ ಒಂದು ಸಂದರ್ಭ, ನಾವೆಲ್ಲರೂ ಸಂತೋಷಪಟ್ಟಿದ್ದೇವೆ.

### ii) ಸಭಾಪತಿಯವರ ಸ್ಥಾನದಲ್ಲಿ ಪದಧಾರಣೆ ಮಾಡುವ ಸದಸ್ಯರ ಪಟ್ಟಿ.

**ಸಭಾಪತಿಯವರು** : ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 9ರ ಮೇರೆಗೆ ಈ ಕೆಳಕಂಡ ಸದಸ್ಯರುಗಳನ್ನು ಸಭಾಪತಿಯವರ ಮತ್ತು ಉಪಸಭಾಪತಿಯವರ ಗೈರು ಹಾಜರಿಯಲ್ಲಿ

ಸಭಾಪತಿಯವರ ಸ್ಥಾನದಲ್ಲಿ ಪದಧಾರಣೆ ಮಾಡುವಂತೆ ನಾಮನಿರ್ದೇಶನ ಮಾಡಲಾಗಿದೆ.

**ಶ್ರೀ. ಬಸವರಾಜ ಹೊರಟ್ಟಿ,**

**ಶ್ರೀ ಎನ್. ತಿಪ್ಪಣ್ಣ**

**ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ**

**ಶ್ರೀ ಡಿ. ಎಸ್. ವೀರಯ್ಯ**

## 2. ಸಂತಾಪ ಸೂಚನೆ

**ವಿಷಯ : ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸಚಿವರಾದ ಶ್ರೀ ಎಂ. ವರದೇಗೌಡ ಹಾಗೂ ವಿಜಯ ಕರ್ನಾಟಕ ದಿನಪತ್ರಿಕೆಯ ಸಂಪಾದಕರಾದ ಶ್ರೀ ಈ. ರಾಘವನ್ ಅವರುಗಳ ನಿಧನದ ಬಗ್ಗೆ.**

**ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎಂ. ವರದೇಗೌಡ ಹಾಗೂ ವಿಜಯ ಕರ್ನಾಟಕ ದಿನಪತ್ರಿಕೆಯ ಸಂಪಾದಕರಾದ ಶ್ರೀ ಈ. ರಾಘವನ್ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.**

**<u>ಶ್ರೀಯುತ ಎಂ. ವರದೇಗೌಡ :</u>**

ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎಂ. ವರದೇಗೌಡ ಅವರು ದಿನಾಂಕ: 24.03.2012 ರಂದು ನಿಧನ ಹೊಂದಿರುತ್ತಾರೆ.

1945ರ ಜೂನ್, 06ರಂದು ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ವಿರುಪಸಂದ್ರ ಗ್ರಾಮದಲ್ಲಿ ಜನಿಸಿದ ಇವರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಚನ್ನಪಟ್ಟಣ ತಾಲ್ಲೂಕಿಗೆ ಸಮಗ್ರ ನೀರಾವರಿ ಸೌಲಭ್ಯ ಕಲ್ಪಿಸುವ ಇಗ್ಗಲೂರು ಏತ ನೀರಾವರಿ ಯೋಜನೆಗೆ ಮುನ್ನುಡಿ ಬರೆದ ಕೀರ್ತಿಗೆ ಭಾಜನರಾಗಿದ್ದಾರೆ. ಚನ್ನಪಟ್ಟಣ ತಾಲ್ಲೂಕಿನ ಸಮಗ್ರ ಅಭಿವೃದ್ಧಿಗೆ

ಶ್ರಮಿಸಿದ್ದರು. ಶ್ರೀಯುತರು ಏಳು, ಎಂಟು ಮತ್ತು ಹತ್ತನೇ ವಿಧಾನ ಸಭೆಗೆ ಚನ್ನಪಟ್ಟಣ ಮತಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿ ಶ್ರೀ ದೇವೇಗೌಡರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ವಿಧಾನಸಭೆಯ ಸರ್ಕಾರಿ ಮುಖ್ಯ ಸಚೇತಕರಾಗಿ, ಶ್ರೀ ಜೆ. ಹೆಚ್. ಪಟೇಲ್‌ರ ಸಂಪುಟದಲ್ಲಿ ರೇಷ್ಮೆ, ಉದ್ಯೋಗ ವಿನಿಮಯ ಮತ್ತು ತರಬೇತಿ, ಸಾಂಸ್ಥಿಕ ಹಣಕಾಸು ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು.

**ಇವರ ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ಹಾಗೂ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.**

**ಶ್ರೀಯುತ ಈ. ರಾಘವನ್**

**ನಾಡಿನ ಹೆಸರಾಂತ ಹಿರಿಯ ಪತ್ರಕರ್ತ ಶ್ರೀಯುತ ಈ. ರಾಘವನ್ ಅವರು ದಿನಾಂಕ: 24.03.2012ರಂದು ನಿಧನ ಹೊಂದಿರುತ್ತಾರೆ.**

1951ರ ಜನವರಿ, 18ರಂದು ಜನಿಸಿದ ಶ್ರೀಯುತರು ಬೆಂಗಳೂರಿನ ಸರ್ಕಾರಿ ವಿಜ್ಞಾನ ಮತ್ತು ಕಲಾ ಕಾಲೇಜಿನಿಂದ ಬಿ. ಎ. ಪದವೀಧರರಾಗಿ, 1971ರಲ್ಲಿ ಇಂಡಿಯನ್ ಎಕ್ಸಪ್ರೆಸ್ ವರದಿಗಾರರಾಗಿ ಮೈಸೂರಿನಲ್ಲಿ ತಮ್ಮ ಪತ್ರಕರ್ತ ವೃತ್ತಿಯನ್ನು ಆರಂಭಿಸಿದರು. ಇಂಡಿಯನ್ ಎಕ್ಸಪ್ರೆಸ್ ಪತ್ರಿಕೆಯ ವರದಿಗಾರರಾಗಿ, ಟೈಮ್ಸ್ ಆಫ್ ಇಂಡಿಯಾ ಮುಖ್ಯ ವರದಿಗಾರರಾಗಿ ಹಾಗೂ ಎಕನಾಮಿಕ್ ಟೈಮ್ಸ್‌ನ ಸಂಪಾದಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದ ಶ್ರೀಯುತರು ನಂತರ 2010ರ ಏಪ್ರಿಲ್‌ನಲ್ಲಿ ವಿಜಯ ನೆಕ್ಸ್ಟ್‌ನ ಸಂಪಾದಕರಾಗಿ, 2010ರ ಡಿಸೆಂಬರ್‌ನಲ್ಲಿ ವಿಜಯ ಕರ್ನಾಟಕ ಪತ್ರಿಕೆಯ ಮುಖ್ಯ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಇವರು ತಮ್ಮ ನಾಲ್ಕು ದಶಕಗಳ ಪತ್ರಿಕೋದ್ಯಮ ಜೀವನದಲ್ಲಿ ವರದಿಗಾರಿಕೆಗೆ ಹೊಸ ಆಯಾಮ ಕಂದುಕೊಟ್ಟರು. ವರದಿಯು ಸತ್ಯ ಹಾಗೂ ವಸ್ತುನಿಷ್ಠವಾಗಿರಬೇಕೆಂಬ ಪತ್ರಿಕಾಧರ್ಮ ಪಾಲನೆಯ ಪ್ರಬಲ ಪ್ರತಿಪಾದಕರೂ, ಪರಮ ಪಾಲಕರೂ ಆಗಿದ್ದ ಅವರು ನೇರ ನಡೆ–ನುಡಿ, ನಿಷ್ಠುರತೆಗೆ ಹೆಸರಾಗಿದ್ದರು. ಶ್ರೀಯುತರು

Broadening and Deepening Democracy; Political Innovation in Karnataka ಎಂಬ ಪುಸ್ತಕವನ್ನು ಬರೆದಿದ್ದರು.

ಇವರ ನಿಧನದಿಂದಾಗಿ ನಾಡು ಒಬ್ಬ ಹಿರಿಯ ಪತ್ರಕರ್ತರನ್ನು ಕಳೆದುಕೊಂಡಂತಾಗಿದೆ.

**ಸಭಾನಾಯಕರು ಮಾತನಾಡಿದ ನಂತರ :**

ಮೃತರುಗಳ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಮೃತರುಗಳ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :** ಮಾನ್ಯ ಸಭಾಪತಿಯವರೆ, ತಾವು ಮಂಡಿಸಿರುವ ಸಂತಾಪ ಸೂಚನಾ ನಿರ್ಣಯವನ್ನು ಅನುಮೋದಿಸುತ್ತ ಇವೊತ್ತು ಹಿರಿಯರಾದ ಶ್ರೀ ಎಂ. ವರದೇಗೌಡರವರು ಹಾಗೂ ವಿಜಯ ಕರ್ನಾಟಕ ಪತ್ರಿಕೆಯ ಮುಖ್ಯ ಸಂಪಾದಕರಾದ ಶ್ರೀ ಈ. ರಾಘವನ್‌ರವರು ನಿಧನರಾದ ಹಿನ್ನೆಲೆಯಲ್ಲಿ ಈ ಸಂತಾಪ ಸೂಚನೆಯಲ್ಲಿ ಸರ್ಕಾರದ ಪರವಾಗಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಶ್ರೀ. ಎಂ. ವರದೇಗೌಡರವರು ಶಾಸಕರಾಗಿ, ಚನ್ನಪಟ್ಟಣ ಕ್ಷೇತ್ರದಿಂದ ಆಯ್ಕೆಯಾಗಿ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿರುವ ಬಗ್ಗೆ ಆ ಕ್ಷೇತ್ರದ ಜನ ಸದಾ ಸ್ಮರಿಸುತ್ತಿರುವುದನ್ನು ನಿನ್ನೆ ಮೊನ್ನೆ ಅವರ ಬಗ್ಗೆ ಜನ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿರುವುದನ್ನು ನೋಡಿದಾಗ ಅವರು ಜನರ ಪರವಾಗಿದ್ದರು, ಅಭಿವೃದ್ಧಿಯ ಪರವಾಗಿದ್ದರೆಂದು ನಮಗೆಲ್ಲಾ ಬಹಳ ಸ್ಪಷ್ಟವಾಗುತ್ತದೆ. ಯಾವುದೇ ಜನಪ್ರತಿನಿಧಿಯಾಗಿರುವಂಥವರು ಹೇಗೆ ಜನಪರವಾಗಿ ಇರಬೇಕೆಂದು ನಾವು ಹೇಳುವುದಿದೆ, ಆದರೆ ಅವರು ಹಾಗೆ ಜನಸಾಮಾನ್ಯರಾಗಿ ಮಾಡಿ ತೋರಿಸಿದ್ದಾರೆ. ಒಮ್ಮೆ ಶಾಸಕನಾಗಿದ್ದೆ. ಒಮ್ಮೆ ಮಂತ್ರಿಯಾಗಿದ್ದೆ ಎಂದು ನಮ್ಮ ಜೀವನದಲ್ಲಿ ಅನೇಕ ರೀತಿಯ

ವ್ಯತ್ಯಾಸಗಳಾಗುವುದನ್ನು ನಾವು ಸಹಜವಾಗಿ ಕಾಣುತ್ತಿರುತ್ತೇವೆ. ಆದರೆ ವರದೇಗೌಡರು ಜನಪ್ರತಿನಿಧಿಯಾಗಿ, ಜನರ ಮಧ್ಯೆ ಇದ್ದು ಜನರ ಕಷ್ಟ ಸುಖಗಳನ್ನು ಹತ್ತಿರದಿಂದ ನೋಡಿ ಅದಕ್ಕೆ ಸ್ಪಂದಿಸುತ್ತಿರುವ ವ್ಯಕ್ತಿತ್ವವನ್ನು ಹೊಂದಿದವರಾಗಿದ್ದರು. ನಾನು ನನ್ನ ನಂಬಿಕೆ ಮತ್ತು ಅವರ ಬಗ್ಗೆ ಈ ಮಾತುಗಳನ್ನು ಏಕೆ ಹೇಳಲು ಬಯಸುತ್ತೇನೆಂದರೆ ಶ್ರೀ ಜೆ. ಹೆಚ್. ಪಟೇಲರ ಸರ್ಕಾರದಲ್ಲಿ ಅವರು ಸಚಿವರಾಗಿದ್ದಾಗ ನಾವು ಮೊದಲನೆ ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಂಥವರು. ಅವರು ರೇಷ್ಮೆ ಸಚಿವರಾಗಿ ಕೆಲಸ ಮಾಡುತ್ತಿರುವಾಗ ನಮ್ಮ ಜಿಲ್ಲೆ ಆ ಕಾಲದಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯುವುದಕ್ಕೆ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ನಮ್ಮದೆಲ್ಲಾ ಸೀಡ್ ಏರಿಯಾ. ಆ ಹಿನ್ನೆಲೆಯಲ್ಲಿ ನಾನು ಅವರೊಂದಿಗೆ ಅನೇಕ ವಿಚಾರಗಳನ್ನು ಚರ್ಚಿಸುತ್ತಿದ್ದೆ. ಆಗ ಅವರು ಹೇಗೆ ರೈತರ ಪರವಾಗಿ, ರೇಷ್ಮೆ ಬೆಳೆಗಾರರ ಪರವಾಗಿ ತಮ್ಮ ಪ್ರಾಮಾಣಿಕವಾದಂಥ ಕಾಳಜಿಯನ್ನು ವ್ಯಕ್ತಪಡಿಸುತ್ತಿದ್ದರು ಎನ್ನುವಂಥದ್ದನ್ನು ಮತ್ತು ಅದಕ್ಕೆ ಹೇಗೆ ಸ್ಪಂದಿಸುತ್ತಿದ್ದರು ಎನ್ನುವಂಥದ್ದನ್ನು ನಾನು ಸ್ವತಃ ಶಾಸಕನಾಗಿ ಅವರು ಸಚಿವರಾಗಿದ್ದಂಥ ಸಂದರ್ಭದಲ್ಲಿ ಅನುಭವಿಸಿದ್ದೇನೆ. ಇದೇ ಭಾವನೆಗಳು, ಇದೇ ಮಾತುಗಳು ಅವರ ಕ್ಷೇತ್ರದ ಜನರಲ್ಲಿ ಕಾಣುತ್ತಿದ್ದೇವೆ. ಹಾಗಾಗಿ ಒಬ್ಬ ಜನಪ್ರತಿನಿಧಿಯಾಗಿ ಆಯ್ಕೆಯಾಗಿ, ಜನರ ಜೊತೆಗಿದ್ದು, ಅವರ ಕಷ್ಟ ಸುಖಗಳಿಗೆ ಸ್ಪಂದಿಸುವಂಥ ವ್ಯಕ್ತಿತ್ವ ಮಾನ್ಯ ವರದೇಗೌಡರದ್ದಾಗಿತ್ತು ಎಂದು ನಾನು ಈ ಸಂದರ್ಭದಲ್ಲಿ ಮತ್ತೆ ಸ್ಮರಿಸಿ ಕೊಳ್ಳುವುದಕ್ಕೆ ಬಯಸುತ್ತೇನೆ. ಅವರು ಅಳವಡಿಸಿಕೊಂಡಿರುವಂಥ ಸಿದ್ಧಾಂತ ಗಳನ್ನು ಜನಪ್ರತಿನಿಧಿಗಳಾದ ನಾವುಗಳು ಅಳವಡಿಸಿಕೊಳ್ಳುವಂಥ ಅವಶ್ಯಕತೆ ಇರುತ್ತದೆ. ಆ ದಿಸೆಯಲ್ಲಿ ನಾವು ಅಳವಡಿಸಿಕೊಳ್ಳುವುದಕ್ಕೆ ಕಾರಣೀಕರ್ತ ರಾಗೋಣ ಎಂದು ಹೇಳಬಯಸುತ್ತೇನೆ. ಅವರು ಚನ್ನಪಟ್ಟಣ ತಾಲ್ಲೂಕಿನ ಅಭಿವೃದ್ಧಿಗೆ ಅನೇಕ ರೀತಿಯ ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕೆ ಅವು ನೀರಾವರಿ ಯೋಜನೆಗಳಿರಬಹುದು. ಏತ ನೀರಾವರಿ ಯೋಜನೆ ಗಳಿರಬಹುದು. ಇತರ ಜನರ ಬಗ್ಗೆ ಅಥವಾ ಕೃಷಿಯ ಬಗ್ಗೆ ನೇರವಾಗಿ ಅಥವಾ ಪರೋಕ್ಷವಾಗಿ ಬೇಕಾದಂಥ ಅನೇಕ ಅಭಿವೃದ್ಧಿ ಕೆಲಸ–

ಕಾರ್ಯಗಳನ್ನು ಮಾಡಿಸಿದ್ದಾರೆ. ಅವೆಲ್ಲವುಗಳನ್ನು ನೋಡಿದರೆ ಅವರು ಅಭಿವೃದ್ಧಿ ಪರವಾಗಿದ್ದರೆಂದು ನಮಗೆಲ್ಲರಿಗೂ ಚಿರಪರಿಚಿತರಿರುವಂಥವರು. ಅವರ ರಾಜಕೀಯ ಏರುಪೇರುಗಳು ಏನೇ ಇದ್ದರೂ ಸಹ ಅವರ ಜನಪರವಾದಂಥ ಕಾಳಜಿಗಳನ್ನು, ನಿಲುವನ್ನು ಅವರು ಸದಾ ಹೊಂದಿರುವಂಥವರಾಗಿದ್ದರು. ಹಾಗಾಗಿ ಇವೊತ್ತು ನಾವು ಅವರನ್ನು ಆಕಸ್ಮಿಕವಾಗಿ ಕಳೆದುಕೊಂಡಿದ್ದೇವೆ. ಅವರ ಅಗಲುವಿಕೆಯಿಂದಾದ ನೋವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ, ಅವರ ಬಂಧು ಬಳಗಕ್ಕೆ, ನಮ್ಮೆಲ್ಲರಿಗೆ ಭಗವಂತ ಕರುಣಿಸಲು ಎಂದು ಹೇಳುತ್ತ, ಅವರ ಆತ್ಮಕ್ಕೆ ಚಿರಶಾಂತಿಯನ್ನು ಭಗವಂತ ನೀಡಲಿ ಎಂದು ನಾನು ಪ್ರಾರ್ಥಿಸುತ್ತ ಅವರ ಅಪೇಕ್ಷೆಯಂತೆ ನಮ್ಮ ಈ ವ್ಯವಸ್ಥೆಯಲ್ಲಿ ಇನ್ನಷ್ಟು ಅಭಿವೃದ್ಧಿ ಬರಲಿ, ಜನಪರವಾದಂಥ ಆಡಳಿತವನ್ನು ನಡೆಸುವುದಕ್ಕೆ ಸಂಕಲ್ಪಿತರಾಗೋಣ ಎನ್ನುವಂಥ ಮಾತನ್ನು ಹೇಳುತ್ತೇನೆ.

ಇನ್ನೊಬ್ಬರು ಹಿರಿಯ ಪತ್ರಕರ್ತರಾದ ಶ್ರೀಯುತ ಈ. ರಾಘವನ್‌ರವರು ನಮ್ಮನ್ನು ಬಹಳ ಅನಿರೀಕ್ಷಿತವಾಗಿ ಅಗಲಿದ್ದಾರೆ. ಅವರು ಒಬ್ಬ ಹಿರಿಯ ಪತ್ರಕರ್ತರು ಎನ್ನುವುದಕ್ಕೆ ಅನ್ವರ್ಥಕವಾಗಿದ್ದರು. ಅಂದರೆ ಆ ಮಾತಿಗೆ ಸರಿಯಾದಂತಹ ವ್ಯಕ್ತಿತ್ವವನ್ನು ಹೊಂದಿದ್ದರು. ಇವತ್ತು ವಯಸ್ಸು ಅದಂಥವರೆಲ್ಲರಿಗೂ ಹಿರಿಯರು ಎಂದು ಹೇಳುತ್ತಾರೆ. ಆದರೆ ಹಿರಿತನ ಎನ್ನುವುದಕ್ಕೆ ಅವರು ವಯಸ್ಸಿನಲ್ಲಿಯೂ ಹಿರಿಯರೆ, ಆದರೆ ಅನುಭವದಲ್ಲಿ, ಪರಿಪಕ್ವತೆಯಲ್ಲಿ ನಾಡಿನ ಜನತೆಗೆ ತಮ್ಮ ವಿಚಾರಧಾರೆಯನ್ನು ಹೇಳುವುದಕ್ಕೆ ಅವರು ಹಿರಿಯತನವನ್ನು ತೋರಿಸುತ್ತಿದ್ದರು. ಆ ಹಿರಿತನಕ್ಕೆ ಒಂದು ಘನತೆ ಗೌರವ ಬರುವುದಕ್ಕೆ, ಅರ್ಥಪೂರ್ಣವಾಗಿ ಅನುಷ್ಠಾನಗೊಳಿಸುವುದರಲ್ಲಿ ಶ್ರೀ ಈ. ರಾಘವನ್‌ರವರು ನಡೆದುಕೊಂಡಿರುವುದನ್ನು ನಾವು ಕಾಣುತ್ತೇವೆ. ಮಾನ್ಯ ಸಭಾಪತಿಯವರೆ ತಾವೇ ಹೇಳಿದಂತೆ ಅವರು ಇಂಡಿಯನ್ ಎಕ್ಸಪ್ರೆಸ್ ಪತ್ರಿಕೆಯಲ್ಲಿ ವರದಿಗಾರರಾಗಿ ತಮ್ಮ ಜೀವನವನ್ನು ಪ್ರಾರಂಭಿಸಿದರು. ನಂತರ ಟೈಮ್ಸ್ ಆಫ್ ಇಂಡಿಯದಲ್ಲಿ ವರದಿಗಾರರಾಗಿ, ಎಕಾಮಿಕ್ಸ್ ಟೈಮ್ಸ್‌ನಲ್ಲಿ ಬಹಳ ವರ್ಷಗಳ ಕಾಲ ಕೆಲಸವನ್ನು ಮಾಡಿ Vijaya Next ಪತ್ರಿಕೆಯ

ಜವಾಬ್ದಾರಿಯನ್ನು ತೆಗೆದುಕೊಂಡ ನಂತರ ಕನ್ನಡ ನಾಡಿನ ಜನರಿಗೆ ಬಹಳ ಹತ್ತಿರದ ಪರಿಚಯವಾಗುವುದಕ್ಕೆ ಸಾಧ್ಯವಾಯಿತು. ಇಲ್ಲ ಎಂದರೆ ಅವರು ಇಂಗ್ಲೀಷ್‌ನಲ್ಲಿ, ಕನ್ನಡದಲ್ಲಿ ಬೇರೆ ಬೇರೆ ರೀತಿಯ ವರದಿಗಳನ್ನು ಮಾಡುತ್ತಿದ್ದರೂ ಕೂಡ, ಅವರ ಲೇಖನಗಳು ಬರುತ್ತಿದ್ದರೂ ಸಹಾ ಜನರ ಹತ್ತಿರ ಅಂದರೆ ಓದುಗರ ಜೊತೆಯಲ್ಲಿ ಹತ್ತಿರವಾಗಿದ್ದು Vijaya Next ಪತ್ರಿಕೆಗೆ ಬಂದ ನಂತರ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಆದಾದ ನಂತರ 2010ರ ವಿಜಯ ಕರ್ನಾಟಕ ಪತ್ರಿಕೆಯ ಮುಖ್ಯ ಸಂಪಾದಕರಾಗಿ ಕೆಲಸ ಮಾಡಿದ ಮೇಲೆ ಅಂತೂ ಪತ್ರಿಕಾ ಕ್ಷೇತ್ರಕ್ಕೆ ಹೇಗೆ ಒಂದು ಕೊಡುಗೆಯನ್ನು ಹಿರಿಯರಾಗಿ ಅನುಭವದಿಂದ ಕೊಡಬಹುದು ಎನ್ನುವುದನ್ನು ಅವರು ತೋರಿಸಿಕೊಟ್ಟರು ಎನ್ನವುದು ನಮಗೆ ಎಲ್ಲಾ ಗೊತ್ತಿದೆ, ನಮಗೆಲ್ಲಾ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪತ್ರಿಕಾ ರಂಗ ನಾಲ್ಕನೆ ಪ್ರಮುಖ ಅಂಗ ಎಂದು ಕರೆಸಿಕೊಳ್ಳುವಂಥಹ ಬಹಳ ಜವಾಬ್ದಾರಿಯುತವಾದಂತಹ ಅಂಗವಾಗಿದೆ ಎಂದು ನಂಬಿಕೆ ಇದೆ. ಆ ಅಂಗಕ್ಕೆ ಶಕ್ತಿ ಕೊಡುವುದಕ್ಕೆ ಈ ರೀತಿಯ ಹಿರಿಯರು ಅನೇಕ ಕೊಡುಗೆಗಳನ್ನು ಕೊಟ್ಟಿದ್ದಾರೆ. ನಾವು ಈ ರೀತಿಯ ಹಿರಿಯರುಗಳನ್ನು ಸ್ಮರಿಸಿಕೊಳ್ಳಬೇಕು ಮತ್ತು ಅಭಿನಂದಿಸಬೇಕು. ಅವರು ರಾಜಕೀಯ ವ್ಯಕ್ತಿಗಳ ಜೊತೆಯಲ್ಲಿ, ಹಿರಿಯರ ಜೊತೆಯಲ್ಲಿ ಬಹಳ ಆತ್ಮೀಯರಾಗಿದ್ದರು ಎನ್ನುವುದನ್ನು ಕೇಳಿದ್ದೇನೆ. ದಿವಂಗತರ ರಾಮಕೃಷ್ಣ ಹೆಗಡೆಯವರ ಜೊತೆಯಲ್ಲಿರಬಹುದು, ಬೇರೆ ಬೇರೆ ಅನೇಕ ಹಿರಿಯ ರಾಜಕಾರಣಿಗಳ ಜೊತೆಯಲ್ಲಿ ಆತ್ಮೀಯರಾಗಿದ್ದರು. ಆದರೆ ಅವರ ವೈಯಕ್ತಿಕವಾದಂತಹ ಒಡನಾಟ ಎಂದೂ ಸಹಾ ಅವರ ಲೇಖನಗಳಲ್ಲಿ ತೋರಿಸಲಿಲ್ಲ ಅಥವಾ ಅವರ ಹತ್ತಿರದ ಒಡನಾಟ ಹೊಂದಿರುವುದರಿಂದ ಅವರ ಬಗ್ಗೆ ಬರೆಯಬೇಕಾದುದ್ದನ್ನು ಎಂದೂ ಬರೆಯದೇ ಬಿಡುತ್ತಿರಲಿಲ್ಲ. ಈ ರೀತಿ ಅವರ ಬಗ್ಗೆ ಬೇರೆ ಬೇರೆ ವಿಷಯಗಳನ್ನು ಉಲ್ಲೇಖಿಸಬಹುದು. ಅವರು ಶ್ರೀ ಹೆಚ್. ಡಿ. ದೇವೇಗೌಡ, ಶ್ರೀ ಜೆ. ಹೆಚ್ಚ್. ಪಟೇಲ್‌ರವರಿಗೆ ಅದೇ ರೀತಿಯಲ್ಲಿ ಶ್ರೀ ಬಂಗಾರಪ್ಪನವರಿಗೆ ಮತ್ತು ಶ್ರೀ ಎಸ್. ಎಂ. ಕೃಷ್ಣರವರಿಗೆ ಹೀಗೆ ನಮ್ಮ ರಾಜ್ಯದ ಹಿರಿಯ ರಾಜಕೀಯ ನಾಯಕರ ಜೊತೆಯಲ್ಲಿ ಅವರ ಅನುಭವ ಮತ್ತು ಅವರ ಪರಿಪಕ್ವತೆಯ ಕಾರಣದಿಂದಾಗಿ ಹತ್ತಿರದಲ್ಲಿದ್ದರು.

ಆದರೆ ಅವರ ಲೇಖನಗಳಲ್ಲಿ ಹತ್ತಿರ ಇದ್ದರು ಎನ್ನುವುದು ಎಲ್ಲಿಯೂ ಕೂಡ ಕಾಣುತ್ತಿರಲಿಲ್ಲ. ನಾನು ಇವತ್ತಿನ ಪರಿಸ್ಥಿತಿಯಲ್ಲಿ ಏನೂ ಹೇಳುವುದಕ್ಕೆ ಬಯಸುವುದಿಲ್ಲ. ಇವತ್ತು ಪತ್ರಿಕಾ ಕ್ಷೇತ್ರ ಹೇಗೆ ಆಗುತ್ತಿದೆ ಎಂದರೆ, ಸಮಾಜದ ಉಳಿದೆಲ್ಲಾ ಕ್ಷೇತ್ರಗಳು ಹೇಗೆ ಆದರ್ಶಗಳನ್ನು, ಮೌಲ್ಯಗಳನ್ನು ಕಳೆದುಕೊಳ್ಳುತ್ತಿದೆ ಎನ್ನುಂತಹ ನೋವು ಸಹಜವಾಗಿ ನಮಗೆಲ್ಲರಿಗೂ ಇದ್ದೇ ಇದೆ. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಇವುಗಳು ಎಷ್ಟು ಜವಾಬ್ದಾರಿಯುತವಾಗಿ ಇರಬೇಕು ಎಂದು ಸಮಾಜ ಬಯಸುತ್ತದೆಯೋ ಅಥವಾ ವ್ಯವಸ್ಥೆಗಳು ಬಯಸುತ್ತದೆಯೋ, ಅದೇ ರೀತಿ ಪತ್ರಿಕಾರಂಗವೂ ಇರಬೇಕು ಎನ್ನುವುದು ನಮ್ಮೆಲ್ಲರ ಅಪೇಕ್ಷೆಯಾಗಿದೆ. ನಾವೆಲ್ಲರೂ ಬಯಸಿದ ಹಾಗೆ ಶ್ರೀ ಈ. ರಾಘವನ್‌ರವರು ನಡೆದುಕೊಂಡಂಥವರು. ಅವರ ಆದರ್ಶ ಸ್ಥಿತಿಯಲ್ಲಿ ನಾವೆಲ್ಲರೂ ಮುಂದೆ ನಡೆಯಬೇಕಾಗುತ್ತದೆ. ಆದರೆ ಆದರ್ಶ ಸ್ಥಿತಿಯಲ್ಲಿ ಹೇಗೆ ಮುಂದುವರೆಯಬೇಕೆಂದು ಕೇಳಿದರೆ, ನಮಗೆ ಯಾವುದಾದರೂ ಸಂಗತಿಗಳು, ವಿಷಯಗಳು ಹೇಗೆ ಇರಬೇಕೆಂದು ಹೇಳುವುದಕ್ಕೆ, ಪತ್ರಿಕಾ ಕ್ಷೇತ್ರದಲ್ಲಿ ಶ್ರೀ ಈ. ರಾಘವನ್‌ರವರು ಯಾವ ರೀತಿಯಾಗಿದ್ದರು ಆ ರೀತಿಯಲ್ಲಿ ನೀವುಗಳೆಲ್ಲರೂ ಆಗಿ ಎಂದು ಹೇಳುವಂತಹ ಒಂದು ಆದರ್ಶ ಸ್ಥಿತಿಯನ್ನು ಸಮಾಜದಲ್ಲಿ ನಿರ್ಮಿಸಿ ಕೊಟ್ಟಂಥವರು. ಅವರು ಅಕಾಲಿಕವಾಗಿ ನಮ್ಮನ್ನೆಲ್ಲಾ ಅಗಲಿದ್ದಾರೆ. ಅವರು ಬಹಳ ಒಳ್ಳೆಯ ರೀತಿಯಲ್ಲಿ ಪತ್ರಿಕಾ ಕ್ಷೇತ್ರಕ್ಕೆ ವಿಜಯ ಕರ್ನಾಟಕ ಪತ್ರಿಕೆ ಮುಖಾಂತರ ಓದುಗರಿಗೆ ವಸ್ತು ನಿಷ್ಠವಾದಂತಹ ಸತ್ಯ ಸಂಗತಿಯನ್ನು ಹೇಗೆ ತಿಳಿಸಬೇಕೆಂದು ತಿಳಿಸಿದವರು. ಅದರಲ್ಲಿಯೂ ವಿಶೇಷವಾಗಿ ಯುವಕರ ಬಗ್ಗೆ ಎಷ್ಟು ಕಾಳಜಿ ಇತ್ತು ಎನ್ನುವುದುನ್ನು Vijaya Next ಪತ್ರಿಕೆ ಇರಬಹುದು ಅಥವಾ ವಿಜಯ ಕರ್ನಾಟಕ ಪತ್ರಿಕೆಯ ಯುವ ಘರ್ಜನೆ ಕಾಲಂ ಇರಬಹುದು, ಯುವಕರಿಗಾಗಿಯೇ ಪ್ರಾರಂಭಿಸಿರುವಂತಹ ಕಾಲಂಗಳು ಇರಬಹುದು ಅಥವಾ ಯುವ ಪತ್ರಕರ್ತರಿಗೆ ಪ್ರೋತಸಾಹಿಸುತ್ತಿದ್ದಂತಹ ರೀತಿ ಇರಬಹುದು. ನನ್ನ ಅನೇಕ ಸ್ನೇಹಿತರುಗಳು ಅವರ ಜೊತೆಯಲ್ಲಿ ಒಡನಾಟ ಹೊಂದಿದ್ದಂಥವರು ಇದ್ದಾರೆ. ಅವರೆಲ್ಲರೂ ಏನು ಹೇಳುತ್ತಿದ್ದರು ಎಂದರೆ, ಈ. ರಾಘವನ್‌ರವರು ಒಬ್ಬೊಬ್ಬ ವರದಿಗಾರರನ್ನು ಕರೆದು ಇದು ಈ

ರೀತಿಯಾಗಬೇಕು, ಇದು ಸರಿಯಾದುದ್ದಲ್ಲ, ಅದು ತಪ್ಪು ಎಂದು ಹೇಳುವಂತಹ ನೈತಿಕ ಶಕ್ತಿಯನ್ನು ಇಟ್ಟುಕೊಂಡಿದಂಥವರು. ಈ ರಾಘವನ್‌ರವನ್ನು ಬಿಟ್ಟು ಬೇರೆ ಯಾರಾದರೂ ಇದನ್ನು ಹೇಳಿದರೆ ವರದಿಗಾರರು ನೀವು ಯಾವ ರೀತಿಯಾಗಿ ಮಾಡಿದ್ದೀರಿ ಎಂದು ಕೇಳುವಂತಹ ಪರಿಸ್ಥಿತಿ ಇರುತ್ತದೆ. ಯಾರೇ ಆಗಲಿ ಹೆದರಿಕೆ ಕಾರಣದಿಂದ ಹೇಳುವುದಿಲ್ಲ. ಆದರೆ ಬೇರೆ ಯಾರಿಗೂ ಕರೆದು ಕೇಳುವ ನೈತಿಕತೆ ಇರುವುದಿಲ್ಲ ಎನ್ನುವಂಥದ್ದು ಗೊತ್ತಿದೆ. ಆದರೆ ಶ್ರೀ ಈ. ರಾಘವನ್‌ರವರಿಗೆ ಆ ನೈತಿಕತೆ ಇತ್ತು. ನೀನು ಈ ರೀತಿಯಾಗಿ ಮಾಡಬೇಡಪ್ಪ. ಇದು ಸರಿಯಲ್ಲ ಎಂದು ಹೇಳಿದರೆ ಅದನ್ನು ಒಪ್ಪಬೇಕಾದಂತಹ ನೈತಿಕ ಜವಾಬ್ದಾರಿ ವರದಿಗಾರರಿಗೆ ಇತ್ತು ಎಂದು ನನ್ನ ಅನೇಕ ಸ್ನೇಹಿತರು ಹೇಳುವಂಥದ್ದನ್ನು ಕೇಳಿದ್ದೇನೆ. ಅಂದರೆ ಈ ರೀತಿ ಆದರ್ಶ ಸ್ಥಿತಿಯನ್ನು ಪತ್ರಿಕೋದ್ಯಮದಲ್ಲಿ ತೆಗೆದುಕೊಂಡು ಹೋಗಬೇಕೆಂದು ನಿಷ್ಠೆಯನ್ನು ಹೊಂದಿದಂಥವರು ಶ್ರೀ ಈ. ರಾಘವನ್‌ರವರು ಆಗಿದ್ದರು. ಅವರೂ ಸಹ ಅಕಾಲಿಕವಾಗಿ ನಿಧನರಾಗಿದ್ದಾರೆ. ಅವರ ಸಾವಿನ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಪರಮಾತ್ಮ ನಮ್ಮೆಲ್ಲರಿಗೂ ನೀಡಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಮತ್ತು ಅವರ ಅಪೇಕ್ಷೆಯಂತೆ ಈ ಕ್ಷೇತ್ರಗಳಲ್ಲಿ ಏನೇನು ಮಾಡಬೇಕು ಅದನ್ನು ಮಾಡುವುದಕ್ಕೆ ಆ ದಿಕ್ಕಿನಲ್ಲಿ ಮುಂದುವರೆಯುವುದಕ್ಕೆ ನಾವು ಪ್ರಯತ್ನವನ್ನು ಮಾಡೋಣ. ವಿಶೇಷವಾಗಿ ಶ್ರೀ ಈ. ರಾಘವನ್ ರವರನ್ನು ಕಳೆದುಕೊಂಡಿರುವುದರಿಂದ ಯುವ ಪತ್ರಕರ್ತರಿಗೆ ಆ ಒಂದು ಜವಾಬ್ದಾರಿ ಹೆಚ್ಚಾಗಿದೆ ಎನ್ನುವಂತಹ ಭಾವನೆಗಳು ಬರಲಿ ಎಂದು ನಾನು ಆಶಿಸುತ್ತೇನೆ. ಪತ್ರಿಕೋದ್ಯಮದಲ್ಲಿ ಯುವಕರ ಬಗ್ಗೆ ಹೇಗೆ ರಚನಾತ್ಮಕ ದೃಷ್ಟಿಕೋನದಿಂದ ಯುವ ಪೀಳಿಗೆಗಳನ್ನು ಬೆಳೆಸಬಹುದು ಎನ್ನುವುದರ ಬಗ್ಗೆ ಅವರು ಹಾಕಿಕೊಟ್ಟಂತಹ ದಾರಿಯಲ್ಲಿ ಮುನ್ನಡೆಯುವಂತಹ ಪ್ರಯತ್ನ ನಮ್ಮೆಲ್ಲರಲ್ಲಿ ಆಗಲಿ ಎಂದು ಹೇಳುತ್ತಾ, ತಾವು ಮಂಡಿಸಿರುವಂತಹ ಸಂತಾಪ ಸೂಚನೆಯನ್ನು ಅನುಮೋದಿಸುತ್ತಿದ್ದೇನೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು) :** ಮಾನ್ಯ ಸಭಾಪತಿಯವರೆ, ತಾವು ಮಂಡಿಸಿರುವ ಸಂತಾಪ ಸೂಚನೆಯಲ್ಲಿರುವ

ಮೊದಲನೆ ವ್ಯಕ್ತಿಯಾದ ಶ್ರೀಯುತ ಎಂ. ವರದೇಗೌಡರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಶ್ರೀ ಎಂ. ವರದೇಗೌಡರು ನನಗೆ ಪರಿಚಯವಿರಲಿಲ್ಲ. ಅವರು ಚುನಾವಣೆಯಲ್ಲಿ ಗೆದ್ದು ವಿಧಾನಸಭೆಗೆ ಬಂದಾಗ ನಾನು ಸದನಕ್ಕೆ ಶಾಸಕಳಾಗಿ ಬಂದಿಲ್ಲದೇ ಇದ್ದುದರಿಂದ ಅವರ ಬಗ್ಗೆ ನಾನು ಕೇಳಿ ತಿಳಿದುಕೊಂಡಿದ್ದೇನೆಯೇ ವಿನಃ ವ್ಯಕ್ತಿಶಃ ಅವರ ನಡೆ, ನುಡಿ ಅವರ ಕಾರ್ಯಗಳ ಬಗ್ಗೆ ಹೆಚ್ಚಾಗಿ ನನಗೆ ತಿಳಿದಿಲ್ಲ. ಆದರೆ ಅವರ ಬಗ್ಗೆ ಸಾಕಷ್ಟು ನಮ್ಮ ಸಭಾ ನಾಯಕರು ಹೇಳಿದ್ದಾರೆ. ಆದರೆ ಒಂದು ಅವರ ಬಗ್ಗೆ ಹೆಮ್ಮೆ ಎನ್ನಿಸಿದ್ದು ಎಂದರೆ, ಚನ್ನಪಟ್ಟಣ ತಾಲ್ಲೂಕಿಗೆ ಒಂದು ಶಾಶ್ವತ ಕುಡಿಯುವ ನೀರಿನ ಇಗ್ಗಲೂರಿನ ಏತಾ ನೀರಾವರಿ ಯೋಜನೆಗೆ ಮುನ್ನುಡಿಯನ್ನು ಬರೆದಿರುವುದನ್ನು ನಾವೆಲ್ಲರೂ ಪ್ರಶಂಸೆ ಮಾಡಬೇಕಾಗುತ್ತದೆ. ಇಂಥದ್ದನ್ನು ಬದುಕಿದ್ದಾಗ ಮಾಡಿದರೆ ಸತ್ತ ನಂತರವೂ ಕೂಡ ತಮ್ಮ ಹೆಸರನ್ನು ಉಳಿಸುವಂತಹ ಕೆಲಸವಾಗಿರುತ್ತದೆ. ಅಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಈಗ ಮತ್ತೊಬ್ಬ ವ್ಯಕ್ತಿ ನನಗೆ ಈ ಸಂದರ್ಭದಲ್ಲಿ ನೆನಪು ಬರುವಂಥದ್ದು ನಮ್ಮ ಕುಣಿಗಲ್ ಶ್ರೀ ವೈ. ಕೆ. ರಾಮಯ್ಯನವರ ಹೆಸರು. ಶ್ರೀ ವೈ.ಕೆ.ರಾಮಯ್ಯನವರೂ ಸಹ ಹೇಮಾವತಿ ಜಲಾಶಯದಿಂದ ನೀರನ್ನು ತುಮಕೂರು ಜಿಲ್ಲೆಗೆ ನೀರನ್ನು ಹರಿಸುವುದಕ್ಕೆ ಬಹಳ ಪ್ರಯತ್ನ ಮಾಡಿ ಯಶಸ್ವಿಯಾದರು. ಅದರಲ್ಲಿ ಯಶಸ್ವಿಯಾಗಿ ಇವತ್ತು ಇಲ್ಲವಾಗಿದ್ದಾರೆ. ಅಂಥವರ ಒಂದು ಶ್ರಮ ಇಂತಹ ದೊಡ್ಡ ದೊಡ್ಡ ಯೋಜನೆಗಳನ್ನು ಆ ಒಂದು ಪ್ರದೇಶಗಳಿಗೆ ತರುವುದರ ಮೂಲಕ ಹೇಗೆ ಪ್ರಯತ್ನ ಮಾಡಿದರೋ ಅಂತಹ ಪ್ರಯತ್ನಗಳನ್ನು ನಮ್ಮಿಂದಲೂ ನಮ್ಮ ಕ್ಷೇತ್ರಗಳಿಗೆ ಆಗಬೇಕು ಎನ್ನುವ ಹೊಸ ಚೇತನವನ್ನು ನಾವು ಪಡೆದುಕೊಳ್ಳು ವುದಕ್ಕೆ ಸಾಧ್ಯವಾಗುತ್ತದೆಂದು ಅಂದುಕೊಂಡಿದ್ದೇನೆ. ಹಾಗೆಯೇ ಅವರ ಸಜ್ಜನಿಕೆ ಮತ್ತು ಸರಳ ವ್ಯಕ್ತಿತ್ವದ ಮೇಲೆ ಯಾವುದೇ ಒಂದು ಕಳಂಕ ಇರಲಿಲ್ಲ. ಅವರು ಬಹಳ ನೀತಿವಂತ ರಾಜಕಾರಣಿ, ಶ್ರೇಷ್ಠ ರಾಜಕಾರಣಿ ಅಂದುಕೊಳ್ಳ ಬೇಕಾಗುತ್ತದೆ. ಅವರ ಶ್ರೇಷ್ಠತನವನ್ನು ರಾಜಕಾರಣದಲ್ಲಿ ನಾವೆಲ್ಲರೂ ಮೈಗೂಡಿಸಿಕೊಂಡರೆ ಒಂದು ಹೊಸತನವನ್ನು, ಹೊಸ ಅಧ್ಯಯನವನ್ನು

ರೂಪಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವಂತಹ ಮಾತನ್ನು ಹೇಳುತ್ತಾ, ಇವತ್ತು ಇಂತಹ ಒಬ್ಬ ಸಜ್ಜನ ರಾಜಕಾರಣಿ ಇಲ್ಲ ಎಂದರೆ ನಮ್ಮ ಕರ್ನಾಟಕ ರಾಜಕಾರಣಕ್ಕೆ ಶೂನ್ಯ ಕಾಣುತ್ತದೆ. ಅದನ್ನು ತುಂಬಿಸುವಂತಹ ಕೆಲಸವನ್ನು ನಾವು ನೀವು ಎಲ್ಲಾ ಮಾಡುವುದರ ಮುಖಾಂತರ ಅವರ ಶ್ರದ್ಧಾಂಜಲಿಯನ್ನು ಸಮರ್ಪಣೆ ಮಾಡೋಣ ಎನ್ನುವಂತಹ ಮಾತನ್ನು ಹೇಳುತ್ತಾ, ಅವರ ಕುಟುಂಬಕ್ಕೆ ಈ ಒಂದು ಸಂಕಟವನ್ನು ಭರಿಸುವಂತಹ ಶಕ್ತಿಯನ್ನು ಭಗವಂತ ನೀಡಲಿ ಎನ್ನುವಂತಹ ಮಾತನ್ನು ಹೇಳುತ್ತಿದ್ದೇನೆ.

ಹಾಗೆಯೇ ಶ್ರೀ ಈ. ರಾಘವನ್‌ರವರು ಪತ್ರಿಕಾ ರಂಗದಲ್ಲಿ ಬಹಳ ಖ್ಯಾತಿಯನ್ನು ಪಡೆದಂತಹ ವ್ಯಕ್ತಿಯಾಗಿದ್ದರು. ಅವರಿಗೆ ನಾನು ವೈಯಕ್ತಿಕವಾಗಿ ಪರಿಚಯ ಇಲ್ಲದೇ ಇದ್ದರೂ ಸಹಾ ಒಂದೆರಡು ಸಾರಿ ದೂರವಾಣಿ ಕರೆಯನ್ನು ಮಾಡಿದ್ದೆ. ನಾನು ವಿಶೇಷವಾಗಿ ಯಾವುದೇ ಪತ್ರಿಕೆಯನ್ನು ಓದಬೇಕಾದರೂ ಮೊದಲು ಮೊದಲನೆ ಪುಟದಲ್ಲಿರುವಂತಹ ವರದಿಯನ್ನು ಓದಿ, ನಂತರ ಸಂಪಾದಕೀಯವನ್ನು ಓದುತ್ತೇನೆ. ನಂತರ ವಾಚಕರ ವಾಣಿಯಲ್ಲಿ ಏನೇನು ಟೀಕೆ ಟಿಪ್ಪಣಿಗಳು ಬಂದಿದೆ ಎನ್ನುವುದನ್ನು ಓದುವುದು ನನ್ನ ಅಭ್ಯಾಸ. ಆಮೇಲೆ ಉಳಿದೆಲ್ಲಾ ವಿಷಯಗಳನ್ನು ಓದುತ್ತೇನೆ. ಅದರಲ್ಲಿಯೂ ಇವರ ಸಂಪಾದಕೀಯ ಬಹಳ ಆಕರ್ಷಕವಾಗಿರುತ್ತಿತ್ತು. ಹಾಗೆಯೇ ಪ್ರಜಾವಾಣಿ ಪತ್ರಿಕೆಯಲ್ಲಿ ಬರುವಂತಹ ಸಂಪಾದಕೀಯ ಕಾಲಂ ಅನ್ನು ಬಹಳ ಎಚ್ಚರಿಕೆಯಿಂದ ಓದಿ ಅದರಲ್ಲಿರುವಂತಹ ಒಳ್ಳೆಯ ಅಂಶಗಳನ್ನು ನಾನು ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಆ ದಿಸೆಯಲ್ಲಿ ಇಂತಹ ಒಬ್ಬ ಧೀಮಂತ, ವಿಚಾರವಂತ ಪತ್ರಕರ್ತರು ಇವತ್ತಿನ ದಿವಸ ಇಲ್ಲವಾಗಿದ್ದಾರೆ ಎಂದು ಹೇಳಿದರೆ ಆ ಪತ್ರಿಕಾ ರಂಗದಲ್ಲಿಯೂ ಒಂದು ಶೂನ್ಯ ಕಾಣುವುದಕ್ಕೆ ಸಾಧ್ಯವಾಗುತ್ತದೆ. ನಾನೇನು ಹೇಳುವುದಕ್ಕೆ ಬಯಸುತ್ತೇನೆಂದರೆ, ಪ್ರಜಾಪ್ರಭುತ್ವದಲ್ಲಿ ಕಾರ್ಯಾಂಗ, ನ್ಯಾಯಾಂಗ ಇದಕ್ಕೆ ಎಷ್ಟು ಹೆಚ್ಚಿನ ಮಹತ್ವದ ಶಕ್ತಿ ಇದೆಯೋ ಪತ್ರಿಕಾರಂಗಕ್ಕೂ ಕೂಡ ಅಷ್ಟೇ ಶಕ್ತಿ ಇದೆ. ಅದನ್ನು ಉಳಿಸಿಕೊಂಡು ಹೋಗಬೇಕು ಅಷ್ಟೆ. ಇವತ್ತಿನ ಯಾವ ಪೀಳಿಗೆಯ ಪತ್ರಕರ್ತರು ಇಂಥವರನ್ನು ಆದರ್ಶವಾಗಿ ಇಟ್ಟುಕೊಂಡು ಪತ್ರಿಕಾರಂಗದ

ಉತ್ತಮ ನಡವಳಿಕೆಯನ್ನು ಮತ್ತು ನಿಷ್ಪಕ್ಷಪಾತವಾಗಿ ಕೆಲಸ ಮಾಡಿದರೆ ಬಹಳ ಒಳ್ಳೆಯದಾಗುತ್ತದೆಂದು ನಾನು ಬಯಸಿದ್ದೇನೆ. ಈ ಸಂದರ್ಭದಲ್ಲಿ ನನಗೆ ನೆನಪು ಬರುವುದೆಂದರೆ, ಕೊನೆಯ ಅಧಿವೇಶನದಲ್ಲಿ ತಮಗೆ ಗೊತ್ತಿರುವ ಹಾಗೆ ಶಾಸಕರ ಭವನದಲ್ಲಿ ವಾಣಿಜ್ಯ ಸಂಕೀರ್ಣವನ್ನು ಕಟ್ಟುವುದರ ಬಗ್ಗೆ ಮಾತನಾಡಿದ್ದೆವು.

ಈ ಸಂದರ್ಭದಲ್ಲಿ ನನಗೆ ಒಂದು ವಿಚಾರ ನೆನಪಾಗುತ್ತಿದೆ. ತಮಗೂ ಸಹ ಗೊತ್ತಿರುವಂತೆ ಕಳೆದ ಅಧಿವೇಶನದ ಸಂದರ್ಭದಲ್ಲಿ ಶಾಸಕರ ಭವನ ಕಟ್ಟಡದ ಮುಂಭಾಗದಲ್ಲಿ ವಾಹನ ಪಾರ್ಕಿಂಗ್ ಸಂಕೀರ್ಣವನ್ನು ನಿರ್ಮಿಸುವ ಬಗ್ಗೆ ನಡೆದಂತಹ ಕಾರ್ಯಕ್ರಮದ ಸಂದರ್ಭದಲ್ಲಿ ನಾನು ಹೆಚ್ಚಿಗೆ ಮಾತನಾಡಿಯೇ ಇಲ್ಲ. ನನಗೆ ಮಾಧ್ಯಮದ ಕೆಲವರು ಪ್ರಶ್ನೆ ಮಾಡಿದ್ದಕ್ಕೆ ಹೇಳಿದೆ ಅಷ್ಟೆ. ನನಗೆ ಅದರ ಬಗ್ಗೆ ಹೆಚ್ಚು ಮಾಹಿತಿ ಇರಲಿಲ್ಲ. ಸ್ವತಃ ಮಾನ್ಯ ಸಭಾಪತಿಯವರೇ ದೂರವಾಣಿ ಕರೆ ಮಾಡಿದ್ದರಿಂದ ನಾನು ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇನೆ. ಎಂದಷ್ಟೆ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದೆ. ಆದರೆ ಆ ವಿಚಾರದ ಬಗ್ಗೆ ಕೆಳಮನೆಯಲ್ಲಿ ಹೇಗೆ ಚರ್ಚೆ ಬಂತು ಎಂದರೆ, ಕೆಳಮನೆಯ ಸದಸ್ಯರಾದ ಮಾನ್ಯ ಜೀವರಾಜ್ ಮತ್ತು ಕೊಡಗಿನ ಮಾನ್ಯ ಅಪ್ಪಚ್ಚು ರಂಜನ್‌ರವರು ಸಹ ಆ ರೀತಿ ಮಾತನಾಡಿಲ್ಲವಂತೆ, ಆದರೆ ಮಾದ್ಯಮಗಳಲ್ಲಿ ಹೇಗೆ ವರದಿಯಾಗಿದೆ. ಎಂದರೆ 'ಮೋಟಮ್ಮನವರಿಗೆ ಅಷ್ಟೆಲ್ಲಾ ಮಾತನಾಡಲಿಕ್ಕೆ ಅಧಿಕಾರ ಕೊಟ್ಟವರು ಯಾರು'. ಅಂದರೆ ಶಾಸಕರ ಬಗ್ಗೆ. ಶಾಸಕರ ಭವನದ ಮುಂದೆ ವಾಹನ ಪಾರ್ಕಿಂಗ್ ಕಾಂಪ್ಲೆಕ್ಸ್ ಮಾಡಬಾರದು ಎಂದು ಹೇಳಲಿಕ್ಕೆ ಅವರಿಗೆ ಅಧಿಕಾರ ಕೊಟ್ಟವರು ಯಾರು' ಎಂದು ಪತ್ರಿಕೆಗಳಲ್ಲಿ ಬರೆಯುವುದರ ಜೊತೆಗೆ ವಿಧಾನ ಪರಿಷತ್ತೇ ಇರಬಾರದು, ಅದನ್ನು ತೆಗೆದುಹಾಕಬೇಕು ಎಂದು ನಾನು ಟೀಕೆ ಮಾಡಿದೆ ಎಂಬುದಾಗಿ ಪತ್ರಿಕೆಯೊಂದರಲ್ಲಿ ವರದಿಯಾಯಿತು. ಅದನ್ನು ಓದಿದ ನನಗೆ ಆಶ್ಚರ್ಯವಾಯಿತು, ತಮಗೂ ಸಹ ಒಂದು ಪತ್ರವನ್ನು ಬರೆದಿದ್ದೆ. ನಾನು ಹಾಗೆ ಮಾತನಾಡಿಯೇ ಇಲ್ಲ, ಯಾವುದೇ ಟೀಕೆ–ಟಿಪ್ಪಣಿಗಳನ್ನು ಸಹ ಮಾಡಿಲ್ಲ. ನಾನು ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಸರಿ, ಅದರ ಬಗ್ಗೆ

ಎಲ್ಲ ವಿವರಗಳು ನನಗೆ ಸರಿಯಾಗಿ ಗೊತ್ತಾಗಿರಲಿಲ್ಲ ಎನ್ನುವಂತಹ ಮಾತುಗಳನ್ನಷ್ಟೇ ನಾನು ಆ ಸಂದರ್ಭದಲ್ಲಿ ಹೇಳಿದ್ದೆ. ಆದರೆ ಈ ರೀತಿ ಬರೆಯುವುದಿದೆಯಲ್ಲ, ಅದು ಎಷ್ಟರಮಟ್ಟಿಗೆ ಸರಿ ಎನ್ನುವುದು ನನ್ನ ಪ್ರಶ್ನೆ.

ಇಂತಹ ವ್ಯಕ್ತಿಗಳ ಆದರ್ಶಗಳನ್ನು ಪಾಲನೆ ಮಾಡುವುದರಿಂದ ಇಂತಹವುಗಳನ್ನು ತಡೆಯಲು ಸಾಧ್ಯವಾಗುತ್ತದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಏಕೆಂದರೆ ಇದು ಸರಿಯೋ – ತಪ್ಪೋ, ಆದರೂ ನಾನು ನಮ್ಮೆಲ್ಲಾ ಪತ್ರಿಕಾ ಮಿತ್ರರೇನಿದ್ದಾರೆ. ಅವರಿಗೂ ಸ್ವಲ್ಪ ಅಥವಾಗಲಿ ಎನ್ನುವಂತಹ ಉದ್ದೇಶದಿಂದ ಈ ಮಾತುಗಳನ್ನು ಹೇಳುತ್ತಿದ್ದೇನೆ. ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಬಂದಿರುವಂತಹ ಇನ್ನೊಂದು ವಿಷಯ ಈಗ ತಮ್ಮ ಗಮನಕ್ಕೆ ಮತ್ತೆ ಬಂದಿದೆ, ಅದು ಕೂಡ ಇದೇ ರೀತಿಯಾಗಿದೆ. ಮಾಧ್ಯಮಗಳಲ್ಲಿ ಬರುವಂತಹ ವರದಿ ಯಾವಾಗಲೂ ನಿಷ್ಠೂರವಾಗಿದ್ದರೂ ಸತ್ಯವಾಗಿರಬೇಕು. ಪತ್ರಕರ್ತರು, ವರದಿಗಾರರಾದವರು ಸತ್ಯವಾದ ವಿಷಯಗಳನ್ನು ಪ್ರಕಟಿಸಬೇಕು. ಪತ್ರಿಕೆಗಳ ಸಂಪಾದಕೀಯ ಕೂಡ ಸಮಾಜ ಮತ್ತು ಸರ್ಕಾರವನ್ನು ಕಣ್ತೆಸುವಂತಿರಬೇಕು. ಆ ರೀತಿ ಬರೆದಾಗಲೇ ಆ ಸಂಪಾದಕೀಯಕ್ಕೆ ಒಂದು ಗೌರವ, ಮರ್ಯಾದೆ ಮತ್ತು ಅರ್ಥ ಬರುತ್ತದೆ. ಅಂತಹ ಒಂದು ಕೆಲಸವನ್ನು ಶ್ರೀಯುತ ರಾಘವನ್ ಅವರು ಮಾಡುತ್ತಿದ್ದರು. ಪತ್ರಿಕಾ ರಂಗಕ್ಕಷ್ಟೇ ಅಲ್ಲ, ಈ ಸಮಾಜಕ್ಕೆ ಕೂಡ ಒಬ್ಬ ಆದರ್ಶ ವ್ಯಕ್ತಿಯಾಗಿದ್ದ ಅವರು ಇನ್ನಿಲ್ಲವಾಗಿದ್ದಾರೆ. ಅವರ ನಿಧನದಿಂದಾಗಿ ನಮಗೂ ಸಹ ನೋವಾಗಿದೆ. ಅವರ ಅಗಲಿಕೆಯಿಂದಾಗಿ ಅವರ ಕುಟುಂಬಕ್ಕೆ ಉಂಟಾಗಿರು ವಂತಹ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಭಗವಂತ ಕರುಣಿಸಲೆಂದು ಪ್ರಾರ್ಥಿಸುತ್ತೇನೆ, ಈ ಸಂತಾಪ ಸೂಚನೆಯನ್ನು ಬೆಂಬಲಿಸಿ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ, ಧನ್ಯವಾದಗಳು.

**ಸಭಾಪತಿಯವರು :** ಮೃತರುಗಳ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಮೃತರುಗಳ ಗೌರವಾರ್ಥ

ಮಾನ್ಯ ಸದಸ್ಯರುಗಳು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರುಗಳ ಗೌರವಾರ್ಥ ಸದನದಲ್ಲಿ ಉಪಸ್ಥಿತರಿದ್ದ ಎಲ್ಲರೂ ಎದ್ದುನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಿದರು)**

**ಸಭಾಪತಿಯವರು :** ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

ನಮ್ಮ ಸದನದಲ್ಲಿ ನಾವು ಅನುಸರಿಸುತ್ತಿರ ತಕ್ಕಂತಹ ಪದ್ಧತಿಯಂತೆ ಸಂತಾಪ ಸೂಚನೆಯ ನಂತರ ಹತ್ತು ನಿಮಿಷ ಸದನವನ್ನು ಮುಂದೂಡಲಾಗುತ್ತಿದೆ.

**(12 ಗಂಟೆ 42 ನಿಮಿಷಗಳಲ್ಲಿ ಮೇಲೆದ್ದ ಸದನವು ಪುನಃ 12 ಗಂಟೆ 56 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಸಭಾಪೀಠವನ್ನಲಂಕರಿಸಿದ್ದರು.)**

## 3. ಪ್ರಶ್ನೋತ್ತರಗಳು

(ಅ) ಚುಕ್ಕೆಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

### ವೈದ್ಯಕೀಯ ಕಾಲೇಜುಗಳ ಬಗ್ಗೆ

**23; ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**(ಅ)** ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿರುವ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು?

**(ಆ)** ಈ ಕಾಲೇಜುಗಳಿಗೆ ನೀಡಿರುವ ಸೌಲಭ್ಯಗಳು ಏನು?

**(ಇ)** ಯಾದಗಿರಿ ಜಿಲ್ಲೆಗೆ ವೈದ್ಯಕೀಯ ಕಾಲೇಜನ್ನು ಸ್ಥಾಪಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

**ಶ್ರೀ ಎಸ್. ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು)**

**(ಅ)** ಗುಲ್ಬರ್ಗಾ ಜಿಲ್ಲೆಯಲ್ಲಿ 02 ಖಾಸಗಿ ವೈದ್ಯಕೀಯ ಕಾಲೇಜುಗಳಿವೆ. ಯಾದಗಿರಿ ಜಿಲ್ಲೆಯಲ್ಲಿ ಇದೂವರೆವಿಗೂ ವೈದ್ಯಕೀಯ ಕಾಲೇಜು ಪ್ರಾರಂಭವಾಗಿರುವುದಿಲ್ಲ.

**(ಆ)** ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

**(ಇ)** ಈ ಬಗ್ಗೆ ಮನವಿ ಸ್ವೀಕೃತವಾಗಿದ್ದು ಅದು ಪರಿಶೀಲನೆಯಲ್ಲಿದೆ.

**ಶ್ರೀ ಅಲ್ಲಮ ಪ್ರಭು ಪಾಟೀಲ್ :** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ನಾನು ಕೇಳಿರುವಂತಹ ಪ್ರಶ್ನೆ ಸ್ಪಷ್ಟವಾಗಿದೆ. ಮೊದಲನೆಯದಾಗಿ, ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿರುವ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು ಎಂಬ ಪ್ರಶ್ನೆಗೆ ಉತ್ತರವಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ 02 ಖಾಸಗಿ ವೈದ್ಯಕೀಯ ಕಾಲೇಜುಗಳಿವೆ. ಯಾದಗಿರಿ ಜಿಲ್ಲೆಯಲ್ಲಿ ಇದೂವರೆವಿಗೂ ವೈದ್ಯಕೀಯ ಕಾಲೇಜು ಪ್ರಾರಂಭವಾಗಿರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಇನ್ನು ಎರಡನೆಯ ಪ್ರಶ್ನೆ ಈ ಕಾಲೇಜುಗಳಿಗೆ ನೀಡಿರುವ ಸೌಲಭ್ಯಗಳು ಏನು ಎಂಬ ಪ್ರಶ್ನೆಗೆ ಉತ್ತರವಾಗಿ, ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಉತ್ತರ ಕೊಡಲಾಗಿದೆ. ಸರ್ಕಾರವನ್ನು ತಮ್ಮ ಮೂಲಕ ನಾನು ಕೇಳುವುದನೇಂದರೆ, ನಮ್ಮ ಗುಲ್ಬರ್ಗಾದಲ್ಲಿ 750 ಹಾಸಿಗೆ ಸಾಮರ್ಥ್ಯವುಳ್ಳಂತಹ ಸರ್ಕಾರಿ ಆಸ್ಪತ್ರೆ ಇದೆ. ಸಾಕಷ್ಟು ಹಣವನ್ನು ಒದಗಿಸಿ ಅಲ್ಲಿ ಶುಚಿತ್ವವಾದಂತಹ ಕಟ್ಟಡವನ್ನು ಕಟ್ಟಲಾಗಿದೆ. ಮೊದಲು ಎರಡು ಮೆಡಿಕಲ್ ಕಾಲೇಜುಗಳು ನಡೆಯುತ್ತಿದ್ದವು. ಅವುಗಳು ಯಾವುವೆಂದರೆ, ಒಂದು, ಖ್ವಾಜಾ ಬಂಧೇನವಾಜ್, ಮತ್ತೊಂದು ಮಹದೇವಪ್ಪ ರಾಂಪುರೆ ಮೆಡಿಕಲ್ ಕಾಲೇಜು. ಆದರೆ ಹೈದ್ರಾಬಾದ್ ಕರ್ನಾಟಕದ ಗುಲ್ಬರ್ಗಾ ಮತ್ತು ಯಾದಗಿರಿ ಭಾಗದಲ್ಲಿ ಇವತ್ತಿನ ದಿವಸ ಆಸ್ಪತ್ರೆಯಲ್ಲಿ ವೈದ್ಯರುಗಳಿಲ್ಲ. ಇದರ ಬಗ್ಗೆ ತಮ್ಮ ಬಳಿ ಅಂಕಿ–ಅಂಶಗಳು ಇವೆ. ನನ್ನ ಸ್ವಂತ ಊರಾರ "ನೆಲೋಗಿ" ಎಂಬ ಕ್ಷೇತ್ರದಲ್ಲಿ ಕೇವಲ ಒಬ್ಬ ಮಾತ್ರ ವೈದ್ಯನಿದ್ದಾನೆ. ಅದೂ ಅವನು ಬೆಳಿಗ್ಗೆ ಕುಡಿದು ಮಲಗಿದರೆ

ಪುನಃ ಸಾಯಂಕಾಲವೇ ಎದ್ದೇಳುವುದು. ಈ ವಿಷಯವನ್ನು ನಾನು ಕಳೆದ ಸಾರಿಯೂ ಸಹ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಇಂತಹ ಒಂದು ಪರಿಸ್ಥಿತಿಯಲ್ಲಿ ನನ್ನ ಪ್ರಶ್ನೆ ಏನೆಂದರೆ, 750 ಹಾಸಿಗೆ ಸಾಮರ್ಥ್ಯವುಳ್ಳಂತಹ ಆಸ್ಪತ್ರೆಯಲ್ಲಿ ಒಂದು ಮೆಡಿಕಲ್ ಕಾಲೇಜನ್ನು ಪ್ರಾರಂಭಿಸಿದರೆ ಆ ಭಾಗದ ಜನರಿಗೆ ಅನುಕೂಲವಾಗುತ್ತದೆ ಹಾಗೂ ಸಾಕಷ್ಟು ವೈದ್ಯರುಗಳು ಬರುತ್ತಾರೆ. ಅಲ್ಲದೆ ಈಗ ಯಾದಗಿರಿ ಹೊಸ ಒಂದು ಜಿಲ್ಲೆಯಾಗಿದೆ. ಯಾದಗಿರಿ ಹೊಸ ಜಿಲ್ಲೆಯಾಗಿದ್ದಾಗ ಮುಖ್ಯಮಂತ್ರಿಗಳಾಗಿದ್ದಂತಹ ಮಾನ್ಯ ಯಡಿಯೂರಪ್ಪನವರು ಬಂದಾಗ ಆ ಬೇಡಿಕೆಯನ್ನಿಟ್ಟಿದ್ದೆವು. ಅವರು ತಕ್ಷಣವೇ ಒಂದು ವರ್ಷದೊಳಗೆ ಆಸ್ಪತ್ರೆ, ಮೆಡಿಕಲ್ ಕಾಲೇಜು, ಇಂಜಿನೀಯರಿಂಗ ಕಾಲೇಜ್ ಹಾಗೂ ಎಲ್ಲಾ ರೀತಿಯಾದಂತಹ ಸೌಲಭ್ಯಗಳನ್ನು ಕೊಡುತ್ತೇವೆಂದು ಹೇಳಿದ್ದರು. ಆ ಸಮಯದಲ್ಲಿ ಉಸ್ತುವಾರಿ ಸಚಿವರಾಗಿದ್ದಂತಹ ಶ್ರೀ ಬಸವರಾಜ್ ಬೊಮ್ಮಾಯಿಯವರೂ ಸಹ ಭಾಷಣ ಮಾಡಿ ಚಪ್ಪಾಳೆಯನ್ನು ಗಿಟ್ಟಿಸಿಕೊಂಡು ಬಂದಿದ್ದಾರೆ. ದಯಮಾಡಿ ನಾನು ತಮ್ಮ ಮೂಲಕ ಸರ್ಕಾರವನ್ನು ಕಳಕಳಿ ಯಿಂದ ಕೇಳಿಕೊಳ್ಳುವುದೇನೆಂದರೆ, ಇವತ್ತಿನ ದಿವಸ 750 ಹಾಸಿಗೆ ಸಾಮರ್ಥ್ಯ ವುಳ್ಳಂತಹ ಆಸ್ಪತ್ರೆಯಲ್ಲಿ ಕೋಟಿಗಟ್ಟಲೆ ಹಣ ಖರ್ಚು ಮಾಡಿ ಸ್ಕ್ಯಾನಿಂಗ್ ಮೆಷಿನ್, ಡಯಾಲಿಸಿಸ್ ಮೆಷಿನ್, ಇನ್ನಿತರ ಮೆಷಿನ್‍ಗಳನ್ನೂ ಸಹ ಹಾಕಲಾಗಿದೆ. ಆದಕಾರಣ ಅಲ್ಲಿ ತಕ್ಷಣ ಒಂದು ಮೆಡಿಕಲ್ ಕಾಲೇಜಿನ ಅವಶ್ಯಕತೆ ಇದೆ. ಇಡೀ ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ವೈದ್ಯರುಗಳು ಕೊರತೆ ಬಹಳಷ್ಟಿದೆ. ಈಗಲೂ ಸಹ ಸಾಕಷ್ಟು ಜನರು ವೈದ್ಯಕೀಯ ಚಿಕಿತ್ಸೆಗಾಗಿ ಟ್ರೈನಿನಲ್ಲಿ ಹೈದ್ರಾಬಾದ್ ಹಾಗೂ ಸೊಲ್ಲಾಪುರಕ್ಕೆ ಹೋಗುತ್ತಿದ್ದಾರೆ. ಇದನ್ನು ತಡೆಗಟ್ಟುವ ಸಲುವಾಗಿ ಸರ್ಕಾರ ಮುಂದೆ ಬಂದು ಎರಡು ಸರ್ಕಾರಿ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡಬೇಕಂದು ತಮ್ಮ ಮೂಲಕ ಸರ್ಕಾರವನ್ನು ಬಹಳ ಕಳಕಳಿಯಿಂದ ಕೇಳಬಯಸುತ್ತೇನೆ.

**ಶ್ರೀ ಎಸ್. ಎ. ರಾಮದಾಸ್ :** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇವಲ ವೈದ್ಯಕೀಯ ಕಾಲೇಜಿನ ಬಗ್ಗೆ ಮಾತ್ರ ಪ್ರಶ್ನೆ ಕೇಳಿದ್ದರಿಂದ ಉತ್ತರವನ್ನು ಆ ರೀತಿ ಕೊಡಲಾಗಿದೆ. ಯಾವುದೇ ಆಸ್ಪತ್ರೆಗೆ ಸಂಬಂಧ

ಪಟ್ಟಂತಹ ವಿಚಾರ ಪ್ರಶ್ನೆಯಲ್ಲಿ ಇರಲಿಲ್ಲ. ಎರಡನೆಯದಾಗಿ ಇದಕ್ಕೆ ಸಂಬಂಧಪಟ್ಟಂತೆ ಯಾದಗಿರಿಯಲ್ಲಿ ಶ್ರೀಮತಿ ನಾಗರತ್ನ ಮೂರ್ತಿ, ಅನ್ನಪೂರ್ಣರವರು ಹಿಂದಿನ ಮಾನ್ಯ ಮುಖ್ಯಮಂತ್ರಿಗಳಿಗೆ ದಿನಾಂಕ 27/8/2011ರಲ್ಲಿ ಒಂದು ಮನವಿಯನ್ನು ಮಾಡಿದ್ದರು. ಅದರ ಆಧಾರದ ಮೇಲೆಯ ಈಗ ಅಲ್ಲಿ ಯಾವ ರೀತಿಯಾದಂತಹ ಸೌಲಭ್ಯಗಳು ಇವೆ ಎಂಬುದರ ಬಗ್ಗೆ ವಿವರಗಳನ್ನು ಕೇಳಿದ್ದೆವು. ಈಗ ನಮ್ಮ ಯಾದಗಿರಿಯಲ್ಲಿ 100 ಹಾಸಿಗೆಯ ಸೌಲಭ್ಯವಿರುವಂತಹ ಆಸ್ಪತ್ರೆ ಇದೆ. ಆದರೆ ಎಂ. ಸಿ. ಐ. ಪ್ರಕಾರ ನಮಗೆ ಕೊನೆಯಪಕ್ಷ 300 ಹಾಸಿಗೆ ಸಾಮರ್ಥ್ಯವುಳ್ಳಂತಹ ಆಸ್ಪತ್ರೆಯ ಅವಶ್ಯಕತೆ ಇದೆ, ಹಾಗೂ 25 ಎಕರೆ ಭೂಮಿ ಅವಶ್ಯಕತೆ ಇದೆ ಎಂದು ಈಗಾಗಲೇ ನಾವು ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆದಿದ್ದೇವೆ. ಕನಿಷ್ಠ ಪಕ್ಷ 25 ಎಕರೆ ಭೂಮಿ ಅವಶ್ಯಕತೆ ಇದೆ ಎಂದು ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆದಿದ್ದೇವೆ. ಹೆಚ್ಚುವರಿಯಾಗಿ 250 ಹಾಸಿಗೆಯ ಆಸ್ಪತ್ರೆಯನ್ನು ಮಾಡುವ ಸಲುವಾಗಿ ಯಾದಗಿರಿ (ಬಿ) ಗ್ರಾಮದಲ್ಲಿ ಸರ್ವೆ ನಂಬರ್ 399, 400, 401 ಮತ್ತು 402ರಲ್ಲಿ 20 ಎಕರೆ ಭೂಮಿಯನ್ನು ತೆಗೆದುಕೊಳ್ಳಲು process ಪ್ರಾರಂಭಿಸಿದ್ದಾರೆ. ಉಳಿದಂತಹ 5 ಎಕರೆ ಭೂಮಿಯ ಬಗ್ಗೆ ಸಹ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇನೆ. ಇದಾದ ನಂತರ 300 ಹಾಸಿಗೆ ಆಸ್ಪತ್ರೆ ಮತ್ತು 25 ಎಕರೆ ಭೂಮಿ ಕೊಟ್ಟ ತಕ್ಷಣವೇ ಪ್ರಾಸೆಸ್ ಮಾಡುತ್ತೇವೆ. ವಿಶೇಷವಾಗಿ ಗುಲ್ಬರ್ಗದ ಸಾರ್ವಜನಿಕ ಆಸ್ಪತ್ರೆಗೆ ಸಂಬಂಧಪಟ್ಟಂತೆ ವೈದ್ಯರ ನೇಮಕಾತಿ ಪ್ರಕ್ರಿಯೆ ಸಹ ಪ್ರಾರಂಭವಾಗಿದೆ. ಇದಲ್ಲದೇ ಇದರ ಬಗ್ಗೆ **M.B.B.S., ಮತ್ತು B.A.M.S., (Bachelor of Ayurvedic Medicine and Surgery)** ಆಯುರ್ವೇದ ಮಾಡಿರುವ ವೈದ್ಯರುಗಳು ಒಂದು ವರ್ಷ ಕಡ್ಡಾಯವಾಗಿ ಗ್ರಾಮೀಣ ಸೇವೆ ಮತ್ತು ಪಿ.ಜಿ. ಮಾಡಿರುವವರು ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಒಂದು ವರ್ಷ ಕಡ್ಡಾಯ ಸೇವೆ ಮಾಡಬೇಕೆಂದು ವಿಧೇಯಕವನ್ನು ತರುತ್ತಿದ್ದೇವೆ. ಈ ವರ್ಷದಿಂದ ಜಾರಿಗೆ ಕೊಡುತ್ತಿರುವು ದರಿಂದ ಸಮಸ್ಯೆ ಪರಿಹಾರವಾಗುತ್ತದೆ. ಜಿಲ್ಲಾಧಿಕಾರಿಗಳು ಭೂಮಿಯನ್ನು acquire ಮಾಡಿಕೊಟ್ಟ ತಕ್ಷಣವೇ ಪ್ರಕ್ರಿಯೆ

ಪ್ರಾರಂಭಿಸುತ್ತೇವೆ. ಭೂಮಿ ದೊರೆತ ನಂತರ ಮೆಡಿಕಲ್ ಕಾಲೇಜ್ ಕೊಡುವ ಕೆಲಸವನ್ನು ಮಾಡುತ್ತೇವೆ.

**ಹಿಂದುಳಿದ ವರ್ಗಗಳ ಪ್ರತ್ಯೇಕ ಸಚಿವಾಲಯ ಕುರಿತು**

**72 : ಶ್ರೀ ವಿ. ಆರ್. ಸುದರ್ಶನ್ (ವಿಧಾನಸಭೆಯಿಂದ ಚುನಾಯಿತರಾದವರು)**

**(ಅ)** ಸಮಾಜ ಕಲ್ಯಾಣ ಇಲಾಖೆಯು ಅತೀ ದೊಡ್ಡ ಇಲಾಖೆ ಆಗಿರುವ ಹಿನ್ನೆಲೆಯಲ್ಲಿ ಈ ಇಲಾಖೆಯಲ್ಲಿ ಆಡಳಿತದ ಹಿತದೃಷ್ಟಿಯಿಂದ ಪ್ರತ್ಯೇಕ ಹಿಂದುಳಿದ ವರ್ಗಗಳ ಸಚಿವಾಲಯದ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**(ಆ)** ಹಾಗಿದ್ದಲ್ಲಿ, ಹಿಂದುಳಿದ ವರ್ಗಗಳ ಸಚಿವಾಲಯದ ಸ್ಥಾಪನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರಗಳನ್ನು ಒದಗಿಸುವುದು)

**ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು)**

**(ಅ)** ಕೆಲವು ಸಂಘ ಸಂಸ್ಥೆಗಳು ಪ್ರತ್ಯೇಕ ಹಿಂದುಳಿದ ವರ್ಗಗಳ ಸಚಿವಾಲಯ ಸ್ಥಾಪಿಸಬೇಕೆಂದು ಬೇಡಿಕೆ ಇಟ್ಟಿರುತ್ತಾರೆ.

**(ಆ)** ಪ್ರತ್ಯೇಕವಾಗಿ ಹಿಂದುಳಿದ ವರ್ಗಗಳಿಗೆ ಸಚಿವಾಲಯ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದಲ್ಲಿ ಇಲ್ಲ. ಈಗಿರುವ ವ್ಯವಸ್ಥೆಯಲ್ಲಿ ತೊಂದರೆ ಯಾಗದಂತೆ ನಡೆಸಲಾಗುತ್ತಿದೆ.

**ಶ್ರೀ ವಿ. ಆರ್. ಸುದರ್ಶನ್ :–** ಮಾನ್ಯ ಸಚಿವರು ಬಜೆಟ್ ಕಾಪಿಯನ್ನು ನೋಡಿದ್ದಾರೆ. Para No. 133 of the Budget (Part II General) reads :

**"133. Total outlay for welfare of backward classes has been increased to Rs. 1000 crore fro 2012-13 from Rs. 760 crore in 2011-12.."**

ಅವರಿಗೆ ಇಚ್ಛಾಶಕ್ತಿ ಇದೆಯೇ? ನಿಜವಾಗಲೂ ಸರ್ಕಾರಕ್ಕೆ ಹಿಂದುಳಿದ ವರ್ಗಗಳ ಬಗ್ಗೆ ಕಾಳಜಿ ಇದೆಯೇ ಎಂಬ ಮಾತನ್ನು ಕೇಳಬೇಕಾಗುತ್ತದೆ. ನಿರಂತರವಾದ ಒತ್ತಾಯಗಳಿದ್ದು, ಸುಮಾರು 198 ವರ್ಗಗಳು ಹಿಂದುಳಿದ ವರ್ಗಗಳಲ್ಲಿ ಬರುತ್ತದೆ. ಆ ವರ್ಗಗಳ ಹಿತವನ್ನು ಕಾಪಾಡಲು ವಿಶೇಷವಾದ ಇಲಾಖೆ ರಚನೆ ಆಗಬೇಕೆಂಬುದು ನಿರಂತರವಾದ ಒತ್ತಾಯ ಇದೆ. ಅದು ಮಾನ್ಯ ಸಚಿವರಿಗೆ ಅರ್ಥವಾಗುತ್ತದೋ ಅಥವಾ ಅರ್ಥವಾಗುತ್ತಿಲ್ಲವೋ ಗೊತ್ತಿಲ್ಲ. ಒಂದುವೇಳೆ ಅರ್ಥವಾಗಿದ್ದರೂ ಮೌನ ವಹಿಸಿದ್ದಾರೆಯೇ ಎಂದು ಕೇಳಬೇಕಾಗುತ್ತದೆ. ಆದ್ದರಿಂದ ಕೂಡಲೇ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಿಜವಾಗಲೂ ಆ ವರ್ಗಗಳಲ್ಲಿ ಅನೇಕ ಸಮಸ್ಯೆಗಳು ಇವೆ. ಅವರಿಗೆ ಸರ್ವೆ ಮಾಡಲು ಆಸಕ್ತಿ ಇಲ್ಲ. ಕೇಂದ್ರ ಸರ್ಕಾರವು 21 ಕೋಟಿ ರೂಪಾಯಿಗಳನ್ನು ಕೊಡುತ್ತದೆ. ಶ್ರೀ ಸಿದ್ದರಾಮಣ್ಣನವರು ಆ ಸಂದರ್ಭದಲ್ಲಿಯೇ ಒಂದೆರಡು ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದರು. ಇದ್ಯಾವುದನ್ನೂ ಬಳಕೆ ಮಾಡಲು ಆಸಕ್ತಿ ಇಲ್ಲವೆಂದರೆ ಸುಮ್ಮನೆ ಪ್ಲಾಟ್‌ಫಾರ್ಮ್‌ಗಳಲ್ಲಿ ಭಾಷಣ ಮಾಡಿ, ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳುವುದಕ್ಕೆ ಹೊರಟಿದ್ದಾರೆಯೇ? ಇದರ ಬಗ್ಗೆ ಅವರು ಸ್ಪಷ್ಟ ಮಾಡಬೇಕಾಗುತ್ತದೆ. ಆ ವರ್ಗಗಳ ಹಿತದೃಷ್ಟಿಯಿಂದ ಸಂಪೂರ್ಣ ಅಸಮಾಧಾನ ಮತ್ತು ಸಿಟ್ಟಿನಿಂದ ನಾನು ಹೇಳಬೇಕಾಗುತ್ತದೆ. ಈ ಉತ್ತರವನ್ನು ಸದನದಲ್ಲಿ ಹರಿಯಬಾರದೆಂದು ನನಗೆ ಗೊತ್ತಿದೆ. ಆದರೂ ಕೂಡ ಹರಿಯಲೇಬೇಕಾಗುತ್ತದೆ.

**(ಈ ಸಂದರ್ಭದಲ್ಲಿ ಶ್ರೀ ಸುದರ್ಶನ್‌ರವರು ಉತ್ತರದ ಪ್ರತಿಯನ್ನು ಹರಿದು ಹಾಕಿದರು)**

ಆದ್ದರಿಂದ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ವಿಶೇಷವಾದ ಇಲಾಖೆಯನ್ನು ಮಾಡಲು ಸರ್ಕಾರ ಗಮನಹರಿಸಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಎ. ನಾರಾಯಣಸ್ವಾಮಿ :** ಮಾನ್ಯ ಸುದರ್ಶನ್‌ರವರು ಬಹಳ ಹಿರಿಯ ಸದಸ್ಯರು, ಅವರ ಬಗ್ಗೆ ನನಗೆ ಗೌರವ ಇದೆ. ಮಾನ್ಯ ಸಭಾಪತಿಯವರೇ, ಅವರು ಸಭಾಪತಿಯವರ ಪೀಠವನ್ನು ಅಲಂಕರಿಸಿದ್ದವರು. ಮಂತ್ರಿಗಳಿಗೆ ಚರ್ಚೆಗೆ ಅವಕಾಶ ಕೊಟ್ಟು, ಅವರಿಂದ ಉತ್ತರವನ್ನು ನಿರೀಕ್ಷೆ ಮಾಡದೇ ಈ ರೀತಿ ಉತ್ತರವನ್ನು ಸದನದಲ್ಲಿ ಹರಿದು ಹಾಕುವುದು ಸೂಕ್ತವಲ್ಲ.

2009–10ನೇ ಇಸವಿಯಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಕೇವಲ 312 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು, ಕೇವಲ 3 ವರ್ಷಗಳಲ್ಲಿ ಸಾವಿರ ಕೋಟಿ ರೂಪಾಯಿಗಳಿಗೆ ಹೆಚ್ಚಿಸಿದ್ದೇವೆ. ಹಿಂದುಳಿದ ವರ್ಗಗಳ ಬಗ್ಗೆ ವಿಶ್ವಾಸ, ಅಭಿಮಾನ ಇಲ್ಲದೇ ಸಾವಿರ ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದ್ದೇವೆಯೇ? ಶಾಶ್ವತ ಆಯೋಗವನ್ನು ರಚನೆ ಮಾಡಿದ್ದೇವೆ. ಅಲ್ಲದೇ ಸೆನ್ಸಸ್ ಮಾಡಲು 20 ಕೋಟಿ ರೂಪಾಯಿಗಳಲ್ಲಿ 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಯಾವ ರೀತಿ ಸೆನ್ಸಸ್ ಮಾಡಬೇಕು ಎಂಬ ಬಗ್ಗೆ ಅಧ್ಯಕ್ಷರು ಮತ್ತು ಅಲ್ಲಿನ ಸದಸ್ಯರು ಗಂಭೀರವಾಗಿ ಪರಿಗಣಿಸಿ ಮಾಡುತ್ತಾರೆ. ಯಾವ ರೀತಿ ಸಭೆ ಮಾಡಿಸಬೇಕು, ಎಷ್ಟು ಹಣ ವ್ಯಯವಾಗುತ್ತದೆ ಎಂಬಿತ್ಯಾದಿ ವಿಚಾರಗಳನ್ನು ಅವರು ಪರಿಗಣಿಸುತ್ತಾರೆ. ದಾಖಲಾತಿಗಳನ್ನು print ತೆಗೆಯುವ ಬಗ್ಗೆ ಮತ್ತು ಯಾವ ಮಾಹಿತಿ ಕೊಡಬೇಕೆಂಬ ಬಗ್ಗೆ ಚರ್ಚೆಯಾಗಿದೆ. ಖಂಡಿತವಾಗಿಯೂ ನಮ್ಮ ಸರ್ಕಾರ ಬಹಳಷ್ಟು ಕ್ರಮ ಕೈಗೊಂಡಿದೆ. ಒಂದು ಸಾವಿರ ಕೋಟಿ ಹೆಚ್ಚು ಮಾಡಿರುವುದಲ್ಲದೇ, ಪ್ರತ್ಯೇಕ ಸಚಿವಾಲಯವನ್ನು ಕೊಡುವ ಬಗ್ಗೆ ಚಿಂತನೆ ನಡೆದಿದೆ.

**ಶ್ರೀ ವಿ. ಆರ್. ಸುದರ್ಶನ್ :** 760 ಕೋಟಿ ರೂಪಾಯಿಗಳನ್ನು ಕಳೆದ ವರ್ಷ ಕೊಟ್ಟಿರುವುದಾಗಿ ತಿಳಿಸಿದ್ದಾರೆ. ಅದರಲ್ಲಿ ಎಷ್ಟು ಹಣ ಖರ್ಚು ಮಾಡಲು ಸಾಧ್ಯವಾಯಿತು ಎಂಬುದನ್ನು ತಿಳಿಸುತ್ತಾರೆಯೇ?

**ಶ್ರೀ ಎ. ನಾರಾಯಣಸ್ವಾಮಿ :** ನನ್ನ ಇಲಾಖೆಯಲ್ಲಿ ಶೇಕಡ 94ರಷ್ಟು ಹಣವನ್ನು ಒಟ್ಟಾರೆಯಾಗಿ ವೆಚ್ಚ ಮಾಡಿದ್ದೇನೆ.

(ಗೊಂದಲ)

**ಶ್ರೀ ವಿ. ಆರ್. ಸುದರ್ಶನ್ :** ಕಳೆದ ವರ್ಷ ಎಷ್ಟು ಹಣ ಖರ್ಚು ಮಾಡಿದೆ ಎಂದು ತಿಳಿಸಬೇಕಾದ ಜವಾಬ್ದಾರಿ ಇದೆ.

**ಶ್ರೀ ಎ. ನಾರಾಯಣಸ್ವಾಮಿ :** ಹಿಂದುಳಿದ ವರ್ಗಗಳನ್ನು ಅಭಿವೃದ್ಧಿ ಮಾಡಬೇಕೆಂಬ ಚಿಂತನೆ ಇದ್ದು, ಅದಕ್ಕೆ ಅವಶ್ಯಕತೆ ಇರುವ ಹಣವನ್ನು ಈ ವರ್ಷದ ಬಜೆಟ್‌ನಲ್ಲಿ ಮೀಸಲಿಟ್ಟಿದ್ದೇವೆ.

**ಶ್ರೀ ವಿ. ಆರ್. ಸುದರ್ಶನ್ :** ಈ ವರ್ಗಗಳ ಹಿತದೃಷ್ಟಿಯಿಂದ ಪ್ರತ್ಯೇಕವಾದ ಇಲಾಖೆ ಆಗಬೇಕೆಂದು ಒತ್ತಾಯ ಮಾಡುತ್ತೇನೆ. ಇಲ್ಲದಿದ್ದರೆ ಅವರ ಬಗ್ಗೆ ನಿರ್ಲಕ್ಷ್ಯ ಧೋರಣೆ ಅನುಸರಿಸಿ, ಕೇವಲ ಮೊಸಳೆ ಕಣ್ಣೀರು ಸುರಿಸಿ, ಕೇವಲ ರಾಜಕೀಯ ಲಾಭಗಳನ್ನು ಪಡೆದುಕೊಳ್ಳಲು ಈ ರೀತಿ ಹೇಳಿಕೆಗಳನ್ನು ಮಾಡುತ್ತಾರೆ ಎಂದು ಹೇಳಬೇಕಾಗುತ್ತದೆ.

(ಗೊಂದಲ)

**ಶ್ರೀ ಎ. ನಾರಾಯಣಸ್ವಾಮಿ :** ಪ್ರತ್ಯೇಕ ಸಚಿವಾಲಯ ಮಾಡುವ ಬಗ್ಗೆ ಸರ್ಕಾರದಲ್ಲಿ ಚಿಂತನೆ ಇದೆ.

**ಸಭಾಪತಿಯವರು :** ಮುಂದಿನ ಪ್ರಶ್ನೆ ಶ್ರೀ

ಸಿದ್ಧರಾಜುವರು ಕೇಳಿದ್ದು, ಅದಕ್ಕೆ ಕಾಲಾವಕಾಶ ಕೇಳಿದ್ದಾರೆ. ನಂತರ ಶ್ರೀ ಕೆ. ಸಿ. ಕೊಂಡಯ್ಯನವರ ಪರವಾಗಿ ಶ್ರೀ ಆರ್. ವಿ. ವೆಂಕಟೇಶ್‌ರವರು ಕೇಳುತ್ತಾರೆ.

**ಭಿಕ್ಷುಕರ ಸೆಸ್ ಹಣ ದುರುಪಯೋಗ :**

**33; ಕೆ. ಸಿ. ಕೊಂಡಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)**

**(ಅ)** ಭಿಕ್ಷುಕರ ಪುನರ್ವಸತಿ ಕೇಂದ್ರಕ್ಕೆ 2009 ರಿಂದ ಇಲ್ಲಿಯವರೆಗೆ ಬಿಡುಗಡೆ ಮಾಡಿದ ಹಣವೆಷ್ಟು? ಯಾವ ಯಾವ ಮೂಲಗಳಿಂದ

ಹಣ ಬಿಡುಗಡೆ ಮಾಡಲಾಗಿದೆ (2009 ರಿಂದ ಇಲ್ಲಿಯವರೆಗೆ ವೆಚ್ಚಗಳವಾರು ವಿವರ ಒದಗಿಸುವುದು)

**(ಆ)** ರಾಜ್ಯದ ಸ್ಥಳೀಯ ಸಂಸ್ಥೆಗಳಿಂದ ಭಿಕ್ಷುಕರ ಸೆಸ್ ಹಣ ಸರಿಯಾಗಿ ಸಂಗ್ರಹವಾಗುತ್ತಿದೆಯೇ (ವಿವರ ಒದಗಿಸುವುದು)

**(ಇ)** ಯಾವ ಯಾವ ಜಿಲ್ಲೆಗಳಿಂದ ಭಿಕ್ಷುಕರ ಸೆಸ್ ಹಣ ಬರಲು ಬಾಕಿಯಿದೆ (ಜಿಲ್ಲಾವಾರು ವಿವರ ಒದಗಿಸುವುದು)

**(ಈ)** ಭಿಕ್ಷುಕರ ಸೆಸ್ ಹಣದಲ್ಲಿ ಕೋಟ್ಯಾಂತರ ರೂಪಾಯಿ ದುರುಪಯೋಗವಾಗಿರುವುದು ನಿಜವೇ: ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು (ವಿವರ ಒದಗಿಸುವುದು)?

**ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು)**

**(ಅ)** ಕರ್ನಾಟಕ ಭಿಕ್ಷಾಟನಾ ನಿಷೇಧ ಕಾಯಿದೆ 1975 ಸೆಕ್ಷನ್ 3 ರನ್ವಯ ಸ್ಥಳೀಯ ಸಂಸ್ಥೆಗಳು ಭೂಮಿ ಮತ್ತು ಕಟ್ಟಡಗಳ ಮೇಲೆ ವಿಧಿಸುವ ತೆರಿಗೆಗಳಲ್ಲಿ ಶೇ. 3% ರಷ್ಟು ಭಿಕ್ಷುಕರ ಕರವನ್ನು ಕಡಿತಗೊಳಿಸಿ ಈ ಹಣದಲ್ಲಿ ಶೇ. 10% ರಷ್ಟನ್ನು ಆಡಳಿತ ವೆಚ್ಚಕೆಂದು ಉಳಿಸಿಕೊಂಡು ನಂತರದಲ್ಲಿ ಉಳಿಕೆಯಾಗುವ ಭಿಕ್ಷುಕರ ಕರದ ಹಣವನ್ನು ಕೇಂದ್ರ ಪರಿಹಾರ ಸಮಿತಿ ಖಾತೆಗೆ ಪಾವತಿಸಲಾಗುತ್ತಿದೆ. ಈ ರೀತಿ ಸಂಗ್ರಹವಾಗುವ ಭಿಕ್ಷುಕರ ಕರದ ಹಣದಲ್ಲಿ ನಿರಾಶ್ರಿತರ ಪರಿಹಾರ ಕೇಂದ್ರಗಳನ್ನು (ಭಿಕ್ಷುಕರ) ನಿರ್ವಹಿಸಲಾಗುತ್ತಿದೆಯೇ ಹೊರತು ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನ ಒದಗಿಸುತ್ತಿಲ್ಲ.

2009–10ನೇ ಸಾಲಿನಿಂದ 2011–12ನೇ ಸಾಲಿನವರೆಗೆ (ಫೆಬ್ರವರಿ 2012ರ ಅಂತ್ಯಕ್ಕೆ) ಸ್ಥಳೀಯ ಸಂಸ್ಥೆಗಳಿಂದ ಪಾವತಿಸಲಾದ ಭಿಕ್ಷುಕರ ಕರ ಹಾಗೂ ವೆಚ್ಚದ ವಿವರ ಕೆಳಕಂಡಂತಿದೆ:

(ರೂ. ಲಕ್ಷಗಳಲ್ಲಿ)

| ವರ್ಷ | ವಸೂಲಾದ ಭಿಕ್ಷುಕರ ಕರ | ವೆಚ್ಚ |
|---|---|---|
| 2009–10 | 953.11 | 950.40 |
| 2010–11 | 2129.73 | 959.93 |
| 2011–12 (ಡಿಸೆಂಬರ್ 2011ರ ಅಂತ್ಯಕ್ಕೆ) | 3286.26 | 633.89 |

**(ಆ)** ಸ್ಥಳೀಯ ಸಂಸ್ಥೆಗಳು ವಸೂಲಿ ಮಾಡಿ ಕೇಂದ್ರ ಪರಿಹಾರ ಸಮಿತಿಯ ನಿಧಿಗೆ ಭರಿಸಲಾದ ವಿವರಗಳನ್ನು ಅನುಬಂಧ–"ಅ"ದಲ್ಲಿ ಒದಗಿಸಿದೆ.

**(ಇ)** ಲಭ್ಯವಿರುವ ಮಾಹಿತಿ ಪ್ರಕಾರ ಈ ಕೆಳಕಂಡ ಜಿಲ್ಲೆಗಳಿಂದ ಭಿಕ್ಷುಕರ ಕರ ಬಾಕಿ ಇರುತ್ತದೆ.

(ರೂ. ಲಕ್ಷಗಳಲ್ಲಿ)

| | | |
|---|---|---|
| 1 | ಬೆಂಗಳೂರು (ಬಿ.ಬಿ.ಎಂ.ಪಿ) | 2980.62 |
| 2 | ಬೆಂಗಳೂರು (ಗ್ರಾ) | 6.75 |
| 3 | ಬಾಗಲಕೋಟೆ | 7.71 |
| 4 | ಬೆಳಗಾವಿ | 4.34 |
| 5 | ಚಾಮರಾಜನಗರ | 0.66 |
| 6 | ಚಿತ್ರದುರ್ಗ | 0.44 |
| 7 | ದಾವಣಗೆರೆ | 14.10 |
| 8 | ಧಾರವಾಡ | 255.34 |
| 9 | ಗದಗ | 4.45 |

| | | |
|---|---|---|
| 10 | ಹಾಸನ | 68.32 |
| 11 | ಕೋಲಾರ | 39.94 |
| 12 | ಕೊಪ್ಪಳ | 8.47 |
| 13 | ಮಂಡ್ಯ | 0.13 |
| 14 | ಮೈಸೂರು | 2.09 |
| 15 | ರಾಮನಗರ | 6.66 |
| 16 | ಶಿವಮೊಗ್ಗ | 2.50 |
| 17 | ಉಡುಪಿ | 2.39 |
| 18 | ಉತ್ತರಕನ್ನಡ | 0.76 |
| | ಒಟ್ಟು | 3405.67 |

**(ಈ)** ಕರ್ನಾಟಕ ಭಿಕ್ಷಾಟನಾ ನಿಷೇಧ ಕಾಯಿದೆ ಮತ್ತು ನಿಯಮಗಳು 1975 ರಲ್ಲಿ ದತ್ತವಾದ ಆರ್ಥಿಕಾಧಿಕಾರಗಳನ್ವಯ ನಿಯಮಾನುಸಾರ ವೆಚ್ಚಗಳನ್ನು ನಿರ್ವಹಿಸಲಾಗುತ್ತಿದ್ದು, ಯಾವುದೇ ಹಣ ದುರುಪಯೋಗವಾಗಿರುವುದು ವರದಿಯಾಗಿರುವುದಿಲ್ಲ.

**ಅನುಬಂಧ – 'ಅ'**

**2009–10 ರಿಂದ 2011–12ನೇ ಸಾಲುಗಳಲ್ಲಿ ಭಿಕ್ಷುಕರ ಕರ ವಸೂಲಾದ ಮಾಹಿತಿ**

**(ರೂ. ಲಕ್ಷಗಳಲ್ಲಿ)**

| ಕ್ರ. ಸಂ. | ಜಿಲ್ಲೆಗಳು | 2009–10 | 2010–11 | 2011–12 |
|---|---|---|---|---|
| 1 | ಬೆಂಗಳೂರು ನಗರ ಜಿಲ್ಲೆ | 720.88 | 1712.18 | 2925.18 |

| | | | | |
|---|---|---|---|---|
| 2 | ಬೆಂಗಳೂರು ಗ್ರಾಮಾಂತರ ಜಿಲ್ಲೆ | 10.21 | 7.70 | 1.04 |
| 3 | ಚಿಕ್ಕಬಳ್ಳಾಪುರ ಜಿಲ್ಲೆ | 0.49 | 2.55 | 0.08 |
| 4 | ಚಿತ್ರದುರ್ಗ ಜಿಲ್ಲೆ | 7.52 | 9.79 | 4.11 |
| 5 | ದಾವಣಗೆರೆ ಜಿಲ್ಲೆ | 2.16 | 20.95 | 15.47 |
| 6 | ಕೋಲಾರ ಜಿಲ್ಲೆ | 0.10 | 1.28 | 3.10 |
| 7 | ರಾಮನಗರ ಜಿಲ್ಲೆ | 1.51 | 1.73 | 0.14 |
| 8 | ಶಿವಮೊಗ್ಗ ಜಿಲ್ಲೆ | 4.53 | 6.46 | 4.53 |
| 9 | ತುಮಕೂರು ಜಿಲ್ಲೆ | 15.63 | 11.20 | 12.75 |
| 10 | ಬಾಗಲಕೋಟೆ ಜಿಲ್ಲೆ | 1.18 | 11.15 | 7.68 |
| 11 | ಬೆಳಗಾಂ ಜಿಲ್ಲೆ | 29.29 | 40.26 | 42.13 |
| 12 | ಬಿಜಾಪುರ ಜಿಲ್ಲೆ | 2.80 | 5.34 | 1.56 |
| 13 | ಧಾರವಾಡ ಜಿಲ್ಲೆ | 26.31 | 56.78 | 50.00 |
| 14 | ಗದಗ ಜಿಲ್ಲೆ | 0.35 | 10.64 | 4.17 |
| 15 | ಹಾವೇರಿ ಜಿಲ್ಲೆ | 2.99 | 10.72 | 5.61 |
| 16 | ಉತ್ತರ ಕನ್ನಡ ಜಿಲ್ಲೆ | 4.65 | 12.81 | 16.36 |
| 17 | ಬಳ್ಳಾರಿ ಜಿಲ್ಲೆ | 14.82 | 22.62 | 9.03 |
| 18 | ಬೀದರ್ ಜಿಲ್ಲೆ | 2.52 | 1.84 | 1.40 |
| 19 | ಗುಲ್ಬರ್ಗಾ ಜಿಲ್ಲೆ | 16.39 | 45.66 | 0.40 |
| 20 | ಯಾದಗಿರಿ ಜಿಲ್ಲೆ | – | 0.53 | 0.69 |
| 21 | ಕೊಪ್ಪಳ ಜಿಲ್ಲೆ | 6.76 | 1.98 | 3.55 |

| | | | | |
|---|---|---|---|---|
| 22 | ರಾಯಚೂರು ಜಿಲ್ಲೆ | 16.15 | 6.45 | 0.20 |
| 23 | ಚಾಮರಾಜನಗರ ಜಿಲ್ಲೆ | 1.15 | 4.91 | 2.17 |
| 24 | ಚಿಕ್ಕಮಗಳೂರು ಜಿಲ್ಲೆ | 1.26 | 1.45 | 6.56 |
| 25 | ದಕ್ಷಿಣ ಕನ್ನಡ ಜಿಲ್ಲೆ | 40.40 | 76.97 | 104.88 |
| 26 | ಹಾಸನ ಜಿಲ್ಲೆ | 3.08 | 3.10 | 19.10 |
| 27 | ಕೊಡಗು ಜಿಲ್ಲೆ | 4.62 | 3.22 | 4.17 |
| 28 | ಮಂಡ್ಯ ಜಿಲ್ಲೆ | 1.32 | 0.47 | 0.64 |
| 29 | ಮೈಸೂರು ಜಿಲ್ಲೆ | 0.95 | 20.87 | 22.72 |
| 30 | ಉಡುಪಿ ಜಿಲ್ಲೆ | 13.09 | 18.12 | 16.84 |
| | **ಒಟ್ಟು** | **953.11** | **2129.73** | **3286.26** |

**ಶ್ರೀ ಆರ್. ವಿ. ವೆಂಕಟೇಶ್ :** ಮಾನ್ಯ ಸಭಾಪತಿಯವರೇ, ಸ್ಥಳೀಯ ಸಂಸ್ಥೆಗಳಿಂದ ಸಂಗ್ರಹಿಸುವ ಶೇಕಡ 3ರಷ್ಟು ಭಿಕ್ಷುಕರ ಕರ ವಿಧಿಸುತ್ತಿದ್ದಾರೆ. ಇದು ದೊಡ್ಡ ಪ್ರಮಾಣದಲ್ಲಿ ದುರುಪಯೋಗವಾಗುತ್ತಿದೆ ಎಂದು ಮಾಧ್ಯಮ ಗಳಲ್ಲಿ ವರದಿಯಾಗಿದ್ದು, ಸತ್ಯವೂ ಆಗಿವೆ. ಅವರು ಕೊಟ್ಟಿರುವ ಉತ್ತರದಲ್ಲಿ ಯೂ ಈ ವಿಚಾರ ಎದ್ದು ಕಾಣುತ್ತಿದೆ. 2009–10ರಲ್ಲಿ 953 ಲಕ್ಷ ರೂಪಾಯಿ ಗಳನ್ನು ಸಂಗ್ರಹಿಸಿ, 900 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ. 2010–11ರಲ್ಲಿ 2129 ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿ, 959 ಲಕ್ಷ ರೂಪಾಯಿ ಗಳನ್ನು ವೆಚ್ಚ ಮಾಡಿದ್ದಾರೆ. 2011–12ರಲ್ಲಿ ಡಿಸೆಂಬರ್ 2011ರ ಅಂತ್ಯದವರೆಗೆ 3286 ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿ ಕೇವಲ 633 ಲಕ್ಷ ರೂಪಾಯಿ ಗಳನ್ನು ವೆಚ್ಚ ಮಾಡಿದ್ದಾರೆ. ವಿವಿಧ ಜಿಲ್ಲೆಗಳಿಂದ ಬಾಕಿ ಉಳಿದಿರುವ ಹಣದಲ್ಲಿ ಬಿಬಿಎಂಪಿಯಿಂದ 2980 ಲಕ್ಷ ಸಂಗ್ರಹವಾಗಿ, ಅವರ ಹತ್ತಿರವೇ ಬಾಕಿ ಉಳಿದುಕೊಂಡಿದೆ. ಇದು ಯಾವುದೇ ರೀತಿ ಉಪಯೋಗ ಆಗಿಲ್ಲ. ಇದು ಏಕೆ ಆಗಿದೆ? ಹೆಚ್ಚಿನ ಮೊತ್ತ ಸಂಗ್ರಹವಾಗಿದೆ. ಇದು ಸ್ಥಳೀಯ ಸಂಸ್ಥೆಗಳಿಗೆ ಹೊರೆ

ಆಗಿದೆ. ಸ್ಥಳೀಯ ಸಂಸ್ಥೆಗಳಿಗೆ ಬೇರೆ ರೀತಿ ಹಣ ಬೇಕಾಗುತ್ತದೆ. ಉದಾಹರಣೆಗೆ ಬಿಬಿಎಂಪಿಯಲ್ಲಿ ಸಾರ್ವಜನಿಕ ಶೌಚಾಲಯಗಳ ಕೊರತೆ ಇದೆ. ಶೇಕಡ 3ರಷ್ಟು ಸೆಸ್ ವಿಧಿಸಿದ್ದು, ಇದರಲ್ಲಿ ಶೇಕಡ ಒಂದರಷ್ಟು ಭಿಕ್ಷುಕರಿಗೆ ಉಪಯೋಗಿಸಿ, ಉಳಿದ ಶೇಕಡ 2ರಷ್ಟು ಹಣವನ್ನು ಶೌಚಾಲಯಗಳನ್ನು ನಿರ್ಮಿಸುವಂತಹ ಕೆಲಸಗಳಿಗೆ ಉಪಯೋಗಿಸಿದರೆ ಒಳ್ಳೆಯದಾಗುತ್ತದೆ. ಬಿಬಿಎಂಪಿಯವರು ಇಷ್ಟು ಮೊತ್ತದ ಹಣವನ್ನು ಉಳಿಸಿಕೊಂಡಿರುವುದಕ್ಕೆ ಮಾನ್ಯ ಸಚಿವರು ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ತಿಳಿಸಬೇಕು.

**ಶ್ರೀ ಎ. ನಾರಾಯಣಸ್ವಾಮಿ :** ಮಾನ್ಯ ಸಭಾಪತಿಯವರೇ, 2009–10ರಲ್ಲಿ 9.53 ಕೋಟಿ ರೂಪಾಯಿಗಳು, 2010–11ರಲ್ಲಿ 21.21 ಕೋಟಿ ಮತ್ತು 2011–12ರಲ್ಲಿ 32.86 ಕೋಟಿ ರೂಪಾಯಿಗಳು ಇಲಾಖೆಗೆ ಬಂದಿದೆ. ಬಹುಶಃ ತಮಗೆಲ್ಲರಿಗೂ ತಿಳಿದಿರುವಂತೆ ಆಗಸ್ಟ್ 2010ರಲ್ಲಿ ಬೆಂಗಳೂರು ಭಿಕ್ಷುಕರ ಕೇಂದ್ರದಲ್ಲಿ ಒಂದು ದುರ್ಘಟನೆ ನಡೆದಿತ್ತು. ಆದಾದ ನಂತರ 14 ಕೇಂದ್ರ ಗಳಲ್ಲಿ ಜಾಗರೂಕ ಕಾರ್ಯಕ್ರಮಗಳನ್ನು ಜರುಗಿಸಿದ್ದೇವೆ. 14 ಕೇಂದ್ರಗಳಲ್ಲಿ ಭಿಕ್ಷುಕರಲ್ಲಿ ನೂರಕ್ಕೆ ಎಪ್ಪತ್ತು – ಎಪ್ಪತ್ತೆರಡರಷ್ಟು ನಮ್ಮ ರಾಜ್ಯದವರಲ್ಲ. ಅವರು ಭಿಕ್ಷೆಯನ್ನು ವೃತ್ತಿ ಮಾಡಿಕೊಂಡು ಬೆಂಗಳೂರು ನಗರಕ್ಕೆ ಏಕೆ ಬರುತ್ತಾರೆ? ಎಷ್ಟು ಮಂದಿ ಬರುತ್ತಾರೆ? ಎಲ್ಲಿ ಹೋಗುತ್ತಾರೆ ಎಂಬ ಸಂಪೂರ್ಣ ಸೆನ್ಸಸ್ ಇಲ್ಲ. ಈ ಸೆನ್ಸಸ್ ಕೆಲಸ ಪ್ರಾರಂಭಿಸಿದ್ದೇವೆ. ನಂತರ streamline ಮಾಡಿ, ಯಾರು ಭಿಕ್ಷಕರು ಬರುತ್ತಾರೊ, ಅವರನ್ನು ತಹಸೀಲ್ದಾರರ ಮುಂದೆ ಹಾಜರು ಪಡಿಸಿ, ಮೆಡಿಕಲ್ ಸರ್ಟಿಫಿಕೇಟ್ ಮಾಡಿ, ಮಾಹಿತಿಗಳನ್ನು ಒಳಗೊಂಡಿರಬೇಕು. ಮೊದಲು 1000ಕ್ಕೂ ಹೆಚ್ಚು ಅಡ್ಮಿಷನ್ ಇದ್ದು, ಇವತ್ತು ಸುಮಾರು 300 ರಷ್ಟು ಅಡ್ಮಿಷನ್ ಇದೆ. ಪ್ರತಿಯೊಬ್ಬ ಭಿಕ್ಷುಕನನ್ನು ಯಾರು, ಎಲ್ಲಿಂದ ಬಂದ, ಎಷ್ಟು ದಿನಗಳಿಂದ ಕೇಂದ್ರದಲ್ಲಿ ಇದ್ದಾನೆ ಎಂದು ವೆಬ್‌ಸೈಟ್‌ನಲ್ಲಿ ನೋಡಬಹುದು. ಅಲ್ಲಿ ಯಾವುದೇ ರೀತಿಯ ಅವ್ಯವಹಾರಗಳು ಆಗಿಲ್ಲ ಮತ್ತು ದೂರುಗಳೂ ಬಂದಿಲ್ಲ. ಆ ಘಟನೆ ಬಗ್ಗೆ ಸಿಓಡಿ ತನಿಖೆ ಆಗುತ್ತಿದ್ದು, ನಾಲ್ಕು ಜನರನ್ನು ಅಮಾನತ್ತು ಮಾಡಿದ್ದೇನೆ. ಅದರ ಬಗ್ಗೆ ಎಫ್.ಐ.ಆರ್. ಹಾಕಿದ್ದು, ವರದಿ ಬಂದ ನಂತರ ತಪ್ಪಿತಸ್ಥರ

ವಿರುದ್ಧ ಕ್ರಮ ಜರುಗಿಸುತ್ತೇನೆ. ಹೆಚ್ಚು ಹಣ ಉಳಿಸಿಕೊಂಡಿರುವ ಬಿಬಿಎಂಪಿ ಗೆ ನೋಟೀಸ್ ಕೊಟ್ಟಿದ್ದೇವೆ. ಹೈಕೋರ್ಟ್ ಸಹ ಅಬ್‌ಸರ್‌ವೇಷನ್ ಮಾಡಿದೆ. ಆ ಕೇಂದ್ರವನ್ನು ಉನ್ನತೀಕರಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ನಾನು ಕೈಗೊಳ್ಳುತ್ತೇನೆ.

**ಶ್ರೀ ವೀರಣ್ಣ ಮತ್ತಿಕಟ್ಟಿ :** ಮಾನ್ಯ ಸಚಿವರು ಯಾವ ಹಣವನ್ನು ಉಳಿಸಿಕೊಂಡಿಲ್ಲ ಎಂದು ಹೇಳಿದರು.

**ಶ್ರೀ ಎ. ನಾರಾಯಣಸ್ವಾಮಿ :** ಅವ್ಯವಹಾರ ನಡೆದಿಲ್ಲ ಎಂದು ಹೇಳಿದೆ. ಅವ್ಯವಹಾರದ ಬಗ್ಗೆ ದಾಖಲೆ ಕೊಟ್ಟರೆ ತನಿಖೆ ಮಾಡಿಸುತ್ತೇನೆ.

(ಗೊಂದಲ)

**ಶ್ರೀ ವಿರಣ್ಣ ಮತ್ತಿಕಟ್ಟಿ (ವಿಧಾನಸಭಾ ಕ್ಷೇತ್ರ) :** ಬೆಂಗಳೂರಿಗೆ ಬೇರೆ ಬೇರೆ ಕಡೆಗಳಿಂದ ಭಿಕ್ಷುಕರು ಬಂದಿದ್ದಾರೆ ಎಂದು ಹೇಳಿದರು. ಅದೇ ರೀತಿ ವ್ಯಾಪಾರ–ಉದ್ದಿಮೆಗಾಗಿ ಬೇರೆ ಬೇರೆ ಕಡೆಗಳಿಂದ ಜನರು ಬಂದಿದ್ದಾರೆ. ಸಾಮಾನ್ಯವಾಗಿ ಅವರಿಗೆ ಎಲ್ಲ ರೀತಿಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುತ್ತೇವೆ. ಅವರು ಭಿಕ್ಷುಕರನ್ನು ಮುಟ್ಟಲು ಹೋಗಿ ಈ ರೀತಿ ಆಗಿದ್ದು ಎಂದು ಹೇಳುತ್ತೇನೆ. ಭಿಕ್ಷುಕರ ಪರಿಹಾರ ಕೇಂದ್ರದಲ್ಲಿ ಏನೋ ಮಾಡಲು ಹೋದರು. ಈ ವಿಷಯ ಬಹಳ ಜನರಿಗೆ ಗೊತ್ತಿದೆ ಮತ್ತು ರಾಷ್ಟ್ರಮಟ್ಟದ ಸುದ್ದಿ ಆಯಿತು. ಅದರಿಂದ ತೊಂದರೆಗೆ ಒಳಗಾದರು. 2010–11ರಲ್ಲಿ ಸಂಘ ಸಂಸ್ಥೆಗಳಿಂದ 2129.73ಲಕ್ಷ ರೂಪಾಯಿಗಳಲ್ಲಿ 959 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇಲ್ಲಿ ಹಣದ ಕೊರತೆ ಇಲ್ಲ, ಭಿಕ್ಷುಕರ ಜೀವನ ಮಟ್ಟವನ್ನು ಎತ್ತರಿಸಿ ಭಿಕ್ಷೆ ಬೇಡುವುದನ್ನು ಬಿಡಿಸಬೇಕು ಎಂಬ ಉದ್ದೇಶ ಇರಬೇಕು. ಅಲ್ಲದೇ ಭಿಕ್ಷಕರು ಕಂಡ ಕಂಡಲ್ಲಿ ಇದ್ದರೆ ನಮ್ಮ ನಗರ ಮತ್ತು ರಾಜ್ಯದ ಕಿಮ್ಮತ್ತು ಕಡಿಮೆಯಾಗುತ್ತದೆ. ಆ ದೃಷ್ಟಿಯಿಂದ ತೊಂದರೆಯಾಗ ಬಾರದೆಂದು ಸೆಸ್ ಹಾಕಿದ್ದಾರೆ. ಆ ಹಣವನ್ನು ಖರ್ಚು ಮಾಡಿ, ಮೂಲಭೂತ ಸೌಕರ್ಯ ಹಾಗೂ ಒಳ್ಳೆಯ ಊಟ ಇತ್ಯಾದಿಗಳನ್ನು ಕಲ್ಪಿಸಿದರೆ ಚಲೋ

ಆಗುತ್ತದೆ. ಆ ಹಣವನ್ನು ಇಟ್ಟುಕೊಂಡು ಕುಳಿತಿದ್ದಾರೆ. ಇದಕ್ಕೆ ಹೆಚ್ಚು ಚಿಂತನೆ ಮಾಡಬೇಕು.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು)** : ಮಾನ್ಯ ಸಭಾಪತಿಯವರೇ, ಎಷ್ಟು ಹಣವನ್ನು ಸಂಗ್ರಹಿಸಿ ಎಷ್ಟು ಖರ್ಚು ಮಾಡಿದ್ದಾರೆ ಎಂಬ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಉಳಿದ ಹಣ ಎಲ್ಲಿ ಹೋಯಿತು ಎಂಬ ಪ್ರಶ್ನೆ ಉದ್ಭವಿಸುತ್ತದೆ. 2009-10ರಲ್ಲಿ 953 ಲಕ್ಷ ರೂಪಾಯಿಗಳನ್ನು ಪೂರ್ಣವಾಗಿ ಖರ್ಚು ಮಾಡಿದ್ದಾರೆ. 2010-11ರಲ್ಲಿ 2129 ಲಕ್ಷ ರೂಪಾಯಿಗಳಲ್ಲಿ 959 ಲಕ್ಷ ರೂಪಾಯಿಗಳನ್ನು ಮತ್ತು 2011-12ರಲ್ಲಿ 3286 ಲಕ್ಷ ರೂಪಾಯಿಗಳಲ್ಲಿ 633 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಉಳಿದ ಹಣ ಎಲ್ಲಿ? ಭಿಕ್ಷುಕರ ಕೇಂದ್ರದಲ್ಲಿ ನಡೆದ ದುರ್ಘಟನೆ ಸಂದರ್ಭದಲ್ಲಿ ನಾನು ಭೇಟಿ ಕೊಟ್ಟಿದ್ದಾಗ ಅಲ್ಲಿ ಬಹಳ ಕೆಟ್ಟದಾಗಿ ಇತ್ತು. ಮನುಷ್ಯರಾದವರು ಅಲ್ಲಿ ಇರಲು ಸಾಧ್ಯವಿಲ್ಲದಂತಹ ವಾತಾವರಣ ಇತ್ತು. ಅಲ್ಲಿ ಭಿಕ್ಷುಕರನ್ನು ಹೊರಗೆ ಬಿಟ್ಟ ತಕ್ಷಣ ನಾವು ಬಳ್ಳಾರಿಗೆ ಪಾದಯಾತ್ರೆ ಮಾಡಿದಂತೆ ಎಲ್ಲ ಭಿಕ್ಷುಕರು ಕೊಟ್ಟಿರುವ ಸಮವಸ್ತ್ರ ಧರಿಸಿ ಪಾದಯಾತ್ರೆ ಮಾಡಿಕೊಂಡು ಹೋಗುತ್ತಿದ್ದವರು. ಅವರನ್ನು ಬಿಟ್ಟಿದ್ದೇ ಸಾಕು ಎನ್ನುವಂತೆ ಇತ್ತು. ಅತ್ಯಂತ ಕೆಟ್ಟ ರೀತಿಯಲ್ಲಿ ಅವರನ್ನು ಇಟ್ಟುಕೊಂಡಿದ್ದರು. ಅನ್ನವನ್ನು ಮಾಡಿ ಸೀಮೆಂಟ್ ನೆಲದ ಮೇಲೆ ಹಾಕಿದ್ದಾಗ ಗೋಡೆ ಧೂಳು ಅನ್ನಕ್ಕೆ ಇಳಿಯುವಂತೆ ಇತ್ತು. ಈ ರೀತಿ ಇದ್ದರೆ ಫುಡ್ ಪಾಯಿಸನ್ ಆಗದೇ ಇನ್ನೇನಾನುತ್ತದೆ? ಈಗ ಏನೋ ಬದಲಾವಣೆ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಅವರಿಗೆ ಏನಾದರೂ ಒಂದು ತರಬೇತಿ ಕೊಡಬೇಕಲ್ಲವೇ? ಬಟ್ಟೆ ಎಣೆಯುವ ಒಂದು ಕೇಂದ್ರ ಇತ್ತು. ಅಲ್ಲಿ ಪುನರ್ವಸತಿ ಎಂದರೆ ಅವರು ತಿಂದು-ಉಂಡು, ಮೈ ಕೆರೆದುಕೊಂಡು ಗದ್ದಲ ಮಾಡಿಕೊಂಡು ಕುಳಿತಿರುತ್ತಿದ್ದರು. ಆದ್ದರಿಂದ ಉಳಿಕೆ ಹಣವನ್ನು ಸರಿಯಾಗಿ ಸದ್ಬಳಕೆ ಮಾಡಬೇಕು. ನಿರ್ಗತಿಕರಾದವರಲ್ಲಿಯೂ ಒಂದು ಕುಶಲತೆ ಇರುತ್ತದೆ. ಅದನ್ನು ಉಪಯೋಗಿಸಿಕೊಳ್ಳಬೇಕು. ಅಲ್ಲಿ ಎಲ್ಲರೂ ಹುಷಾರು ತಪ್ಪಿದವರು ಮತ್ತು ನಡೆಯಲು ಸಾಧ್ಯವಿಲ್ಲದವರು ಇದ್ದರು. ಯುವ ವಯಸ್ಸಿನವರು ಯಾರೂ ಇರಲಿಲ್ಲ. ಇದನ್ನು ಸರಿಯಾಗಿ ಮಾಡಬೇಕು.

ಅವರೇ ಒಪ್ಪಿಕೊಂಡು ತನಿಖೆ ಮಾಡಿಸುತ್ತೇನೆ ಎಂದರು. ಅದು ಬೇರೆ ವಿಷಯ. ಇದರಿಂದ ಪುಣ್ಯನಾದರೂ ಬರುತ್ತದೆ. ಮಾನ್ಯ ಮತ್ತಿಕಟ್ಟಿಯವರು ಪಾಪ ಹೊತ್ತುಕೊಂಡ ಬಗ್ಗೆ ಹೇಳಿದರು.

**ಶ್ರೀ ಎ. ನಾರಾಯಣಸ್ವಾಮಿ :** ಆ ವಿಚಾರ ನನಗೆ ಗೊತ್ತಿಲ್ಲ, ಬಹಳ ಹಿರಿಯರಾದವರಿಗೆ ಅದನ್ನು ಯಾರ್‍ಯಾರು ಮುಟ್ಟಿದರು ಏನು ಎಂಬಿತ್ಯಾದಿ ಅವರಿಗೆ ಗೊತ್ತಿರುತ್ತದೆ. ನಾನು ಜವಾಬ್ದಾರಿ ತೆಗೆದುಕೊಂಡ ಮೇಲೆ ಅಲ್ಲಿನ 123 ಎಕರೆಯನ್ನು ಹೈಕೋರ್ಟನಲ್ಲಿ ಅಫಿಡೇವಿಟ್ ಮಾಡಿ, ಕ್ಯಾಬಿನೆಟ್ ನಿರ್ಣಯ ಮಾಡಿ ನಮ್ಮ ವಶದಲ್ಲಿ ಇಟ್ಟುಕೊಂಡಿದ್ದೇವೆ. ಅದು ಯಾರಿಗೂ ಪರಭಾರೆ ಆಗುವುದಿಲ್ಲ ಎಂದು ಸದನದ ಮುಖಾಂತರ ರಾಜ್ಯಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಮಾಧ್ಯಮ ಮಿತ್ರರು ಅಲ್ಲಿಗೆ ಭೇಟಿ ನೀಡಿದ್ದಾರೆ. ತಾವುಗಳು ಸಹ ಒಂದು ಸಾರಿ ಭೇಟಿ ನೀಡಿದ್ದರೆ ಅಲ್ಲಿನ ವ್ಯವಸ್ಥೆ ಬಗ್ಗೆ ಗೊತ್ತಾಗುತ್ತಿತ್ತು. ಈಗ ಯಾವ ರೀತಿ ಬದಲಾವಣೆಯಾಗಿದೆ ಮತ್ತು ಉತ್ತಮ ಮಟ್ಟದ ಆಹಾರ, ಬಿಸಿನೀರಿನ ವ್ಯವಸ್ಥೆ, ಪಾಠ–ಪ್ರವಚನ ಮತ್ತು ತರಬೇತಿ ಸೇರಿದಂತೆ ಎಲ್ಲವನ್ನೂ ಮಾಡಿದ್ದೇವೆ. ಒಂದು ಸಾರಿ ಭೇಟಿ ನೀಡಿ ತಾವು ಸಲಹೆ ನೀಡಿ, ತಪ್ಪಿದ್ದರೆ ತಿದ್ದೋಣ. ಒಂದು ಕಡೆ ಸರ್ವೆ ಮತ್ತು ಮತ್ತೊಂದು ಕಡೆ ಜಾಗೃತಿ ಮೂಡಿಸುವ ಕೆಲಸವನ್ನು ಮಾಡಿದ್ದೇವೆ.

**ಶ್ರೀಮತಿ ಮೋಟಮ್ಮ :** ಉಳಿಕೆ ಹಣವನ್ನು ಏನು ಮಾಡಿದ್ದಾರೆ? ಅವರ ಹೆಸರಿನಲ್ಲಿ ಡೆಫಾಸಿಟ್ ಇಟ್ಟಿದ್ದಾರೆಯೇ?

**ಶ್ರೀ ಎ. ನಾರಾಯಣಸ್ವಾಮಿ :** ರಾಜ್ಯದಲ್ಲಿ ಭಿಕ್ಷುಕರು ಹೆಚ್ಚಾಗಬೇಕೆಂದು ನಿರೀಕ್ಷೆ ಮಾಡಬಾರದು. ಆದರೆ ಅನಾಥರಾಗಿ ಬರುವವರನ್ನು ವಶಕ್ಕೆ ತೆಗೆದುಕೊಂಡು ತಹಶೀಲ್ದಾರರ ಮುಂದೆ ಪ್ರೊಡ್ಯೂಸ್ ಮಾಡಿ ಅವರಿಗೆ ಅವಶ್ಯಕ ಯೋಜನೆಗಳನ್ನು ಕಲ್ಪಿಸಿದ್ದೇವೆ.

**ಶ್ರೀ ಆರ್. ವಿ. ವೆಂಕಟೇಶ್ :** ಪರ ರಾಜ್ಯಗಳಿಂದ ಬರುತ್ತಾರೆ ಎಂದು ಮಾನ್ಯ ಸಚಿವರು ಹೇಳಿದರು. ಅಂದರೆ ಅಂತಹವರಿಗೆ ಉತ್ತೇಜನ ಕೊಟ್ಟಂತೆ ಆಗುತ್ತದಲ್ಲವೇ?

(ಗೊಂದಲ)

**ಶ್ರೀ ಎ. ನಾರಾಯಣಸ್ವಾಮಿ** : ಮಾನಸಿಕ ಸ್ಥಿತಿ ಸರಿಯಿಲ್ಲದವರು ಅನೇಕರು ಬಂದಿರುತ್ತಾರೆ. ಅವರನ್ನು ಸರಿಮಾಡಿ ಪುನಃ ಕಳುಹಿಸಿಕೊಡಬೇಕು. ಆ ವ್ಯವಸ್ಥೆ ಮಾಡಲು ಈ ಕೇಂದ್ರ ಇದೆ. ಆ ಕೆಲಸವನ್ನು ಮಾಡುತ್ತಿದ್ದೇವೆ.

**(ಗೊಂದಲ)**

**ಶ್ರೀಮತಿ ಮೋಟಮ್ಮ** : ಉಳಿಕೆ ಹಣ ಏನಾಯಿತು?

**ಶ್ರೀ ಎ. ನಾರಾಯಣಸ್ವಾಮಿ** : ಹಣವನ್ನು ಯಾರೂ ಡ್ರಾ ಮಾಡಿ ಮನೆ ಕಟ್ಟಿಸಿಕೊಳ್ಳುವುದಿಲ್ಲ. ಸರ್ಕಾರದ ಖಜಾನೆಯಲ್ಲಿ ಹಣ ಇದೆ.

**ಸಭಾಪತಿಯವರು** : ಇದು ಎಷ್ಟು ವಿಚಿತ್ರ ಇದೆ ನೋಡಿ. ಮುಂದಿನ ಪ್ರಶ್ನೆಯಲ್ಲಿ ಶ್ರೀ ಮಲ್ಲಿಕಾರ್ಜುನಪ್ಪನವರು ಕೇಳಿದ್ದು, ಅವರ ಪರವಾಗಿ ಶ್ರೀ ಮಧುಸೂದನ್ ಕೇಳುತ್ತಾರೆ ಎಂದು ಪತ್ರ ಬಂದಿದೆ. ಉತ್ತರವನ್ನು ವಸತಿ ಸಚಿವರು ನೀಡಬೇಕಾಗಿದ್ದು, ಅವರ ಪರವಾಗಿ ಮಾನ್ಯ ಇಂಧನ ಸಚಿವರು ಉತ್ತರ ಕೊಡುತ್ತಾರೆ ಎಂದು ಪತ್ರ ಬರೆದಿದ್ದಾರೆ. ಪ್ರಶ್ನೆ ಮತ್ತು ಉತ್ತರಗಳನ್ನು ಬೇರೆಯವರು ಕೇಳುತ್ತಾರೆ ಮತ್ತು ಹೇಳುತ್ತಾರೆ.

**ಶ್ರೀ ಗೋ. ಮಧುಸೂದನ್** : ಇದು ಜಿಪಿಎ ರೀತಿ ಇದ್ದು, ಜಿಪಿಎ ಪ್ರಶ್ನೆಗೆ ಜಿಪಿಎ ಉತ್ತರವಾಗಿದೆ.

**ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ವಸತಿ ಸೌಕರ್ಯದ ಬಗ್ಗೆ.**

**98; ಶ್ರೀ ಕೆ. ಆರ್. ಮಲ್ಲಿಕಾರ್ಜುನಪ್ಪ**

**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**(ಅ)** ಕಳೆದ 3 ವರ್ಷಗಳಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿನ ತಾಲ್ಲೂಕುಗಳಲ್ಲಿ ಯಾವ ಯಾವ ಯೋಜನೆಗಳಡಿಯಲ್ಲಿ ವಸತಿ ಸೌಕರ್ಯಗಳನ್ನು ಕಲ್ಪಿಸಲಾಗಿದೆ (ಯೋಜನೆವಾರು ತಾಲ್ಲೂಕುವಾರು ವಿವರ ನೀಡುವುದು).

**(ಆ)** ಈವರೆಗೆ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ ಮತ್ತು ಹಂಚಿಕೆಯಾದ ಮನೆಗಳ ಫಲಾನುಭವಿಗಳ ವಿವರವನ್ನು ತಾಲ್ಲೂಕುವಾರು ನೀಡುವುದು.

**(ಇ)** ಎರಡು ಜಿಲ್ಲೆಗಳಿಗೆ ಈವರೆವಿಗೆ ಒದಗಿಸಿದ ಅನುದಾನ, ವಿನಿಯೋಗಿಸಿದ ಅನುದಾನ ಎಷ್ಟು; (ವಿವರವನ್ನು ವರ್ಷವಾರು/ ತಾಲ್ಲೂಕುವಾರು ಒದಗಿಸುವುದು)

**ವಿ. ಸೋಮಣ್ಣ (ವಸತಿ ಸಚಿವರು)**

**(ಅ)** ಕಳೆದ 3 ವರ್ಷಗಳಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿನ ತಾಲ್ಲೂಕುಗಳಲ್ಲಿ ಈ ಕೆಳಗಿನ ಯೋಜನೆಗಳಡಿಯಲ್ಲಿ ವಸತಿ ಸೌಕರ್ಯಗಳನ್ನು ಕಲ್ಪಿಸಲಾಗಿದೆ.

1) ಗ್ರಾಮೀಣ ಆಶ್ರಯ ಯೋಜನೆ

2) ಬಸವ ವಸತಿ ಯೋಜನೆ

3) ಗ್ರಾಮೀಣ ಅಂಬೇಡ್ಕರ್ ಯೋಜನೆ

4) ಇಂದಿರಾ ಆವಾಸ್ ಯೋಜನೆ

5) ನಗರ ಆಶ್ರಯ / ವಾಜಪೇಯಿ ನಗರ ವಸತಿ ಯೋಜನೆ

**(ಆ)** ಈ ಮೇಲಿನ ಯೋಜನೆಗಳಡಿಯಲ್ಲಿ ಒಟ್ಟು 24321 ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗಿದ್ದು, ವಿವರಗಳನ್ನು ಅನುಬಂಧ–1ರಲ್ಲಿ ಲಗತ್ತಿಸಲಾಗಿದೆ.

(ಇ) ಮೈಸೂರು ಜಿಲ್ಲೆಗೆ 2008–09ನೇ ಸಾಲಿನಲ್ಲಿ ಒಟ್ಟು ರೂ. 3177.03 ಲಕ್ಷಗಳನ್ನು ಒದಗಿಸಲಾಗಿದ್ದು ಸಂಪೂರ್ಣ ಅನುದಾನವನ್ನು ಖರ್ಚುಮಾಡಲಾಗಿದೆ. 2009–10 ನೇ ಸಾಲಿನಲ್ಲಿ ರೂ. 4630.56 ಲಕ್ಷಗಳು ಮತ್ತು 2010–11ನೇ ಸಾಲಿನಲ್ಲಿ ರೂ. 4089.56 ಲಕ್ಷಗಳನ್ನು ಒದಗಿಸಲಾಗಿದ್ದು ಇದರಲ್ಲಿ ಸಂಪೂರ್ಣ ಅನುದಾನವನ್ನು ಖರ್ಚು

ಮಾಡಲಾಗಿದೆ. ಅಂತೆಯೇ ಚಾಮರಾಜನಗರ ಜಿಲ್ಲೆಗೆ 2008-09ನೇ ಸಾಲಿನಲ್ಲಿ ರೂ. 1715.55 ಲಕ್ಷಗಳು, 2009-10ನೇ ಸಾಲಿಗೆ ರೂ. 2901.34 ಲಕ್ಷಗಳು ಮತ್ತು 2010-11ನೇ ಸಾಲಿಗೆ ರೂ. 2528.42 ಲಕ್ಷಗಳನ್ನು ಒದಗಿಸಲಾಗಿದ್ದು, ಒದಗಿಸಲಾದ ಸಂಪೂರ್ಣ ಅನುದಾನವನ್ನು ಖರ್ಚುಮಾಡಲಾಗಿದೆ. ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

## ಅನುಬಂಧ–1

## Rajiv Gandhi Rural Housing Corporation Limited
### ಕಳೆದ 3 ವರ್ಷಗಳಲ್ಲಿ ವಿವಿಧ ವಸತಿ ಯೋಜನೆಗಳಲ್ಲಿ ನಿರ್ಮಿಸಲಾದ ಮನೆಗಳ ವಿವರಗಳು

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ಯೋಜನೆ | | | | | ಒಟ್ಟು |
|---|---|---|---|---|---|---|---|---|
| | | | ಗ್ರಾಮೀಣ ಆಶ್ರಯ | ಬಸವ ವಸತಿ ಯೋಜನೆ | ಗ್ರಾಮೀಣ ಅಂಬೇಡ್ಕರ್ | ಇಂದಿರಾ ಆವಾಸ್ ಯೋಜನೆ | ನಗರ ಆಶ್ರಯ / ವಾಜಪೇಯಿ ನಗರ ವಸತಿ ಯೋಜನೆ | |
| 1 | 2 | 3 | 4 | 5 | 6 | 7 | 8 | 9 |
| 1 | ಚಾಮರಾಜನಗರ | ಚಾಮರಾಜನಗರ | 955 | 142 | 173 | 1681 | 9 | **2960** |
| 2 | ಚಾಮರಾಜನಗರ | ಗುಂಡ್ಲುಪೇಟೆ | 778 | 26 | 70 | 980 | 0 | **1854** |
| 3 | ಚಾಮರಾಜನಗರ | ಕೊಳ್ಳೇಗಾಲ | 681 | 36 | 89 | 1151 | 0 | **1957** |
| 4 | ಚಾಮರಾಜನಗರ | ಯಳಂದೂರು | 274 | 9 | 56 | 1110 | 0 | **1449** |
| | ಒಟ್ಟು | | **2688** | **213** | **388** | **4922** | **9** | **8220** |

| | | | | | | | | |
|---|---|---|---|---|---|---|---|---|
| 1 | ಮೈಸೂರು | ಹೆಗ್ಗಡದೇವನ ಕೋಟೆ | 735 | 12 | 83 | 1593 | 0 | **2423** |
| 2 | ಮೈಸೂರು | ಹುಣಸೂರು | 814 | 12 | 195 | 1621 | 0 | **2642** |
| 3 | ಮೈಸೂರು | ಕೃಷ್ಣರಾಜನಗರ | 769 | 39 | 51 | 959 | 0 | **1818** |
| 4 | ಮೈಸೂರು | ಮೈಸೂರು | 965 | 312 | 71 | 1091 | 18 | **2457** |
| 5 | ಮೈಸೂರು | ನಂಜನಗೂಡು | 1395 | 62 | 192 | 1525 | 0 | **3174** |
| 6 | ಮೈಸೂರು | ಪಿರಿಯಾಪಟ್ಟಣ | 639 | 3 | 71 | 1047 | 6 | **1766** |
| 7 | ಮೈಸೂರು | ಟಿ.ನರಸೀಪುರ | 829 | 24 | 111 | 850 | 0 | **1814** |
| 8 | ಮೈಸೂರು | ಬನ್ನೂರು | 0 | 0 | 0 | 0 | 7 | **7** |
| | **ಒಟ್ಟು** | | **6146** | **464** | **774** | **8686** | **31** | **16101** |
| | **ಒಟ್ಟು** | | **8834** | **677** | **1162** | **13608** | **40** | **24321** |

# ಅನುಬಂಧ–2

## Rajiv Gandhi Rural Housing Corporation Limited

## ಕಳೆದ 3 ವರ್ಷಗಳಲ್ಲಿ ವಿವಿಧ ವಸತಿ ಯೋಜನೆಗಳಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಸಂಪೂರ್ಣವಾಗಿ ಖರ್ಚು ಮಾಡಲಾಗಿದೆ ವಿವರಗಳು:

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ಯೋಜನೆಗಳು | | | | | |
|---|---|---|---|---|---|---|---|---|
| | | | ಗ್ರಾಮೀಣ ಆಶ್ರಯ | ಬಸವ ವಸತಿ ಯೋಜನೆ | ಗ್ರಾಮೀಣ ಅಂಬೇಡ್ಕರ್ | ಇಂದಿರಾ ಆವಾಸ್ ಯೋಜನೆ | ನಗರ ಆಶ್ರಯ / ವಾಜಪೇಯಿ ನಗರ ವಸತಿ ಯೋಜನೆ | ಒಟ್ಟು |
| 1 | 2 | 3 | 4 | 5 | 6 | 7 | 8 | 9 |
| 2008–09 | | | | | | | | |
| 1 | ಚಾಮರಾಜನಗರ | ಚಾಮರಾಜನಗರ | 381.58 | 0.00 | 35.33 | 108.49 | 0.00 | **525.41** |
| 2 | ಚಾಮರಾಜನಗರ | ಗುಂಡ್ಲುಪೇಟೆ | 243.38 | 0.00 | 24.48 | 101.95 | 0.00 | **369.82** |

| | | | | | | | | |
|---|---|---|---|---|---|---|---|---|
| 3 | ಚಾಮರಾಜನಗರ | ಕೊಳ್ಳೇಗಾಲ | 433.21 | 0.00 | 44.65 | 129.18 | 2.00 | **609.04** |
| 4 | ಚಾಮರಾಜನಗರ | ಯಳಂದೂರು | 79.27 | 0.00 | 2.45 | 129.58 | 0.00 | **211.29** |
| | **ಒಟ್ಟು** | | **1137.44** | **0.00** | **106.91** | **469.21** | **2.00** | **1715.55** |
| 1 | ಮೈಸೂರು | ಹೆಗ್ಗಡದೇವನ ಕೋಟೆ | 317.79 | 0.00 | 32.72 | 219.65 | 0.00 | **570.17** |
| 2 | ಮೈಸೂರು | ಹುಣಸೂರು | 201.69 | 0.00 | 30.88 | 111.08 | 0.00 | **343.65** |
| 3 | ಮೈಸೂರು | ಕೃಷ್ಣರಾಜನಗರ | 338.23 | 0.00 | 15.45 | 77.80 | 0.00 | **331.49** |
| 4 | ಮೈಸೂರು | ಮೈಸೂರು | 314.09 | 0.00 | 31.37 | 136.26 | 0.00 | **481.72** |
| 5 | ಮೈಸೂರು | ನಂಜನಗೂಡು | 306.47 | 0.00 | 44.59 | 129.74 | 0.00 | **480.74** |
| 6 | ಮೈಸೂರು | ಪಿರಿಯಾಪಟ್ಟಣ | 215.30 | 0.00 | 18.94 | 100.88 | 2.00 | **337.12** |
| 7 | ಮೈಸೂರು | ಟಿ.ನರಸೀಪುರ | 382.30 | 0.00 | 52.94 | 196.91 | 0.00 | **632.15** |
| | **ಒಟ್ಟು** | | **1975.82** | **0.00** | **226.89** | **972.31** | **2.00** | **3177.03** |
| | | | | 2009–10 | | | | |
| 1 | ಚಾಮರಾಜನಗರ | ಚಾಮರಾಜನಗರ | 477.71 | 0.00 | 87.22 | 420.50 | 0.00 | **985.42** |

| | | | | | | | | |
|---|---|---|---|---|---|---|---|---|
| 2 | ಚಾಮರಾಜನಗರ | ಗುಂಡ್ಲುಪೇಟೆ | 369.57 | 0.00 | 38.70 | 290.25 | 0.00 | **698.52** |
| 3 | ಚಾಮರಾಜನಗರ | ಕೊಳ್ಳೇಗಾಲ | 320.63 | 0.00 | 70.69 | 279.65 | 0.00 | **670.97** |
| 4 | ಚಾಮರಾಜನಗರ | ಯಳಂದೂರು | 154.05 | 0.00 | 72.03 | 320.35 | 0.00 | **546.42** |
| | **ಒಟ್ಟು** | | **1321.96** | **0.00** | **268.63** | **1310.75** | **0.00** | **2901.34** |
| 1 | ಮೈಸೂರು | ಹೆಗ್ಗಡದೇವನ ಕೋಟೆ | 270.97 | 0.00 | 61.45 | 280.73 | 0.00 | **613.15** |
| 2 | ಮೈಸೂರು | ಹುಣಸೂರು | 269.50 | 0.00 | 82.75 | 414.69 | 0.00 | **766.93** |
| 3 | ಮೈಸೂರು | ಕೃಷ್ಣರಾಜನಗರ | 205.22 | 0.00 | 23.30 | 164.49 | 0.00 | **393.01** |
| 4 | ಮೈಸೂರು | ಮೈಸೂರು | 304.86 | 0.00 | 23.13 | 165.08 | 173.21 | **666.28** |
| 5 | ಮೈಸೂರು | ನಂಜನಗೂಡು | 486.81 | 0.00 | 90.21 | 405.54 | 0.00 | **982.57** |
| 6 | ಮೈಸೂರು | ಪಿರಿಯಾಪಟ್ಟಣ | 286.92 | 0.00 | 36.65 | 233.17 | 1.00 | **547.74** |
| 7 | ಮೈಸೂರು | ಟಿ.ನರಸೀಪುರ | 371.80 | 0.00 | 62.13 | 226.95 | 0.00 | **660.88** |
| | **ಒಟ್ಟು** | | **2196.07** | **0.00** | **379.62** | **1880.66** | **174.21** | **4630.56** |
| | | | | | | | | |

| | | | | | | | | |
|---|---|---|---|---|---|---|---|---|
| 2010–11 | | | | | | | | |
| 1 | ಚಾಮರಾಜನಗರ | ಚಾಮರಾಜನಗರ | 115.41 | 446.29 | 49.45 | 375.44 | 0.00 | **986.58** |
| 2 | ಚಾಮರಾಜನಗರ | ಗುಂಡ್ಲುಪೇಟೆ | 67.18 | 176.37 | 22.85 | 167.40 | 0.00 | **433.80** |
| 3 | ಚಾಮರಾಜನಗರ | ಕೊಳ್ಳೇಗಾಲ | 171.92 | 247.19 | 66.52 | 344.64 | 0.00 | **830.27** |
| 4 | ಚಾಮರಾಜನಗರ | ಯಳಂದೂರು | 11.95 | 96.71 | 10.46 | 158.67 | 0.00 | **277.77** |
| | **ಒಟ್ಟು** | | **366.46** | **966.56** | **149.27** | **1046.14** | **0.00** | **2528.42** |
| 1 | ಮೈಸೂರು | ಹೆಗ್ಗಡದೇವನ ಕೋಟೆ | 161.36 | 127.19 | 8.31 | 323.14 | 0.00 | **620.00** |
| 2 | ಮೈಸೂರು | ಹುಣಸೂರು | 87.09 | 75.69 | 12.29 | 304.17 | 0.00 | **479.24** |
| 3 | ಮೈಸೂರು | ಕೃಷ್ಣರಾಜನಗರ | 167.33 | 159.18 | 5.62 | 265.34 | 0.00 | **597.47** |
| 4 | ಮೈಸೂರು | ಮೈಸೂರು | 99.91 | 377.57 | 6.05 | 224.26 | 0.00 | **707.79** |

| | | | | | | | | |
|---|---|---|---|---|---|---|---|---|
| 5 | ಮೈಸೂರು | ನಂಜನಗೂಡು | 173.43 | 181.69 | 3.90 | 195.21 | 0.00 | **554.24** |
| 6 | ಮೈಸೂರು | ಪಿರಿಯಾಪಟ್ಟಣ | 63.04 | 334.85 | 10.63 | 225.67 | 0.00 | **634.19** |
| 7 | ಮೈಸೂರು | ಟಿ.ನರಸೀಪುರ | 131.56 | 97.51 | 14.14 | 253.43 | 0.00 | **496.63** |
| | **ಒಟ್ಟು** | | **883.74** | **1353.67** | **60.94** | **1791.22** | **0.00** | **4089.56** |

**ಶ್ರೀ ಗೋ. ಮಧುಸೂದನ್ (ಪದವಿಧರ ಕ್ಷೇತ್ರ) (ಶ್ರೀ. ಕೆ. ಆರ್. ಮಲ್ಲಿಕಾರ್ಜುನಪ್ಪರವರ ಪರವಾಗಿ) :** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದು, ಎರಡೂ ಜಿಲ್ಲೆಗಳಲ್ಲಿ 24,321 ಮನೆಗಳನ್ನು ಫಲಾನುಭವಿಗಳಿಗೆ ವಿತರಣೆ ಮಾಡಿರುವ ಬಗ್ಗೆ ತಿಳಿಸಿದ್ದಾರೆ. ಇದು ಅತ್ಯಂತ ಸ್ವಾಗತಾರ್ಹ ಹಾಗೂ ಸಂತೋಷವಾದುದು. ಆದರೆ ಎರಡೂ ಜಿಲ್ಲೆಗಳಲ್ಲಿ ಫಲಾನುಭವಿಗಳ ಪಟ್ಟಿ ಎಷ್ಟಿತ್ತು? ಇನ್ನೂ ಎಷ್ಟು ಜನರಿಗೆ ಕೊಡಬೇಕಾಗಿದೆ ಎಂಬುದನ್ನು ತಿಳಿಸಬೇಕು.

**ಕು. ಶೋಭಾ ಕರಂದ್ಲಾಜೆ (ಇಂಧನ ಸಚಿವರು) (ಶ್ರೀ. ವಿ. ಸೋಮಣ್ಣ ರವರ ಪರವಾಗಿ) :** ಮಾನ್ಯ ಸಭಾಪತಿಯವರೇ, ಕಳೆದ 3 ವರ್ಷಗಳ ಅವಧಿಯಲ್ಲಿ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗೆ ಕೊಟ್ಟಿರುವ ಬಗ್ಗೆ ಕೇಳಿದ್ದು, 24,321 ಮನೆಗಳನ್ನು ಕೊಟ್ಟಿರುವ ಬಗ್ಗೆ ತಿಳಿಸಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಈ ವರ್ಷದಲ್ಲಿ ನಾವು ಚಾಮರಾಜನಗರ ಜಿಲ್ಲೆಗೆ 22211 ಮನೆಗಳನ್ನು ಮತ್ತು ಮೈಸೂರು ಜಿಲ್ಲೆಯಲ್ಲಿ ಸುಮಾರು 51466 ಮನೆಗಳನ್ನು ಹಂಚಿಕೆ ಮಾಡಿದ್ದೇವೆ. ಕಳೆದ ಮೂರು ವರ್ಷಗಳಿಗೆ ಸಂಬಂಧ ಪಟ್ಟಂತೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದರು. ನಾನು ಹೆಚ್ಚುವರಿಯಾಗಿ ಈ ಮಾಹಿತಿಯನ್ನು ನೀಡುತ್ತಿದ್ದೇನೆ. ಈ ವರ್ಷದಲ್ಲಿ ನಾನು ಮೇಲೆ ಹೇಳಿದಂತಹ ಪ್ರಮಾಣದಲ್ಲಿ ಆ ಜಿಲ್ಲೆಗಳಿಗೆ ಮನೆಗಳನ್ನು ಹಂಚಿಕೆ ಮಾಡಲಾಗಿದೆ.

**ಶ್ರೀ ಗೋ. ಮಧುಸೂದನ್ :** ಧನ್ಯವಾದಗಳು.

**ರಾಜ್ಯದಲ್ಲಿ ಪೀಡಿಸುತ್ತಿರುವ ನಕ್ಸಲರ ದಮನದ ಬಗ್ಗೆ**

**85 ; ಶ್ರೀ ಅಶ್ವತ್ ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು)**

**(ಅ)** ರಾಜ್ಯದಲ್ಲಿ ನಕ್ಸಲ್ ಪೀಡಿತ ಜಿಲ್ಲೆಗಳು ಯಾವುವು; ನಕ್ಸಲ್‌ರನ್ನು ದಮನ ಮಾಡಲು ಗೃಹ ಇಲಾಖೆ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು).

**(ಆ)** ನಕ್ಸಲ್‌ರ ದಾಳಿಗೆ ಬಲಿಯಾದ ಪೊಲೀಸ್ ಕುಟುಂಬಗಳಿಗೆ ಇಲಾಖೆಯಿಂದ ಯಾವ ರೀತಿಯ ಸಹಾಯ ನೀಡಲಾಗಿದೆ; ನಕ್ಸಲ್‌ರ ಅಟ್ಟಹಾಸವನ್ನು ಎದುರಿಸಲು ಕೇಂದ್ರ ಸರ್ಕಾರದಿಂದ ವಿಶೇಷ ಕಾರ್ಯಪಡೆ ತರಬೇತಿ ಸಿಬ್ಬಂದಿ ಕೇಳಲಾಗಿದೆಯೇ; ಕೇಳಿದ್ದರೆ ಪ್ರಸ್ತಾವನೆಯು ಯಾವ ಹಂತದಲ್ಲಿದೆ; (ವಿವರ ನೀಡುವುದು)

**(ಇ)** ರಾಜ್ಯದಲ್ಲಿ ನಕ್ಸಲ್ ಭಯೋತ್ಪಾದನೆ, ಬಾಂಬ್ ದಾಳಿ ನಡೆಯುವಂತಹ ಸಂದರ್ಭ ಎದುರಿಸಲು ಗೃಹ ಇಲಾಖೆಯಲ್ಲಿ Anti Terrorist Squad, Anti Naxal Squad, Bomb Squad ಇದೆಯೇ; ಇದ್ದರೆ ಇದರ ಮುಖ್ಯಸ್ಥರು ಯಾರು; ಇಲ್ಲದಿದ್ದಲ್ಲಿ ಇದರ ಅವಶ್ಯಕತೆ ಇದೆಯೇ; (ವಿವರ ನೀಡುವುದು).

**(ಈ)** ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸುತ್ತಿರುವ ಅಗ್ನಿ ಅಪಘಾತದ ಬಗ್ಗೆ ಇಲಾಖೆ ತೆಗೆದುಕೊಂಡಿರುವ ಕ್ರಮಗಳೇನು, ಅಪಘಾತದಲ್ಲಿ ಪ್ರಾಣ ಲೆಕ್ಕಿಸದೆ ಕಾರ್ಯ ನಿರ್ವಹಿಸುವ **Fire Force** ಇಲಾಖೆಗೆ ಆಧುನಿಕ ಸಲಕರಣೆ ಒದಗಿಸಲಾಗಿದೆಯೇ? (ವಿವರ ನೀಡುವುದು)

**ಶ್ರೀ ಆರ್. ಅಶೋಕ (ಗೃಹ ಮತ್ತು ಸಾರಿಗೆ ಸಚಿವರು):**

**(ಅ)** ರಾಜ್ಯದಲ್ಲಿ ಶಿವಮೊಗ್ಗ, ಚಿಕ್ಕಮಗಳೂರು ಉಡುಪಿ, ದಕ್ಷಿಣ ಕನ್ನಡ ಮತ್ತು ತುಮಕೂರು (ಭಾಗಶಃ) ಜಿಲ್ಲೆಗಳು ನಕ್ಸಲ್ ಹಾವಳಿಯಿಂದ ಪೀಡಿತವಾಗಿವೆ.

**ನಕ್ಸಲ್ ಹಾವಳಿಯನ್ನು ದಮನ ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.**

543 ಸಿಬ್ಬಂದಿ ಬಲ ಇರುವ Anti Naxal ದಳವನ್ನು ಒಬ್ಬ ಆರಕ್ಷಕ ಮಹಾ ನಿರೀಕ್ಷಕರು (ಐ.ಜಿ.ಪಿ) ದರ್ಜೆಯ ಅಧಿಕಾರಿಯ ನೇತೃತ್ವದಲ್ಲಿ ರಚಿಸಲಾಗಿದೆ. ಮತ್ತು ನಕ್ಸಲೀಯರನ್ನು ಕಾನೂನಿನ ಕಕ್ಷೆಗೆ ಒಳಪಡಿಸಲು ವಿಶೇಷ ಬಲವನ್ನು ರಚಿಸಿದ್ದು ಈ ತಂಡಗಳು ಉಡುಪಿ,

ಶಿವಮೊಗ್ಗ, ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ.

**(ಆ)** ನಕ್ಸಲ್ ದಾಳಿಯಾದ ಪೊಲೀಸ್ ಕುಟುಂಬಗಳಿಗೆ ಇಲಾಖೆಯಿಂದ ಈ ಕೆಳಕಂಡಂತೆ ಸಹಾಯಧನ ನೀಡಲಾಗುತ್ತಿದೆ.

1) ನಕ್ಸಲ್ ದಾಳಿಗೆ ಬಲಿಯಾದ ಪೊಲೀಸ್ ಕುಟುಂಬಗಳಿಗೆ ಅನುಗ್ರಹ ಪೂರಕ ಮೊತ್ತ (5 ಲಕ್ಷ ರೂಪಾಯಿಗಳ ಸಾಮೂಹಿಕ ವಿಮಾ ಯೋಜನೆ ಒಳಗೊಂಡಂತೆ) ನೀಡಲಾಗುತ್ತಿದೆ.

2) ನಕ್ಸಲ್ ದಾಳಿಗೆ ಬಲಿಯಾದ ಪೊಲೀಸ್ ಕುಟುಂಬಗಳಿಗೆ, ಬಲಿಯಾದ ಪೋಲೀಸ್ ಅಧಿಕಾರಿಯ ಕೊನೆಯ ವೇತನದಷ್ಟು ಮೊತ್ತವನ್ನು ಅವರ ನಿವೃತ್ತಿಯ ದಿನಾಂಕದವರೆಗೆ ಪಿಂಚಣಿಯಂತೆ ನೀಡಲಾಗುತ್ತಿದೆ.

3) ನಕ್ಸಲ್ ದಾಳಿಗೆ ಬಲಿಯಾದ ಪೊಲೀಸ್ ಕುಟುಂಬಗಳಿಗೆ ಆಯಾ ಪೊಲೀಸ್ ಅಧಿಕಾರಿಯು ನಿವೃತ್ತಿ ಹೊಂದುವ ದಿನದವರೆಗೆ ಇಲಾಖೆಯಿಂದ ದೊರೆಯುವ ಸೌಲಭ್ಯಗಳಾದ ಸರ್ಕಾರದ ವಸತಿ ಗೃಹ ಸೌಲಭ್ಯ ಅಥವಾ ಅವರಿಗೆ ಲಭ್ಯವಿರುವ ಮನೆ ಬಾಡಿಗೆ ಭತ್ಯೆಯನ್ನು ನೀಡಲಾಗುತ್ತಿದೆ.

4) ನಕ್ಸಲ್ ದಾಳಿಗೆ ಬಲಿಯಾದ ಕುಟುಂಬದ ಸದಸ್ಯರಿಗೆ ಅವರ ವಿದ್ಯಾರ್ಹತೆ ಮತ್ತು ಅನುಕೂಲಕ್ಕೆ ತಕ್ಕಂತೆ ಅವರಿಗೆ ಅನುಕಂಪದ ಆಧಾರದ ಮೇಲೆ ಹುದ್ದೆಯನ್ನು ನೀಡಲಾಗುತ್ತಿದೆ.

5) ದಿನಾಂಕ 12-03-2012ರಿಂದ ಅನುಗ್ರಹ ಪೂರ್ವ ಮೊತ್ತವನ್ನು ರೂ. 5 ಲಕ್ಷದಿಂದ 10 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ.

6) ನಕ್ಸಲ್ ನಿಗ್ರಹ ಪಡೆಯಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ಸ್ಥಾಪಿಸಲಾದ ವಿವಿಧ ವಿಶೇಷ ತರಬೇತಿಯ

ಶಾಲೆಗಳಲ್ಲಿ ಅವಶ್ಯವಿರುವ ತರಬೇತಿಯನ್ನು ನೀಡಲಾಗಿದೆ. ಈ ಪ್ರಕ್ರಿಯೆಯು ಸತತವಾಗಿ ನಡೆಯುತ್ತಿದೆ.

(ಇ) ರಾಜ್ಯದಲ್ಲಿ ನಕ್ಸಲ್ ಭಯೋತ್ಪಾದನೆ, ಬಾಂಬ್ ದಾಳಿ ನಡೆಯುವಂತಹ ಸಂದರ್ಭಗಳನ್ನು ಎದುರಿಸಲು ಆಂತರಿಕ ಭದ್ರತಾ ವಿಭಾಗದಲ್ಲಿ Anti Terrorist Squad, Anti Naxsal Squad, Bomb Squad ಇರುತ್ತದೆ. Anti Terrorist Squad ನ ಮುಖ್ಯಸ್ಥರಾಗಿ ಒಬ್ಬ ಅಪರ ಆರಕ್ಷಕ ಮಹಾ ನಿರ್ದೇಶಕರು ಇರುತ್ತಾರೆ. Anti Naxsal Squad ನ ಮುಖ್ಯಸ್ಥರಾಗಿ ಒಬ್ಬ ಆರಕ್ಷಕ ಮಹಾ ನಿರೀಕ್ಷಕರು (ಐ.ಜಿ.ಪಿ.) ದರ್ಜೆಯ ಅಧಿಕಾರಿ ಮತ್ತು Bomb Squad ತಂಡವು ಬೆಂಗಳೂರು ನಗರದ ಪೊಲೀಸ್ ಕಮೀಷನರ್ ಮತ್ತು ಐಜಿಪಿ, ರಾಜ್ಯ ಗುಪ್ತ ವಾರ್ತೆ, ಅಧಿಕಾರಿಗಳ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದೆ.

**(ಈ)**

1) ಪ್ರಸ್ತುತ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ 177 ಅಗ್ನಿಶಾಮಕ ಠಾಣೆಗಳು 30 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಇವುಗಳ ಪೈಕಿ 14 ಅಗ್ನಿಶಾಮಕ ಠಾಣೆಗಳು ಬೆಂಗಳೂರಿನಲ್ಲಿವೆ. ಇದಲ್ಲದೆ ಮಂಜೂರಾಗಿರುವ 32 ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭಿಸುವ ಕಾರ್ಯ ಪ್ರಗತಿಯಲ್ಲಿದೆ (ಬೆಂಗಳೂರಿನಲ್ಲಿ ಪ್ರಾರಂಭಿಸಬೇಕಾಗಿರುವ 6 ಠಾಣೆಗಳು ಸೇರಿ).

2) ಕಳೆದ 3 ವರ್ಷಗಳಲ್ಲಿ ಓಗೊಟ್ಟ ಅಗ್ನಿ, ಹಾಗೂ ರಕ್ಷಣಾ ಕರೆಗಳ ವಿವರ ಈ ಕೆಳಗಿನಂತಿವೆ.

| ವರ್ಷ | ಅಗ್ನಿ ಕರೆಗಳು | ಅನಾಹುತಕ್ಕೊಳಗಾದ ಆಸ್ತಿಯ ಮೊತ್ತ (ರೂ.ಲಕ್ಷಗಳಲ್ಲಿ) | ರಕ್ಷಿಸಿರುವ ಆಸ್ತಿಯ ಮೊತ್ತ (ರೂ.ಲಕ್ಷಗಳಲ್ಲಿ) | ರಕ್ಷಣಾ ಕರೆಗಳು | ರಕ್ಷಿಸಿರುವ ಮಾನವ ಜೀವ |
|---|---|---|---|---|---|
| 2009 | 12,759 | 57,679 | 43,674 | 1,228 | 78 |
| 2010 | 12,866 | 85,562 | 71,907 | 1,447 | 865 |
| 2011 | 20,614 | 1,65,969 | 87,351 | 1,394 | 977 |

3) ಅಗ್ನಿಅನಾಹುತಗಳನ್ನು ತಡೆಗಟ್ಟುವ ದಿಸೆಯಲ್ಲಿ ಸಂಘ ಸಂಸ್ಥೆಗಳ ಮುಖಾಂತರ ಹಾಗೂ ಶಾಲಾ ಕಾಲೇಜುಗಳಲ್ಲಿ ಅಗ್ನಿನಿವಾರಣೆ ಬಗ್ಗೆ ಉಪನ್ಯಾಸ ಹಾಗೂ ಪ್ರಾತ್ಯಕಿಕೆಗಳನ್ನು ವ್ಯವಸ್ಥಿಸಿ ಜನರಲ್ಲಿ ಅಗ್ನಿ ಅನಾಹುತಗಳನ್ನು ತಡೆಗಟ್ಟುವ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಈ ದಿಸೆಯಲ್ಲಿ ಕಳೆದ 3 ವರ್ಷಗಳಲ್ಲಿ ಸಾಧಿಸಿರುವ ಪ್ರಗತಿಯ ವಿವರ ಈ ಕೆಳಗಿನಂತಿದೆ.

| ವರ್ಷ | ಉಪನ್ಯಾಸ ಹಾಗೂ ಪ್ರಾತ್ಯಕ್ಷತೆ (Lecutre cum Demonstration) | ಅಣಕು ಪ್ರದರ್ಶನ (mock Drill) | ಬೀದಿ ನಾಟಕ (Street play) |
|---|---|---|---|
| 2009 | 485 | 272 | – |
| 2010 | 2230 | 1477 | – |
| 2011 | 1932 | 964 | ರಾಜ್ಯದ ಮುಖ್ಯ ಪಟ್ಟಣಗಳ 47 ಸ್ಥಳಗಳಲ್ಲಿ. ದಿನಾಂಕ 6–2–2012 ರಿಂದ 24–2–2012ರವರೆಗೆ (ಕೇಂದ್ರ ಸರ್ಕಾರದ ಸಹಯೋಗದಿಂದ) |

4) ಪ್ರಸ್ತುತ ಕರ್ನಾಟಕ ಅಗ್ನಿಶಾಮಕ ಹಾಗೂ ತುರ್ತು ಸೇವಾ ಇಲಾಖೆಯು 177 ಅಗ್ನಿಶಾಮಕ ಠಾಣೆಗಳಲ್ಲಿ ಹೊಂದಿರುವ ಪ್ರಮುಖ ಅಗ್ನಿಶಾಮಕ ಮತ್ತು ರಕ್ಷಣಾ ವಾಹನ ವಿವರ ಈ ಕೆಳಗಿನಂತಿವೆ.

- ವಾಟರ್ ಟೆಂಡರ್ (4500 ಲೀ. ಟ್ಯಾಂಕ್) – 372
- ವಾಟರ್ ಲಾರಿ (9000 ಲೀ. ಟ್ಯಾಂಕ್) – 40
- ವಾಟರ್ ಬೌಜರ್ (16000 ಲೀ. ಟ್ಯಾಂಕ್) – 15
- ಫೋಮ್ ಟೆಂಡರ್– 2
- ಟರ್ನ ಟೇಬಲ್ ಲ್ಯಾಡರ್ – 1 (37 ಮೀಟರ್ ಎತ್ತರ)
- ಹೈಡ್ರಾಲಿಕ್ ಪ್ಲಾಟ್ ಫಾರಂ –3 (30,32 ಹಾಗೂ 54ಮೀಟರ ಎತ್ತರ)
- ಪಂಪ್ – 328
- ಆಧುನಿಕ ರಕ್ಷಣಾ ವಾಹನ – 23

5) ರಾಜ್ಯ ಔದ್ಯೋಗಿಕರಣ, ಜನಸಂದಣಿ ಇತ್ಯಾದಿಗಳನ್ನು ಗಮನಿಸಿ ಅಗ್ನಿಅನಾಹುತ ಸ್ಥಳಕ್ಕೆ ಕೂಡಲೇ ತಲುಪುವ ಉದ್ದೇಶದಿಂದ ಮೋಟಾರ್ ಸೈಕಲ್ ವಿತ್ ಮಿಸ್ಟ್ ಟೆಕ್ನಾಲೊಜಿ – 3 ಹಾಗೂ ಜೀಪ್ ವಿತ್ ಮಿಸ್ಟ್ ಟೆಕ್ನಾಲೋಜಿ – 9 ವಾಹನಗಳನ್ನು ಇಲಾಖೆಯು ರಾಷ್ಟ್ರದಲ್ಲೇ ಪ್ರಪ್ರಥಮವಾಗಿ ಖರೀದಿಸಿದೆ. ಇನ್ನು ಹೆಚ್ಚಿನ ಮೋಟಾರ್ ಸೈಕಲ್‌ಗಳನ್ನು ಖರೀದಿಸಲು ಪ್ರಸ್ತಾಪಿಸಲಾಗಿದೆ. ಇದಲ್ಲದೆ ಆಧುನಿಕ ರಕ್ಷಣಾ ವಾಹನಗಳಲ್ಲಿರುವ ವಿವಿಧ ಉಪಕರಣಗಳನ್ನು ರಕ್ಷಣಾ ಕರೆಯನ್ನು ತ್ವರಿತವಾಗಿ ನಿರ್ವಹಿಸುವ ವ್ಯವಸ್ಥೆಯನ್ನು ಇಲಾಖೆಯು ಹೊಂದಿದೆ. ಈ

ದಿಸೆಯಲ್ಲಿ ಇನ್ನು ಹೆಚ್ಚಿನ ರಕ್ಷಣಾ ವಾಹನಗಳನ್ನು ಖರೀದಿಸಲು ಪ್ರಸ್ತಾಪಿ0ಸಲಾಗಿದೆ.

6) ಇಲಾಖೆಯ ಸೇವೆಯನ್ನು ಸಮರ್ಪಕವಾಗಿ ಸಾರ್ವಜನಿಕರಿಗೆ ನೀಡುವ ಉದ್ದೇಶದಿಂದ ಸುಸಜ್ಜಿತವಾದ ಕಂಟ್ರೋಲ್ ರೂಂನ್ನು ಬೆಂಗಳೂರಿನಲ್ಲಿ ವ್ಯವಸ್ಥಿಸಲಾಗಿದೆ. ಇಲಾಖೆಯ ಸಿಬ್ಬಂದಿಗಳಿಗೆ ಸೂಕ್ತ ತರಬೇತಿ ನೀಡುವ ಉದ್ದೇಶದಿಂದ ಸುಸಜ್ಜಿತವಾದ ತರಬೇತಿ ಅಕಾಡೆಮಿಯನ್ನು ಸಹ ಇಲಾಖೆಯು ಹೊಂದಿದ್ದು, ಇದರ ಉನ್ನತೀಕರಣ ಕಾರ್ಯವು ಸಹ ಪ್ರಗತಿಯಲ್ಲಿದೆ.

7) ಸಂದರ್ಭನುಸಾರ ವಾಹನಗಳ ಸಮರ್ಪಕ ಬಳಕೆಗೆ ಇಲಾಖೆಯು ಪ್ರತ್ಯೇಕ ನಿಸ್ತಂತು ಜಾಲವನ್ನು ಹೊಂದಿದೆ.

8) ಜ್ಞಾನಾಭಿವೃದ್ಧಿಗಾಗಿ ರಾಜ್ಯ, ರಾಷ್ಟ್ರ ಹಾಗೂ ಹೊರದೇಶಗಳಲ್ಲಿ ಉನ್ನತಿ ತರಬೇತಿಗಾಗಿ ಸಿಬ್ಬಂದಿ ಹಾಗೂ ಅಧಿಕಾರಿಗಳನ್ನು ನಿಯೋಜಿಸಲಾಗುತ್ತಿದೆ.

**ಶ್ರೀ ಅಶ್ವತ್ ನಾರಾಯಣ :** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇದು ಬಹಳ ಗಂಭೀರವಾಗಿ ಚಿಂತನೆ ಮಾಡಬೇಕಾಗಿರುವಂತಹ ವಿಷಯವಾಗಿದೆ. ನಕ್ಸಲಿಯರ ತಾಣಗಳು ಚೈನಾದಿಂದ ಪ್ರಾರಂಭವಾಗಿ ಶ್ರೀಲಂಕಾದವರೆಗೆ ಬೆಳೆದುಕೊಂಡು ಹೋಗಿವೆ. ಇಂಡಿಯಾ ಮುಖಾಂತರ ಒಂದು ರೆಡ್ ಕಾರಿಡಾರ್‌ನ್ನು ಮಾಡಿಕೊಂಡು ಶ್ರೀಲಂಕಾದವರೆಗೆ ಬೆಳೆದುಕೊಂಡು ಹೋಗಿದೆ. ನಾನು ಕೇಳಿರುವಂತಹ ಪ್ರಶ್ನೆಗೆ ಮಾನ್ಯ ಸಚಿವರು, ಐ.ಜಿ.ಪಿ. ಮತ್ತು ಡಿ.ಜಿ.ಪಿಯವರ ನೇತೃತ್ವದಲ್ಲಿ ನಕ್ಸಲ್ ಹಾವಳಿಯನ್ನು ತಡೆಗಟ್ಟುವುದಕ್ಕೆ ತಂಡವನ್ನು ರಚನೆ ಮಾಡಲಾಗಿದೆ ಎನ್ನುವಂತಹ ಉತ್ತರವನ್ನು ನೀಡಿದ್ದಾರೆ. ಆದರೆ, ಹೈಟೆಕ್ ಸಿಸ್ಟಮ್‌ನಲ್ಲಿ ಆ ಇಲಾಖೆ ಇದೆಯೇ ಎನ್ನುವುದು ನನ್ನ ಅನುಮಾನವಾಗಿದೆ. ದಂತಚೋರ ವೀರಪ್ಪನ್ ಹತ್ತಿರ ಇದ್ದಂತಹ ಶಸ್ತ್ರಗಳು ಮತ್ತು ಅವನಿಗೆ ದೊರೆಯುತ್ತಿದ್ದ

ಮಾಹಿತಿಗಳು ನಮ್ಮ ಪೊಲೀಸ್ ಇಲಾಖೆಗೆ ದೊರೆಯುತ್ತಿರಲಿಲ್ಲ. ಉದಾಹರಣೆಗೆ ಹೇಳಬೇಕಾದರೆ, ಮೊನ್ನೆ ನಕ್ಸಲಿಯರ ತಾಣವನ್ನು ಹುಡುಕುವುದಕ್ಕೆ ಹೋದಂತಹ ಪೊಲೀಸಿನವರು ಒಂದು ವಾರಗಳ ಕಾಲ ಎಲ್ಲಿಗೆ ಹೋಗಿದ್ದಾರೆ ಎನ್ನುವಂತಹ ಮಾಹಿತಿ ನಮಗೆ ದೊರೆಯಲಿಲ್ಲ. ಇದರ ಅರ್ಥವೇನೆಂದರೆ, ನಮ್ಮ ಹತ್ತಿರ ಅತ್ಯಾಧುನಿಕವಾಗಿರುವಂತಹ ಶಸ್ತ್ರವಿಲ್ಲ ಮತ್ತು ಮಾಹಿತಿಗಳು ಇಲ್ಲ. ನಮ್ಮ ಪೊಲೀಸ್‌ನವರ ಕೈಯಲ್ಲಿ ಪುರಾತನ ಕಾಲದ ಬಂದೂಕಗಳನ್ನು ನೀಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಈಗ ನಕ್ಸಲರ ಕೈಯಲ್ಲಿ ಅತ್ಯಾಧುನಿಕ ಶಸ್ತ್ರಗಳು ಇವೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಅವರ ದಾಳಿಯನ್ನು ಎದುರಿಸುತ್ತೇವೆ ಎಂದು ಹೊರಟಿರುವಂತಹ ಪೊಲೀಸಿನವರ ಪರಿಸ್ಥಿತಿ ಹೇಗಿರಬೇಕೆಂದು ನಾವೇ ಊಹಿಸಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಮಾನ್ಯ ಗೃಹ ಸಚಿವರು ಯಾವ ಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ತಿಳಿಸಬೇಕಾಗಿದೆ. ಇದರ ಜೊತೆಗೆ ಮತ್ತೊಂದು ಪ್ರಶ್ನೆಯೆಂದರೆ. . . . .

**ಸಭಾಪತಿಯವರು** : ಮಾನ್ಯ ಅಶ್ವತ ನಾರಾಯಣರವರೆ, ಇದು ಪ್ರಶ್ನೋತ್ತರ ಅವಧಿ. ಭಾಷಣ ಮಾಡುವ ಹಾಗಿಲ್ಲ.

**ಶ್ರೀ ಅಶ್ವತ್ ನಾರಾಯಣ** : ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿ ಇತ್ತೀಚೆಗೆ ಸಂಭವಿಸಿದಂತಹ ಬೆಂಕಿ ಅನಾಹುತದ ಬಗ್ಗೆ ಮಾನ್ಯ ಗೃಹ ಸಚಿವರಲ್ಲಿ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಬಯಸುತ್ತಿದ್ದೇನೆ.

**ಸಭಾಪತಿಯವರು** : ಇದು ಚರ್ಚೆಯ ಸಮಯವಲ್ಲ. ನೇರವಾಗಿ to the point ಪ್ರಶ್ನೆ ಕೇಳಬೇಕು.

**ಶ್ರೀ ಅಶ್ವತ್ ನಾರಾಯಣ** : ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿ ಇತ್ತೀಚೆಗೆ ಬಹಳಷ್ಟು ಬೆಂಕಿ ಅನಾಹುತಗಳು ಆಗುತ್ತಿವೆ. ಅಗ್ನಿಶಾಮಕ ಇಲಾಖೆಗೆ ಹೊಸದಾಗಿ ಏನೇನು ಶಸ್ತ್ರ ಅಸ್ತ್ರಗಳನ್ನು ಕೊಟ್ಟಿದ್ದಾರೆ ಎನ್ನುವುದರ ಬಗ್ಗೆ ದಯಮಾಡಿ ಮಾನ್ಯ ಗೃಹ ಸಚಿವರು ತಿಳಿಸಬೇಕು.

**ಸಭಾಪತಿಯವರು :** ನಕ್ಸಲರಿಗೂ ಬೆಂಕಿ ಅನಾಹುತಕ್ಕೂ ಏನು ಸಂಬಂಧ? ಈ ರೀತಿ ವಿಷಯಗಳನ್ನು ಮಿಕ್ಸ್ ಮಾಡಬಾರದು. ನಾನು ಆಗಲೇ ಅದನ್ನು ಗಮನಿಸಿ, ಬೇಡವೆಂದು ಹೇಳಿದೆ. ಒಂದು ಪ್ರಶ್ನೆಯಲ್ಲಿ ಎರಡು ವಿಚಾರಗಳಿಗೆ ಸಂಬಂಧಪಟ್ಟಂತೆ ಎರಡೆರಡು ಪ್ರಶ್ನೆಗಳನ್ನು ಕೇಳುವುದಕ್ಕೆ ಬರುವುದಿಲ್ಲ. ಒಂದೇ ಪ್ರಶ್ನೆ ಕೇಳಬೇಕು. ಗಣೇಶ್ ಕಾರ್ಣಿಕ್‌ರವರೇ, to the point ಪ್ರಶ್ನೆ ಕೇಳಬೇಕು.

**ಕ್ಯಾಪ್ಟನ್ ಗಣೇಶ ಕಾರ್ಣಿಕ್ :** ಸನ್ಮಾನ್ಯ ಸಭಾಪತಿಯವರೇ, ನಾನು ಆ ಭಾಗದಿಂದ ಬಂದವನು. ಮಾನ್ಯ ಸದಸ್ಯರು ಹೇಳಿದಂತೆ ಎಲ್ಲ ಜಿಲ್ಲೆಗಳಲ್ಲಿ ಈ ಸಮಸ್ಯೆ ಇದೆ. ಮೊನ್ನೆ ನಡೆದಂತಹ ಚುನಾವಣೆಯ ಪ್ರಚಾರಕ್ಕಾಗಿ ಅಲ್ಲಿಗೆ ಹೋದಾಗ ನಾನು ನೋಡಿದ್ದೇನೆ. ವಾಸ್ತವವಾಗಿ ಅವರು ಕೊಡುವಂತಹ ಉತ್ತರಕ್ಕೂ ಮತ್ತು ಅಲ್ಲಿ ಹೋಗಿ ನಕ್ಸಲಿಯರನ್ನು ಭೇಟಿ ಮಾಡುವುದಕ್ಕೂ ಬಹಳಷ್ಟು ವ್ಯತ್ಯಾಸವಿದೆ. ನಕ್ಸಲರು ಅತ್ಯಾಧುನಿಕವಾಗಿರುವಂತಹ ಶಸ್ತ್ರಗಳನ್ನು ತೆಗೆದುಕೊಂಡು ಮನೆ ಮನೆಗೆ ಹೋಗಿ ಹಫ್ತಾ ಸಂಗ್ರಹ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಹಿಂದಿನ ಬಾರಿ ಈ ಬಗ್ಗೆ ಪ್ರಶ್ನೆ ಕೇಳಿದಂತಹ ಸಂದರ್ಭದಲ್ಲಿ ನಾನು ಮಾನ್ಯ ಗೃಹ ಸಚಿವರಲ್ಲಿ ಒಂದು ಪ್ರಾರ್ಥನೆ ಮಾಡಿಕೊಂಡಿದ್ದೆ. ಒಂದು ಜಾಗವನ್ನು ಗುರುತಿಸಿ, ಆ ಭಾಗದಲ್ಲಿ ಪೊಲೀಸರಿಗೆ ತರಬೇತಿಯನ್ನು ಕೊಡುವಂತಹ ಕೆಲಸವನ್ನು ಮಾಡದೇ ಹೋದರೆ, ಬಯಲು ಸೀಮೆಯಿಂದ ಹೋದಂತಹ ಪೊಲೀಸರಿಗೆ ಆ ಕಾಡನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದೇ ಇಲ್ಲ. ಐ.ಜಿ. ಮತ್ತು ಡಿ.ಐ.ಜಿ. ಯವರು ಬೆಂಗಳೂರಿನಲ್ಲಿ ಇರುತ್ತಾರೆ. ಏನಾದರೂ ಅನಾಹುತಗಳಾದರೆ ಮಾತ್ರ ಅಲ್ಲಿಗೆ ಓಡುತ್ತಾರೆ. ನಕ್ಸಲ್ ನಿಗ್ರಹ ಮಾಡಬೇಕೆನ್ನುವ ಚಿಂತನೆ ಸರ್ಕಾರಕ್ಕೆ ಇದ್ದರೆ, ಅಲ್ಲಿ ಒಂದು ಶಾಶ್ವತವಾಗಿರುವಂತಹ ನೆಲೆಯನ್ನು ಒದಗಿಸಿ ಪೊಲೀಸಿನವರಿಗೆ ತರಬೇತಿಯನ್ನು ಕೊಡುವಂತಹ ಕೆಲಸವನ್ನು ಮಾಡ ಬೇಕಾಗುತ್ತದೆ. ಎರಡನೆಯದಾಗಿ, ನಕ್ಸಲರು ಅಲ್ಲಿ ಕಾಲೂರುವುದಕ್ಕೆ ಕಾರಣ ವೇನೆಂದರೆ, ಕಾಡಿನೊಳಗೆ ಇರುವಂತಹ ಸುಮಾರು 1200 ಕುಟುಂಬಗಳನ್ನು ಒಕ್ಕಲೆಬ್ಬಿಸುವಂತಹ ಗುಲ್ಲುಯೆಬ್ಬಿಸಲಾಯಿತು. ಅರಣ್ಯ ಇಲಾಖೆಯವರು ಇದು

ಸುಪ್ರೀಂ ಕೋರ್ಟಿನ ಆದೇಶ ನೀವೆಲ್ಲರೂ ಬಿಟ್ಟು ಹೋಗಬೇಕೆಂದು ಹೇಳಿದರು. ಕಂದಾಯ ಇಲಾಖೆಯವರು ಮತ್ತು ಅರಣ್ಯ ಇಲಾಖೆಯವರು ಇದರ ಬಗ್ಗೆ ಪರಿಹಾರ ಹುಡುಕುವಂತಹ ಪ್ರಯತ್ನವನ್ನು ಮಾಡದೇ ಹೋದರೆ ಮತ್ತು ಸ್ಪೆಷಲ್ ಪ್ಯಾಕೇಜ್ ಮಾಡಿ ಅವರನ್ನು ಹೊರಗೆ ತರುವಂತಹ ಪ್ರಯತ್ನವನ್ನು ಮಾಡದೇ ಹೋದರೆ ಅಥವಾ ಅವರಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಿ ಕೊಡದೇ ಹೋದರೆ, ಪೊಲೀಸಿನವರು ಎಷ್ಟೇ ಪ್ರಯತ್ನ ಮಾಡಿದರೂ ಸಹ ನಕ್ಸಲರು ಅಲ್ಲಿ ಕಾಲಿಡುವಂತಹ ಪ್ರಯತ್ನವನ್ನು ಮಾಡುತ್ತಲೇ ಇರುತ್ತಾರೆ. ಈ ಹಿಂದೆ ಇದೇ ಸದನದಲ್ಲಿ ನ್ಯಾಯದುಗ್ಗೂರು ಎಂದು ಹೇಳುವಂತಹ ಒಂದು ಸಣ್ಣ ಭಾಗದಲ್ಲಿ ಆಗಿರುವಂತಹ ಘಟನೆಯ ಬಗ್ಗೆ ನಾನು ಉಲ್ಲೇಖ ಮಾಡಿದ್ದೆ. ಒಂದು ವರ್ಷವಾದರೂ ಸಹ ಇಲ್ಲಿಯ ವರೆಗೆ ಪರಿಹಾರ ತೀರ್ಮಾನವಾಗಿಲ್ಲ. ತಾವು ಪೀಠದಿಂದ ಆದೇಶವನ್ನು ಸಹ ಕೊಟ್ಟಿದ್ದೀರಿ. ಆದರೆ, ಅವರಿಗೆ ಪರಿಹಾರ ಸಿಕ್ಕಿಲ್ಲ. ಈ ರೀತಿಯ ಸಂಗತಿಗಳು ಇರುವಾಗ, ಪೊಲೀಸ್‌ವರು ಹೋಗಿ ಅಲ್ಲಿ ಫೈಯರ್, ಫೈಟಿಂಗ್ ಕೆಲಸವನ್ನು ಮಾಡಬಹುದೇ ಹೊರತು ಆ ಭಾಗದ ಜನರ ಮೂಲಭೂತವಾದ ಸಮಸ್ಯೆ ಯನ್ನು ಅರ್ಥ ಮಾಡಿಕೊಂಡು ಅದಕ್ಕೆ ಪರಿಹಾರವನ್ನು ಹುಡುಕುವಂತಹ ಕೆಲಸವನ್ನು ಮಾಡದೇ ಹೋದರೆ, ಈ ರೀತಿಯ ಪ್ರಶ್ನೆಗಳು ಮತ್ತೆ ಮತ್ತೆ ಬರುತ್ತಲೇ ಇರುತ್ತವೆ. ಆ ಭಾಗಕ್ಕೆ ಹೋಗುವಂತಹ ಪೊಲೀಸಿನವರಿಗೆ ತರಬೇತಿಯನ್ನು ಕೊಡುವಂತಹ ಕೆಲಸವನ್ನು ಮಾಡಬೇಕೆಂದು ನಾನು ಮಾನ್ಯ ಗೃಹ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಆರ್. ಅಶೋಕ :** ಸನ್ಮಾನ್ಯ ಸಭಾಪತಿಯವರೇ, ನಕ್ಸಲರ ಸಮಸ್ಯೆಗೆ ಬಂದೂಕು ಮೂಲಕ ಉತ್ತರವನ್ನು ಕೊಡುವ ರೀತಿಯಲ್ಲಿ ನಿಭಾಯಿಸುತ್ತೇವೆ ಎಂದು ಹೇಳುವುದು ಸರಿಯಾದಂತಹ ಉತ್ತರವಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ಇದು ಪೊಲೀಸ್ ವ್ಯವಸ್ಥೆಯಲ್ಲಿ ಕಂಡುಬರುತ್ತಿರುವಂತಹ ವಿಫಲವಲ್ಲ. ಇದೊಂದು ಸಾಮಾಜಿಕ ಪಿಡುಗಾಗಿದೆ. ಬಂದೂಕನ್ನು ಕೈಗೆ ತೆಗೆದುಕೊಳ್ಳುವುದಕ್ಕೂ ಮುಂಚೆ ಅಲ್ಲಿ ಇರುವಂತಹ ಬೇರೆ ಬೇರೆ ಸಮಸ್ಯೆಗಳಾದ ರಸ್ತೆ ಇರಬಹುದು, ಬೀದಿ ದೀಪ ಇರಬಹುದು.

ಒಕ್ಕಲೆಬ್ಬಿಸುವಂತಹ ಕಾರ್ಯವಾಗಿರಬಹುದು. ಹೀಗೆ ಹಲವಾರು ಕಾರಣಗಳು ನಕ್ಸಲರ ಹುಟ್ಟಿಗೆ ಕಾರಣವಾಗಿದೆ. ಕೇಂದ್ರ ಸರ್ಕಾರದ ಹಲವಾರು ನಿಬಂಧನೆಗಳು ನಮ್ಮ ಮೇಲೆ ಇದೆ. ಕೇಂದ್ರ ಸರ್ಕಾರ ಈಗ ಹೊಸದಾಗಿ ಒಂದು ಕಾನೂನನ್ನು ತರುವಂತಹ ಸನ್ನಾಹದಲ್ಲಿದೆ. ಆ ಕಾನೂನಿನ ಪ್ರಕಾರ ಒಂದು ಎಕರೆ ಭೂಮಿಯಲ್ಲಿ 10 ಮರಗಳಿದ್ದರೆ ಅದನ್ನು ಅರಣ್ಯ ಎಂದು ಘೋಷಣೆ ಮಾಡಬೇಕೆಂದು ಇದೆ. ಈ ರೀತಿಯ ಸಮಸ್ಯೆಗಳು ಇವೆ. ಇದಕ್ಕೆ ನಾವು ಎರಡು ರೀತಿಯ ಪರಿಹಾರಗಳನ್ನು ಕಂಡುಕೊಂಡಿದ್ದೇವೆ. ಒಂದು ಅವರನ್ನು ಮುಖ್ಯವಾಹಿನಿಗೆ ತರುವಂತಹ ಕೆಲಸವನ್ನು ನಾವು ನಿರಂತರವಾಗಿ ಮಾಡಬೇಕು. ಅದನ್ನು ಮಾಡುತ್ತಿದ್ದೇವೆ. ಅದಕ್ಕೆ ಬೇಕಾದಂತಹ ಎಲ್ಲ ರೀತಿಯ ವ್ಯವಸ್ಥೆ ನಮ್ಮಲ್ಲಿ ಇದೆ. ಅಲ್ಲಿನ ಜಿಲ್ಲಾಧಿಕಾರಿಗಳು ಮತ್ತು ಸಿ.ಇ.ಓ.ಗಳಿಗೆ ಜವಾಬ್ದಾರಿಯನ್ನು ನೀಡಿದ್ದೇವೆ. ಅವರುಗಳು ನಿರಂತರವಾಗಿ ನಕ್ಸಲ್‌ರ ಜೊತೆಗೆ ಮಾತನಾಡುತ್ತಿದ್ದಾರೆ. ಯಾರು ಮುಖ್ಯವಾಹಿನಿಗೆ ಬರುತ್ತಾರೆ. ಅಂತಹವರಿಗೆ ಮನೆಗಳನ್ನು ಕೊಡುವಂತಹ ಮತ್ತು ಉದ್ಯೋಗವನ್ನು ಕಲ್ಪಿಸಿ ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಕೆಲವರು ಬೇರೆ ಬೇರೆ ರಾಜ್ಯಗಳಿಂದ ಅಂದರೆ, ಆಂಧ್ರಪ್ರದೇಶ ಮತ್ತು ಶ್ರೀಲಂಕಾದಿಂದ ಬಂದಿರುವವರು ಇದ್ದಾರೆ. ಈಗ ಸುಮಾರು 25–30 ಜನ ನಕ್ಸಲರು ಇದ್ದಾರೆ ಎನ್ನುವಂತಹ ಮಾಹಿತಿ ನಮ್ಮ ಬಳಿ ಇದೆ. ಮಾನ್ಯ ಸದಸ್ಯರು ಹೇಳಿದಂತೆ ಪೊಲೀಸ್ ಇಲಾಖೆಯಲ್ಲಿ ಪುರಾತನ ಕಾಲದ ಶಸ್ತ್ರಗಳು ಇಲ್ಲ. ಅವರು ಯಾವ ಕಾಲದಲ್ಲಿ ನೋಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಬಹುಶಃ ಅವರು ಸಿನಿಮಾದಲ್ಲಿ ನೋಡಿರಬಹುದು. ಈಗ ನಮ್ಮ ಪೊಲೀಸ್ ಇಲಾಖೆಯಲ್ಲಿ ಅತ್ಯಾಧುನಿಕವಾದ ಶಸ್ತ್ರಗಳು ಇವೆ. ಇದರ ಜೊತೆಗೆ ಪೊಲೀಸ್‌ನವರಿಗೆ ತರಬೇತಿಯನ್ನು ನೀಡಬೇಕನ್ನುವ ಹಿನ್ನೆಲೆಯಲ್ಲಿ ಹಾಲಿ ಸೈನ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೇಜರ್ ಜನರಲ್ ಅವರಿಂದ ಕಳೆದ ಎರಡು ವರ್ಷಗಳಿಂದ ಯಾವ ರೀತಿಯಲ್ಲಿ ಕಾಡಿನ ಪ್ರದೇಶದಲ್ಲಿ ಅಥವಾ ಬಯಲು ಪ್ರದೇಶದಲ್ಲಿ ಅವರನ್ನು ಹೇಗೆ ಬೆನ್ನಟ್ಟಿ ಹಿಡಿಯಬೇಕು ಎನ್ನುವುದರ ಬಗ್ಗೆ ತರಬೇತಿಯನ್ನು ನೀಡಲಾಗುತ್ತಿದೆ. ಈಗಾಗಲೇ ಈ ನಿಟ್ಟಿನಲ್ಲಿ ತರಬೇತಿ ನಡೆಯುತ್ತಿದೆ. ಇದು

ಮಾನ್ಯ ವಿ. ಎಸ್. ಆಚಾರ್ಯರವರ ಕನಸಿನ ಕೂಸಾಗಿದೆ. ಅವರು ಇದ್ದಾಗ ಅದನ್ನು ಪ್ರಾರಂಭ ಮಾಡಿದ್ದರು. ನಕ್ಸಲ್‌ರವರ ಜೊತೆಗೆ ಹೋರಾಟ ಮಾಡುವುದಕ್ಕೆ **Anti Naxal Squad** ನ್ನು ಮಾಡಲಾಗಿದೆ. ಅವರಿಗೆ ಆಧುನಿಕ ವಾದಂತಹ ಶಸ್ತ್ರಗಳನ್ನು ನೀಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ನಮ್ಮಲ್ಲಿ ಇರುವಂತಹ ಅಧಿಕಾರಿಗಳು ಅಲ್ಲಿಯೇ ಮುಕ್ಕಾಂ ಹೂಡಬೇಕಾಗಿದೆ. ಬೆಂಗಳೂರಿನಿಂದ ನಿರ್ದೇಶನಗಳು ಹೋಗುವುದರಿಂದ ವ್ಯವಸ್ಥೆ ಸರಿಯಾಗುತ್ತಿಲ್ಲ ಎನ್ನುವಂತಹ ಅಂಶ ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಕಳೆದ ಒಂದು ತಿಂಗಳುಗಳಿಂದ ನಮ್ಮ ಹಿರಿಯ ಮತ್ತು ದಕ್ಷ ಅಧಿಕಾರಿಗಳಲ್ಲಿ ಒಬ್ಬರಾದ ಅಲೋಕ್‌ಕುಮಾರ್‌ರವರು ಅಲ್ಲಿಯೇ ಮೊಕ್ಕಾಂ ಹೂಡಿದ್ದಾರೆ. ಕಳೆದ ಎರಡು ತಿಂಗಳುಗಳಿಂದ ನಾವು ನಕ್ಸಲಿಯರನ್ನು ಎರಡು ಮೂರು ಬಾರಿ ಮುಖಾಮುಖಿಯಾಗಿ ಭೇಟಿಯಾಗಿದ್ದೇವೆ. ಮೊದಲು ಅವರುಗಳ ಭೇಟಿಯೇ ಆಗುತ್ತಿರಲಿಲ್ಲ. ಈಗ ಎರಡು ಬಾರಿ ಭೇಟಿ ಆಗಿದೆ. ಫೈರಿಂಗ್ ಆಗಿದೆ. ಅವರಲ್ಲಿ ಇದ್ದಂತಹ ಆಯುಧಗಳನ್ನು ವಶಪಡಿಸಿಕೊಂಡಿದ್ದೇವೆ. ಯಾರು ಬಂದೂಕಿನಿಂದ ಉತ್ತರವನ್ನು ಕೇಳುತ್ತಾರೆ ಅವರಿಗೆ ಕಾನೂನಿನ ಮೂಲಕ ಸರ್ಕಾರ ಉತ್ತರವನ್ನು ಕೊಡುತ್ತದೆ. ಅವರುಗಳು ಮುಖ್ಯವಾಹಿನಿಗೆ ಬರುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ. ಇದರ ಜೊತೆಗೆ ಪೊಲೀಸ್ ವ್ಯವಸ್ಥೆಯನ್ನು ಆಧುನೀಕರಣಗೊಳಿಸುವುದಕ್ಕೆ ಬೇಕಾಗಿರುವಂತಹ ಹಣ ನಮ್ಮಲ್ಲಿ ಇದೆ. ಕೇಂದ್ರ ಸರ್ಕಾರಕ್ಕೂ ನಾವು ಇದರ ಬಗ್ಗೆ ವಿನಂತಿಯನ್ನು ಮಾಡಿದ್ದೇವೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ಎಲ್ಲ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆ.

**ಶ್ರೀಮತಿ ಮೋಟಮ್ಮ :** ಸನ್ಮಾನ್ಯ ಸಭಾಪತಿಯವರೇ . . . . . .

**ಸಭಾಪತಿಯವರು :** ಬೇರೆ ರೂಪದಲ್ಲಿ ಈ ವಿಷಯದ ಬಗ್ಗೆ ನೋಟೀಸ್ ಕೊಟ್ಟರೆ, ಇದರ ಬಗ್ಗೆ ಅರ್ಧ ಗಂಟೆ ಚರ್ಚೆ ಮಾಡಬಹುದು. ಈ ಪ್ರಶ್ನೆ 1.20ಕ್ಕೆ ಪ್ರಾರಂಭವಾಗಿ ಈಗಾಗಲೇ 7 ನಿಮಿಷಗಳ ಕಾಲಾವಕಾಶವನ್ನು ತೆಗೆದುಕೊಂಡಿದೆ. ಈಗ ನಾನು ಏನು ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ.

**ಶ್ರೀಮತಿ ಮೋಟಮ್ಮ :** ಸನ್ಮಾನ್ಯ ಸಭಾಪತಿಯವರೇ, ಚಿಕ್ಕಮಗಳೂರು ಜಿಲ್ಲೆಯೂ ಕೂಡ ನಕ್ಸಲ್ ಪೀಡಿತ ಪ್ರದೇಶವಾಗಿದೆ. ರಸ್ತೆ, ಬೀದಿ ದೀಪದ ವ್ಯವಸ್ಥೆ ಮಾಡಿ ಕೊಡುವುದರ ಜೊತೆಗೆ ಅಲ್ಲಿರುವಂತಹ ಯುವಕರು ಅವರ ಜೊತೆಗೆ ಸೇರದೇ ಇರುವ ಹಾಗೆ ಅವರಿಗೆ ಸರಿಯಾದಂತಹ ಉದ್ಯೋಗಾವಕಾಶವನ್ನು ನೀಡಬೇಕಾಗುತ್ತದೆ. ಕೋತಾರಿ ಆಯೋಗದವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾಗಿದ್ದ ಭಟ್ಟಾಚಾರ್ಯರವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಸುಭಾಷ್ ಭರಣಿಯವರು ಸಹ ಒಂದು ವರದಿಯನ್ನು ಕೊಟ್ಟಿದ್ಧಾರೆ. ಆ ಎಲ್ಲ ವರದಿಗಳಲ್ಲಿ ಅಲ್ಲಿನ ಯುವಕರು ನಕ್ಸಲ್ ಚಟುವಟಿಕೆಗಳ ಕಡೆಗೆ ಆಕರ್ಷಿಕತರಾಗದೇ ಇರುವ ಹಾಗೆ ಉದ್ಯೋಗ ಅವಕಾಶವನ್ನು ಕಲ್ಪಿಸಿ ಕೊಡಿ ಎಂದು ಹೇಳಿದ್ದಾರೆ. ಆ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನ ಮಾಡುತ್ತಿಲ್ಲ. ಸರ್ಕಾರ ರಸ್ತೆ, ದೀಪದ ವ್ಯವಸ್ಥೆ ಮಾಡಿಕೊಟ್ಟರೂ ಸಹ ನಕ್ಸಲರು ತಮ್ಮ ಜೊತೆಗೆ ಸೇರಿಕೊಳ್ಳುವಂತೆ ಅಲ್ಲಿನ ಯುವಕರಿಗೆ ಹಿಂಸೆ ನೀಡುತ್ತಾರೆ ಮತ್ತು ಒತ್ತಡ ತಂದು ಅವರನ್ನು ತಮ್ಮ ಗುಂಪಿಗೆ ಸೇರಿಸಿಕೊಳ್ಳುತ್ತಾರೆ. ಆದ್ದರಿಂದ ಅಲ್ಲಿನ ಯುವಕರಿಗೆ ಉದ್ಯೋಗವನ್ನು ನೀಡುವಂತಹ ವ್ಯವಸ್ಥೆಯನ್ನು ಮಾಡಿದರೆ, ಬೇರೆ ಕಡೆಯಿಂದ ಬಂದಂತಹ ನಕ್ಸಲರಿಗೆ ಅಲ್ಲಿನ ಯುವಕರ ಸಹಕಾರ ಸಿಗುವುದಿಲ್ಲ. ಅವರು ಊರು ಬಿಟ್ಟು ಹೋಗುತ್ತಾರೆ.

**ಶ್ರೀ ಆರ್. ಅಶೋಕ :** ಸನ್ಮಾನ್ಯ ಸಭಾಪತಿಯವರೇ, ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತದೆ.

**ಮದ್ದೂರು ತಾಲ್ಲೂಕು ಕಸಬಾ ಹೋಬಳಿ ಗೊಲ್ಲರದೊಡ್ಡಿ ಗ್ರಾಮದ ಆಶ್ರಮಕ್ಕೆ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ.**

**24; ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**(ಅ)** ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ಕಸಬಾ ಹೋಬಳಿ ಗೊಲ್ಲರದೊಡ್ಡಿ ಗ್ರಾಮದಲ್ಲಿ ಆಶ್ರಮ ಶಾಲೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**(ಆ)** ಬಂದಿದ್ದರೆ, ಈ ಆಶ್ರಮ ಶಾಲೆಯಲ್ಲಿ ಇರುವ ಹೆಣ್ಣು ಮತ್ತು ಗಂಡು ಮಕ್ಕಳ ಸಂಖ್ಯೆ ಎಷ್ಟು; (ವಿವರಗಳನ್ನು ನೀಡುವುದು)

**(ಇ)** ಈ ಶಾಲೆ ಪ್ರಾರಂಭವಾದ ವರ್ಷ ಯಾವುದು? ಈ ಶಾಲೆಗೆ ಸ್ವಂತ ಕಟ್ಟಡವಿದೆಯೇ; ಇದ್ದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆಯೇ;

**(ಈ)** ಕಟ್ಟಡವಿಲ್ಲದೆ ಇದ್ದಲ್ಲಿ, ನಿವೇಶನ ಲಭ್ಯವಿದ್ದು, ಕಟ್ಟಡ ನಿರ್ಮಾಣ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು; ಕಟ್ಟಡ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಹಾಗಿದ್ದಲ್ಲಿ ಯಾವಾಗ ಕಟ್ಟಡ ನಿರ್ಮಾಣ ಮಾಡಲಾಗುವುದು; (ವಿವರ ನೀಡುವುದು)

**ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು)**

**(ಅ)** ಹೌದು.

**(ಆ)** 2011-12ನೇ ಸಾಲಿನಲ್ಲಿ ಈ ಆಶ್ರಮ ಶಾಲೆಗೆ 21 ಹೆಣ್ಣು ಮಕ್ಕಳು ಮತ್ತು 26 ಗಂಡು ಮಕ್ಕಳು ಪ್ರವೇಶ ಪಡೆದಿರುತ್ತಾರೆ.

**(ಇ)** 1991-92 ಸ್ವಂತ ಕಟ್ಟಡ ಇರುವುದಿಲ್ಲ

**(ಈ)** ರಾಜ್ಯದ ಒಟ್ಟಾರೆ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದ ಲಭ್ಯತೆಯನ್ನಾಧರಿಸಿ, ಸದರಿ ಗೊಲ್ಲರದೊಡ್ಡಿ ಆಶ್ರಮ ಶಾಲೆಗೆ ಸ್ವಂತ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

**ಶ್ರೀ ಬಿ. ರಾಮಕೃಷ್ಣ :** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ಕಸಬಾ ಹೋಬಳಿ ಗೊಲ್ಲರದೊಡ್ಡಿ ಗ್ರಾಮದಲ್ಲಿ ಇರುವಂತಹ ಆಶ್ರಮ ಶಾಲೆಯನ್ನು 1991-92ರಲ್ಲಿ ಪ್ರಾರಂಭ ಮಾಡಿದ್ದಾರೆ.

ಸದರಿ ಪ್ರಶ್ನೆಗೆ ಸಂಬಂಧಿಸಿದಂತೆ ನಾನು ಮಾನ್ಯ ಸಚಿವರಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ನಾನು "ಕಟ್ಟಡವಿಲ್ಲದೆ ಇದ್ದಲ್ಲಿ, ನಿವೇಶನ ಲಭ್ಯವಿದ್ದು, ಕಟ್ಟಡ ನಿರ್ಮಾಣ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು" ಎಂದು ಕೇಳಿದ್ದೇನೆ. ನಾನು ನಿವೇಶನವಿದೆ ಎಂದು ಹೇಳಿದ್ದೇನೆ. ಆದರೆ ಅಲ್ಲಿ ನಿವೇಶನಕ್ಕೆ ತಕರಾರು ಆಗಿದೆ. ಇದನ್ನು ಅಧಿಕಾರಿಗಳು ಸಚಿವರ ಗಮನಕ್ಕೆ ತಂದಿದ್ದಾರೋ ಇಲ್ಲವೋ ಗೊತ್ತಿಲ್ಲ. ಸಚಿವರು ಅಧಿಕಾರಿಗಳು ಕೊಟ್ಟಿರುವ ಉತ್ತರವನ್ನು ಕೊಟ್ಟಿದ್ದಾರೆ. ವಾಸ್ತವಾಂಶ ಅಲ್ಲಿ ಏನಾಗಿದೆ ಎಂದರೆ, ಖಾಸಗಿ ವ್ಯಕ್ತಿಗಳು ಆ ನಿವೇಶನವನ್ನು ಅತಿಕ್ರಮಣ ಮಾಡಿದ್ದಾರೆ. ಆ ಊರಿನಲ್ಲಿ ಹಿಂದುಳಿದ ಜನರಿದ್ದಾರೆ. ಒಂದು ಸಮಯದಲ್ಲಿ ಕಂದಾಯ ಅಧಿಕಾರಿಗಳು ಬರುತ್ತಾರೆಂದು ಬಾಳೆಕಂಬ, ಮಾವಿನ ಸೊಪ್ಪನ್ನು ಕಟ್ಟಿ ಇಡೀ ಊರನ್ನು ಶೃಂಗಾರ ಮಾಡಿಕೊಂಡು ಮೂರು ಸಾರಿ ಕಾಯ್ದಿದ್ದಾರೆ. ಆದರೆ ಒಬ್ಬ ಕಂದಾಯ ಅಧಿಕಾರಿಯೂ ಆ ಊರಿಗೆ ಹೋಗಿಲ್ಲ. ಖಾಸಗಿ ವ್ಯಕ್ತಿಗಳು ಆ ನಿವೇಶನವನ್ನು ಅತಿಕ್ರಮಣ ಮಾಡಿದ್ದಾರೆ. ಇದನ್ನು ಸರ್ವೇ ಮಾಡಿ ಬಿಸಿಎಂ ಸುಪರ್ದಿಗೆ ಕೊಡಲಿಕ್ಕೆ ಇದುವರೆಗೂ ಆಗಿಲ್ಲ. ಇದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಇನ್ನೊಂದು ವಿಚಾರವನ್ನು ನಾನು ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, ಅದು ಒಂದು ಕುಗ್ರಾಮ. ಹಿಂದುಳಿದ ವರ್ಗದವರಿಗೆ ನಾವು ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಎನ್ನುವಂತಹ ಆಶ್ವಾಸನೆಗಳನ್ನು ಕೊಡುವುದು ಬೇಡ. ನಾನು ನಿಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದು ಇಷ್ಟೇ. ನಾನೂ ಕೂಡ ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಸರಿಯಾದ ರೀತಿಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಆದರೆ ಮಾತ್ರ ನಾನು ಪ್ರಶ್ನೆಯನ್ನು ಕೇಳುತ್ತೇನೆ. ಮಾನ್ಯ ಸಚಿವರು ಸರಿಯಾದ ಉತ್ತರವನ್ನು ಕೊಡುತ್ತಾರೆಂದು ಭಾವಿಸುತ್ತೇನೆ.

**ಸಭಾಪತಿಯವರು** : ಮಾನ್ಯ ಸಚಿವರೆ, ಮಾನ್ಯ ಸದಸ್ಯರ ಕಳಕಳಿಯನ್ನು ತಾವು ಅರ್ಥ ಮಾಡಿಕೊಳ್ಳಿ.

**ಶ್ರೀ ಎ. ನಾರಾಯಣ ಸ್ವಾಮಿ** : ಮಾನ್ಯ ಸಭಾಪತಿಯವರೇ, ಖಂಡಿತವಾಗಿ ಮಾನ್ಯ ಸದಸ್ಯರ ಕಳಕಳಿಯನ್ನು ಅರ್ಥ ಮಾಡಿಕೊಳ್ಳುತ್ತೇನೆ.

ಕಂದಾಯ ಇಲಾಖೆಯ ಸಮಸ್ಯೆಗಳು ಅಥವಾ. . . ಈ ಬಗ್ಗೆ ವರದಿಯಲ್ಲಿ ಇಲ್ಲ. ಒಂದು ತಿಂಗಳಿನಲ್ಲಿ ಈ ಸಮಸ್ಯೆಯನ್ನು ಪರಿಹಾರ ಮಾಡಿ, ಆ ಜಾಗವನ್ನು ಸ್ವಾಧೀನಕ್ಕೆ ತೆಗೆದುಕೊಂಡು ಕಟ್ಟಡವನ್ನು ಪ್ರಾರಂಭ ಮಾಡುತ್ತೇವೆ.

**ಸಭಾಪತಿಯವರು :** ಧನ್ಯವಾದಗಳು

**ವಿದ್ಯುತ್ ಪೂರೈಕೆಯಲ್ಲಿ ಆಗುತ್ತಿರುವ ತೊಂದರೆ ಪರಿಹರಿಸುವ ಬಗ್ಗೆ**

**01; ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ)**

**(ಅ)** ರಾಜ್ಯದಲ್ಲಿ ವಿದ್ಯುತ್ ಪೂರೈಕೆಯಲ್ಲಿ ಪದೇ–ಪದೇ ಅನಿಯಮಿತವಾಗಿ ವಿದ್ಯುತ್ ಸ್ಥಗಿತವಾಗುತ್ತಿರುವುದು ನಿಜವೇ;

**(ಆ)** ಹಾಗಿದ್ದಲ್ಲಿ, ರಾಜ್ಯದಲ್ಲಿ ಲೋಡ್‌ಶೆಡ್ಡಿಂಗ್‌ನ್ನು ಜಾರಿಗೊಳಿಸಲಾಗಿದೆಯೇ;

**(ಇ)** ಲೋಡ್ ಶೆಡ್ಡಿಂಗ್ ಜಾರಿಗೊಳಿಸಿದ್ದರೆ, ಗ್ರಾಮೀಣ ಹಾಗೂ ನಗರ ಪ್ರದೇಶಗಳಿಗೆ ಎಷ್ಟು ಸಮಯ ವಿದ್ಯುತ್ ಪೂರೈಕೆ ಸ್ಥಗಿತಗೊಳಿಸಲಾಗುವುದು;

**(ಈ)** ವಿದ್ಯಾರ್ಥಿಗಳ ಪರೀಕ್ಷಾ ಸಮಯದಲ್ಲಿ ಈ ರೀತಿ ಲೋಡ್ ಶೇಡ್ಡಿಂಗ್ ಮಾಡುವುದು ಸರಿಯೆ?

**ಶೋಭಾ ಕರಂದ್ಲಾಜೆ (ಇಂಧನ ಸಚಿವರು) :**

**(ಅ)** ರಾಜ್ಯಕ್ಕೆ ವಿದ್ಯುತ್ ಸರಬರಾಜು ಮಾಡುತ್ತಿರುವ ವಿದ್ಯುತ್ ಘಟಕಗಳಲ್ಲಿ ಆಕಸ್ಮಿಕವಾಗಿ ಉಂಟಾಗಬಹುದಾದ ತಾಂತ್ರಿಕ ದೋಷಗಳ ಪರಿಣಾಮವಾಗಿ ವಿದ್ಯುತ್ ಉತ್ಪಾದನೆಯು ಕುಂಠಿತವಾದ ಸಂದರ್ಭಗಳಲ್ಲಿ ವಿದ್ಯುತ್ ಜಾಲವನ್ನು ಸುಸ್ಥಿತಿಯಲ್ಲಿಡಲು ಅನಿವಾರ್ಯವಾಗಿ ಅನಿಯಮಿತ ವಿದ್ಯುತ್ ಸ್ಥಗಿತ ಮಾಡಲಾಗುತ್ತದೆ.

**(ಆ)** ರಾಜ್ಯದಲ್ಲಿ ಲೋಡ್ ಶೇಡ್ಡಿಂಗ್‌ನ್ನು ಜಾರಿಗೊಳಿಸಿರುವುದಿಲ್ಲ ಹಾಗೂ ಮೇಲೆ ತಿಳಿಸಿದ ತಾಂತ್ರಿಕ ತೊಂದರೆಗಳು ಉಂಟಾದ ಸಂದರ್ಭಗಳಲ್ಲಿ

ವಿದ್ಯುತ್ ಜಾಲವನ್ನು ಸುಸ್ಥಿತಿಯಲ್ಲಿಡಲು ಅನಿವಾರ್ಯವಾಗಿ ಅನಿಯಮಿತ ಲೋಡ್ ಶೆಡ್ಡಿಂಗ್‌ನ್ನು ಮಾಡಲಾಗುತ್ತದೆ.

(ಇ) ರಾಜ್ಯದಲ್ಲಿ ಲೋಡ್‌ಶೆಡ್ಡಿಂಗ್ ಜಾರಿಯಲ್ಲಿಲ್ಲದಿದ್ದರೂ ಸಹ ವಿದ್ಯುತ್ ಬೇಡಿಕೆ ಮತ್ತು ಲಭ್ಯತೆಯಲ್ಲಿ ವ್ಯತ್ಯಾಸವಿರುವುದರಿಂದ, ಲಭ್ಯವಿರುವ ವಿದ್ಯುತ್ತನ್ನು ನಗರ / ಪಟ್ಟಣ ಪ್ರದೇಶಗಳಿಗೆ 22 ರಿಂದ 24 ಗಂಟೆ ಹಾಗೂ ಗ್ರಾಮಾಂತರ ಪ್ರದೇಶಗಳಿಗೆ ಪ್ರತಿದಿನ ಸಾಮಾನ್ಯವಾಗಿ 6 ಗಂಟೆಗಳ ಕಾಲ 3 ಫೇಸ್ ವಿದ್ಯುತ್ತನ್ನು (ಹಗಲಿನ ವೇಳೆ ಕನಿಷ್ಠ 4 ಗಂಟೆ ಹಾಗೂ ರಾತ್ರಿ ವೇಳೆ 2 ಗಂಟೆಗಳ ಕಾಲ) ಮತ್ತು ಸಂಜೆ 6.00 ರಿಂದ ಮರುದಿನ ಬೆಳಗ್ಗೆ 6.00 ರವರೆಗೆ (12 ಗಂಟೆಗಳ ಕಾಲ) ಸಿಂಗಲ್ ಫೇಸ್ ವಿದ್ಯುತ್‌ನ್ನು ಒದಗಿಸಲಾಗುತ್ತಿದ್ದು, ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ವಿದ್ಯುತ್ ಪೂರೈಕೆಯನ್ನು ಮಾಡಲಾಗುತ್ತಿದೆ.

**ಶ್ರೀ ಬಸರವಾಜ ಹೊರಟ್ಟಿ :** ಮಾನ್ಯ ಸಭಾಪತಿಯವರೇ, ನಾನು "ರಾಜ್ಯದಲ್ಲಿ ವಿದ್ಯುತ್ ಪೂರೈಕೆಯಲ್ಲಿ ಪದೇ ಪದೇ ಅನಿಯಮಿತವಾಗಿ ವಿದ್ಯುತ್ ಸ್ಥಗಿತವಾಗುತ್ತಿರುವುದು ನಿಜವೇ" ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಸರ್ಕಾರ "ರಾಜ್ಯಕ್ಕೆ ವಿದ್ಯುತ್ ಸರಬರಾಜು ಮಾಡುತ್ತಿರುವ ವಿದ್ಯುತ್ ಘಟಕಗಳಲ್ಲಿ ಆಕಸ್ಮಿಕವಾಗಿ ಉಂಟಾಗಬಹುದಾದ ತಾಂತ್ರಿಕ ದೋಷಗಳ ಪರಿಣಾಮವಾಗಿ ವಿದ್ಯುತ್ ಉತ್ಪಾದನೆಯು ಕುಂಠಿತವಾದ ಸಂದರ್ಭಗಳಲ್ಲಿ ವಿದ್ಯುತ್ ಜಾಲವನ್ನು ಸುಸ್ಥಿತಿಯಲ್ಲಿಡಲು ಅನಿವಾರ್ಯವಾಗಿ ಅನಿಯಮಿತ ವಿದ್ಯುತ್ ಸ್ಥಗಿತ ಮಾಡಲಾಗುತ್ತದೆ" ಎಂದು ಉತ್ತರದಲ್ಲಿ ಹೇಳಿದ್ದಾರೆ. ವಿದ್ಯುತ್ ಲೋಡ್ ಶೆಡ್ಡಿಂಗ್ ಮಾಡುವುದನ್ನು ಪ್ರತಿ ಸಾರಿ ನಾವು ನೋಡುತ್ತೇವೆ. ನಮ್ಮಲ್ಲಿ ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆವಿಗೂ ವಿದ್ಯುತ್ ಇರುತ್ತದೆ, ನಂತರ ಇರುವುದಿಲ್ಲ. ನಿಯಮಿತವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಈ ರೀತಿ ಇದೆ. ನಗರದಲ್ಲಿ ಪ್ರತಿ 4 ತಾಸಿಗೆ ಒಂದು ಸಾರಿ ಒಂದು ತಾಸು, 5 ತಾಸಿಗೆ ಒಮ್ಮೆ ಎರಡು ತಾಸು ಖಂಡಿತವಾಗಿ ಲೋಡ್ ಶೆಡ್ಡಿಂಗ್ ಮಾಡುತ್ತಾರೆ. ವಿದ್ಯುತ್ ಕೊರತೆ ಇರುವಾಗ ಲೋಡ್ ಶೆಡ್ಡಿಂಗ್ ಮಾಡಬಾರದು ಎಂದು ನಾವು ಹೇಳುವುದಿಲ್ಲ. ಆದರೆ ಅದನ್ನು ನಿಯಮಿತವಾದಂಥ ರೀತಿಯಲ್ಲಿ

ಮಾಡಿದರೆ ಜನರಿಗೆ ತೊಂದರೆಯಾವುದಿಲ್ಲ. ಯಾವಾಗ್ಯಾವಗಲೋ ಲೋಡ್ ಶೆಡ್ಡಿಂಗ್ ಮಾಡುತ್ತಾರೆ. ಮಧ್ಯಾಹ್ನ 3 ಗಂಟೆಗೆ, ರಾತ್ರಿ 9 ಗಂಟೆಗೆ ಲೋಡ್ ಶೆಡ್ಡಿಂಗ್ ಮಾಡುತ್ತಾರೆ. ಮೊನ್ನೆಯ ದಿವಸ ರಾತ್ರಿ 11 ಗಂಟೆಗೆ ವಿದ್ಯುತ್ ಬಂದ್ ಮಾಡಿ ಬೆಳಿಗ್ಗೆ 5 ಗಂಟೆಗೆ ವಿದ್ಯುತ್ತನ್ನು ಕೊಟ್ಟಿದ್ದಾರೆ. ಈ ರೀತಿ ಆಗುತ್ತಿದೆ. ಅಧಿಕಾರಿಗಳು ಸರ್ಕಾರಕ್ಕೆ ಯಾವ ರೀತಿಯ ಉತ್ತರವನ್ನು ಕೊಡುತ್ತಾರೋ ಗೊತ್ತಿಲ್ಲ. ಅದಕ್ಕೆ ನಾನೇನು ಹೇಳುತ್ತೇನೆಂದರೆ, ವಿದ್ಯುತ್ ಕೊರತೆ ಇರುವುದರಿಂದ ನಾವು, ನೀವು ಏನೂ ಮಾಡುವುದಕ್ಕಾಗುವುದಿಲ್ಲ. ಆದರೆ ವಿದ್ಯುತ್ ಕೊರತೆ ಇದ್ದಾಗ ಅದನ್ನು ಯಾವ ರೀತಿಯಾಗಿ ನಿಭಾಯಿಸ ಬೇಕೆಂಬುದನ್ನು ಅಧಿಕಾರಿಗಳು ಯೋಚನೆ ಮಾಡಬೇಕು. ಇದು ಬಹಳ ಪ್ರಮುಖವಾದುದು. ವಿದ್ಯುತ್ ಕೊರತೆ ಇರುವಾಗ ಇಂಧನ ಇಲಾಖೆಯವರು ವಿದ್ಯುತ್ತನ್ನು ಒದಗಿಸಿ ಎಂದರೆ ಏನೂ ಮಾಡುವುದಕ್ಕಾಗುವುದಿಲ್ಲ. ಈಗ ಒಟ್ಟು ನಮಗೆ 200 ದಶಲಕ್ಷ ಯೂನಿಟ್ ವಿದ್ಯುತ್ ಬೇಕಾಗಿದೆ. ಆದರೆ ನಮಗೆ 180 ದಶಲಕ್ಷ ಯೂನಿಟ್ ವಿದ್ಯುತ್ ಎಲ್ಲಾ ಮೂಲಗಳಿಂದ ಬರುತ್ತಿದೆ. ನಮಗೆ ಇನ್ನು 20 ದಶಲಕ್ಷ ಯೂನಿಟ್ ವಿದ್ಯುತ್ ಕೊರತೆಯಾಗುತ್ತಿದೆ ಎಂದು ಹೇಳಿದರು. ಇದನ್ನು ಹೇಗೆ ನೀಗಿಸುತ್ತೀರಿ? ಇದನ್ನು ನೀಗಿಸಬೇಕಾದರೆ ಸರ್ಕಾರ ಲೋಡ್ ಶೆಡ್ಡಿಂಗ್ ಮಾಡಲೇಬೇಕಾಗುತ್ತದೆ. ಲೋಡ್ ಶೇಡ್ಡಿಂಗ್ ಮಾಡುವುದಿಲ್ಲ ಎನ್ನುತ್ತಾರೆ. ಆದರೆ ಲೋಡ್ ಶೆಡ್ಡಿಂಗ್ ದಿನವೂ ಮಾಡುತ್ತಾರೆ. ನಾನೇನು ಹೇಳುತ್ತೇನೆಂದರೆ, ಅದಕ್ಕೆ ಒಂದು ನಿಗದಿತ ಸಮಯವನ್ನು ನಿಗದಿ ಗೊಳಿಸಿ ಲೋಡ್ ಶೆಡ್ಡಿಂಗ್ ಮಾಡಿ, ಅನಿವಾರ್ಯವಾದಾಗ ಯಾರಿಗೂ ಏನೂ ಹೇಳುವುದಕ್ಕೆ ಆಗುವುದಿಲ್ಲ, ಲೋಡ್ ಶೆಡ್ಡಿಂಗ್ ಮಾಡಬೇಕಾಗುತ್ತದೆ ಎಂಬುದು ಮೊದಲನೆಯ ವಿಚಾರ.

ಇನ್ನು ಎರಡನೆಯವಾಗಿ ಹೇಳುವುದಾದರೆ, ನಾನು ಈ ಬಗ್ಗೆ ಹೆಚ್ಚಿಗೆ ಮಾತನಾಡುವುದಿಲ್ಲ. ದಯಮಾಡಿ ಇಂತಹ ಒಂದು ಕಠಿಣ ಪರಿಸ್ಥಿತಿಯಲ್ಲಿ ರಸ್ತೆಗಳಲ್ಲಿ ಸಂಜೆ ಐದು ಗಂಟೆಗೆ ದೀಪವನ್ನು ಹಾಕಿ ಬೆಳಿಗ್ಗೆ ಏಳೂವರೆ ಗಂಟೆಗೆ ಆರಿಸುತ್ತಾರೆ. ಹುಬ್ಬಳ್ಳಿ-ಧಾರವಾಡದ ನಡುವೆ ಮೂರ್‍ನಾಲ್ಕು ಹಳ್ಳಿಗಳಲ್ಲಿ ನೋಡಿದ್ದೇನೆ. ಶುಕ್ರವಾರ ರಾತ್ರಿ ಬೀದಿ ದೀಪಗಳನ್ನು ಹಾಕಿದ್ದು, ಸೋಮವಾರ

ಬೆಳಿಗ್ಗೆ ತೆಗೆದಿದ್ದಾರೆ. ನಾನು ಈ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ನಾನೇ ಹೋಗಿ ಅವರ ಕಛೇರಿಯಲ್ಲಿ ಗಲಾಟೆ ಮಾಡಿ ವಿದ್ಯುತ್ತನ್ನು ತೆಗೆಸಿದ್ದೇನೆ. ಈ ರೀತಿ ಆಗುತ್ತದೆ. ಮತ್ತು ಇಲ್ಲೆಲ್ಲಾ ಕಛೇರಿಗಳಲ್ಲಿ ಅಧಿಕಾರಿಗಳು ಇರಲಿ ಇಲ್ಲದೇ ಇರಲಿ ಮತ್ತು ವಿಧಾನಸೌಧದಲ್ಲಿ ಮಂತ್ರಿಗಳು ಇರಲಿ, ಇಲ್ಲದೇ ಇರಲಿ ಎಸಿ ಮತ್ತು ವಿದ್ಯುತ್ ದೀಪಗಳು ಉರಿಯುತ್ತಿರುತ್ತದೆ. ರಾತ್ರಿ 8 ಗಂಟೆಗೆ ಬೀಗ ಹಾಕುವವನು ಅವುಗಳನ್ನು ಆರಿಸುತ್ತಾನೆ. ಇದರ ಬಗ್ಗೆ ನಾನು ಕೇಳುತ್ತೇನೆ. ಕಡೇಪಕ್ಷ ಇದನ್ನಾದರೂ ತಿಳಿಸಿ ಜನರಿಗೆ ಈ ಬಗ್ಗೆ ಮನವರಿಕೆ ಮಾಡಿಕೊಡಬೇಕು. ಏನಾದರೂ ಮಾಡಿ ಇದನ್ನು ಪರಿಹಾರ ಮಾಡಿ ಎನ್ನುವ ಒತ್ತಾಯವನ್ನು ನಾನು ಮಾಡಲಿಕ್ಕೆ ಇಷ್ಟಪಡುತ್ತೇನೆ.

**ಕುಮಾರಿ ಶೋಬಾ ಕರಂದ್ಲಾಜೆ :** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಬಸವರಾಜ ಹೊರಟ್ಟಿಯವರು ಹೇಳಿದ ಹಾಗೆ ನಮ್ಮ ರಾಜ್ಯದ ಒಟ್ಟು ಬೇಡಿಕೆ ಸುಮಾರು 200 ದಶಲಕ್ಷ ಯೂನಿಟ್ ಇದೆ. ಈಗ ನಾವು ಪೂರೈಕೆ ಮಾಡುವುದಕ್ಕೆ ಆಗುತ್ತಿರುವುದು ಕೇವಲ 180 ದಶಲಕ್ಷ ಯೂನಿಟ್, ಅದರ ಸಲುವಾಗಿ ನಾವು ದಿನದಲ್ಲಿ 4 ಗಂಟೆಗಳ ಕಾಲ ಗ್ರಾಮೀಣ ಪ್ರದೇಶದಲ್ಲಿ ನಮ್ಮ ರೈತರಿಗೆ three phase ವಿದ್ಯುಚ್ಛಕ್ತಿಯನ್ನು ಮತ್ತು ರಾತ್ರಿ ಎರಡು ಗಂಟೆಗಳ ಕಾಲ, ಅಂದರೆ ಒಟ್ಟು ದಿನದಲ್ಲಿ 24 ಗಂಟೆಯಲ್ಲಿ 6 ಗಂಟೆಗಳ ಕಾಲ three phase ವಿದ್ಯುತ್‌ನ್ನು ಮತ್ತು ಸಂಜೆ 6 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆವಿಗೂ single phase ವಿದ್ಯುತ್‌ನ್ನು ಕೊಡುವಂಥ ಒಂದು ಪ್ರಯತ್ನವನ್ನು ಮಾಡುತ್ತಿದ್ದೇವೆ. ಯಾವುದೋ ಒಂದು ದಿನ ರಾತ್ರಿ ಸಮಯದಲ್ಲಿ ವಿದ್ಯುತ್ ಹೋಗಿದೆ ಎಂದರೆ ಅಲ್ಲಿ ತಾಂತ್ರಿಕ ದೋಷದಿಂದ ಏನಾದರೂ ಆಗಿರಬಹುದು. ಈಗ ಬೇಸಿಗೆ ಪ್ರಾರಂಭವಾಗಿರುವ ಕಾರಣ ತುಂಬಾ ಕಡೆ ಅಕ್ರಮ ಪಂಪ್‌ಸೆಟ್‌ಗಳು ಬಂದಿವೆ. ಜೊತೆಗೆ ಇಡೀ ರಾಜ್ಯದಲ್ಲಿ ಎಸಿ, ಫ್ಯಾನ್ ಮುಂತಾದವುಗಳನ್ನು ಸಹ ಬಳಸುತ್ತಿದ್ದಾರೆ. ನಾನು ಬೆಂಗಳೂರಿನ ಒಂದು ಉದಾಹರಣೆಯನ್ನು ಕೊಡುತ್ತೇನೆ. ಕಳೆದ ತಿಂಗಳು ಮತ್ತು ಈ ತಿಂಗಳು, ಕಳೆದ ವರ್ಷ ಮತ್ತು ಈ ವರ್ಷ ಇದೇ ಸಮಯಕ್ಕೆ ನಾವು ಹೋಲಿಕೆ ಮಾಡಿದರೆ ಬೆಂಗಳೂರು ಒಂದು ನಗರದಲ್ಲಿ ಒಂದು ದಿನಕ್ಕೆ

ಸುಮಾರು 300 ರಿಂದ 350 ಮೆಗಾವ್ಯಾಟ್ ಯೂನಿಟ್ ಹೆಚ್ಚುವರಿ ವಿದ್ಯುತ್‌ನ್ನು ಬಳಕೆ ಮಾಡುತ್ತಿದ್ದಾರೆ. ಅಂದರೆ ಎಷ್ಟು ದೊಡ್ಡ ಪ್ರಮಾಣದಲ್ಲಿ ಬೇಸಿಗೆ ಇದೆ ಎಂಬುದನ್ನು ಸಹಜವಾಗಿ ನಾವು ಒಪ್ಪಿಕೊಳ್ಳಬೇಕು. ಈಗ ಎಸಿ ಮತ್ತು ಫ್ಯಾನ್ ಅನ್ನು ಹೆಚ್ಚಾಗಿ ಬಳಸುತ್ತಾರೆ. ಈ ಕಾರಣಕ್ಕಾಗಿ ಈ ರೀತಿಯ ಒಂದು ವ್ಯವಸ್ಥೆಯನ್ನು ಅಂದರೆ 6 ಗಂಟೆಗಳ ಕಾಲ three phase ವಿದ್ಯುತ್ ಮತ್ತು ಸಂಜೆ 6 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆವಿಗೂ ಮಕ್ಕಳಿಗೆ ತೊಂದರೆ ಆಗಬಾರದು ಎನ್ನುವ ಕಾಣಕ್ಕಾಗಿ single phase ವಿದ್ಯುತ್‌ನ್ನು ಕೊಡುತ್ತಿದ್ದೇವೆ. ಮಾನ್ಯ ಹೊರಟ್ಟಿಯವರು ಹೇಳಿದ್ದರಲ್ಲಿ ಸತ್ಯವಿದೆ. ನಾವು ಹಲವಾರು ಗ್ರಾಮ ಪಂಚಾಯ್ತಿ, ಪುರಸಭೆ ಮತ್ತು ನಗರ ಸಭೆಗಳಿಗೆ ಕಡ್ಡಾಯ ುವಾಗಿ ಬೀದಿ ದೀಪದ ಸ್ವಿಚ್‌ನ್ನು 'On' and 'Off' ಮಾಡಬೇಕೆಂದು ಹೇಳಿದ್ದೇವೆ. ನಾವು ಎಲ್ಲಾ ನಗರ ಪಾಲಿಕೆಯವರಿಗೂ ಸಹ ಪತ್ರವನ್ನು ಬರೆದಿದ್ದೇವೆ. ಅವರೇನು ಸ್ಪಂದನೆ ಮಾಡಲಿಲ್ಲವೆಂದು ಈಗ ನಾವು ಡಿಸಿಯವರಿಗೂ ಸಹ ಹೇಳಿದ್ದೇವೆ. ನಿಮ್ಮ ಜಿಲ್ಲೆಯಲ್ಲಿ ಹಗಲು ಹೊತ್ತಿನಲ್ಲಿ ಅಥವಾ ಅನವಶ್ಯಕವಾಗಿ ಈ ತರಹ ಬೀದಿ ದೀಪಗಳನ್ನು ಉರಿಸುವುದನ್ನು ಕಡ್ಡಾಯವಾಗಿ ನೀವು 'Off' ಮಾಡಿಸಬೇಕೆಂದು ಹೇಳಿದ್ದೇವೆ. Automatic Switch ನ್ನು ಹಾಕಬೇಕೆಂಬುದನ್ನು ನಾವು ಎಲ್ಲರಿಗೂ ತಿಳಿಸಿದ್ದೇವೆ. ಆದರೂ ಕೂಡ ಎಷ್ಟೋ ಸಾರಿ ನಮಗೆ ಅನ್ನಿಸುತ್ತದೆ. ದಿನಕ್ಕೆ 25 ರಿಂದ 30 ಕರೆಗಳು ಇದೇ ತರಹದ್ದು ಇರುತ್ತದೆ. "ಮೇಡಂ, ಕರೆಂಟ್ ಇಲ್ಲವೆಂದು ನೀವು ಹೇಳುತ್ತೀರಿ, ಆದರೆ ನೋಡಿ ಇಲ್ಲಿ ಹಗಲು ಹೊತ್ತಿನಲ್ಲಿಯೇ ಬೀದಿ ದೀಪಗಳನ್ನು ಉರಿಸುತ್ತಿದ್ದಾರೆ." ಎಂದು ಕರೆ ಮಾಡಿ ಹೇಳುತ್ತಾರೆ. ಸಹಜವಾಗಿ ಅಲ್ಲಿರುವ ಜನರು, ಸ್ಥಳೀಯ ಸಂಸ್ಥೆಗಳು ಇದನ್ನು ಪಾಲನೆ ಮಾಡಬೇಕು. ಆದರೆ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ. ಮೊನ್ನೆಯ ದಿವಸ ಶುಕ್ರವಾರದಂದು ಬಳ್ಳಾರಿ 2ನೇ ಘಟಕವನ್ನು ಪ್ರಾರಂಭ ಮಾಡಿದ್ದೇವೆ. ಅದಕ್ಕೆ ಕಲ್ಲಿದ್ದಲಿನ linkage ಇನ್ನೊಂದು ವಾರ ಅಥವಾ ಹತ್ತು ದಿನಗಳಲ್ಲಿ clear ಆಗಬಹುದು ಅಂದುಕೊಂಡಿದ್ದೇವೆ. ಇದರ ಬಗ್ಗೆ ಕೇಂದ್ರ ಸರ್ಕಾರದ ಪತ್ರ ಬಂದಿದೆ.

ಕಲ್ಲಿದ್ದಲು ಬರಬೇಕು. ಅದಕ್ಕಾಗಿ ಇನ್ನೊಂದು 10 ದಿನಗಳಲ್ಲಿ ಕಲ್ಲಿದ್ದಲು ಬಂದರೆ ಎರಡನೆಯ ಘಟಕದಿಂದ ಸುಮಾರು 500 ಮೆಗಾವ್ಯಾಟ್ ಹೆಚ್ಚುವರಿಯಾಗಿ ಈ ಒಂದು ಗ್ರಿಡ್‌ಗೆ ಬರುತ್ತದೆ. ಆಗ ಉತ್ತರ ಭಾಗದಲ್ಲಿ ಇನ್ನೊಂದಷ್ಟು ಪರಿಸ್ಥಿತಿಯನ್ನು ನಾವು ಸುಧಾರಣೆ ಮಾಡಬಹುದು ಎಂದು ಅನ್ನಿಸುತ್ತದೆ. ಮೇ ತಿಂಗಳ ಕೊನೆಯಲ್ಲಿ ಅಥವಾ ಜೂನ್ ತಿಂಗಳ ಮೊದಲ ವಾರದಲ್ಲಿ ಉಡುಪಿಯ 2ನೇ ಘಟಕವೂ ಸಹ ಬರಬಹುದು ಎನ್ನುವಂಥಾದ್ದು ಇದೆ. ಬಳ್ಳಾರಿಯ ಘಟಕದಿಂದ ವಿದ್ಯುತ್ ಪೂರೈಕೆಯಾದರೆ ಒಟ್ಟಾರೆಯಾಗಿ ರಾಜ್ಯದ ವಿದ್ಯುತ್ ಪರಿಸ್ಥಿತಿ ಸ್ವಲ್ಪ ಸುಧಾರಣೆ ಆಗುತ್ತದೆ. ಮಾನ್ಯ ಹೊರಟ್ಟಿಯವರು ಹೇಳಿದ್ದರಲ್ಲಿ ಬಹಳ ಸತ್ಯವಿದೆ. ನಾನು ತಮ್ಮ ಮೂಲಕ ಎಲ್ಲರಲ್ಲಿಯೂ ವಿನಂತಿ ಮಾಡುವುದಕ್ಕೆ ಇಷ್ಟಪಡುತ್ತೇನೆ. ಸ್ಥಳೀಯ ಸಂಸ್ಥೆಗಳು ಅಲ್ಲಿಯ ಜವಾಬ್ದಾರಿಯನ್ನು ತೆಗೆದುಕೊಂಡು ಬೀದಿ ದೀಪಗಳ ಸ್ವಿಚ್ 'On' and 'Off' ಮಾಡುವಂಥದ್ದನ್ನು ಕಡ್ಡಾಯವಾಗಿ ಮಾಡಬೇಕು. ಸಂಜೆ 7 ಗಂಟೆಯ ನಂತರ ಮತ್ತು ಬೆಳಿಗ್ಗೆ 5 ಗಂಟೆಯೊಳಗೆ 'On' and 'Off' ಮಾಡುವಂಥಾದ್ದನ್ನು ಮಾಡಿದರೆ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ನಮಗೆ ವಿದ್ಯುತ್ತಿನ ಉಳಿಲತಾಯವಾಗುತ್ತದೆ ಎಂದು ನಮಗೆ ಅನ್ನಿಸುತ್ತದೆ.

**ಸಭಾಪತಿಯವರು :** ಧನ್ಯವಾದಗಳು

**ಮೂರಾರ್ಜಿ ಶಾಲೆಗಳ ಬಗ್ಗೆ :**

**94; ಶ್ರೀ ಆಚಾರ್ ಹಾಲಪ್ಪ ಬಸಪ್ಪ**

**(ಅ)** ಕೊಪ್ಪಳ ಜಿಲ್ಲೆಯಲ್ಲಿರುವ ಮೊರಾರ್ಜಿ ಶಾಲೆಗಳ ಸಂಖ್ಯೆ ಎಷ್ಟು; (ತಾಲ್ಲೂಕು ವಾರು ವಿವರ ನೀಡುವುದು)

**(ಆ)** ಈ ಮೊರಾರ್ಜಿ ಶಾಲೆಗಳಿಗೆ ಸ್ವಂತ ಕಟ್ಟಡಗಳಿವೆಯೇ;

**(ಇ)** ಕೊಪ್ಪಳ ಜಿಲ್ಲೆಯ ಮೊರಾರ್ಜಿ ಶಾಲೆಗಳಲ್ಲಿರುವ ಶಿಕ್ಷಕರ ಸಂಖ್ಯೆ ಎಷ್ಟು ಹಾಗೂ ಓದುತ್ತಿರುವ ಮಕ್ಕಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

**(ಈ)** ಮೊರಾರ್ಜಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಎಷ್ಟು ಜನ ಶಿಕ್ಷಕರನ್ನು ನೇಮಕ ಮಾಡಲಾಗಿದೆ ಮತ್ತು ನೇಮಕ ಮಾಡುವಾಗ ಅನುಸರಿಸಿದ ನಿಯಮಗಳೇನು?

**ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು)**

**(ಅ)** ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 13 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿವೆ.

1) ಗಂಗಾವತಿ ತಾಲ್ಲೂಕು – 04 ಶಾಲೆಗಳು

2) ಯಲ್ಬುರ್ಗಾ – 05 ಶಾಲೆಗಳು

3) ಕೊಪ್ಪಳ – 02 ಶಾಲೆಗಳು

4) ಕುಷ್ಟಗಿ – 02 ಶಾಲೆಗಳು

**(ಆ)** ಒಟ್ಟು 13 ಶಾಲೆಗಳ ಪೈಕಿ 09 ಶಾಲೆಗಳು ಸ್ವಂತ ಕಟ್ಟಡವನ್ನು ಹೊಂದಿರುತ್ತದೆ.

**(ಇ)** ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿರುವ ಶಿಕ್ಷಕರ ಸಂಖ್ಯೆ : ವಿವರ ಈ ಕೆಳಗಿನಂತಿದೆ.

| **ಗಂಗಾವತಿ ತಾ॥** | **ಯಲ್ಬುರ್ಗಾ ತಾ॥** | **ಕೊಪ್ಪಳ ತಾ॥** | **ಕುಷ್ಟಗಿ ತಾ॥** | **ಒಟ್ಟು** |
|---|---|---|---|---|
| 32 | 57 | 29 | 20 | 138 |

ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ : ವಿವರ ಈ ಕೆಳಕಂಡಂತಿದೆ.

| **ಗಂಗಾವತಿ ತಾ॥** | **ಯಲ್ಬುರ್ಗಾ ತಾ॥** | **ಕೊಪ್ಪಳ ತಾ॥** | **ಕುಷ್ಟಗಿ ತಾ॥** | **ಒಟ್ಟು** |
|---|---|---|---|---|
| 717 | 1221 | 467 | 464 | 2824 |

**(ಈ)** ಈ ಶಾಲೆಗಳಲ್ಲಿ ಖಾಯಂ ಆಗಿ ಶಿಕ್ಷಕರನ್ನು ನೇಮಿಸಲು ಕ್ರಮ ಜರುಗಿಸಲಾಗಿದ್ದು, ಸುಮಾರು 5325 ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ. ಸದರಿ ನೇಮಕಾತಿಗಳನ್ನು ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಅನುಸರಿಸಿ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ :** ಮಾನ್ಯ ಸಭಾಪತಿಯವರೇ, ಕೊಪ್ಪಳ ಜಿಲ್ಲೆಯಲ್ಲಿ 13 ಮೊರಾರ್ಜಿ ಶಾಲೆಗಳಿವೆ. 9 ಶಾಲೆಗಳಿಗೆ ಬಹಳ ಒಳ್ಳೆಯ ಕಟ್ಟಡವನ್ನು ನಿರ್ಮಾಣ ಮಾಡಿದ್ದಾರೆ. ಅದಕ್ಕಾಗಿ ಸರ್ಕಾರವನ್ನು ನಾನು ಮೊದಲು ಅಭಿನಂದಿಸಬೇಕಾಗುತ್ತದೆ. ಇನ್ನುಳಿದಂಥ ನಾಲ್ಕು ಶಾಲೆಗಳಿಗೆ ಆದಷ್ಟು ಬೇಗ ಕಟ್ಟಡದ ಕೆಲಸ ಪೂರ್ತಿ ಆದರೆ ಮಾತ್ರ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಇವತ್ತು ಕೇಂದ್ರಿಯ ವಿದ್ಯಾಲಯಗಳಾದಂಥ ನವೋದಯ ವಿದ್ಯಾಲಯಗಳು ಸ್ಪರ್ಧೆ ಮೂಲಕ ಇವತ್ತು ಗ್ರಾಮೀಣ ಭಾಗದಲ್ಲಿ ಶಿಕ್ಷಣವನ್ನು ಕೊಡತಕ್ಕಂಥ ಸಂದರ್ಭದಲ್ಲಿ, ಮೊರಾರ್ಜಿ ಶಾಲೆಗಳನ್ನು ಸಹ ಆ ಉದ್ದೇಶದಿಂದ ತೆರೆಯಲಾಗಿದೆ. ಇವತ್ತು ಅಂತಹ ಶಾಲೆಗಳಿಗೆ ಬೇಕಾದಂಥ ಮೂಲಭೂತ ಸೌಕರ್ಯಗಳಾದ ಕಟ್ಟಡಗಳನ್ನು ಕೊಡತಕ್ಕಂಥಾದ್ದರಲ್ಲಿ ಒಂದು ಹೆಜ್ಜೆ ಮುಂದೆ ಬಂದರೆ ಸಮಸ್ಯೆ ಪರಿಹಾರವಾಗುತ್ತದೆ. ಅದೇ ರೀತಿ ಶಿಕ್ಷಕರನ್ನು ನಿಯುಕ್ತಿಗೊಳಿಸುವುದರ ಬಗ್ಗೆ ಹೇಳುವುದಾದರೆ, ಇದುವರೆವಿಗೂ ಗುತ್ತಿಗೆ ಆಧಾರದ ಮೇಲೆ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರು ಪೂರ್ಣ ಜವಾಬ್ದಾರಿಯನ್ನು ಎಷ್ಟರಮಟ್ಟಿಗೆ ತೆಗೆದುಕೊಂಡಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಸಚಿವರು ಖಾಯಂ ಆದಂಥ ಶಿಕ್ಷಕರನ್ನು ನಿಯುಕ್ತಿಗೊಳಿಸುವುದರಲ್ಲಿ ಕೊನೆಯ ಹಂತದಲ್ಲಿದ್ದೇವೆ ಎಂದು ಹೇಳಿದ್ದಾರೆ. ಮುಂಬರುವ ಶೈಕ್ಷಣಿಕ ವರ್ಷದಲ್ಲಿ ಶಿಕ್ಷಕರನ್ನು ನಿಯುಕ್ತಿ ಮಾಡಿದರೆ ಮಾತ್ರ ಆ ಶಾಲೆಗಳಿಗೆ, ಅವರು ಕಟ್ಟಿದಂಥ ಒಳ್ಳೆಯ ಕಟ್ಟಡಗಳಿಗೆ ಇವತ್ತು ಅರ್ಥ ಬರುತ್ತದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳೀಗೆ ಹೆಚ್ಚು ಅನುಕೂಲವಾಗುತ್ತದೆ. ಈ ಒಂದು ಅಂಶವನ್ನು ಹೇಳುತ್ತಾ ಆದಷ್ಟು ಬೇಗ ಉಳಿದಂತಹ 4 ಕಟ್ಟಡಗಳನ್ನು ಮುಗಿಸಿಕೊಡಬೇಕು

ಮತ್ತು ಶಿಕ್ಷಕರನ್ನು ನಿಯುಕ್ತಿ ಮಾಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಅಲ್ಲಿ ಇನ್ನೊಂದು ಕೊರತೆ ಇದೆ. ಇವತ್ತು ತಮ್ಮ ಮುಂದೆ ನಾನದನ್ನು ಹೇಳಲೇಬೇಕಾಗುತ್ತದೆ. ಸರ್ಕಾರ ಈ ಶಾಲೆಗಳಿಗೆ ಕಾಂಪೌಂಡ್‌ನ್ನು ಮಾಡಿ ಕೊಡುವುದಕ್ಕೆ ಆಗಿಲ್ಲ. ಸರ್ಕಾರಿ ಜಮೀನುಗಳನ್ನು ತೆಗೆದುಕೊಂಡರೂ ಗುಡ್ಡಗಾಡಿನ ಪ್ರದೇಶದಲ್ಲಿ ಊರಿನ ಹೊರಗೆ ಈ ಕಟ್ಟಡಗಳು ಆಗಿರುವುದರಿಂದ ಪೂರ್ಣ ಪ್ರಮಾಣದ ಕಾಂಪೌಂಡ್‌ನ್ನು ಸರ್ಕಾರ ಇವತ್ತು ಕೊಟ್ಟಿಲ್ಲ. ದಯಮಾಡಿ ಕಾಂಪೌಂಡ್ ಕಟ್ಟತಕ್ಕಂಥಾದ್ದರಲ್ಲಿ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳಲು ಬಯಸುತ್ತೇನೆ.

**ಎ. ನಾರಾಯಣಸ್ವಾಮಿ :** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಅಭಿಪ್ರಾಯದಂತೆ ಉಳಿದ ಕಟ್ಟಡವನ್ನು ಆದಷ್ಟು ಬೇಗ ಪ್ರಾರಂಭ ಮಾಡುತ್ತೇವೆ. ಕಾಂಪೌಂಡ್‌ನ ಅವಶ್ಯಕತೆ ಬಗ್ಗೆ ಹೇಳಿದ್ದಾರೆ. ನಾವು ಕಾಂಪೌಂಡ್‌ನ್ನು ಸಹ ನಿರ್ಮಾಣ ಮಾಡುತ್ತೇವೆ. ನಮ್ಮ ಇಲಾಖೆಯಲ್ಲಿ C & R Rules ನ್ನು ಮಾಡಿದ್ದೇವೆ. ಈಗಾಗಲೇ ನೇಮಕಾತಿ ಪ್ರಕ್ರಿಯೆ ಬಹುತೇಕ ಪೂರ್ಣಗೊಂಡಿದೆ. ಈ ಶೈಕ್ಷಣಿಕ ವರ್ಷದಲ್ಲಿ ನೇಮಕಾತಿ ಕೊಡುವುದು ಸರಿ ಇಲ್ಲ. ಬೇಸಿಗೆಯಲ್ಲಿ ಅಂದರೆ ಏಪ್ರಿಲ್ ಅಥವಾ ಮೇ ತಿಂಗಳಿನಲ್ಲಿ ನೇಮಕಾತಿ ಕೊಡಬೇಕೆಂದು ನೇಮಕಾತಿ ಆದೇಶಗಳನ್ನು ಪೆಂಡಿಂಗ್ ಇಟ್ಟುಕೊಂಡಿದ್ದೇನೆ. ಏಪ್ರಿಲ್ ತಿಂಗಳಿನಲ್ಲಿ ಎಲ್ಲಾ 5,325 ಶಿಕ್ಷಕರಿಗೆ ನೇಮಕಾತಿ ಆದೇಶವನ್ನು ಕೊಡುತ್ತೇವೆ. ಆದಷ್ಟು ಬೇಗ ಈ ಒಂದು ಕಾರ್ಯವನ್ನು ಮಾಡುತ್ತೇವೆ.

**ಸಭಾಪತಿಯವರು :** ಧನ್ಯವಾದಗಳು.

## ಆಹಾರ ಇಲಾಖೆಯಿಂದ ಭತ್ತ ಖರೀದಿಸುವ ಬಗ್ಗೆ

## 36; ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)

**(ಅ)** ಆಹಾರ, ನಾಗರೀಕ ಸರಬರಾಜು ಇಲಾಖೆಯಿಂದ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಎಷ್ಟು ಕಡೆ ಭತ್ತ ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ; ಅವು ಯಾವುವು;

**(ಆ)** ಎ–ಗ್ರೇಡ್ ಮತ್ತು ಬಿ–ಗ್ರೇಡ್ ಭತ್ತಕ್ಕೆ ನಿಗದಿಪಡಿಸಿರುವ ಬೆಲೆ ಎಷ್ಟು; ಇದುವರೆಗೆ ಈ ಎರಡು ಜಿಲ್ಲೆಗಳಲ್ಲಿರುವ ಖರೀದಿ ಕೇಂದ್ರದಿಂದ ಎಷ್ಟು ಭತ್ತವನ್ನು ಖರೀದಿಸಲಾಗಿದೆ, ಇದರ ಒಟ್ಟು ಮೊತ್ತವೆಷ್ಟು.

**(ಇ)** ಭತ್ತ ಮಾರಿದ ರೈತರಿಗೆ ಇದುವರೆವಿಗೂ ಹಣವನ್ನು ಪಾವತಿ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ರೈತರಿಗೆ ಕೊಡಬೇಕಾಗಿರುವ ಬಾಕಿ ಹಣವೆಷ್ಟು, ಇದನ್ನು ಯಾವಾಗ ಪಾವತಿ ಮಾಡಲಾಗುವುದು (ವಿವರ ನೀಡುವುದು)

**(ಈ)** ರೈತರಿಗೆ ಹಣ ಕೊಡುವುದು ವಿಳಂಭವಾಗುತ್ತಿರುವುದರಿಂದ ಮಧ್ಯವರ್ತಿಗಳು ರೈತರಿಂದ ಕಡಿಮೆ ಬೆಲೆಗೆ ಭತ್ತ ಖರೀದಿಸಿ ಸ್ಥಳದಲ್ಲಿಯೇ ಹಣ ಪಾವತಿ ಮಾಡಿ ಇದೇ ಭತ್ತವನ್ನು ಖರೀದಿ ಕೇಂದ್ರಕ್ಕೆ ತಂದು ಹೆಚ್ಚು ಲಾಭ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ, ಹಾಗಿದ್ದಲ್ಲಿ ಯಾವ ರೀತಿಯ ಕ್ರಮ ತೆಗೆದುಕೊಳ್ಳಲಾಗಿದೆ (ವಿವರ ನೀಡುವುದು)

**(ಉ)** ರೈತರಿಗೆ ಸರ್ಕಾರದಿಂದಲೇ ಜ್ಯೋತಿ ಭತ್ತದ ಬಿತ್ತನೆ ಬೀಜ ವಿತರಣೆ ಮಾಡಿ ಈಗ ಜ್ಯೋತಿ ಭತ್ತವನ್ನು ಖರೀದಿ ಕೇಂದ್ರದಲ್ಲಿ ತೆಗೆದುಕೊಳ್ಳದಿರಲು ಕಾರಣವೇನು, ಇದರಿಂದ ರೈತರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ; ಈ ಬಗ್ಗೆ ಯಾವ ರೀತಿ ಕ್ರಮ ತೆಗೆದುಕೊಳ್ಳಲಾಗಿದೆ. (ವಿವರ ನೀಡುವುದು)

**ಶೋಭಾ ಕರಂದ್ಲಾಜೆ (ಇಂಧನ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :**

**(ಅ)** ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಮಗವು ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ 6 ಮತ್ತು ಮೈಸೂರು ಜಿಲ್ಲೆಯಲ್ಲಿ 6 ಭತ್ತ ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ. ವಿವರ ಈ ಕೆಳಗಿನಂತಿರುತ್ತದೆ.

| **ಚಾಮರಾಜನಗರ ಜಿಲ್ಲೆ** | **ಮೈಸೂರು ಜಿಲ್ಲೆ** |
|---|---|
| ಚಾಮರಾಜನಗರ | ನಂಜನಗೂಡು |
| ಕೊಳ್ಳೆಗಾಲ | ಟಿ. ನರಸೀಪುರ |
| ಹನೂರು | ಬನ್ನೂರು |
| ಯಳಂದೂರು | ಕೆ. ಆರ್. ನಗರ |
| ಗುಂಡ್ಲುಪೇಟೆ | ಹುಣಸೂರು |
| ಕುಂತೂರು | ಹೆಚ್. ಡಿ. ಕೋಟೆ |

**(ಆ)** ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಖರೀದಿಸುವ ಎ–ಗ್ರೇಡ್ ಭತ್ತ ಪ್ರತಿ ಕ್ವಿಂಟಾಲ್‌ಗೆ ರೂ. 1110/– ಮತ್ತು ರಾಜ್ಯ ಸರ್ಕಾರದ ಪ್ರೋತ್ಸಾಹ ಧನ ರೂ. 250/– ಒಟ್ಟು ರೂ. 1360/– ಹಾಗೂ ಸಾಮಾನ್ಯ ಗ್ರೇಡ್ ಭತ್ತ ಪ್ರತಿ ಕ್ವಿಂಟಾಲ್‌ಗೆ ರೂ. 1080/– ಮತ್ತು ರಾಜ್ಯ ಸರ್ಕಾರದ ಪ್ರೋತ್ಸಾಹ ಧನ ರೂ. 250/– ಒಟ್ಟು ರೂ. 1330/– ನಿಗದಿ ಪಡಿಸಿರುತ್ತದೆ.

ಈ ಎರಡು ಜಿಲ್ಲೆಗಳಲ್ಲಿ ಈವರೆವಿಗೂ ಖರೀದಿಸಿದ ಭತ್ತದ ವಿವರ ಈ ಕೆಳಗಿನಂತಿದೆ

**ಚಾಮರಾಜನಗರ :**

ಭತ್ತ 'ಎ' ದರ್ಜೆ – 562.097 ಮೆ. ಟನ್

ಭತ್ತ ಸಾಮಾನ್ಯ ದರ್ಜೆ – 912.235 ಮೆ. ಟನ್

ಒಟ್ಟು – 1474.332 ಮೆ. ಟನ್

**ಮೈಸೂರು :**

ಭತ್ತ 'ಎ' ದರ್ಜೆ – 3257.392 ಮೆ. ಟನ್

ಭತ್ತ ಸಾಮಾನ್ಯ ದರ್ಜೆ – 17546.646 ಮೆ. ಟನ್

ಒಟ್ಟು – 20804.038 ಮೆ. ಟನ್

ಭತ್ತದ ಒಟ್ಟು ಮೊತ್ತ ರೂ. 29,74,48,167.70

(ಇ) 'ಜ್ಯೋತಿ' ತಳಿಯ ಭತ್ತಕ್ಕೆ ಮಾತ್ರ ಈವರೆಗೆ ಹಣ ಪಾವತಿ ಮಾಡಿರುವುದಿಲ್ಲ. ಕಾರಣ "ಜ್ಯೋತಿ" ತಳಿಯ ಭತ್ತ ಖರೀದಿಗೆ ಸೂಕ್ತವಾಗಿರುವುದಿಲ್ಲ. ಎಂದು ಭಾರತ ಆಹಾರ ನಿಗಮವು ನಿಲುವು ತಳೆದಿರುತ್ತದೆ. ಚಾಮರಾಜನಗರ ಜಿಲ್ಲೆಯಲ್ಲಿ 1726.252 ಮೆ. ಟನ್ ಮತ್ತು ಮೈಸೂರು ಜಿಲ್ಲೆಯಲ್ಲಿ 1500.000 ಮೆ. ಟನ್ "ಜ್ಯೋತಿ" ಭತ್ತವನ್ನು ಜಿಲ್ಲಾ ವ್ಯವಸ್ಥಾಪಕರು, ತಪ್ಪು ಗ್ರಹಿಕೆಯಿಂದ ಈಗಾಗಲೇ ಖರೀದಿಸಿದ್ದು, ಆ ನಂತರ ಜ್ಯೋತಿ ತಳಿ ಭತ್ತ ಖರೀದಿಸುವುದನ್ನು ಸ್ಥಗಿತಗೊಳಿಸಲಾಗಿದೆ ಹಾಗೂ ಸದರಿ ಭತ್ತಕ್ಕೆ ಇಲ್ಲಿಯವರೆಗೂ ಹಣ ಪಾವತಿಸಿರುವುದಿಲ್ಲ. "ಜ್ಯೋತಿ" ಭತ್ತವನ್ನು ಹೊರತುಪಡಿಸಿ ಉಳಿದಂತೆ ಖರೀದಿಸಿದ ಭತ್ತಕ್ಕೆ ರೈತರಿಗೆ ಪೂರ್ಣ ಪ್ರಮಾಣದ ಹಣ ಪಾವತಿಸಲಾಗಿದೆ. "ಜ್ಯೋತಿ" ಭತ್ತವನ್ನು ಕೊಂಡುಕೊಳ್ಳಲು ಅನುವು ಮಾಡಕೊಡಬೇಕು ಎಂದು ಕೇಂದ್ರ ಸರ್ಕಾರವನ್ನು ಮತ್ತು ಭಾರತ ಆಹಾರ ನಿಗಮವನ್ನು ವಿನಂತಿಸಲಾಗಿದೆ ಮತ್ತು ಅವರನ್ನು ಒಪ್ಪಿಸಲು ಸರ್ವಪ್ರಯತ್ನ ಮಾಡಲಾಗಿದೆ. ವಿಷಯ ಈಗ ಕೇಂದ್ರ ಸರಕಾರದ ನಿರ್ದೇಶನದಂತೆ ಭಾರತ ಆಹಾರ ನಿಗಮದ ಪರಿಶೀಲನೆಯಲ್ಲಿದೆ.

(ಈ) 'ಜ್ಯೋತಿ' ಭತ್ತವನ್ನು ಈಗ ಕೊಂಡುಕೊಳ್ಳುತ್ತಿಲ್ಲವಾದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

(ಉ) 'ಜ್ಯೋತಿ' ಭತ್ತದ ಭೀಜವನ್ನು ಕೃಷಿ ಇಲಾಖೆಯು ವಿತರಣೆ ಮಾಡಿರಬಹುದು. ಆದರೆ ಭಾರತ ಆಹಾರ ನಿಗಮವು ಯಾವುದೇ ತಳಿಯ ಭತ್ತವನ್ನು ವಿತರಣೆಗೆ ಯೋಗ್ಯ ಎಂದು ಒಪ್ಪಿಕೊಳ್ಳದೆ ಇದ್ದಲ್ಲಿ ಕೊಂಡುಕೊಳ್ಳಲು ಆಸ್ಪದವಿರುವುದಿಲ್ಲ. ಈ ಮೇಲೆ ಪ್ರಶ್ನೆ (ಇ) ಯಲ್ಲಿ ಉತ್ತರಿಸಿದಂತೆ, ಕೇಂದ್ರ ಸರಕಾರ ಮತ್ತು ಭಾರತ ಆಹಾರ

ನಿಗಮಗಳನ್ನು ಒಪ್ಪಿಸಲು ಸರ್ವ ಪ್ರಯತ್ನಗಳನ್ನು ಮಾಡಲಾಗಿದೆ. ಭಾರತ ಆಹಾರ ನಿಗಮವು ಸದರಿ ಭತ್ತದ ಸ್ಯಾಂಪಲ್ ಅನ್ನು ಪಡೆದು ಪರಿಶೀಲನೆ ಮಾಡುತ್ತಿದೆ. ಆದುದರಿಂದ, ನಿರ್ಣಯವನ್ನು ಕಾದು ನೋಡಲಾಗುತ್ತಿದೆ. ಸದರಿ ಭತ್ತದಿಂದ ಕುಸುಬಲಕ್ಕಿಯನ್ನು ಮಾತ್ರ ಸಿದ್ಧಪಡಿಸಬಹುದಾಗಿದ್ದು, ಅದು ನಸುಗೆಂಪು ಬಣ್ಣವನ್ನು ಹೊಂದಿರುವುದರಿಂದ, ಸದರಿ ಭತ್ತ ಮತ್ತು ಅಕ್ಕಿಗೆ ಕೇರಳ ರಾಜ್ಯವನ್ನು ಬಿಟ್ಟರೆ ಬೇರೆ ಎಲ್ಲಿಯೂ ಬೇಡಿಕೆ ಇರುವುದಿಲ್ಲ.

**ಶ್ರೀ ಪಟೇಲ್ ಶಿವರಾಂ (ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) ಪರವಾಗಿ)** : ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ಕೊಟ್ಟಿರುವ ಉತ್ತರ ಸಮಂಜಸವಾಗಿಲ್ಲ. ಮೈಸೂರು, ಚಾಮರಾಜನಗರ, ಹಾಸನ, ಮಂಡ್ಯ, ಯಾದಗಿರಿ, ಕೊಪ್ಪಳ, ಬಳ್ಳಾರಿ ಇತ್ಯಾದಿ 13 ಜಿಲ್ಲೆಗಳ 58 ಕೇಂದ್ರಗಳಲ್ಲಿ ಭತ್ತವನ್ನು ಖರೀದಿಸುವ ಕೆಲಸವಾಗಿದೆ. ಖರೀದಿಯ ಪ್ರಾರಂಭದಲ್ಲಿ 4–5 ದಿನಗಳ ಒಳಗೆ ರೈತರಿಗೆ ಹಣ ಪಾವತಿ ಮಾಡುತ್ತಿದ್ದರು. ಆದರೆ ನಂತರ, ತಿಂಗಳುಗಟ್ಟಲೆಯಾದರೂ ರೈತರಿಗೆ ಹಣ ಕೊಟ್ಟಿಲ್ಲ. ಹಾಗಾಗಿ ಈ ರೈತರು ಭತ್ತವನ್ನು ಖರೀದಿ ಕೇಂದ್ರಗಳಿಗೆ ಸರಬರಾಜು ಮಾಡುತ್ತಿಲ್ಲ. ಇದರಿಂದ ಸ್ಥಳೀಯರೇ ಆ ಭತ್ತವನ್ನು ಕ್ವಿಂಟಾಲ್‌ಗೆ ರೂ. 200–300 ಗಳ ಕಡಿಮೆ ದರವನ್ನು ಕೊಟ್ಟು ಖರೀದಿ ಮಾಡುವ ಕಾರ್ಯ ನಡೆದಿದೆ. ಈ ವಿಚಾರ ಪತ್ರಿಕೆಗಳಲ್ಲೂ ಬಂತು. "ಭತ್ತವನ್ನು ಬೆಳೆದ ರೈತರು ಸಂಕಷ್ಟದಲ್ಲಿ; ಖರೀದಿ ಕೇಂದ್ರಗಳಿಗೆ ಭತ್ತ ಸರಬರಾಜು ಮಾಡಿ ತಿಂಗಳಾದರೂ ಹಣ ಬಾರದು" ಎನ್ನುವ ಅಂಶ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಬಂದಿದೆ. ಈ ಸಮಸ್ಯೆಗೆ ಏನು ಕ್ರಮ ಕೈಗೊಳ್ಳಲಾಗಿದೆ ಎನ್ನುವುದು ಈ ಲಿಖಿತ ಉತ್ತರದಲ್ಲಿ ಇಲ್ಲ.

ಚಾಮರಾಜ ನಗರ ಮತ್ತು ಮೈಸೂರಿನಲ್ಲಿ ಬೆಳೆದ "ಜ್ಯೋತಿ" ತಳಿಯ ಭತ್ತ ಖರೀದಿ ಮಾಡುವುದನ್ನು ಸ್ಥಗಿತಗೊಳಿಸಿದ್ದಾರೆ. ಸುಮಾರು 25 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ 1250 ಮೆಟ್ರಿಕ್ ಟನ್ ಭತ್ತವನ್ನು ಬೆಳೆದಿದ್ದು, ಕೇರಳದ ವರ್ತಕರು ಅದನ್ನು ಕ್ವಿಂಟಾಲ್‌ಗೆ ರೂ. 800–900 ಗಳಂತೆ ಖರೀದಿ

ಮಾಡುತ್ತಿದ್ದು ಇದರಿಂದ ರೈತರಿಗೆ ನಷ್ಟವಾಗುತ್ತಿದೆ. ಜ್ಯೋತಿ ತಳಿಯ ಭತ್ತದ ಬೀಜವನ್ನು ಸರ್ಕಾರದವರೇ ಕೊಟ್ಟಿದ್ದರೂ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯವರು, ಈ ಬೀಜವನ್ನು ಕೃಷಿ ಇಲಾಖೆಯವರು ಹೊಟ್ಟಿದ್ದಾರೆ, ನಾವು ಸರಬರಾಜು ಮಾಡಿಲ್ಲ ಎಂದು ಹೇಳುತ್ತಿದ್ದಾರೆ. ಈ ಎರಡೂ ಇಲಾಖೆಗಳು ಸರ್ಕಾರದ ಇಲಾಖೆಗಳಾಗಿವೆ. ಚಾಮರಾಜನಗರದ ಸಂಸದರು ಪಾರ್ಲಿಮೆಂಟ್‌ನಲ್ಲಿ ಜ್ಯೋತಿ ತಳಿಯ ಭತ್ತವನ್ನು ಖರೀದಿ ಮಾಡಲು ಒತ್ತಾಯ ಮಾಡಿದ್ದಾರೆ. ಒಬ್ಬರ ಮೇಲೆ ಒಬ್ಬರು ಹೇಳುವುದರ ಬದಲಾಗಿ, ಭತ್ತ ಖರೀದಿಗೆ ಸಂಬಂಧಿಸಿದಂತೆ ಏನು ಸಮಸ್ಯೆ ಎದುರಾಗಿ ದೆಯೋ ಅದನ್ನು ಪರಿಹರಿಸುವ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನ ಮಾಡಬೇಕು. ಜ್ಯೋತಿ ತಳಿಯ ಭತ್ತವನ್ನು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಯವರು ಸರಬರಾಜು ಮಾಡಿದ್ದಾರೋ ಅಥವಾ ಕೃಷಿ ಇಲಾಖೆಯವರು ಸರಬರಾಜು ಮಾಡಿದ್ದಾರೋ ಗೊತ್ತಿಲ್ಲ. ಆದರೆ ಅದನ್ನು ನಮ್ಮ ರೈತರು ಕೊಂಡು ನಷ್ಟ ಅನುಭವಿಸುವಂತಾಗಿದೆ. ಈ ಸಮಸ್ಯೆಯನ್ನು ಪರಿಹಾರ ಗೊಳಿಸುವ ದಿಸೆಯಲ್ಲಿ ಮಾನ್ಯ ಸಚಿವರು ಕ್ರಮ ಕೈಗೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಕುಮಾರಿ ಶೋಭಾ ಕರಂದ್ಲಾಜೆ (ಇಂಧನ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :** ಮಾನ್ಯ ಸಭಾಪತಿಗಳೆ, ನಮ್ಮ ರಾಜ್ಯದಲ್ಲಿ ಜ್ಯೋತಿ ತಳಿಯ ಭತ್ತವನ್ನು ಹೊರತುಪಡಿಸಿ ಬೇರೆ ಯಾವುದೇ ಭತ್ತ ಖರೀದಿಗೆ ಸಂಬಂಧಿಸಿದಂತೆ ಸರ್ಕಾರ ಕೊಡಬೇಕಾದ ಹಣವನ್ನು ಬಾಕಿ ಇಟ್ಟುಕೊಂಡಿಲ್ಲ. ಜ್ಯೋತಿ ತಳಿಯ ಭತ್ತ ಖರೀದಿಗೆ ಸಂಬಂಧಿಸಿದಂತೆ FCI (Food Corportaion of India) ಗೆ, ಕೇಂದ್ರ ಸರ್ಕಾರಕ್ಕೆ ಪತ್ರ ಬರೆದರೂ ಸದರಿ ಭತ್ತವನ್ನು ಖರೀದಿಸಬಾರದೆಂಬ ಸೂಚನೆ ನಮಗೆ ಕೊಟ್ಟಿದೆ. ಶಿವಮೊಗ್ಗ, ಚಾಮರಾಜನಗರ, ಮೈಸೂರು ಇತ್ಯಾದಿ ಜಿಲ್ಲೆಗಳಲ್ಲಿ 'ಜ್ಯೋತಿ' ತಳಿಯ ಭತ್ತವನ್ನು ರೈತರು ಬೆಳೆದಿದ್ದಾರೆ. ಈ ಭತ್ತವನ್ನು boiled rice ಗೆ ಉಪಯೋಗ ಮಾಡುತ್ತಾರೆ. ನಮ್ಮ ರಾಜ್ಯದಲ್ಲಿ boiled rice ಅನ್ನು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಾತ್ರ ಬಳಸುತ್ತಾರೆ. ಆದರೆ

ಅವರೂ ಕೂಡ ಈಗ ಜ್ಯೋತಿ ತಳಿಯ ಭತ್ತವನ್ನು ಉಪಯೋಗ ಮಾಡುತ್ತಿಲ್ಲ. ಇದು ಕೇವಲ ಕೇರಳ ರಾಜ್ಯಕ್ಕೆ ಹೋಗಬೇಕಾಗಿದೆ. ಈ ಕುರಿತು, ಜ್ಯೋತಿ ತಳಿಯ ಭತ್ತವನ್ನು ನಮ್ಮ ರಾಜ್ಯದಿಂದ ಖರೀದಿ ಮಾಡಬೇಕೆಂದು ಕೇರಳದ ಸಂಬಂಧಪಟ್ಟ ಸಚಿವರಿಗೆ ವಿನಂತಿ ಮಾಡಿದ್ದೇವೆ. ಕೇಂದ್ರದ ಆಹಾರ ಮಂತ್ರಿಗಳಾದ ಮಾನ್ಯ ಥಾಮಸ್‌ರವರೂ ಕೂಡ ಕೇರಳ ರಾಜ್ಯದವರೇ ಆಗಿದ್ದಾರೆ. ಅವರಿಗೆ ಮತ್ತು ಎಫ್‌ಸಿಐನ ಸಿರಾಜ್ ಬಾಷಾ ಅವರಿಗೆ ನಾವು, ನಮ್ಮ ರಾಜ್ಯದಲ್ಲಿ ಬೆಳೆದಿರುವ ಜ್ಯೋತಿ ತಳಿಯ ಭತ್ತವನ್ನು ಕೇಂದ್ರದಲ್ಲಿರುವ SUPPLYCO ಎನ್ನುವ ಸಂಸ್ಥೆಯ ಮೂಲಕ ಕೇರಳ ರಾಜ್ಯಕ್ಕೆ ಸರಬರಾಜು ಮಾಡಲು ಕ್ರಮ ಕೈಗೊಳ್ಳಬೇಕು ಎಂದು ವಿನಂತಿ ಮಾಡಿದ್ದೇವೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರದಿಂದ ನಮಗೆ ಯಾವುದೇ ಮಾಹಿತಿ ಬಂದಿಲ್ಲ. ಮಾನ್ಯ ಧ್ರುವನಾರಾಯಣ್‌ರವರೂ ಕೂಡ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುತ್ತಿದ್ದಾರೆ. ಈ ವಿಚಾರದಲ್ಲಿ ಕೇಂದ್ರದ ಜೊತೆ ವೈಯಕ್ತಿಕವಾಗಿ ಮಾತನಾಡಿದರೂ, ಪತ್ರ ಬರೆದರೂ ಮಾಹಿತಿ ಬರುತ್ತಿಲ್ಲ. ಆದರೂ ಸಹ ಎಫ್‌ಸಿಐನ ಟೆಸ್ಟಿಂಗ್ ಲ್ಯಾಬ್‌ಗೆ ಈ ಭತ್ತದ ಸ್ಯಾಂಪಲ್‌ಅನ್ನು ಕಳುಹಿಸಿ ಕೊಟ್ಟಿದ್ದೇವೆ. ಟೆಸ್ಟಿಂಗ್ ಲ್ಯಾಬ್‌ನಲ್ಲಿ ಇದು ಓಕೆ ಆಗಿ, ಈ ಭತ್ತವನ್ನು ಖರೀದಿ ಮಾಡಬಹುದು ಎಂದು ಕೇಂದ್ರ ಸರ್ಕಾರ ಹೇಳಿದರೆ ಆಗ ಕೇರಳ ರಾಜ್ಯದವರು ಖರೀದಿ ಮಾಡುವುದಕ್ಕೆ ಅವಕಾಶ ಇದೆ. ಈ ಪ್ರಯತ್ನ ಕೂಡ ನಮ್ಮ ಕಡೆಯಿಂದ ನಡೆಯುತ್ತಿದೆ. ನಮ್ಮ ರಾಜ್ಯದ ರೈತರ ಹಿತದೃಷ್ಟಿಯಿಂದ ನಾವು ಒಂದು ಹೆಜ್ಜೆ ಮುಂದೆ ಹೋಗಿ ಕೇರಳ ರಾಜ್ಯದೊಡನೆ ಸಂಪರ್ಕ ಸಾಧಿಸುವ ಪ್ರಯತ್ನ ಮಾಡಿದ್ದೇವೆ. ಜ್ಯೋತಿ ತಳಿ ಭತ್ತದ ಖರೀದ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದಿಂದ ಮಾಹಿತಿ ಬರಬಹುದು ಎಂದು ಕಾಯುತ್ತಿದ್ಧೇವೆ. ಅವರೂ ಕೂಡ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಈ ಭತ್ತವನ್ನು ಟೆಸ್ಟಿಂಗ್ ಲ್ಯಾಬಿಗೆ ಕಳುಹಿಸಿಕೊಟ್ಟಿದ್ದಾರೆ. ಆ ಲ್ಯಾಬ್‌ನಿಂದ ಕೇಂದ್ರ ಸರ್ಕಾರಕ್ಕೆ ರಿಪೋರ್ಟ್ ಹೋಗಿ ಅವರಿಂದ ಅನುಮತಿ ಸಿಗುವ ತನಕ ನಾವು ಸ್ವಲ್ಪ ಕಾಯಬೇಕಾದಂಥ ಅವಶ್ಯಕತೆ ಇದೆ.

**ಶ್ರೀ ಪಟೇಲ್ ಶಿವರಾಂ :** ರೈತರ ಈ ಸಮಸ್ಯೆಯನ್ನು ಆದಷ್ಟು ಬೇಗ ಪರಿಹಾರ ಮಾಡದೇ ಹೋದರೆ ರೈತರು ನಷ್ಟ ಅನುಭವಿಸಬೇಕಾಗುತ್ತದೆ. ರೈತರಿದಂದ ಭತ್ತವನ್ನು ಖರೀದಿ ಮಾಡಿ ಒಂದು ತಿಂಗಳಾದರೂ ಅದಕ್ಕೆ ಹಣ ಕೊಟ್ಟಿಲ್ಲ. ಆ ಹಣವನ್ನು ಕೊಡಿಸುವ ಮತ್ತು ಜ್ಯೋತಿ ತಳಿಯ ಭತ್ತವನ್ನು ಖರೀದಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಲೇ ಬೇಕು. ಇಲ್ಲದಿದ್ದರೆ ರೈತರು ಸಂಕಷ್ಟಕ್ಕೆ ಈಡಾಗುತ್ತಾರೆ

**ಕುಮಾರಿ ಶೋಭಾ ಕರಂದ್ಲಾಜೆ (ಇಂಧನ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :** ಕೇಂದ್ರ ಸರ್ಕಾರ ಈ ಭತ್ತವನ್ನು ಖರೀದಿ ಮಾಡುವ ನಿಟ್ಟಿನಲ್ಲಿ ಅನುಮತಿ ಕೊಡದೇ ಇದ್ದರೆ ಬೆಂಬಲ ಬೆಲೆಯಲ್ಲಿ ಖರೀದಿ ಮಾಡುವುದಕ್ಕೆ ಕಷ್ಟವಾಗುತ್ತದೆ. ಏಕೆಂದರೆ ನಾವು ಕೇಂದ್ರ ಸರ್ಕಾರದ ಜೋಡಣೆಯೊಂದಿಗೆ ಕೆಲಸ ಮಾಡಬೇಕಾಗುತ್ತದೆ.

**ಶ್ರೀ ವೀರಣ್ಣ ಮತ್ತೀಕಟ್ಟಿ :** ರೈತರ ಇಂತಹ ಸಂಕಷ್ಟ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಿ ಸಮಸ್ಯೆಯ ಪರಿಹಾರಕ್ಕೆ ಪ್ರಯತ್ನ ಪಡಬೇಕು.

**ಕುಮಾರಿ ಶೋಭಾ ಕರಂದ್ಲಾಜೆ (ಇಂಧನ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):** ಮಾನ್ಯ ಸಭಾಪತಿಗಳೇ, ನಮಗೆ ಯಾರೂ ಹೇಳದೇ ಇದ್ದರೂ ಕೂಡ, ನಾವಾಗಿಯೇ ಕೇರಳ ರಾಜ್ಯದೊಡನೆ ಸಂಪರ್ಕ ಇಟ್ಟುಕೊಂಡು, ನಿಮ್ಮಲ್ಲಿ ಈ ಭತ್ತವನ್ನು ಬಳಸುವವರಿದ್ದರೆ ಇದನ್ನು ಖರೀದಿ ಮಾಡಿ ಎಂದು ತಿಳಿಸಿದ್ದೇವೆ.

**ಸಭಾಪತಿಯವರು :** ಪ್ರಶೆ ಸಂಖ್ಯೆ 73 ಮಾನ್ಯ ಇ. ಕೃಷ್ಣಪ್ಪನವರದ್ದು, ಅವರು ಗೈರು ಹಾಜರಾಗಿದ್ದಾರೆ. ಈಗ ಪ್ರಶ್ನೆ ಸಂಖ್ಯೆ 34, ಮಾನ್ಯ ಕೊಂಡಯ್ಯನವರದ್ದು, ಮಾನ್ಯ ಕೊಂಡಯ್ಯನವರ ಪರವಾಗಿ ಮಾನ್ಯ ಆರ್. ವಿ. ವೆಂಕಟೇಶ್‌ರವರು ಕೇಳುತ್ತಾರೆ.

**ವೈದ್ಯ ಉಪಕರಣ ಖರೀದಿಯಲ್ಲಿ ಅಕ್ರಮ :**

**34; ಶ್ರೀ. ಕೆ. ಸಿ. ಕೊಂಡಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)**

**(ಅ)** ವೈದ್ಯ ಶಿಕ್ಷಣ ನಿರ್ದೇಶನಾಲಯದಲ್ಲಿ ವೈದ್ಯ ಉಪಕರಣ ಖರೀದಿಯಲ್ಲಿ ಅಕ್ರಮಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**(ಆ)** ಪ್ರಕರಣದ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು)

**(ಇ)** ವೈದ್ಯ ಶಿಕ್ಷಣ ನಿರ್ದೇಶನಾಲಯದ ವತಿಯಿಂದ 2008 ರಿಂದ ಇಲ್ಲಿಯವರೆಗೆ ಖರೀದಿ ಮಾಡಿದ ಉಪಕರಣಗಳು ಹಾಗೂ ಇತರೆ ಖರ್ಚು ವೆಚ್ಚಗಳವಾರು ವಿವರ ಒದಗಿಸುವುದು;

**ಎಸ್. ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು)**

**(ಅ)** ಹೌದು. ಅಧ್ಯಕ್ಷರು, ಕರ್ನಾಟಕ ಪ್ರೆಸ್ ಟ್ರಸ್ಟ್, ತುಮಕೂರು ಇವರು ಮಾನ್ಯ ಲೋಕಾಯುಕ್ತ ಕಛೇರಿಗೆ ಸಲ್ಲಿಸಿದ ದೂರಿನ ಮೇರೆಗೆ ಮಾನ್ಯ ಲೋಕಾಯುಕ್ತ ಕಛೇರಿಯಿಂದ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ದ 2008–09 ರಿಂದ 2010–11ರವರೆಗೆ ಉಪಕರಣಗಳ ಖರೀದಿಗೆ ಸಂಬಂಧಿಸಿದ ಕಡತಗಳನ್ನು ಸಲ್ಲಿಸಲು ಕೋರಿದ್ದರಿಂದ, ಸಂಬಂಧಪಟ್ಟ ಕಡತಗಳ ಜೆರಾಕ್ಸ್ ಪ್ರತಿಗಳನ್ನು ದಿನಾಂಕ 16.12.2011 ರಂದು ಮಾನ್ಯ ಲೋಕಾಯುಕ್ತ ಕಛೇರಿಗೆ ಸಲ್ಲಿಸಲಾಗಿದೆ.

**(ಆ)** ಈ ಬಗ್ಗೆ ಮಾನ್ಯ ಲೋಕಾಯುಕ್ತರವರ ವರದಿಯನ್ನು ನಿರೀಕ್ಷಿಸಲಾಗಿದೆ. ಸದರಿ ವರದಿ ಸ್ವೀಕೃತಗೊಂಡ ನಂತರ ಕ್ರಮ ಜರುಗಿಸಲಾಗುವುದು.

**(ಇ)** ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ವತಿಯಿಂದ 2008 ರಿಂದ ಇಲ್ಲಿಯವರೆವಿಗೆ ಖರೀದಿ ಮಾಡಿದ ಉಪಕರಣಗಳ ಹಾಗೂ ಅದಕ್ಕೆ ಸಂಬಂಧಪಟ್ಟಂತೆ ಮಾಡಿರುವ ವೆಚ್ಚಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

# CURRENT YEAR EXPENDITURE (EQUIPMENTS) – 2008-09

| Head of Account : 2210-01-110-2-36 (Plan) | | | Budget allocated :- Rs. 05.00 Crores. | | |
|---|---|---|---|---|---|
| **Sl No.** | **NAME OF THE EQUIPMENTS & File No.** | **NAMEOF THE FIRM** | **NAME OF THE INSTITUTION** | **QTY** | **TOTAL COST** |
| 1 | Repairs of Fujinon Video Double Channel Gastroscope EG 410 D with Videm Connector and Funjinon Video processor 400 series EVE Connector ಉಪಕರಣದ ಬಗ್ಗೆ. | M/s/ Eshwari Mediacal Specialities, Bangalore. | B&LCH, Bangalore. | | 444735 |
| 2 | Bidget releaised to Government Wenlock Hospital Mangalore – Details Available in Budget Section File No. BGT/ME/12/08-09 Dt 22-07-2008 | | Wenlock Hospital, Mangalore | | 4620000 |
| 3 | Ultra Sonic Cutting & coagulating device (Harmonic Scapel) SUX/ME/55/2008-09 | M/s Aditya Surgicals Company, Bangalore | District Hospital, Belgaum | 01No. | 2392000 |
| 4 | Operating Hystoscop SUX/ME/75/08-09 | M/s Lotous Medical Corporation Bangalore | | 01 No. | 133848 |

| | | | | | |
|---|---|---|---|---|---|
| 5 | C.T.G. Machines SUX/ME/56/08-09 | M/s Bangalore Medical Systems, Bangalore | | 02 Nos. | 258184 |
| 6 | Pulse Oxymeters with NIBP SUX/ME59/08-09 | M/s Bangalore Medical Systems, Bangalore, | | 10 Nos. | 678280 |
| 7 | Colour Doppler with TV probe SUX/ME/57/08-09 | M/s Foress Inc, Bangalore | | 01 NO. | 3720000 |
| 8 | Bipolar Underwater cautery Machine SUX/ME/53/2008-09 | M/s Prateek Traders, Kundapura | Government Wenlock Hospital, Mangalore | 01 No. | 377000 |
| 9 | Electrocautery with underwater cutting SUX/ME/47/2008-09 | M/s Prateek Traders, Kundapura | | 01 No. | 377000 |
| 10 | C-Arm Machine Systems SUX/ ME/70/08-09 | M/s Venus Surgicals, Bangalore | | 01 No. | 1093750 |
| 11 | Lase CO2 SUX/ME/69/08-09 | M/s Medicao Engine ering Co. Bangalore | | 01 No. | 1144000 |
| 12 | Automated Perimetr SUX/ME/ 70/08-09 | M/s Appaswamy Associates Chennai. | | 01 No. | 442000 |
| 13 | A & B Scan SUX/ME/69/08-09 | M/s Appaswamy Associates Chennai. | | 01 No. | 988000 |
| 14 | Otoaucostic emission Equipment SUX/ ME/ 68/08-09 | M/s Medlife Techno logies New Delhi | | 01 No. | 612480 |

| | | | | | |
|---|---|---|---|---|---|
| 15 | Evoked response audiometry SUX/ ME/67/08-09 | M/s Medlife Techno logies New Delhi | Government Wenlock Hospital, Mangalore | 01 No. | 520000 |
| 16 | Automated OT Hand Disinfactant SUX/ME/52/08-09 | Ms. Shivon India Bangalore | Government Wenlock Hospital, Mangalore | 07 No. | 1566390 |
| 17 | ENT Work Station SUX/ME/54/08-09 | Ms/ Save Meditech Sustems Pvt. Ltd. Bangalore | | 01 No. | 5947147 |
| 18 | Neuro Surgery Opertating Table SUX/ME/57/08-09 | M/s Champak Enterprises Pvt. Ltd. Bangalore | | 01 No. | 3293750 |
| 19 | Donor Couch SUX/ME/82/2008-09 | M/s Aditya Surgicals Company, Bangalore | Chigatere General Hospital, Davanagere | 03 Nos. | 436800 |
| 20 | Blood Storage refrigerator 300 Bags Capacity SUX/ME/83/2008-09 | M/s Aditya Surgicals Company, Bangalore | | 01 No. | 364000 |
| 21 | I.C.U. Ventilltor SUX/ME/77/2008-09 | Ms/ Erkadi Systems, Bangalore | | 02 Nos. | 1595360 |
| 22 | Cautery Machine Bipolar SUX/ME/79/2008-09 | Ms/ Prateek Traders, Kundapur | | 04 Nos. | 1508000 |
| 23 | Phaeco Emulsificition Unit SUX/ME/81/2008-09 | M/s Appasamy Associates, Chennai | | 01 No | 884000 |

| | | | | | |
|---|---|---|---|---|---|
| 24 | Auto Analyser SUX/ME/76/2008-09 | M/s Aditya Surgicals Company, Bangalore | | 01 No. | 1487200 |
| 25 | Multi Para Monitor with Higher end SUX/ME/86/08-09 | M/s Unique Medicaids, Bangalore | | 04 Nos. | 1023360 |
| 26 | CBC Machine SUX/ME/86/08-09 | M/s Unitron Biomedicals, Bangalore | | 01 No. | 395200 |
| 27 | Mobile X ray 100 mA High Freequency SUX/ME/115/08-09 | M/s Foress Inc. Bangalore | | 01 No. | 600000 |
| 28 | Digital X-ray 800 mA with IITV SUX/ME/113/08-09 | M/s Foress Inc. Bangalore | | 01 No | 4530000 |
| 29 | Ultra Sound Scanner SUX/ME/114/08-09 | M/s Foress Inc. Bangalore | | 02 Nos. | 1940000 |
| | **Grand Total Rs.** | | | | **43372484** |

## CURRENT YEAR EXPENDITURE (EQUIPMENTS) – 2009-10.

| 2010-11 Head of Account: 2210-01-110-2-36 (Plan) | | | Budget allocated :- Rs. 05.00 Crores. | | |
|---|---|---|---|---|---|
| **Sl No.** | **NAME OF THE EQUIPMENTS & File No.** | **NAMEOF THE INSTITUTION** | **NAME OF THE FIRM** | **QTY** | **TOTAL COST** |
| 1 | 6F Urethoscope with 4F Workinf Channel. | Wenlock Hospital, Mangalore, | M/s. Inor Orthopedics, Mumbai | 01 No. | 310814 |
| 2 | Bubble CPAP with Suitable Air Compressor | District Hospital, Belgaum | M/s Bangalore Medical Systems, Bangalore. | 01 No. | 260000 |
| 3 | Fracture table for Ortho | Government Lady Goshan Hospital, Mangalore | M/s Nithayananda Agencies, Mangalore | 01 No. | 486000 |
| 4 | Resectoscope set for Turp with Inner & outer Sheath (Rotatable double Stem) | Government Wenlock Hospital, Mangalore | M/s. Pika Medicals Bangalore | 1 No. | 183661 |
| 5 | Irrigation unit for Hysteroscopy | Government Lady Goshan Hospital, Mangalore | M/s. Pika Medicals Bangalore | 1 No. | 150800 |
| 6 | Larproscope | Government Lady Goshan Hospital, Mangalore | M/s. Pika Medicals Bangalore | 1 No. | 227214 |

| | | | | | |
|---|---|---|---|---|---|
| 7 | OBG O.T. Table | C.G.Hospital, Davangere | M/s Medico Engineer Co, Bangalore | 02 Nos. | 153920 |
| 8 | Automated Hand Disinfector | C. G. Hospital, Davangere | M/s Shivon India, Bangalore | 10 Nos. | 2128100 |
| 9 | Automated O.T. Disinfector | C. G. Hospital. Davangere. | M/s. Shivon India, Bangalore | 10 Nos. | 1971100 |
| 10 | Boyles apparatus | C. G. Hospital, Davangere | M/s. Medico Engineer Co, Bangalore | 02 Nos. | 465920 |
| 11 | Auto Perimeter | District Hospital, Belgaum | M/s. Appaswamy Associates, Chennai | 01 No. | 586040 |
| 12 | Yag Laser | District Hospital, Belgaum | M/s/ Appaswamy Associates, Chennai | 01 No. | 797940 |
| 13 | Auto Refractometer with Keratometer | District Hospital, Belgaum | M/s. Bio-Medix Optotechnik & Devices, Bangalore | 01 No. | 265800 |
| 14 | Pacho Emulsifer systems | District Hospital, Belgaum | M/s. Appaswamy Associates, Chennai | 01 No. | 875160 |
| 15 | Volumetric Infusion Pump | District Hospital, Belgaum | M/s. Genetec Medical Pvt. Ltd., Bangalore | 12 Nos. | 353787 |
| 16 | Refrigerated Centerfuge – (Floor Model) | District Hospital, Belgaum | M/s. Agile Life Science Technologies, Thane. | 01 No. | 3160630 |

| | | | | | |
|---|---|---|---|---|---|
| 17 | Automatic Blood Component Extractor | District Hospital, Belgaum | M/s. Aditya Surgicales, Bangalore | 01 No. | 2392000 |
| 18 | Automater O. T. Disinfector | District Hospital, Belgaum | M/s. Shivon India, Bangalore | 10 Nos. | 2111100 |
| 19 | Automated O. T. Handwasher | District Hospital, Belgaum | M/s. Shivon India, Bangalore | 10 Nos. | 2147800 |
| 20 | Bubble CPAP Machine | District Hospital, Belgaum | M/s/ Bangalore Medical Systems Pvt. Ltd., Bangalore | 02 Nos. | 382950 |
| 21 | Fundus Camera | Wenlock Hospital, Mangalore. | M/s. Cari Zeiss India Pvt. Ltd., Bangalore | 01 No. | 2562117 |
| 22 | Operating Micro Scope. | Wenlock Hospital, Mangalore. | M/s. Cari Zeiss India Pvt. Ltd., Bangalore | 01 No. | 1004433 |
| 23 | Fully Automated Bio-Chemistry Analyser, | Wenlock Hospital, Mangalore. | M/s. Aditya Surgicals, Bangalore | 01 No | 1612000 |
| 24 | Hytoscope. | Government Lady Goshan Hospital, Mangalore | M/s Pika Medicals Pvt. Ltd., Bangalore | 01 No. | 474674 |
| 25 | Multi Parameter Monitors. | Wenlock Hospital, Mangalore. | M/s. Pratek Traders, Kundapur | 02 Nos. | 615680 |

| | | | | | |
|---|---|---|---|---|---|
| 26 | Bubble CPAP | Wenlock Hospital, Mangalore | M/s. Bangalore Medical Systems, Bangalore | 02 Nos. | 377400 |
| 27 | Multi Parameter with Neonatal Probe | Wenlock Hospital, Mangalore | M/s Prateek Traders, Kundapur | 02 Nos. | 615680 |
| 28 | Haemo Dialysis with R. O. water Plant | C. G. Hospital, Davangere | M/s. Edvego Technologies. Bangalore | 02 Nos. - 01 No. R.O. Water System | 2292000 |
| 29 | Bipolar with under water Electric Cautery | C. G. Hospital, Davangere | M/s. Prateek traders, Kundapur | 02 Nos. | 754000 |
| 30 | Defibrilator | C. G. Hospital, Davangere | M/s. Prateek traders, Kundapur | 02 Nos. | 996002 |
| 31 | Suction Pump | C. G. Hospital, Davangere | M/s. MNE Technologies, Pvt. Ltd., Bangalore. | 02 Nos. | 872592 |
| 32 | Automated Blood Typing Machine ID Centrifuge | District Hospital, Gulbarga. | M/s. Aditya Surgicals Bangalore | 01 No. | 286000 |
| 33 | Automated Cell Washer | C. G. Hospital, Davangere | M/s. Aditya Surgicals, Bangalore | 01 No. | 676000 |

| | | | | | |
|---|---|---|---|---|---|
| 34 | Ceiling O. T. Lights. | Women's & Children Hospital, Davangere | M/s. Yesdi Bio-Med,Bangalore | 01 No. | 808800 |
| 35 | Blood Collection Monitor | District Hospital, Gulbarga | M/s. Aditya Surgicals, Bangalore | 01 No. | 130000 |
| 36 | Portable tube sealer with Battery Backup | District Hospital, Gulbarga | M/s. Aditya Surgicals, Bangalore | 01 No. | 156000 |
| 37 | Donor Couch | District Hospital, Gulbarga | M/s. Aditya Surgicals, Bangalore | 01 No. | 145600 |
| 38 | Automated Blood typing machine ID Centre Fuge | C.G. Hospital, Davangere | M/s. Aditya Surgicals, Bangalore | 01 No. | 286000 |
| 39 | Automated Haematology Analyser | District Hospital, Gulbarga, | M/s. AdityA Surgicals, Bangalore | 01 No. | 572000 |
| 40 | Electro Cautery | District Hospital, Gulbarga | M/s. Prateek traders, Kundapur. | 03 Nos. | 1131000 |
| 41 | Peadtric Ventolator | District Hospital, Gulbarga | M/s. Erkadi Systems. Bangalore | 02 Nos. | 1724320 |
| 42 | Multipara Monitor | District Hospital, Gulbarga | M/s. Prateek traders. Kundapur | 04 Nos. | 1006721 |
| 43 | Budget relece to Govt. Lady Goshen Hospital Mangalore please refer Budget Section File. | | | | 1500000 |
| | **Grand Total Rs.** | | | | **40009763** |

| Head of Account: 2210-05-105-1-98 (Plan) | | | | Sub Head-180 | |
|---|---|---|---|---|---|
| 1 | Anaesthesia Machine with Ventilator and Vapouriser | Lady Goschen Hospital, Mangalore | M/s. Prateek traders, Kundapur | 01 NO<br>- | 1868354 |
| 2 | Anaesthesia Machine with Ventilator and Vapouriser | Wenlock Hospital, Mangalore. | M/s. Prateek traders. Kundapur | -<br>02 Nos. | 4058700 |
| | Grand Total Rs. | | | | 5927054 |

2009–10ನೇ ಸಾಲಿನಲ್ಲಿ ಖರೀದಿಸಲಾಗಿರುವ ಉಪಕರಣವನ್ನು February 2010ರ ಅಂತ್ಯದ ವೇಳೆಗೆ ಸರ್ಕಾರವು ಈ ಲೆಕ್ಕ ಶೀರ್ಷಿಕೆಯಲ್ಲಿ ಬಾಕಿ ಉಳಿದಿದ ಹಣವನ್ನು ಖಜಾನೆಯಿಂದ ಸೆಳೆದುಕೊಂಡಿರುವುದರಿಂದ ಸಂಸ್ಥೆಯವರಿಗೆ ಹಣ ಸಂದಾಯವಾಗಿರುವುದಿಲ್ಲಾ. ಆದ್ದರಿಂದ ಸದರಿ ವೆಚ್ಚವನ್ನು ಉಲ್ಲೇಖ ಸರ್ಕಾರದ ಆದೇಶದ ಪ್ರಕಾರ 2010–11ನೇ ಸಾಲಿಗೆ ನವೀಕರಿಸಲಾಗಿದೆಯೆಂಬ ಆದೇಶವಿರುವುದರಿಂದ 2010–11ರಲ್ಲಿ ಲೆಕ್ಕ ಶೀರ್ಷಿಕೆ 2210–01–110–2–36 ಯೋಜನೆ ಅಡಿಯಲ್ಲಿ ಈ ಕೆಳಕಂಡ ಉಪಕರಣಗಳಿಗೆ ಹಣ ಸಂದಾಯ ಮಾಡಲಾಗಿದೆ.

**CURRENT YEAR EXPENDITURE (EQUIPMENTS) – 2010-11.**

Head of Account: 2210-01-110-2-36 (Plan)

Budget allocated :- Rs. 05.00 Crores.+ Additioal Budget Rs. 2.5 Crores = Total Rs. 7.5 Crores

| Sl No | NAME OF THE EQUIPMENTS | NAMEOF THE FIRM | NAME OF THE INSTITUTION | QTY | TOTAL COST (AMT in Rs.) |
|---|---|---|---|---|---|
| 1 | Hydralic O. T. Table | M/s. Medico Engineering Co, Bangalore | C. G. Hospital, Davangere. | 02 Nos. | 3601800 |
| 2 | Celling O. T. Lights | M/s. Ravi Industrial Suppliers, Bangalore | C. G. Hospital, Davangere | 04 Nos. | 674680 |
| 3 | Portable Tube Sealer (Battery Backup) | M/s. Aditya Surgicals, Bangalore | District Hospital Belgaum | 01 No. | 152250 |

| | | | | | |
|---|---|---|---|---|---|
| 4 | Blood Collection Monitor (Battery Backup) | M/s. Aditya Surgicals, Bangalore | | 01 NO. | 131250 |
| 5 | Blood Bank Refrige rator (300 bags) | M/s. Aditya Surgicals, Bangalore | | 01 No. | 355250 |
| 6 | Platelet agitator with incubator | M/s. Aditya Surgicals, Bangalore | | 01 No. | 291900 |
| 7 | Deep freezer- 40'C. | M/s. Raghavendra Surgicals, Mysore | | 01 No. | 236250 |
| 8 | Cryobath (plasma thawing bath) | M/s. Aditya Surgicals, Bangalore | | 01 No. | 116106 |
| 9 | Automated blood typing Machine | M/s. Aditya Surgicals, Bangalore | | 01 No. | 288750 |
| 10 | Automated O. T. Disinfector | M/s. Shivon India, Bangalore | | 10 Nos. | 2131500 |
| 11 | Automated O. T. Handwasher | M/s. Shivon India, Bangalore. | | 10 Nos. | 2438450 |
| 12 | Automated Floor Scrubber Driers | M/s. Shivon India, Bangalore. | | 10 Nos. | 1060100 |
| 13 | Fully automated Bio-Chemistry analyser | M/s. Raghavendra Surgicals, Mysore | | 01 No. | 1837500 |

| | | | | | |
|---|---|---|---|---|---|
| 14 | Blood Gas Analyser | M/s. Aditya Surgicals, Bangalore | | 02 Nos. | 1741635 |
| 15 | Ent workstation Fluctuation amount | M/s. Save meditech Pvt. Ltd. Bangalore | | 01 No. | 269124 |
| 16 | Beam Splitter & Sterio Co-observation system. | M/s. Carl Zesis (India) Bangalore | Govt. Wenlock Hospital, Mangalore | 01 No. | 672000 |
| 17 | Phaco machine. | M/s. Carl Zesis (India) Bangalore | Govt. Wenlock Hospital, Mangalore | 01 No. | 1181250 |
| 18 | Transcutaneous Monitor | M/s. Aditya Surgicals, Bangalore | C. G. Hospital, Davangere | 01No. | 2288000 |
| 19 | Automated O. T. Hand Disinfector | M/s. Shivon India, Bangalore | District Hospital, Gulbarga | 04 Nos. | 984800 |
| 20 | Automated O. T. Disinfector | M/s. Shivon India, Bangalore | District Hospital, Gulbarga | 04 Nos. | 873600 |
| 21 | Pulse Oxymeter with NIBP | M/s. Unique Medicaids, Bangalore | Womens & Children Hospital, Davanagere | 2 Nos. | 162000 |
| 22 | Automated Haematological analyser, | M/s. Aditya Surgical, Bangalore | Govt. Lady Goschen Hospital, Mangalore. | 1 No. | 577500 |
| 23 | Blood Bank Refrigerator (Blood storage cabinet 300 | M/s. Aditya Surgical, Bangalore | Govt. Lady Goschen Hospital, Mangalore | 01 No. | 262500 |

| | | | | | |
|---|---|---|---|---|---|
| | bags) | | | | |
| 24 | Syring Infusion Pump | M/s. Unique Medicaids, Bangalore | Govt. Lady Goschen Hospital, Mangalore, | 12 Nos. | 378000 |
| 25 | Vaccum Extractor | M/s. MNE Technologie, Bangalore | District Hospital, Gulbarga. | 1 No. | 440491 |
| 26 | Phaco Emulifisication System with Accessories | M/s. Carl Zeises India Pvt. Ltd., Bangalore | District Hospital, Gulbarga, | 01 No. | 1706250 |
| 27 | Led Optical Illuminator single film | M/s. Foress Healthcare LLP, Bangalore | a. Govt. Wenlock Hospital, Mangalore - 06<br>b. Govt Lady Goschen Hospital, Mangalore-03<br>c. C.G. Hospital Davangere-03<br>d. Dist. Hospital Gulbarga-05 | 17 Nos. | 1034569 |
| 28 | Led Optical Illunimator Doubble Film | M/s. Forses Healthcare LLP, Bangalore | a. C.G. Hospital, Davangere-03<br>b. Dist. Hospital, Gulbarga-05 | 08 Nos. | 646408 |
| 29 | Led Optical Illuminator | M/s. Forses Healthcare LLP, | a. Govt. Wenlock | 10 Nos. | 1197000 |

| | | | | | |
|---|---|---|---|---|---|
| | three Films | Bangalore | Hospital, Mangalore-02<br>b. C. G. Hospital Davangere-03<br>c. Dist Hospital, Gulbarga-05 | | |
| 30 | Anaesthesia work station Openinf of L.C | M/s. Save Meditecatech Pvt. Ltd., Bangalore | C. G. Hospital, Davangere | 02 Nos. | 4349546 |
| 31 | Nenonatel Ventilator (Conventional) Opening of L. C. | M/s. Save Medotecatech Pvt. Ltd., Bangalore | Govt. Lady Goschen Hospital, Mangalore. | 01 No. | 1477577 |
| 32 | Nenonatal Ventilator Opening of L.C. | M/s. Save Meditecatech Pvt. Ltd., Bangalore | Govt. Wenlock Hospital, Bangalore | 01 No. | 1477577 |
| 33 | Anesthesia work station with accessories. Openinf of L. C. | M/s.Save Meditecatech. Pvt. Ltd., Bangalore. | Women's & Children Hospital Davangere | 01 No. | 2174773 |
| 34 | Multipara monitor | M/s Bangalore medical Systems, Bangalore | C. G. Hospital Davangere | 03 Nos. | 641655 |
| 35 | Syring Pump | M/s.Gautham healh care Pvt. Ltd., Bangalore | Govt. Wenlock Hospital, Mangalore | 05 Nos. | 416830 |
| 36 | Operaitng microscope with CCTV attachmenet & Tv. | M/s. Carl Zesis (India) Bangalore | District Hospital, Gulbarga | 01 No. | 2892750 |

| | | | | | |
|---|---|---|---|---|---|
| 37 | Ultra sound machine with Colour Doppler | M/s. Foress Health care LLP, Bangalore | Govt. Lady Goschen Hospital Mangalore | 01 No. | 2227680 |
| 38 | Echocardiagram | M/s. Forses Health care LLP, Bangalore | C. G. Hospital, Davanagere | 01 No. | 2275776 |
| 39 | Ultra Sound machine | M/s. Foress Health care LLP, Bangalore | Womens & Children Hospital, Davanagere | 01 No. | 2227680 |
| 40 | Flexible nasopharyngo broncoscope (Electric set with accessories with 2 monitors.) | M/s. Piha Medicals, Bangalore. | Govt. Wenlock Hospital Mangalore. | 01 No. | 1197536 |
| 41 | Pulse Oxymeter with NIBP | M/s. Rahul Pharma, Bangalore. | Govt. Wenlock Hospital, Mangalore | 05 Nos. | 410405 |
| 42 | Defibrilator | | Women's & Children Hospital Davanagere | 01 No. | 328844 |
| 43 | ANAESTHESIA MACHINE WITH VENTILATOR Opening of L. C. | M/s. SAVE MEDICATECH PVT. LTD.,BANGALORE | Govt. Wenlock Hospital, Mangalore-03, Nos & Govt. Lady Goschen Hospital, Mangalore-01, No Total=4 Nos. | 04 Nos. | 10860213 |
| 44 | ICU VENTILATOR Openinf of L. C. | | Govt. Lady Goschen Hospital, Mangalore. | 02 Nos. | 3196714 |

| | | | | | |
|---|---|---|---|---|---|
| 45 | OPTICAL COHERECE TOMOGRAPHY Opening of L.C. | M/s. Carl Zesis India Pvt. Ltd., Bangalore | Govt. Wenlock Hospital, Mangalore | 01 No. | 4462500 |
| 46 | SURGICAL OPERATING MICROSCOPE Opening L.C. | | C. G. Hospital, Davangere | 01 No. | 2845500 |
| 47 | OPTHLMIC OPERATING MICROSCOPE Openinf of L.C | | Distrcit Hospital, Gulbarga | 02 Nos. | 3068100 |
| 48 | DEFIBRILATOR Opening of L. C. | M/s. Bangalore medical Systems, Bangalore | C. G. Hospital, Davangere | 01 No. | 283143 |
| 49 | PULSE OXYMETER Opening of L. C. | | | 05 Nos. | 249535 |
| | Grand Total Rs. | | | | 7,47,93,492 |
| (Rs. Seven Crore forty seven lakhs ninety three thousand four hundred & ninety two only) | | | | | |

| Head of Account : 2210-01-110-2-36 (Plan) | Budget allocated :- Rs. 09.00 Crores. | | |
|---|---|---|---|
| **FOR THE YEAR 2011-12** | | | |
| **Sl. No.** | **Particulars** | **Expenditure** | |
| | | **QTY.** | **TOTAL COST** |
| **C.G. Hospital, Davanagere** | | | |
| 1 | Blood gas analyser | 01 No. | 870817 |
| 2 | Light Source for Endoscopy Nasal Endoscopy 3 chip camera HD | 01 No. | 2222761 |
| 3 | Haemodialysis machine | 02 Nos. | 1890000 |
| **Govt. Wenlock Hospital, Mangalore,** | | | |
| 4 | Multipara monitor with ETCO2 | 01 Nos. | 268900 |
| 5 | Multipara monitor with NIBP | 01 No. | 482734 |
| **Govt. Lady goshon Hospital, Mangalore.** | | | |
| 3 | Vaccum Extractor | 01 No. | 440491 |
| 4 | Multipara monitor with ETCO2 | 04 Nos. | 806700 |
| 5 | Multipara monitor with NIBP | 04 Nos. | 1930936 |
| 6 | Pulse Oxymeter with NIBP | 08 Nos. | 772800 |
| 7 | E. T. O. Sterilyzer | 01 No | 496968 |
| 8 | Sysmex reagents for Automated Heamatological analyser, Budget released. | 1 set. | 295176 |
| | | | **10478283** |

**ಶ್ರೀ ಆರ್. ವಿ. ವೆಂಕಟೇಶ್ (ಕೊಂಡಯ್ಯನವರ ಪರವಾಗಿ) :** ಮಾನ್ಯ ಸಭಾಪತಿಗಳೆ, ವೈದ್ಯ ಶಿಕ್ಷಣ ನಿರ್ದೇಶನಾಲಯದಲ್ಲಿ ವೈದ್ಯಕೀಯ ಉಪಕರಣ ಖರೀದಿಯಲ್ಲಿ ಅಕ್ರಮಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವ ಪ್ರಶ್ನೆಗೆ, ಹೌದು ಎನ್ನುವ ಉತ್ತರ ಕೊಟ್ಟಿದ್ದಾರೆ. ಈ ವಿಷಯ ಸರ್ಕಾರಕ್ಕೆ, ಸಚಿವಾಲಯಕ್ಕೆ ಮತ್ತು ಇಲಾಖೆಗೆ ಚೆನ್ನಾಗಿ ಗೊತ್ತಿರುವಂಥದ್ದೇ ಆಗಿದೆ. ಆದರೆ, ಯಾವತ್ತು ಕೂಡ ಸರ್ಕಾರವಾಗಲಿ, ಇಲಾಖೆಯ ಅಧಿಕಾರಿಗಳಾಗಲಿ ಇದನ್ನು ಪತ್ತೆ ಹಚ್ಚಲಿಲ್ಲ. ಅಧ್ಯಕ್ಷರು, ಕರ್ನಾಟಕ ಪ್ರೆಸ್ ಟ್ರಸ್ಟ್, ತುಮಕೂರು ಇವರು ಮಾನ್ಯ ಲೋಕಾಯುಕ್ತರಿಗೆ ದೂರು ಕೊಟ್ಟಿರುವುದರ ಹಿನ್ನೆಲೆಯಲ್ಲಿ ಈ ವಿಚಾರ ಇಲಾಖೆಯ ಗಮನಕ್ಕೆ ಬಂದಿದೆ ಎಂದು ಉತ್ತರ ಕೊಟ್ಟಿದ್ದಾರೆ. ಕಳೆದ ವರ್ಷ ಮಾನ್ಯ ಸಚಿವರು ಅನೇಕ ಆಸ್ಪತ್ರೆಗಳಿಗೆ ಅನಿರೀಕ್ಷಿತ ಭೇಟಿ ಕೊಟ್ಟಾಗ, ಈ ವಿಷಯ ಗಮನಕ್ಕೆ ಬಂದಿದೆ, ಇದಕ್ಕೆ ಒಂದು ಸಮಿತಿ ರಚಿಸಿದ್ದೇವೆ, ಈಗಾಗಲೇ ಪ್ರಾಥಮಿಕ ವರದಿ ಬಂದಿದೆ, ಅಂತಿಮ ವರದಿ ಬರಬೇಕಿದೆ ಎನ್ನುವ ಸಮಜಾಯಿಷಿ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸಭಾಪತಿಗಳೇ, ಇದೊಂದು ದೊಡ್ಡ ದಂಧೆಯಾಗಿದೆ. ಹೊರ ರಾಜ್ಯದ ಹಲವಾರು ಏಜೆನ್ಸಿಗಳೆನಿವೆ ಅವರು ಮತ್ತು ಈ ಇಲಾಖೆಯ ಕೆಲವು ಅಧಿಕಾರಿಗಳು ಶಾಮೀಲಾಗಿ ಕಳಪೆ ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡುವ ಜಾಲವನ್ನು ಹುಟ್ಟು ಹಾಕಿದ್ದಾರೆ. ಮುಖ್ಯವಾಗಿ Save Meditech Systems Private Limited ಎನ್ನುವ ಸಂಸ್ಥೆ ಈ ಜಾಲದ kingpin ಆಗಿದೆ. ಮಾನ್ಯ ಸಭಾಪತಿಗಳೆ, ನಾನು ಕೆಲವು ಉದಾಹರಣೆ ಕೊಡಬಯಸುತ್ತೇನೆ. ಮಾನಿಟರ್‌ಗಳನ್ನು ಸರಬರಾಜು ಮಾಡುವಂತಹ ನೂರಾರು ಏಜೆನ್ಸಿಗಳಿವೆ. ಇದರಲ್ಲಿ ನಮ್ಮ ರಾಜ್ಯದವರೂ ಇದ್ದಾರೆ ಮತ್ತು ಉತ್ತಮ ಗುಣಮಟ್ಟದ ಸಲಕರಣೆಗಳನ್ನು ಸರಬರಾಜು ಮಾಡುವಂತಹ ಏಜೆನ್ಸಿಗಳೂ ಕೂಡ ಇವೆ. ಅದರ ವಿವರಗಳನ್ನು ಅನುಬಂಧದಲ್ಲಿ ಕೊಟ್ಟಿದ್ದಾರೆ. ಅವರು ಒಂದು ಮಾನಿಟರ್‌ಗೆ 2 ಲಕ್ಷದ 75 ಸಾವಿರ ರೂಪಾಯಿಗಳೆಂದು ಕೋಟ್ ಮಾಡಿದ್ದಾರೆ. ಆದರೆ Save Meditech Systems Private Limited ನವರು 8 ಲಕ್ಷ 25 ಸಾವಿರ ರೂಪಾಯಿಗಳೆಂದು

ಕೋಟ್ ಮಾಡಿದ್ದಾರೆ. ಅಂದರೆ ಮೂರುಪಟ್ಟು ದುಬಾರಿ. ಆದರೂ ಅವರಿಗೆ preference ಕೊಟ್ಟಿದ್ದಾರೆ. ಇನ್ನೊಂದು, Anesthesia Equipments. ಬೇರೆ ಏಜೆನ್ಸಿಗಳು ಗುಣಮಟ್ಟದ ಉಪಕರಣವನ್ನು ಸುಮಾರು 9 ಲಕ್ಷ ರೂಪಾಯಿಗಳಿಗೆ ಸರಬರಾಜು ಮಾಡುತ್ತೇವೆ ಎಂದು ಕೊಟ್ಟಿದ್ದಾರೆ. ಆದರೆ ಅದೇ ಉಪಕರಣವನ್ನು Save Meditech Systems Private Limited ನವರು 18 ಲಕ್ಷ ರೂಪಾಯಿಗಳೆಂದು ಕೋಟ್ ಮಾಡಿದ್ದಾರೆ. ಇದೆಲ್ಲ ಗೊತ್ತಿದ್ದರೂ ಕೂಡ ಬಹುತೇಕ ಆರ್ಡರ್‌ಗಳು ಅವರಿಗೇ ಹೋಗುತ್ತವೆ. ಇದಕ್ಕೆ ಕಾರಣವೇನು?

**ಶ್ರೀ ಎಸ್. ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು):** ಮಾನ್ಯ ಸಭಾಪತಿಗಳೇ, ಈ ವಿಚಾರ ಹಿಂದಿನ ಅಧಿವೇಶನದ ಸಮಯದಲ್ಲೂ ಬಂದಿತ್ತು. ಆಗ ಇದಕ್ಕೆ ಸಂಬಂಧಪಟ್ಟ ಹಾಗೆ, suo-moto ನಮ್ಮಲ್ಲಿ ಏನೇನು ಸಲಕರಣೆಗಳು ಬಂದಿತ್ತು ಎನ್ನುವುದನ್ನು ತಿಳಿದುಕೊಳ್ಳಲು ನಾವು ತನಿಖೆಯನ್ನು ಮಾಡಿದೆವು. ಇದರ ಮಧ್ಯೆ 5.9.2011ರಲ್ಲಿ ಶ್ರೀ ರಾಮಣ್ಣ, ಅಧ್ಯಕ್ಷರು, ಕರ್ನಾಟಕ ಪ್ರೆಸ್ ಟ್ರಸ್ಟ್, ತುಮಕೂರು ಇವರು ಲೋಕಾಯುಕ್ತರಿಗೆ ಒಂದು ಪತ್ರ ಬರೆದಿದ್ದರು.

ಅದರಲ್ಲಿ ಅವರು ದೂರಿನಲ್ಲಿ ಹೇಳಿರುವ ರೀತಿಯಲ್ಲಿ ಹಿಂದಿನ ಡೈರಕ್ಟರ್ ಆಫ್ ಮೆಡಿಕಲ್ ಎಜುಕೇಷನ್, ಡಾ: ಅರುಣಾ ಮತ್ತು ಡಾ: ಎಸ್. ಆರ್. ಪ್ರಸಾದ್, ಇನ್‌ಚಾರ್ಜ ಡೈರಕ್ಟರ್ ಹಾಸನ, ಇವರಿಬ್ಬರ ಮೇಲೆ ಒಂದು ದೂರನ್ನು ಕೊಟ್ಟರು. ಅದಕ್ಕೆ ಸಂಬಂಧಪಟ್ಟಂಥ ಈಗಾಗಲೇ ನಾವು ಎನ್‌ಕ್ವೈರಿ ಮಾಡಿದಂತಹ ಎಲ್ಲಾ ದಾಖಲೆಗಳನ್ನು ಲೋಕಾಯುಕ್ತರಿಗೆ ದಿನಾಂಕ: 24–10–2011ರಲ್ಲಿ ಅವರ ಪತ್ರ ಬಂದ ತಕ್ಷಣವೇ 2008–2009, 2009–2010, 2010–2011 ನೇ ಸಾಲಿನ ಎಲ್ಲಾ ದಾಖಲೆಗಳನ್ನು ಕೂಡ ಅವರಿಗೆ ಒದಗಿಸುವಂತಹ ಕೆಲಸ ಮಾಡಿದ್ದೇವೆ. ಅದರಲ್ಲಿ 2008–2009ನೇ ಸಾಲಿನಲ್ಲಿ 433 ಲಕ್ಷ, 2009–2010ನೇ ಸಾಲಿನಲ್ಲಿ 592 ಲಕ್ಷ, 2010–11ನೇ ಸಾಲಿನಲ್ಲಿ 747 ಲಕ್ಷ ರೂಪಾಯಿಗಳು ಖರೀದಿ ಮಾಡಿದಂತಹ ಉಪಕರಣಗಳು ಮತ್ತು

ಅದಕ್ಕೆ ಸಂಬಂಧಪಟ್ಟಂಥ ಎಲ್ಲವನ್ನು ಒದಗಿಸುವಂತಹ ಕೆಲಸವನ್ನು ಮಾಡಿದ್ದೇವೆ. ಇದಾದ ತಕ್ಷಣವೇ ಹಿಂದಿನ ಸಾಲಿನಿಂದ ನಾವು ಆ ಸಿಸ್ಟಮ್‌ನ್ನು ಬದಲಾಯಿಸಿ e-procurement ಗೆ ಆದೇಶವನ್ನು ಕೊಟ್ಟು ಅದರ ಪ್ರಕಾರದಲ್ಲಿ ತೆಗೆದುಕೊಳ್ಳುವಂತಹ ಕೆಲಸ ಆಗುತ್ತಿದೆ. ಇದರ ಜೊತೆಯಲ್ಲೇ ಮತ್ತೊಂದು ಮುಖ್ಯವಾದ ಅಂಶವೇನೆಂದರೆ, e-procurement ಜೊತೆಯಲ್ಲೇ ಈ ಗ್ಲೋಬಲ್ ಟೆಂಡರ್‌ನ್ನು ಕರೆದು contract ಅನ್ನು ರಾಜ್ಯ ಮಟ್ಟದಲ್ಲಿ ಕಂಪನಿಯಿಂದಲೇ invite ಮಾಡುವಂತಹ ಕೆಲಸವನ್ನು ಈಗ ಮಾಡಿದ್ದೇವೆ. ಕಳೆದ ಸಾಲಿನಿಂದ ಅದು ಆಗುತ್ತಿದೆ. ಆದರೆ, ಇದಕ್ಕೆ ಸಂಬಂಧಪಟ್ಟಂಥ ಎಲ್ಲಾ ವರದಿಯನ್ನು ಲೋಕಾಯುಕ್ತದ ಮುಂದೆ ಕೊಟ್ಟಿದ್ದೇವೆ ಮತ್ತು ಲೋಕಾಯುಕ್ತದಿಂದ ವರದಿ ಬಂದ ತಕ್ಷಣವೇ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು :** ಧನ್ಯವಾದಗಳು.

**ಶ್ರೀ ಆರ್. ವಿ. ವೆಂಕಟೇಶ್ :** ಮಾನ್ಯ ಸಭಾಪತಿಯವರೇ, ನಾನು ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತೇನೆ.

**ಸಭಾಪತಿಯವರು :** ಈಗಾಗಲೇ ಸಮಯವಾಗಿದೆ. ಇನ್ನೂ ಮೂರು ಪ್ರಶ್ನೆಗಳಿವೆ.

**ಶ್ರೀ ಆರ್. ವಿ. ವೆಂಕಟೇಶ್ :** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎಲ್ಲಾ ಪ್ರಕ್ರಿಯೆಗಳನ್ನು ಹೇಳಿದರು. ಇವತ್ತು ಏಜೆನ್ಸಿ ಬದಲು ಸರ್ಕಾರವೇ ನೇರವಾಗಿ e-procurement ಕಡೆಯಿಂದ ಎಕೆ ಮಾಡಬಾರದು ಎಂಬುದು ನನ್ನ ಪ್ರಶ್ನೆ?

**ಶ್ರೀ ಎಸ್. ಎ. ರಾಮದಾಸ್ :** ಈ ಸಾಲಿನಲ್ಲಿ ನಾವು ಅದೇ ಕೆಲಸವನ್ನು ಮಾಡಿದ್ದೇವೆ. ಮಧ್ಯದಲ್ಲಿ ಯಾವುದೇ ಏಜೆನ್ಸಿ ಇಲ್ಲ. ನೇರವಾಗಿ ಕಂಪನಿಯಿಂದಲೇ, e-procurement ನವರೇ participate ಮಾಡುವುದಕ್ಕೆ ಕ್ರಮ ಕೈಗೊಂಡಿದ್ದೇವೆ.

**ನ್ಯಾಯ ಬೆಲೆ ಅಂಗಡಿಗಳು ಹಾಗೂ ಪಡಿತರ ಕಮೀಷನ್ ಬಗ್ಗೆ :**

**91; ಶ್ರೀ ಸಿದ್ಧರಾಜು (ವಿಧಾನಸಭೆಯಿಂದ ಚುನಾಯಿತರಾದವರು)**

**(ಅ)** ರಾಜ್ಯದಲ್ಲಿ ಎಷ್ಟು ನ್ಯಾಯಬೆಲೆ ಅಂಡಿಗಳು ಇವೆ;

**(ಆ)** ಪ್ರತಿ ನ್ಯಾಯಬೆಲೆ ಅಂಗಡಿಗೆ ಮಂಜೂರು ಮಾಡುವ ಸರಾಸರಿ ಪಡಿತರ ಚೀಟಿಗಳ ಸಂಖ್ಯೆ ಎಷ್ಟು;

**(ಇ)** ನ್ಯಾಯಬೆಲೆ ಅಂಗಡಿಗಳಲ್ಲಿ ಮಾರಾಟವಾಗುವ ಪಡಿತರ ಪದಾರ್ಥ ಗಳಿಗೆ ಎಷ್ಟು ಕಮೀಷನ್ ನೀಡಲಾಗುತ್ತಿದೆ? (ಪದಾರ್ಥವಾರು ವಿವರ ನೀಡಲಾಗುವುದು)

**ಶೋಬಾ ಕರಂದ್ಲಾಜೆ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)**

**(ಅ)** ಪ್ರಸ್ತುತ, ರಾಜ್ಯದಲ್ಲಿ 20,459 ನ್ಯಾಯಬೆಲೆ ಅಂಗಡಿಗಳು ಚಾಲ್ತಿಯಲ್ಲಿ ಇರುತ್ತವೆ.

**(ಆ)** ಕರ್ನಾಟಕ ಅಗತ್ಯ ವಸ್ತುಗಳ (ಸಾ.ವಿ.ವ). ನಿಯಂತ್ರಣ ಆದೇಶ 1992ರ ಕಂಡಿಕೆ 11 ರಂತೆ ಗ್ರಾಮಾಂತರ ಪ್ರದೇಶದಲ್ಲಿ ಪ್ರತಿ ನ್ಯಾಯಬೆಲೆ ಅಂಗಡಿಗೆ ಕನಿಷ್ಠ 300 ಹಾಗೂ ನಗರ ಪ್ರದೇಶದಲ್ಲಿ 500 ಪಡಿತರ ಚೀಟಿಗಳನ್ನು ಜೋಡಿಸಲಾಗುತ್ತದೆ.

**(ಇ)** ನ್ಯಾಯ ಬೆಲೆ ಅಂಗಡಿಯಲ್ಲಿ ಮಾರಾಟವಾಗುವ ಪಡಿತರ ಪದಾರ್ಥ ಗಳಿಗೆ ಸರ್ಕಾರವು ಪಡಿತರ ಪದಾರ್ಥಗಳಿಗೆ ಸರ್ಕಾರವು ನೀಡುತ್ತಿರುವ ಕಮಿಷನ್ ದರದ (ಚಿಲ್ಲರೆ ಲಾಭಾಂಶ) ವಿವರ ಕೆಳಕಂಡಂತಿದೆ:

**(ಪ್ರತಿ ಕ್ವಿಂಟಾಲ್‌ಗೆ)**

| **ಪಡಿತರ ವಸ್ತು** | **ಕಮಿಷನ್ ದರ (ರೂ.ಗಳಲ್ಲಿ)** |
| --- | --- |
| ಅಕ್ಕಿ | 29.00 |
| ಗೋದಿ | 25.00 |
| ಸಕ್ಕರೆ | 13.37 |
| ಸೀಮೆ ಎಣ್ಣೆ (ಪ್ರತಿ ಕೆ. ಎಲ್. ಗೆ) | 300.00 |

**ಶ್ರೀ ಸಿದ್ಧರಾಜು :** ಮಾನ್ಯ ಸಭಾಪತಿಯವರೇ, ಅಕ್ಕಿ–29 ರೂಪಾಯಿ, ಗೋದಿ–25 ರೂಪಾಯಿ, ಸಕ್ಕರೆ–13.37 ರೂಪಾಯಿ, ಸೀಮೆಎಣ್ಣೆ (ಪ್ರತಿ ಕೆ.ಎಲ್.ಗೆ) – 300 ರೂಪಾಯಿ ಎಂದು ಉತ್ತರದಲ್ಲಿ ಹೇಳಿದ್ದಾರೆ. ಈ ಕಮೀಷನ್ ನೀಡುವಂತಹ ಹಣ ಅತ್ಯಂತ ಹಿಂದಿನದು ಎಂದು ನಾನಾದರೂ ಭಾವಿಸುತ್ತೇನೆ. ವಿಶೇಷವಾಗಿ ಈ ರೀತಿ ಕಡಿಮೆ ಹಣವನ್ನು ಕೊಡುವುದರಿಂದ ನ್ಯಾಯಬೆಲೆಯ ಅಂಗಡಿಯವರು ಅಡ್ಡದಾರಿಗೆ ಇಳಿಯುತ್ತಿರುವಂಥದ್ದನ್ನು ನಾವು ಕಾಣುತ್ತಿದ್ದೇವೆ. ಇವತ್ತು ಕಾಳಸಂತೆಯಲ್ಲಿ ಅಗತ್ಯ ವಸ್ತುಗಳ ಮಾರಾಟ ವಾಗುತ್ತಿದೆ. ತೂಕ ಮತ್ತು ಅಳತೆಯಲ್ಲಿ ಮೋಸವಾಗುತ್ತಿದೆ. ಜನ ಸಾಮಾನ್ಯರಿಗೆ ಕಡಿಮೆ ದರದಲ್ಲಿ ಅಗತ್ಯ ವಸ್ತುಗಳನ್ನು ಪೂರೈಸಬೇಕೆನ್ನುವ ಸರ್ಕಾರದ ಮೂಲ ಉದ್ದೇಶವನ್ನೇ ಬುಡಮೇಲು ಮಾಡುವಂತಹ ಒಂದು ಸಂಚಕಾರವನ್ನು ನಾವು ಇವತ್ತು ಕಾಣುತ್ತಿದ್ದೇವೆ. ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಈಗೇನು ಕಮೀಷನ್ ದರವನ್ನು ನೀಡುತ್ತಿದ್ದಾರೆ ಅದನ್ನು ಹೆಚ್ಚು ಮಾಡುವುದರ ಮೂಲಕ ಈ ರೀತಿ ಕೆಲವು ಅಡ್ಡದಾರಿಯ ಕ್ರಮಗಳನ್ನು ತಡೆಗಟ್ಟಬಹುದೇ? ಆ ನಿಟ್ಟಿನಲ್ಲಿ ಮಾನ್ಯ ಸಚಿವರು ಗಂಭೀರವಾದ ಚಿಂತನೆಯನ್ನು ಮಾಡಬೇಕೆಂದು ಮನವಿ ಮಾಡುತ್ತೇನೆ.

**ಕುಮಾರಿ ಶೋಭಾ ಕರಂದ್ಲಾಜೆ :** ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಜುರವರು, ಇವತ್ತು ಕಾಳಸಂತೆಯಲ್ಲಿ ಅಕ್ಕಿ ಅಥವಾ ಗೋದಿ

ಮಾರಾಟವಾಗುತ್ತಿದೆ ಎನ್ನುವ ಮಾತನ್ನು ಹೇಳಿದರು. ಸ್ವಲ್ಪ ಭಾಗ ಸತ್ಯವಾದರೂ ಅದು ಪೂರ್ಣ ಸತ್ಯವಲ್ಲ. ಇವತ್ತು ರಾಜ್ಯದಲ್ಲಿರುವಂತಹ ರೇಷನ್ ಕಾರ್ಡ್‌ಗಳು ಅತ್ಯಂತ ದೊಡ್ಡ ಪ್ರಮಾಣದಲ್ಲಿರುವಂಥದ್ದು, ಯಾರು ಉತ್ತರ ಕರ್ನಾಟಕ ಭಾಗದಲ್ಲಿ ಅಥವಾ ದಕ್ಷಿಣ ಭಾಗದಲ್ಲಿರದ್ದಾರೆ ಅವರೆಲ್ಲರೂ ಮನೆಗಳಲ್ಲಿ ಅಕ್ಕಿಯನ್ನು ಎಲ್ಲಾ ಸಂದರ್ಭಗಳಲ್ಲೂ ಉಪಯೋಗ ಮಾಡುವುದಿಲ್ಲ ಎಂಬುದು ನಮಗೆಲ್ಲಾ ಗೊತ್ತಿದೆ. ಉತ್ತರ ಕರ್ನಾಟಕದಲ್ಲಿ ಜೋಳ ಉಪಯೋಗಿಸುತ್ತಾರೆ. ದಕ್ಷಿಣ ಕರ್ನಾಟಕದಲ್ಲಿ ರಾಗಿ ಉಪಯೋಗಿಸು ತ್ತಾರೆ. ಆದರೆ, ಇಷ್ಟೊಂದು ದೊಡ್ಡ ಪ್ರಮಾಣದ ಅಕ್ಕಿಯನ್ನು ನಾವು ಕೊಟ್ಟಂಥ ಸಂದರ್ಭದಲ್ಲಿ, ಕಳೆದು ಅಧಿವೇಶನದಲ್ಲೂ ನಾನು ಹೇಳಿದ್ದೆ. ಒಂದು ಮನೆಯಲ್ಲಿ 8–9–10–15 ಕಾರ್ಡ್‌ಗಳನ್ನು ಇಟ್ಟುಕೊಂಡಿದ್ದಾರೆ. ಹಾಗೆಯೇ ಕೆಲವು ಅಂಗಡಿಗಳು 200–300 ಕಾರ್ಡ್‌ಗಳನ್ನು ಅವರೇ ಇಟ್ಟುಕೊಂಡು ಈ ರೀತಿ ರೇಷನ್‌ನಲ್ಲಿ ಬರುವಂತಹ ಅಕ್ಕಿ ಮತ್ತು ಗೋದಿಯನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿಕೊಳ್ಳುವಂಥದ್ದು ನಡೆಯುತ್ತಿದೆ. ಇದಕ್ಕಾಗಿ ನಾವು ಒಂದು ಹೊಸ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದೇವೆ. ರೇಷನ್ ಕಾರ್ಡ್‌ಗಳನ್ನು ಮನೆಯ ವಿದ್ಯುತ್ ಬಿಲ್‌ಗೆ ಜೋಡಿಸುವಂಥದ್ದು, ಗ್ರಾಮೀಣ ಪ್ರದೇಶದಲ್ಲಿ ಮನೆ ತೆರಿಗೆಗೆ ಜೋಡಿಸುವಂತಹ ಕೆಲಸವನ್ನು ಮಾಡುತ್ತಿದ್ದೇವೆ ಎನ್ನುವುದನ್ನು ಸದನದ ಗಮನಕ್ಕೆ ಮತ್ತು ಶಾಸಕರ ಗಮನಕ್ಕೂ ಕೂಡ ತಂದಿದೆ. ಈ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಹಾಗೆಯೇ ಮಾನ್ಯ ಸದಸ್ಯರು ಹೇಳಿದಂತೆ ಕಾಳಸಂತೆಯಲ್ಲಿ ಮಾರಾಟವಾಗುವುದನ್ನು ತಪ್ಪಿಸುವುದಕ್ಕಾಗಿ ನಾವು ಹಲವಾರು ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ. ಈ ಒಂದು ಕಮಿಷನ್‌ನನ್ನು ಹೆಚ್ಚು ಮಾಡ ಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಾವು ಆರ್ಥಿಕ ಇಲಾಖೆಗೆ ಕಳುಹಿಸಿ ದಂತಹ ಸಂದರ್ಭದಲ್ಲಿ ಅವರು ಗೋಧಿಗೆ ಮಾತ್ರ 23 ರೂಪಾಯಿ ಇದ್ದದ್ದನ್ನು 25 ರೂಪಾಯಿ ಮಾಡಿದರು. ಆದರೆ, ನಮಗೂ ಕೂಡ ತುಂಬಾ ಕಳಕಳಿ ಇದೆ. ಯಾರು ಈ ರೀತಿಯ ಅಂಗಡಿಗಳನ್ನು ಇಟ್ಟುಕೊಂಡಿದ್ದಾರೆ. ಅವರಿಗೆ ಸ್ವಲ್ಪ ಕಮೀಷನ್ ಜಾಸ್ತಿ ಮಾಡಬೇಕೆಂಬುದು ಖಂಡಿತವಾಗಿಯೂ ನಮ್ಮ ಪರಿಶೀಲನೆಯಲ್ಲಿದೆ. ಹಾಗೆಯೇ ಮತ್ತೊಂದು ಪ್ರಶ್ನೆಯನ್ನು ಕೇಳಿದ್ದಾರೆ. ಬಹಳ

ಮುಖ್ಯವಾಗಿ ಇವತ್ತು ಈ ಸದನದ ಮೂಲಕ ರಾಜ್ಯದ ಜನತೆಗೆ ಹೇಳುವುದಕ್ಕೆ ಇಚ್ಚೆಪಡುತ್ತಿದ್ದೇನೆ. ಈಗ ಕೆಲವು ರೇಷನ್ ಅಂಗಡಿಗಳಲ್ಲಿ ಒಂದು ಸಾವಿರ, ಒಂದೂವರೆ ಸಾವಿರ, ಎರಡು ಸಾವಿರ ಕಾರ್ಡಗಳು ಇವೆ. ಇದರಿಂದ ಬಹಳ ದೊಡ್ಡ ಕ್ಯೂ ಇರುತ್ತದೆ ಮತ್ತು ಸರಿಯಾಗಿ ವಿತರಣೆಯಾಗದಿರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕಾಗಿ ಗ್ರಾಮೀಣಾ ಪ್ರದೇಶದಲ್ಲಿ ಈ ಕಾರ್ಡ ಗಳನ್ನು ಸುಮಾರು 300 ಕಾರ್ಡಗಳು, ನಗರ ಪ್ರದೇಶದಲ್ಲಿ 500 ಕಾರ್ಡಗಳು ಎಂದು ಮಾಡಿ ಹೊಸದಾಗಿ ಅಂಗಡಿಗಳನ್ನು ಮಾಡುವುದಕ್ಕೆ ನಾವು ಅವಕಾಶ ಮಾಡುತ್ತಿದ್ದೇವೆ. ಈಗ ತಕ್ಷಣವೇ ಇದಕ್ಕೆ ಸರ್ಕಾರಿ ಆದೇಶವನ್ನು ಹೊರಡಿಸಲಿದ್ದೇವೆ. ಇನ್ನು ಮುಂದೆ ಎಲ್ಲಿ ಒಂದೂವರೆ ಸಾವಿರ, ಮೂರು ಸಾವಿರ ಎಂದು ಆ ರೀತಿಯ ಕಾರ್ಡಗಳಿವೆ. ಒಂದೂವರೆ ಸಾವಿರ ಕಾರ್ಡ ಇದ್ದಲ್ಲಿ ಅಲ್ಲಿ ಸಹಜವಾಗಿ ಮೂರು ಅಂಗಡಿಗಳು ಬರುತ್ತವೆ. ಆಗ ಜನಕ್ಕೆ ಹೆಚ್ಚು ಅನುಕೂಲವಾಗುತ್ತದೆ ಮತ್ತು ಹತ್ತಿರದ ಪ್ರದೇಶದಲ್ಲಿ ಆಹಾರಧಾನ್ಯಗಳು ಸಿಗುತ್ತವೆ. ಇದನ್ನು ನಾನು ಈ ಸದನದ ಮೂಲಕ ಹೇಳುವುದಕ್ಕೆ ಇಚ್ಚೆಪಡುತ್ತೇನೆ.

**ಸಭಾಪತಿಯವರು :** ಧನ್ಯವಾದಗಳು.

**ಉತ್ತರ ಕರ್ನಾಟಕದಲ್ಲಿ ಅನಧೀಕೃತವಾಗಿ ಖಾಸಗಿ ಬಸ್ ಸಂಚಾರದ ಬಗ್ಗೆ**

**02; ಶ್ರೀ ಬಸವರಾಜ್ ಹೊರಟ್ಟಿ (ಶಿಕ್ಷಕರ ಕ್ಷೇತ್ರ)**

**(ಅ)** ಹುಬ್ಬಳ್ಳಿಯಿಂದ ಬಾಗಲಕೋಟೆ, ಬಿಜಾಪುರ, ಇಳಕಲ್, ಬೆಳಗಾವಿ, ಸಿರಸಿ, ದಾವಣಗೆರೆ ಮುಂತಾದ ಪಟ್ಟಣಗಳಿಗೆ ಖಾಸಗಿ ಬಸ್‌ಗಳಾದ ಆರ್. ಆರ್. ಸಾಮ್ರಾಟ್ ಹಾಗೂ ಕಿತ್ತೂರು ಚೆನ್ನಮ್ಮ ಬಸ್‌ಗಳನ್ನು ದಿನಕ್ಕೆ ಎಷ್ಟು ಸಲ ಓಡಿಸಲಾಗುತ್ತಿದೆ; (ಸಂಪೂರ್ಣ ಮಾಹಿತಿ ನೀಡುವುದು)

**(ಆ)** ಅವರಿಗೆ ನಿಯಮದ ಪ್ರಕಾರ ಎಷ್ಟು ಪರ್ಮಿಟ್ ನೀಡಲಾಗಿದೆ. ಪರ್ಮೀಟ್ ಪ್ರಕಾರ ಬಸ್‌ಗಳನ್ನು ಓಡಿಸದಿರುವುದು ಹಾಗೂ ಸರ್ಕಾರಿ

ನಿಯಮಗಳನ್ನು ಉಲ್ಲಂಘಿಸಿ ಕಾನೂನು ಬಾಹಿರವಾಗಿ ಬಸ್‌ಗಳನ್ನು ಓಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಕಾನೂನು ಉಲ್ಲಂಘಿಸಿದ ಎಷ್ಟು ಖಾಸಗಿ ಬಸ್ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ?

**ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು)**

(ಅ) ಹುಬ್ಬಳ್ಳಿಯಿಂದ ಬಾಗಲಕೋಟೆ, ಬಿಜಾಪುರ, ಇಳಕಲ್, ಬೆಳಗಾವಿ, ಸಿರಸಿ, ದಾವಣಗೆರೆ ಮುಂತಾದ ಪಟ್ಟಣಗಳಿಗೆ ಖಾಸಗಿ ಬಸ್‌ಗಳಾದ ಆರ್. ಆರ್. ಸಾಮ್ರಾಟ್ ಹಾಗೂ ಕಿತ್ತೂರು ಚೆನ್ನಮ್ಮ ಬಸ್‌ಗಳನ್ನು ನಿಗದಿತ ಮಾರ್ಗಗಳಲ್ಲಿ ಸಂಚರಿಸಲು ನಿಗದಿಪಡಿಸಿ ರಹದಾರಿ ನೀಡಿರುವುದಿಲ್ಲ ಹಾಗೂ ಸದರಿ ಸಂಸ್ಥೆಗಳ ಹೆಸರಿನಲ್ಲಿ ಯಾವುದೇ ರಹದಾರಿಗಳನ್ನು ನೀಡಿರುವುದಿಲ್ಲ.

ಆದಾಗ್ಯೂ ಶ್ರೀಯುತರುಗಳಾದ ಎಂ.ಆರ್.ಪಳನೀಯಪ್ಪನ್, ಎಸ್.ರವಿ ಶೇಖರ, ಎಸ್.ರಾಜಶೇಖರ್, ಲೀಲಾವತಿ, ಪಿ.ಶಿವ ಮತ್ತು ಎಸ್. ನಂದಿನಿ, ಟಿ.ರಮೇಶ್ ಇವರುಗಳ ಹೆಸರುಗಳಲ್ಲಿ ರಾಜ್ಯದಾದ್ಯಂತ ಸಂಚರಿಸಲು ಒಪ್ಪಂದ ವಾಹನ (ಬಸ್) (contract carriage) ರಹದಾರಿಗಳನ್ನು ನೀಡಲಾಗಿದ್ದು, ಸದರಿಯವರು ಮೇಲೆ ತಿಳಿಸಿದ ಸಂಸ್ಥೆಗಳ ನಾಮಫಲಕಗಳನ್ನು ಬಸ್‌ಗಳಲ್ಲಿ ಹಾಕಿಕೊಂಡು ಸಂಚರಿಸುತ್ತಿರುವುದು ಗಮನಕ್ಕೆ ಬಂದಿರುತ್ತದೆ.

(ಆ) 1988ನೇ ಮೋಟಾರು ವಾಹನ ಕಾಯ್ದೆ ಪ್ರಕರಣ 74ರ ಅಡಿಯಲ್ಲಿ ಸದರಿಯವರಿಗೆ ರಾಜ್ಯದಾದ್ಯಂತ ಸಂಚರಿಸಲು ನೀಡಿರುವ ಒಪ್ಪಂದ ವಾಹನ ಬಸ್ ರಹದಾರಿಗಳ ವಿವರಗಳು ಕೆಳಕಂಡಂತಿವೆ:

| ಸಂಸ್ಥೆಯ ಹೆಸರು | ಮಾಲೀಕರ ಹೆಸರು (ಶ್ರೀಯುತರಾದ) | ನೀಡಿರುವ ರಹದಾರಿಗಳು |
|---|---|---|
| ಆರ್. ಆರ್. | ಎಂ. ಸುಬ್ರಮಣಿ<br>ಎಸ್. ರವಿಶೇಖರ್<br>ಎಸ್. ರಾಜಶೇಖರ್<br>ಲೀಲಾವತಿ | 22<br>18<br>12<br>6 |
| ಸಾಮ್ರಾಟ್ | ಪಿ. ಶಿವ<br>ಎಸ್. ನಂದಿನಿ | 36<br>19 |
| ರಾಣಿ ಚೆನ್ನಮ್ಮ | ಎಂ. ಆರ್. ಪಳನಿಯಪ್ಪನ್<br>ಟಿ. ರಮೇಶ್<br>ರೇವತಿ | 61<br>8<br>3 |

ಪರ್ಮಿಟ್ ಷರತ್ತು ಹಾಗೂ ನಿಯಮಗಳನ್ನು ಉಲ್ಲಂಘಿಸಿ ಕಾನೂನು ಬಾಹಿರವಾಗಿ ಓಡಿಸುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

(ಇ) ಪ್ರಸಕ್ತ ಸಾಲಿನಲ್ಲಿ ಮೇಲೆ ತಿಳಿಸಿದ ಖಾಸಗಿ ಪ್ರವರ್ತಕರು ಕಾನೂನು ಉಲ್ಲಂಘಿಸಿದ ಒಟ್ಟು 166 ಪ್ರಕರಣಗಳನ್ನು ದಾಖಲಿಸಿದ್ದು ಒಟ್ಟು ರೂ. 3,21,820/– ರಾಜಿ ದಂಡವನ್ನು ವಿಧಿಸಿ ವಸೂಲಿ ಮಾಡಲಾಗಿದೆ. ವಿವರಗಳು ಕೆಳಗಿನಂತಿವೆ.

| ಸಂಸ್ಥೆಯ ಹೆಸರು | ರಹದಾರಿ ಸಂಖ್ಯೆ | ದಾಖಲಿಸಿದ ಪ್ರಕರಣದ ಸಂಖ್ಯೆ | ವಸೂಲಿಸಿದ ದಂಡದ ಮೊತ್ತ ರೂ.ಗಳಲ್ಲಿ |
|---|---|---|---|
| ಸಾಮ್ರಾಟ್ | 55 | 42 | 99440 |
| ಆರ್. ಆರ್. | 58 | 32 | 82560 |

| | | | |
|---|---|---|---|
| ರಾಣಿಚೆನ್ನಮ್ಮ | 72 | 92 | 139820 |
| ಒಟ್ಟು | | 166 | 321820 |

**ಶ್ರೀ ಬಸವರಾಜ ಹೊರಟ್ಟಿ** : ಮಾನ್ಯ ಸಭಾಪತಿಯವರೇ, ಬಹಳ ವಿಚಿತ್ರವಾದಂತಹ ಒಂದು ಸಂಗತಿ ಇದೆ. ಹುಬ್ಬಳ್ಳಿಯಿಂದ ಬಾಗಲಕೋಟೆ, ಬಿಜಾಪುರ, ಇಳಕಲ್, ಬೆಳಗಾವಿ, ಸಿರಸಿ, ದಾವಣಗೆರೆ ಮುಂತಾದ ಪಟ್ಟಣಗಳಿಗೆ ಖಾಸಗಿ ಬಸ್‌ಗಳಾದ ಆರ್. ಆರ್. ಸಾಮ್ರಾಟ್ ಹಾಗೂ ಕಿತ್ತೂರು ಚೆನ್ನಮ್ಮ ಬಸ್‌ಗಳನ್ನು ದಿನಕ್ಕೆ ಎಷ್ಟು ಸಲ ಓಡಿಸಲಾಗುತ್ತಿದೆ ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ಹುಬ್ಬಳ್ಳಿಯಿಂದ ಬಾಗಲಕೋಟೆ, ಬಿಜಾಪುರ, ಇಳಕಲ್, ಬೆಳಗಾವಿ, ಸಿರಸಿ, ದಾವಣಗೆರೆ ಮುಂತಾದ ಪಟ್ಟಣಗಳಿಗೆ ಖಾಸಗಿ ಬಸ್‌ಗಳಾದ ಆರ್. ಆರ್. ಸಾಮ್ರಾಟ್ ಹಾಗೂ ಕಿತ್ತೂರು ಚೆನ್ನಮ್ಮ ಬಸ್‌ಗಳನ್ನು ನಿಗದಿತ ಮಾರ್ಗಗಳಲ್ಲಿ ಸಂಚರಿಸಲು ನಿಗದಿಪಡಿಸಿ ರಹದಾರಿ ನೀಡಿರುವುದಿಲ್ಲ ಹಾಗೂ ಸದರಿ ಸಂಸ್ಥೆಗಳ ಹೆಸರಿನಲ್ಲಿ ಯಾವುದೇ ರಹದಾರಿಗಳನ್ನು ನೀಡಿರುವುದಿಲ್ಲ ಎಂದು ಮಾನ್ಯ ಸಚಿವರು ಉತ್ತರದಲ್ಲಿ ಕೊಟ್ಟಿದ್ದಾರೆ. ದಿನನಿತ್ಯ ನೋಡುತ್ತಿದ್ದೇವೆ. ಮಾನ್ಯ ವೀರಣ್ಣ ಮತ್ತಿಕಟ್ಟಿ, ಮಾನ್ಯ ಮೋಹನ್ ಲಿಂಬೀಕಾಯಿಯವರು, ಇನ್ನು ನಮ್ಮ ಕಡೆ ಯಾರ್ಯಾರು ಇದ್ದಾರೆ ಅವರನ್ನೆಲ್ಲಾ ಕೇಳಿ. ಪ್ರತಿದಿನ ಪ್ರತಿ ಒಂದು ತಾಸಿಗೆ ನಮ್ಮ ಮನೆ ಮುಂದೆಯೇ ಬಾಗಲಕೋಟೆಗೆ ಕಿತ್ತೂರು ಚೆನ್ನಮ್ಮ ಬಸ್ ಹೋಗುತ್ತದೆ. ನಿನ್ನೆ ಆರ್. ಆರ್. ಸಾಮ್ರಾಟ್ ಬಸ್ಸಿನಲ್ಲಿ ಬೆಳಗಾವಿಯಿಂದ ನನ್ನ ಮಗಳು ಬಂದಿದ್ದಾಳೆ. ದಾವಣಗೆರೆಗೆ ಸಾಮ್ರಾಟ್ ಬಸ್ ಓಡುತ್ತಿದೆ. ದಿನನಿತ್ಯ ಬಸ್ಸುಗಳು ಓಡುತ್ತಿವೆ. ಈ ರೀತಿ ನಮಗೆಲ್ಲಾ ಸರ್ಕಾರ ಟೋಪಿ ಹಾಕುವಂತಹ ಕೆಲಸ ಮಾಡಿದರೆ ಏನಿದು? ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಆಗುವುದು ಉತ್ತರ ಕರ್ನಾಟಕದಲ್ಲಿ ಉಳಿದೆಲ್ಲಾ ನಷ್ಟವಾಗಿದೆ. ಸದನಕ್ಕೆ ಈ ರೀತಿ ತಪ್ಪು ಉತ್ತರ ಕೊಟ್ಟರೆ ಹೇಗೆ? ಇದರ ಬಗ್ಗೆ ಸರ್ಕಾರಕ್ಕೆ ಸ್ವಲ್ಪವಾದರೂ ಕಾಳಜಿ ಇರಬೇಕಲ್ಲವೆ? ದಿನನಿತ್ಯ ಸರ್ಕಾರಿ ಬಸ್ಸುಗಳು ಖಾಲಿ ಹೋಗುತ್ತಿವೆ, ಅವರೆಲ್ಲಾ ತುಂಬಿಕೊಂಡು ಹೋಗುತ್ತಿದ್ದಾರೆ. ಅವರ ಜೊತೆ ಅಡ್ಜೆಸ್ಟಮೆಂಟ್ ಮಾಡಿಕೊಂಡು ಸರ್ಕಾರಿ ಬಸ್‌ಗಳಿಗೆ ನಷ್ಟವಾಗುತ್ತಿದೆ. ಅವರು ತಿಂಗಳಿಗೆ

ಒಂದು ಬಸ್ಸಿಗೆ ಇಷ್ಟು ಮಾಮೂಲಿ ಕೊಡುತ್ತೇವೆಂದು ನಮ್ಮ ಮುಂದೆಯೇ ಹೇಳುತ್ತಾರೆ. ಅವರು ದೊಡ್ಡ ಬಸ್ ನಿಲ್ದಾಣವನ್ನೇ ಮಾಡಿದ್ದಾರೆ. ಹುಬ್ಬಳ್ಳಿಯಲ್ಲಿ ಬಸವೇಶ್ವರ ಸರ್ಕಲ್‌ನಲ್ಲಿ ದೊಡ್ಡ ಬಸ್ ನಿಲ್ದಾಣವೇ ಇದೆ. ಆ ಬಸ್ಸುಗಳು ಪ್ರತಿನಿತ್ಯ ಓಡಾಡುತ್ತಿವೆ. ಇಷ್ಟೆಲ್ಲಾ ಇದ್ದುಕೊಂಡು ಬಸ್ ಓಡಾಡುತ್ತಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಾರೆ. ನಮ್ಮಂಥವರಿಗೂ ಕೂಡ ತಪ್ಪು ಉತ್ತರ ಕೊಡುತ್ತಾರೆಂದರೆ ಹೇಗೆ? ಇದು ಸರಿಯಾದುದ್ದಲ್ಲ. ಏಕೆಂದರೆ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿದೆ. ಪ್ರತಿ ಗಂಟೆಗೆ ಒಂದು ಬಸ್ ಓಡಾಡುತ್ತಲೇ ಇದೆ. ಯಾರನ್ನೂ ಬೇಕಾದರೂ ಕೇಳಿ, ಪ್ರತಿ ಗಂಟೆಗೆ ಒಂದು ಬಸ್ ಬಾಗಲಕೋಟೆ, ಇಳಕಲ್, ದಾವಣಗೆರೆಗೆ ಹೋಗುತ್ತಿದೆ. ಆರ್. ಆರ್. ಸಾಮ್ರಾಟ್ ಬಸ್ ಬೆಳಗಾವಿಯಿಂದ ಹುಬ್ಬಳ್ಳಿಗೆ ಬರುತ್ತಿದೆ. ಸಾಮ್ರಾಟ್ ಬಸ್ಸು ಹುಬ್ಬಳ್ಳಿಯಿಂದ ದಾವಣಗೆರೆಗೆ ಹೋಗುತ್ತಿದೆ. ಕಿತ್ತೂರು ಚೆನ್ನಮ್ಮ ಬಸ್ ಹುಬ್ಬಳ್ಳಿ, ನವಲಗುಂದ, ನರಗುಂದ, ಬಾಗಲಕೋಟೆ, ಬಿಜಾಪುರ, ಇಳಕಲ್‌ಗೆ ಹೋಗುತ್ತಿದೆ. ದಿನನಿತ್ಯ ಸುಮಾರು ನೂರಾರು ಬಸ್ಸುಗಳು ಓಡಾಡುತ್ತಿವೆ. ನಾನು ಸ್ಥಳೀಯನಾಗಿರುವುದರಿಂದ ದಿನನಿತ್ಯ ನೋಡುತ್ತಿದ್ದೇನೆ. ನನಗೆ ಈ ರೀತಿಯ ತಪ್ಪು ಉತ್ತರವನ್ನು ಕೊಟ್ಟರೆ ಸದನದಲ್ಲಿ ಪ್ರಶ್ನೆ ಕೇಳುವುದು ಹೇಗೆ?

**ಶ್ರೀ ಆರ್. ಅಶೋಕ :** ಮಾನ್ಯ ಸಭಾಪತಿಯವರೇ, ಯಾವುದೇ ಪರ್ಮಿಟ್ ಇಲ್ಲದೆ, ಸರ್ಕಾರದ ಅನುಮತಿ ಇಲ್ಲದೆ ಯಾವುದೇ ಬಸ್ ಓಡಾಡುತ್ತಿಲ್ಲ. ಪರ್ಮಿಟ್ ತೆಗೆದುಕೊಂಡಿದ್ದಾರೆ. ಆ ಲಿಸ್ಟನ್ನು ಕೂಡ ಕೊಟ್ಟಿದ್ದೇವೆ. ಆರ್. ಆರ್. ಸಂಸ್ಥೆ, ಅದರ ಮಾಲೀಕರ ಹೆಸರು, ಸಾಮ್ರಾಟ್ ಬಸ್, ರಾಣಿ ಚೆನ್ನಮ್ಮ, ಈ ತರಹದೆಲ್ಲಾ ಲಿಸ್ಟ್ ಕೊಟ್ಟಿದ್ದೇವೆ. ಯಾವ ಯಾವ ಬಸ್ಸು ಆ ರಸ್ತೆಯಲ್ಲಿಲ ಎಷ್ಟೆಷ್ಟು ಓಡುತ್ತಿದೆ ಎಂಬುದರ ಬಗ್ಗೆಯೂ ಲಿಸ್ಟನ್ನು ನಾವು ಕೊಟ್ಟಿದ್ದೇವೆ. ರಾಜ್ಯ ಸರ್ಕಾರಕ್ಕೆ ವರ್ಷಕ್ಕೆ 36 ಕೋಟಿ ರೂಪಾಯಿಗಳನ್ನು ಕೂಡ ಅವರು ತೆರಿಗೆಯನ್ನು ಕಟ್ಟುತ್ತಿದ್ದಾರೆ. ಇಲ್ಲಿ ಮೂಲಭೂತವಾಗಿ ಬಂದಿರುವ ಪ್ರಶ್ನೆ ಅವರು ಕೊಟ್ಟಂತಹ ರಸ್ತೆಗಳಲ್ಲಿ ಓಡಿಸುತ್ತಿಲ್ಲ. violation ಆಗುತ್ತಿದೆ ಎನ್ನುವುದು ನನ್ನ ಗಮನಕ್ಕೂ ಬಂದಿದೆ. ಆ ರೀತಿ ಸುಮಾರು ಈಗಾಗಲೇ ಬಹಳಷ್ಟು ಪ್ರಕರಣಗಳು ಅದರ ಮೇಲೆ

ದಾಖಲಾಗಿವೆ. ಈಗಾಗಲೇ 1300ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಸುಮಾರು ಎರಡು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು penalty ಯನ್ನು ಅವರ ಮೇಲೆ ಹಾಕಿದ್ದೇವೆ. ವಿಶೇಷವಾಗಿ ಹುಬ್ಬಳಿ ಡಿವಿಜನ್ ಮತ್ತು ಹೈದರಾಬಾದ್ ಕರ್ನಾಟಕದ ಭಾಗಗಳೇನಿದೆ ಆ ಭಾಗಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ಸುಮಾರು 1000ಕ್ಕೂ ಹೆಚ್ಚು ಹೊಸ ಬಸ್ಸುಗಳನ್ನು ತೆಗೆದುಕೊಂಡಿದ್ದೇವೆ. ಮೊದಲು ನಮಗೆ ಶಕ್ತಿ ಇರಲಿಲ್ಲ. ಕಳೆದ ನಾಲ್ಕು ವರ್ಷಗಳಲ್ಲಿ ಒಂದೂ ಬಸ್ಸನ್ನು ನಮ್ಮ ಕೈಯಲ್ಲಿ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ನಾವು ಒಂದೇ ಸಲ ಖಾಸಗಿ ಬಸ್ಸುಗಳನ್ನು ತೆಗೆಯುವುದಕ್ಕಾಗುವುದಿಲ್ಲ. ಎಲ್ಲಾ ರಾಜ್ಯಗಳು ಖಾಸಗಿಯವರಿಗೂ ಹೆಚ್ಚು ಅವಕಾಶ ಕೊಡಬೇಕೆನ್ನುವುದು ಕೇಂದ್ರ ಸರ್ಕಾರದ ನೀತಿ ಆಗಿದೆ. ಆದರೆ, ನಾವು ಇಲ್ಲಿ ದಿನದಿಂದ ದಿನಕ್ಕೆ ನಮ್ಮ ಬಸ್ಸುಗಳು ಜಾಸ್ತಿಯಾಗುತ್ತಿವೆ. ಈಗಿನ ಅನುಪಾತದ ಪ್ರಕಾರ ಖಾಸಗಿ ಬಸ್ಸುಗಳು ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ನಮ್ಮ ಸಾರಿಗೆ ಸಂಸ್ಥೆ ಬಹಳ ಜಾಸ್ತಿ ಬಸ್ಸುಗಳನ್ನು ಹೆಚ್ಚು ಓಡಿಸುವಂತಹ ಕೆಲಸವನ್ನು ಮಾಡುತ್ತಿದೆ.

ಮಾನ್ಯ ಸದಸ್ಯರಾದ ಶ್ರೀಯುತ ಬಸವರಾಜ ಹೊರಟ್ಟಿಯವರು ಏನು ಹೇಳುತ್ತಿದ್ದಾರೆಂದರೆ ಒಂದು ಪರ್ಮಿಟ್ ತೆಗೆದುಕೊಂಡು ನಾಲ್ಕು ಬಸ್‌ಗಳನ್ನು ಓಡಿಸುತ್ತಾರೆಂದು ಹೇಳುತ್ತಾರೆ. ಆದರೆ, ಆ ರೀತಿಯಲ್ಲಿ ಓಡಿಸುವುದಕ್ಕೆ ಸಾಧ್ಯವಿಲ್ಲ. ಆ ರೀತಿ ಮಾಡುತ್ತಿರುವುದು ಗಮನಕ್ಕೆ ಬಂದರೆ ಕೂಡಲೇ ನಿರ್ದಾಕ್ಷಣ್ಯವಾಗಿ, ಯಾವುದೇ ಮುಲಾಜಿಲ್ಲದೇ, ಅವರದ್ದು ಎಂತಹ ದೊಡ್ಡ ಕಂಪನಿಯಾದರೂ ಸಹ ಅವರ ಮೇಲೆ ಕ್ರಮ ಕೈಗೊಳ್ಳಲಾಗುವುದು. ಆದರೆ ನನ್ನ ಗಮನಕ್ಕೆ ಬಂದಿರುವುದು ಏನೆಂದರೆ ಅವರಿಗೆ ಯಾವ ರೂಟ್‌ಗೆ ಪರ್ಮಿಟ್ ಕೊಡಲಾಗಿದೆ, ಆ ರೂಟ್ ಅನ್ನು ಬಿಟ್ಟು ಓಡಿಸುತ್ತಿದ್ದಾರೆ......

**ಶ್ರೀ ಬಸವರಾಜ ಹೊರಟ್ಟಿ** : ನಾನು ಕೇಳಿದ್ದು ಏನೆಂದರೆ, ಹುಬ್ಬಳ್ಳಿಯಿಂದ ಬಾಗಲಕೋಟೆ, ಬಿಜಾಪುರ, ಇಳಕಲ್, ಬೆಳಗಾಂ, ಸಿರಸಿ, ದಾವಣಗೆರೆ ಮುಂತಾದ ಪಟ್ಟಣಗಳಿಗೆ ಖಾಸಗಿ ಬಸ್‌ಗಳಾದ ಆರ್. ಆರ್. ಸಾಮ್ರಾಟ್ ಹಾಗೂ ಕಿತ್ತೂರು ಚೆನ್ನಮ್ಮ ಬಸ್‌ಗಳನ್ನು ದಿನಕ್ಕೆ ಎಷ್ಟು ಸಲ ಓಡಿಸಲಾಗುತ್ತದೆ ಎಂದು ಕೇಳಿರುವುದಕ್ಕೆ ನೀವು ರೂಟ್ ಬಗ್ಗೆ ಹೇಳುತ್ತಿದ್ದೀರಿ.

ನೀವು ರೂಟ್‌ಗಳ ಬಗ್ಗೆ ವಿವರ ಕೊಟ್ಟಿದ್ದೀರಿ. ನಮಗೆ ರೂಟ್ ಗೊತ್ತಿದೆ. ಹೆದ್ದಾರಿಗಳಲ್ಲಿ ನೀಡಿರುವ ರಹದಾರಿಗಳು ಎಂದರೆ 22,18,12,6ಎಂದು ಉತ್ತರದಲ್ಲಿ ತಿಳಿಸಿದ್ದೀರಿ. ಎನ್. ಹೆಚ್–4 ಎಂದು ನನಗೆ ಗೊತ್ತಿದೆ. ಎನ್‌ಹೆಚ್–4 ಎಂದರೆ ದಾವಣಗೆರೆ – ಬೆಳಗಾಂ ಮಾರ್ಗದಲ್ಲಿ ದಿನನಿತ್ಯ ಬಸ್‌ಗಳು ಓಡಾಡುತ್ತಿವೆ. ಇವುಗಳು ಓಡುವುದಿಲ್ಲವೆಂದು ನೀವು ಹೇಳುತ್ತೀರಿ. ಅಂದರೆ, ಇಲ್ಲಿ ಪರ್ಮಿಷನ್ ಇಲ್ಲದೇ ಓಡಿಸುತ್ತಾರೆಂದು ನೀವು ಹೇಳಿ.

**ಸಭಾಪತಿಯವರು** : ರೂಟ್ ವೈಲೇಷನ್ ಎಂದು ಹೇಳುತ್ತಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ** : ಆರ್. ಆರ್. ಸಾಮ್ರಾಟ್ ಹಾಗೂ ಕಿತ್ತೂರು ಚೆನ್ನಮ್ಮ ಬಸ್‌ಗಳನ್ನು ನಿಗದಿತ ಮಾರ್ಗಗಳಲ್ಲಿ ಸಂಚರಿಸಲು ನಿಗದಿಪಡಿಸಿ ರಹದಾರಿ ನೀಡಿರುವುದಿಲ್ಲ ಹಾಗೂ ಸದರಿ ಸಂಸ್ಥೆಗಳ ಹೆಸರಿನಲ್ಲಿ ಯಾವುದೇ ರಹದಾರಿಗಳನ್ನು ನೀಡಿರುವುದಿಲ್ಲ. ನೀವು ಪರ್ಮಿಷನ್ ನೀಡಿರುವುದಿಲ್ಲವೆಂದು ಹೇಳುತ್ತಿದ್ದೀರಿ. ಆದರೆ, ಈ ಬಸ್‌ಗಳು ಓಡುಡುತ್ತಿವೆ. ಇವರು ಅಲ್ಲಿ ಒಂದು ದೊಡ್ಡದಾದ ಬಸ್ ನಿಲ್ದಾಣವನ್ನೇ ಮಾಡಿದ್ದಾರೆ. ಮಾನ್ಯ ಸದಸ್ಯರಾದ ಶ್ರೀಯುತ ವಿಜಯ ಸಂಕೇಶ್ವರ್‌ರವರ ಆಫೀಸ್ ಪಕ್ಕದಲ್ಲಿಯೇ ಬಸ್ ಸ್ಟಾಂಡ್ ಇದೆ. ಆ ಬಸ್ಸುಗಳು ದಿನನಿತ್ಯ ಓಡುತ್ತಿವೆ. ಅದರ ಹಿಂದೆ ನಮ್ಮ ಹುಬ್ಬಳಿ ವಿಭಾಗದ ಕೆಎಸ್‌ಆರ್‌ಟಿಸಿ ಬಸ್‌ಗಳು ಬರುತ್ತವೆ. ಅವುಗಳು ಖಾಲಿ ಹೋಗುವುದನ್ನು ನಾವು ಎಷ್ಟೋ ಬಾರಿ ನೋಡಿದ್ದೇವೆ. ಎಷ್ಟೋ ಬಾರಿ ನಾವು objection ಮಾಡಿದ್ದೇವೆ. ಈ ರೀತಿ ಇದ್ದರೂ ಸಹ ನೀವು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟರೆ ಹೇಗೆ?

**ಸಭಾಪತಿಯವರು** : ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು. ಮಾನ್ಯ ಸದಸ್ಯರು ನೇರವಾಗಿ ಆಪಾದನೆಯನ್ನು ಮಾಡಿದ್ದಾರೆ.

**ಶ್ರೀ ಆರ್. ಅಶೋಕ್** : ನಾವು ತಪ್ಪು ಮಾಹಿತಿಯನ್ನು ಕೊಟ್ಟಿರುವುದಿಲ್ಲ. ಬಸ್ಸುಗಳು ಓಡುತ್ತಿರುವುದು ನಿಜ. ಆ ವಿಚಾರವನ್ನೂ ಸಹ ನಾನು ಹೇಳುತ್ತಿದ್ದೇನೆ. ಆರ್ ಆರ್ ಬಸ್‌ಗಳು : ಎಂ. ಸುಬ್ರಮಣಿ –22, ಎಸ್. ರವಿಶೇಖರ–18, ಎಸ್. ರಾಜಶೇಖರ–12, ಲೀಲಾವತಿ–6 ಸಾಮ್ರಾಟ್

ಬಸ್‌ಗಳು:– ಪಿ. ಶಿವ 36, ಎಸ್–ನಂದಿನಿ–19 ರಾಣಿ ಚನ್ನಮ್ಮ ಬಸ್‌ಗಳು :– ಎಂ.ಆರ್.ಪಳಿನಿಯಪ್ಪನ್–61, ಟಿ.ರಮೇಶ್–8, ರೇವತಿ–3 ಈ ಬಸ್‌ಗಳು ಓಡುತ್ತಿರುವುದು ನಿಜ. ಆದರೆ ವೈಲೇಷನ್......

**ಶ್ರೀ ಬಸವರಾಜ ಹೊರಟ್ಟಿ :** ಈ ಪಳನಿಯಪ್ಪನ್, ಇತ್ಯಾದಿ ಇವರು ನಮ್ಮ ದೇಶದವರೇ ಅಲ್ಲ.

**ಸಭಾಪತಿಯವರು :–** ಪರ್ಮಿಷನ್‌ನೊಂದಿಗೆ ಓಡುತ್ತಿವೆ.

**(ಗೊಂದಲ)**

**ಶ್ರೀ ಮತ್ತಿಕಟ್ಟಿ ವೀರಣ್ಣ :** ಮಾನ್ಯ ಸಭಾಪತಿಯವರೆ, ಸರ್ಕಾರಿ ಸ್ವಾಮ್ಯದ ನಮ್ಮ ಕೆಎಸ್‌ಆರ್‌ಟಿಸಿ ಬಸ್‌ಗಳು ಏನಿವೆ, ಇವುಗಳನ್ನು ಹೆಚ್ಚಿನ ಸೇವಾ ಸೌಲಭ್ಯಗಳಿಗೋಸ್ಕರ ಮಾಡಲಾಗಿದೆ. ನೀವು ವಿದ್ಯಾರ್ಥಿಗಳಿಗೆ ರಿಯಾಯತಿ ಕೊಡುತ್ತೀರಿ, ಹಳ್ಳಿಗಾಡಿನಲ್ಲಿ ಎಲ್ಲಿಯೂ ಲಾಭವಿಲ್ಲದಿದ್ದರೂ ಮೂಲಭೂತ ಸೌಕರ್ಯಗಳನ್ನು ಜನರಿಗೆ ಒದಗಿಸಬೇಕೆಂದು ಅಲ್ಲಿ ಬಸ್‌ಗಳನ್ನು ಓಡಿಸಲಾಗುತ್ತದೆ. ಇವರೇನು ಖಾಸಗಿ ಬಸ್‌ಗಳನ್ನು ಓಡಿಸುತ್ತಿದ್ದಾರೆ. ಬೇರೆ ಬೇರೆ ಜನ ಬೇರೆ ಬೇರೆ ಹೆಸರಿನಲ್ಲಿ ಓಡಿಸುತ್ತಿದ್ದಾರೆಂದು ಸದಸ್ಯರು ಹೇಳಿದರು. ಅದಕ್ಕೆ ಸರ್ಕಾರದವರು ಏನು ಹೇಳುತ್ತಾರೆಂದರೆ ನಾವು ಪರ್ಮಿಷನ್ ಕೊಟ್ಟ ರೂಟ್‌ನಲ್ಲಿ ಓಡುತ್ತಿಲ್ಲ. ಅದಕ್ಕಾಗಿ 3 ಲಕ್ಷಗಿಂತಲೂ ಹೆಚ್ಚು ದಂಡವನ್ನು ವಿಧಿಸಿದ್ದೇವೆಂದು ಹೇಳಿದ್ದಾರೆ. ಆದರೆ, ಅವರು ಈ ದಂಡವನ್ನು ವಿಧಿಸಿದರೂ ಸಹ ಓಡಿಸುತ್ತಾರೆ. ಇಂತಹದ್ದಕ್ಕೆ ಹೆಚ್ಚು ಅವಕಾಶವನ್ನು ಕೊಡುವುದರಿಂದ ಜನರಿಗೆ ಮೂಲ ಸೌಕರ್ಯವನ್ನು ಒದಗಿಸುವ ಸಂಸ್ಥೆಗಳು ಹಾನಿಗೆ ಬರುತ್ತವೆ. ಹಾನಿಗೆ ಬರುವುದರಿಂದ ಸರ್ಕಾರದ ಮೇಲೆ ಬಹಳಷ್ಟು ಹೊರೆಯಾಗುತ್ತದೆ. ಕೆಲವು ಬಾರಿ ಅವುಗಳನ್ನೂ ಸಹ ಖಾಸಗೀಕರಣ ಮಾಡಬೇಕೆನ್ನುವ ಉದ್ದೇಶ ವ್ಯಕ್ತವಾಯಿತು. ನಾನು ಏನು ಹೇಳುತ್ತೇನೆಂದರೆ ಎಲ್ಲಿ ನಮ್ಮ ಸರ್ಕಾರಿ ಬಸ್‌ಗಳು ಓಡುತ್ತಿಲ್ಲ, ಏನು ನಿಶ್ಚಿತವಾದ ಸ್ಥಳಕ್ಕೆ ರಹದಾರಿ ಪರ್ಮಿಷನ್ ಕೊಟ್ಟಿದ್ದೀರಿ. ಅಲ್ಲಿ ಓಡದಿದ್ದರೆ ಅವುಗಳನ್ನು ನಿಲ್ಲಿಸಬೇಕು. ಶ್ರೀಯುತ ಅಶೋಕರವರು ಕೇವಲ ಸಾರಿಗೆ ಸಚಿವರಲ್ಲದೆ, ಗೃಹ

ಸಚಿವರಾಗಿಯೂ ಸಹ ಕೆಸಲ ಮಾಡುತ್ತಿದ್ದಾರೆ. ಅಂದರೆ ಅವರ ಕೈಯಲ್ಲಿ ಶಕ್ತಿಯುತವಾದ ಖಾತೆಯೂ ಸಹ ಇದೆ. ನೀವು ಇದನ್ನು ನಿಲ್ಲಿಸಬಹುದು. ಇದಕ್ಕೆ ದಂಡವನ್ನು ಹಾಕಿದ್ದೇವೆ, ಮತ್ತೊಂದು ಮಾಡುತ್ತೇವೆ. ಮತ್ತೆ ಅಲ್ಲಿ ಓಡಿಸುವುದು ಎನ್ನುವುದು ಬೇಡ. ಆದ್ದರಿಂದ, ದಯಮಾಡಿ ಆ ದೃಷ್ಟಿಯಿಂದ ತೀವ್ರವಾದ ಕ್ರಮವನ್ನು ಕೈಗೊಳ್ಳಿ.

**ಶ್ರೀ ವಿಜಯ ಸಂಕೇಶ್ವರ (ನಾಮನಿರ್ದೇಶನ):** ಮಾನ್ಯ ಸಭಾಪತಿಯವರೆ. . . . .

**ಶ್ರೀ ಬಸವರಾಜ ಹೊರಟ್ಟಿ :** ಮಾನ್ಯ ಸಭಾಪತಿಯವರೆ . . . . .

**ಸಭಾಪತಿಯವರು :** ಮಾನ್ಯ ಸದಸ್ಯರಾದ ಶ್ರೀಯುತ ವಿಜಯ ಸಂಕೇಶ್ವರ ಅವರು ಅಪರೂಪಕ್ಕೆ ಮಾತನಾಡಲಿಕ್ಕೆಂದು ನಿಂತಿದ್ದಾರೆ. ಅವರಿಗೆ ಅವಕಾಶವನ್ನು ಕೊಡೋಣ.

**ಶ್ರೀ ವಿಜಯ ಸಂಕೇಶ್ವರ :** ಖಾಸಗಿ ಬಸ್ಸುಗಳು ಎಲ್ಲಾ ಟ್ಯಾಕ್ಸ್‌ಗಳನ್ನು ಕಟ್ಟಿ ಮತ್ತು ಉತ್ತಮ ಸೇವೆಗಳನ್ನು ಕೊಟ್ಟು ನಡೆಸುತ್ತಿದ್ದಾರೆ. ಸನ್ಮಾನ್ಯ ಶ್ರೀ ಅಶೋಕ್ ರವರು ಹೇಳಿದಾಗೆ ಯಾವುದೇ ಬಸ್‌ಗಳು ಪರ್ಮಿಟ್ ಇಲ್ಲದೇ ಓಡುತ್ತಿಲ್ಲ. ಒಂದೇ ಪರ್ಮಿಟ್‌ನಲ್ಲಿ ನಾಲ್ಕು ಬಸ್‌ಗಳು ನಡೆಯುತ್ತಿವೆ ಎಂದು ಯಾರೋ ಒಬ್ಬರು ಹೇಳಿದಂತೆ ಇತ್ತು. ಅದು ಹಿಂದಿನ ಜಮಾನ ಇತ್ತು. ಸುಮಾರು 15–20 ವರ್ಷಗಳ ಹಿಂದೆ ಆಗುತ್ತಿತ್ತು. ಅದೂ ಸಹ ಅಂತರಾಜ್ಯದಲ್ಲಿ ನಡೆಯುತ್ತಿತ್ತು. ಉದಾಹರಣೆಗೆ ಒಂದು ನಂಬರ್ ಬಸ್ ಬೆಂಗಳೂರಿನಿಂದ ಚೆನ್ನೈಗೆ ಹೋಗುತ್ತಿತ್ತು. ಅದೇ ನಂಬರ್‌ನ ಮತ್ತೊಂದು ಬಸ್ ಬೆಂಗಳೂರಿನಿಂದ ಬಾಂಬೆಗೆ ಹೋಗುತ್ತಿತ್ತು. ಇಲ್ಲಿ ಆ ರೀತಿಯಲ್ಲಿ ಯಾವುದೂ ಸಹ ನಡೆದಿಲ್ಲ. ಈ ಬಗ್ಗೆ ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ಶ್ರೀಯುತ ಬಸವರಾಜ ಹೊರಟ್ಟಿಯವರು ನನ್ನ ಹೆಸರನ್ನು ಉಲ್ಲೇಖ ಮಾಡಿದ್ದರಿಂದ ನಾನು ಈ ವಿಚಾರವಾಗಿ ಹೇಳಬೇಕಾಯಿತು. ಇಲ್ಲದಿದ್ದರೆ, ನಾನು ಮತನಾಡುತ್ತಿರಲಿಲ್ಲ. ಸರ್ಕಾರದ ಜೊತೆಗೆ ಖಾಸಗಿ ಸಂಸ್ಥೆಗಳು ಸಹ ಕೆಲಸ ಮಾಡುವುದು ಅನಿವಾರ್ಯ. ಖಾಸಗಿ ಸಂಸ್ಥೆಗಳು ಇವರ ಜೊತೆಗೆ

ಸ್ಪರ್ಧೆ ಮಾಡಿದರೆ ಮಾತ್ರ ಸರ್ಕಾರಿ ಸಂಸ್ಥೆಗಳು ಸುಧಾರಣೆಯಾಗಲಿಕ್ಕೆ ಸಾಧ್ಯ ಎನ್ನುವುದನ್ನು ಸದನದಲ್ಲಿ ಕುಳಿತಿರುವ ಮಾನ್ಯ ಸಾರಿಗೆ ಸಚಿವರು ಗಮನಿಸಬೇಕು. ಸ್ಪರ್ಧೆ ಇಲ್ಲದಿದ್ದರೆ ಸುಧಾರಣೆಯಾಗಲಿಕ್ಕೆ ಸಾಧ್ಯವೇ ಇಲ್ಲ. ಸರ್ಕಾರದ ನಿಲುವು ಖಾಸಗಿಯವರಿಗೆ ಕೊಡಬಾರದು ಎನ್ನುವುದು ಇತ್ತು ಎಂದರೆ ಮಾನ್ಯ ಸದಸ್ಯರಾದ ಶ್ರೀಯುತ ಬಸವರಾಜ ಹೊರಟ್ಟಿಯವರು ನಮ್ಮ ಸಂಸ್ಥೆಗಳ ಬಗ್ಗೆ ಏನು ಹೇಳಿದರು, ಅವರ ಶಿಕ್ಷಣ ಸಂಸ್ಥೆಗಳನ್ನೂ ಸಹ ಸರ್ಕಾರಿ ಸಂಸ್ಥೆಗಳನ್ನಾಗಿ ಮಾಡಿ. ಈ ರೀತಿಯಲ್ಲಿ ಲಿಂಕ್ ಮಾಡುವುದು ಸರಿಯಾದುದಲ್ಲ.

**ಶ್ರೀ ಬಸವರಾಜ ಹೊರಟ್ಟಿ :** ನಾನು ಆ ರೀತಿ ಹೇಳಲಿಲ್ಲ. ನಿಮ್ಮ ಆಫೀಸ್ ಪಕ್ಕದಲ್ಲಿ ಬಸ್‌ಸ್ಟ್ಯಾಂಡ್ ಇದೆ ಎಂದು ಹೇಳಿದೆನು. ನೀವು ಸರಿಯಾಗಿ ತಿಳಿದುಕೊಳ್ಳಲಿಲ್ಲ.

**(ಗೊಂದಲ)**

**ಸಭಾಪತಿಯವರು :** ಚರ್ಚೆ ಬೇಡ. ಸಮಯ ಆಗಿದೆ. ಮತ್ತೊಂದು ಪ್ರಶ್ನೆ ಇದೆ. ಈಗಾಗಲೇ 8 ನಿಮಿಷಗಳು ಕಳೆದಿವೆ. ಈ ಪ್ರಶ್ನೆಗೆ 10 ನಿಮಿಷ ಇದೆ.

**ಶ್ರೀ ವಿಜಯ ಸಂಕೇಶ್ವರ :** ನಾನು ಎಂ.ಪಿ. ಇದ್ದಂತಹ ಸಂದರ್ಭದಲ್ಲಿ ಆಗ ಸಾರಿಗೆ ಸಚಿವರಾಗಿದ್ದಂತಹ ಶ್ರೀಯುತ ಸಗೀರ್ ಅಹಮದ್‌ರವರು ನಮ್ಮೊಂದಿಗೆ ಆತ್ಮೀಯವಾಗಿದ್ದು ಅನೇಕ ವಿಷಯಗಳನ್ನು ಆಂತರಿಕವಾಗಿ ಹಂಚಿ ಕೊಳ್ಳುತ್ತಿದ್ದರು. ಕೆಲವು ಬಾರಿ ಆರ್.ಟಿ.ಓ. ಅಧಿಕಾರಿಗಳೊಂದಿಗೆ ಮಾತನಾಡು ವಾಗಲೂ ಸಹ ನಾನು ಒಂದೆರಡು ಮೀಟಿಂಗ್‌ನಲ್ಲಿ ಇದ್ದೆನು. ಆ ಸಂದರ್ಭ ದಲ್ಲಿ ಆರ್.ಟಿ.ಓ. ಅಧಿಕಾರಿಗಳು ಮ್ಯಾಕ್ಸಿಕಾಬ್‌ಗಳ ಹಾವಳಿ ಜಾಸ್ತಿಯಾಗಿದೆ ಎಂದು ಹೇಳಿದರು. ಆ ಸಂದರ್ಭದಲ್ಲಿ ಶ್ರೀಯುತ ಸಗೀರ್ ಅಹಮದ್‌ರವರು ಸಹ ಅವುಗಳ ಸೇವೆಯೂ ಬೇಕು, ಸರ್ಕಾರವೇ ಎಲ್ಲವನ್ನೂ ಮಾಡುವುದಕ್ಕೆ ಆಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದರು. This is not one day problem. ತದನಂತರ ಶ್ರೀಯುತ ಹಿಂಡಸಗೇರಿ ಮಾತನಾಡುತ್ತಾ, ಸರ್ಕಾರಿ ಬಸ್‌ಗಳವರು

ಅಂಗವಿಕಲರಿಗೆ ಮತ್ತೆ ಇತರರಿಗೆ ಸೌಲಭ್ಯಗಳನ್ನು ಕೊಡುತ್ತಾರೆ. ಸಂಕೇಶ್ವರ್ ಅಂತಹವರು, ಖಾಸಗಿ ಬಸ್ ಮಾಲೀಕರುಗಳು ಕೇವಲ ದುಡ್ಡಿಗೆ ನಿಂತಿದ್ದಾರೆಂದು ಹೇಳಿದರು. ಆದ್ದರಿಂದ ಈ ಸದನವನ್ನು ಮತ್ತು ಜನರನ್ನು ತಪ್ಪು ದಾರಿಗೆ ಎಳೆಯಬಾರದು. ಸರ್ಕಾರಿ ಬಸ್‌ಗಳಿಗೆ ಏನು ಸೌಲಭ್ಯವನ್ನು ಕೊಟ್ಟಿದ್ದಾರೆ. ಆ ಸೌಲಭ್ಯವನ್ನು ಖಾಸಗಿ ಬಸ್‌ಗಳಿಗೆ ಕೊಟ್ಟರೆ ಆ ಸವಲತ್ತುಗಳನ್ನು ನಾವು ಕೊಡಲಿಕ್ಕೆ ಸಿದ್ಧರಿದ್ದೇವೆ. ಟ್ಯಾಕ್ಸ್ ವಿಚಾರದಲ್ಲಿಯೂ ಸಹ ತಾರತಮ್ಯವಿದೆ. ಟ್ಯಾಕ್ಸ್ ಕೊಡುವುದು ಒಂದು ದಿನ ತಡವಾದರೆ, minimum penalty 100 per cent. 10 ಸಾವಿರ ರೂಪಾಯಿಗಳ ಟ್ಯಾಕ್ಸ್ ಅನ್ನು ಕಟ್ಟುವವರರು ಒಂದು ದಿವಸ ವಿಳಂಬವಾದರೆ 20 ಸಾವಿರ ರೂಪಾಯಿಗಳನ್ನು ಕಟ್ಟಬೇಕು. ಆದರೆ, ಇವತ್ತು ಸರ್ಕಾರಿ ಬಸ್‌ಗಳು 3–4 ವರ್ಷಗಳಿಂದ ಟ್ಯಾಕ್ಸ್ ಅನ್ನು ಕಟ್ಟಿರುವುದಿಲ್ಲ. 1987ನೇ ಇಸವಿಯಲ್ಲಿ ಸನ್ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರ ಸರ್ಕಾರದಲ್ಲಿ ಶ್ರೀಯುತ ಪಿಜಿಆರ್ ಸಿಂಧ್ಯ ಅವರು ಸಾರಿಗೆ ಸಚಿವರಾಗಿದ್ದಂತಹ ಸಮಯದಿಂದಲೂ ನಡೆದು ಬಂದಂತಹ ನೀತಿ ಈ ಕೆಎಸ್‌ಆರ್‌ಟಿಸಿ ಸಂಸ್ಥೆಯದ್ದಾಗಿದೆ. ಅದಕ್ಕೆ ಸರ್ಕಾರದ್ದೇ ಎಲ್ಲವೂ ಸರಿ ಎಂದು ಏನು ಕೆಲವು ಸದಸ್ಯರು ಬೆಟ್ಟು ಮಾಡಿ ಹೇಳುತ್ತಾರೆ, ಖಾಸಗಿ ಬಸ್‌ಗಳು ಬೇಡವೆಂದರೆ ಅದಕ್ಕೆ ಒಂದು ಒಳ್ಳೆಯ ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕು.

**(ಗೊಂದಲ)**

**ಸಭಾಪತಿಯವರು** : ಹೆಚ್ಚು ಚರ್ಚೆ ಬೇಡ. ಸಮಯ ಆಗಿದೆ. ಈ ಪ್ರಶ್ನೆಗೆ 15 ನಿಮಿಷಗಳಾಯಿತು.

**ಶ್ರೀ ಮತ್ತಿಕಟ್ಟಿ ವೀರಣ್ಣ** : ಮಾನ್ಯ ಸಭಾಪತಿಯವರೆ, ನಾವು ಹೇಳಿದ್ದು ಏನೆಂದರೆ ಎಲ್ಲಿ ರಹದಾರಿಗೆ ಪರ್ಮಿಷನ್ ಕೊಟ್ಟಿಲ್ಲ, ಅಲ್ಲಿ ಬಸ್‌ಗಳನ್ನು ಓಡಿಸಬಾರದು.

**ಸಭಾಪತಿಯವರು** : ಈಗ ಈ ಬಗ್ಗೆ ಸಚಿವರು ಏನು ಹೇಳುತ್ತಾರೆಂದು ಕೇಳೋಣ.

**(ಗೊಂದಲ)**

**ಶ್ರೀ ಮತ್ತಿಕಟ್ಟಿ ವೀರಣ್ಣ :** ಶ್ರೀಯುತ ಕಾಗೇರಿಯವರು ನಾನು ಹೇಳುವುದನ್ನು ಗಮನಿಸಬೇಕು. ಸರ್ಕಾರಿ ಸಂಸ್ಥೆಗಳಿಗೆ ಬಹಳ ಜವಾಬ್ದಾರಿ ಇರುತ್ತದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಮಾನ್ಯ ಶ್ರೀ ಅಶೋಕ್‌ರವರು ಯಾವ ರೂಟ್‌ಗೆ ಪರ್ಮಿಷನ್ ಕೊಟ್ಟಿದ್ದಾರೆ, ಆ ರೂಟ್‌ನಲ್ಲಿ ಬಸ್‌ಗಳನ್ನು ಓಡಿಸಬೇಕು.

**ಶ್ರೀ ಮತ್ತಿಕಟ್ಟಿ ವೀರಣ್ಣ :** ಸರ್ಕಾರಿ ಸಂಸ್ಥೆಗಳಿಗೆ ಬಹಳ ಜವಾಬ್ದಾರಿ ಹಾಗೂ social commitment ಇರುತ್ತದೆ.

**(ಗೊಂದಲ)**

**ಶ್ರೀ ಬಸವರಾಜ ಹೊರಟ್ಟಿ :** ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಈಗ ಸಾಮ್ರಾಟ್ ಬಸ್‌ನವರು 42 ಬಾರಿ rules violate ಮಾಡಿದ್ದಾರೆಂದು ಹೇಳಿದ್ದಾರೆ. ಆರ್. ಆರ್. ಬಸ್ ವಿಚಾರದಲ್ಲಿ 32 ಬಾರಿ ಪ್ರಕರಣ ಆಗಿದೆ. ರಾಣಿ ಚೆನ್ನಮ್ಮ ಸಂಸ್ಥೆಯವರು 92 ಬಾರಿ rules violate ಮಾಡಿದ್ದಾರೆ. ಇವರುಗಳಿಗೆ ಅವರ ಲೈಸನ್ಸ್ ಅನ್ನು ಏತಕ್ಕೆ ರದ್ದು ಮಾಡಿಲ್ಲ? ಇವರೇ ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಮೂಲ ಪ್ರಶ್ನೆ ಏನೆಂದರೆ ಈ ಬಸ್‌ಗಳು ಈ ರೂಟ್‌ನಲ್ಲಿ ಓಡಾಡುತ್ತಿವೆ ಎಂದು ಹೇಳಿಲ್ಲ. ಸಂಕೇಶ್ವರ ಬಸ್‌ಗಳ ವಿಚಾರವನ್ನು ನಾನು ಹೇಳಲಿಲ್ಲ. ಅವರ ಆಫೀಸ್ ಪಕ್ಕದಲ್ಲಿ ಬಸ್ ನಿಲ್ದಾಣವನ್ನು ಮಾಡಿದ್ದಾರೆಂದು ಹೇಳಿದೆ. ಇವುಗಳ ಲೈಸೆನ್ಸ್ ಅನ್ನು ಏತಕ್ಕೆ ರದ್ದು ಮಾಡಬಾರದು?

(ಗೊಂದಲ)

**ಸಭಾಪತಿಯವರು :** ಸಮಯ ಮುಗಿದು ಹೋಗಿದೆ. ಇಲ್ಲಿಗೆ ಮುಗಿಸೋಣ.

**ಶ್ರೀ ಆರ್. ಅಶೋಕ್ :** ಮಾನ್ಯ ಸಭಾಪತಿಯವರೇ, ಈಗಾಗಲೇ ಈ ರೀತಿಯ 1,300 ಪ್ರಕರಣಗಳು ಇಡೀ ರಾಜ್ಯದಲ್ಲಿ ತೆಗೆದುಕೊಂಡಿದ್ದೇವೆ. ಇಲ್ಲಿಯವರೆಗೆ ಸುಮಾರು 2 ಕೋಟಿಗೂ ಹೆಚ್ಚು ದಂಡವನ್ನು ಹಾಕಿದ್ದೇವೆ. ಈ ರೀತಿಯಲ್ಲಿ ತಪ್ಪು ಮಾಡಿದವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸದಸ್ಯರು ಹೇಳಿದರು. ಈ ರೀತಿಯಲ್ಲಿ ತಪ್ಪು ಮಾಡುವವರಿಗೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಆರ್‌ಟಿಐ ಇದೆ. ಅವರು ಅದರ ಬಗ್ಗೆ ಕ್ರಮ ಕೈಗೊಳ್ಳಬೇಕು. ನಾವು ಮಾಹಿತಿಯನ್ನು ಕೊಡುತ್ತೇವೆ ಅಷ್ಟೆ. ಜಿಲ್ಲಾಧಿಕಾರಿಗಳ ಸಮಿತಿ ಏನಿದೆ. ಅವರು ಕ್ರಮವನ್ನು ತೆಗೆದುಕೊಂಡರೆ ನಾನು ಅದನ್ನು ಬಹಳ ಸಂತೋಷದಿಂದ ಸ್ವಾಗತ ಮಾಡುತ್ತೇನೆ. ರದ್ದು ಮಾಡಬೇಕೆಂದು ಹೇಳುವವನು ನಾನಾಗಿದ್ದೇನೆ. ಮತ್ತೆ ನಮ್ಮ ಖಾಸಗಿ ಬಸ್‌ಗಳ ಬಗ್ಗೆ ಮಾತನಾಡಿದರು.

ನಮ್ಮ ಕೆ.ಎಸ್.ಆರ್.ಟಿ.ಸಿ. ಒಳಗಡೆ ನಮ್ಮ ಸಂಸ್ತೆಯಲ್ಲೇ 1500 ಖಾಸಗಿ ವಾಹನಗಳು ಇತ್ತು. ನಾವು ಅಷ್ಟು ಬಸ್‌ಗಳನ್ನು ಅವರಿಂದ ಬಾಡಿಗೆಗೆ ತೆಗೆದುಕೊಂಡು ಓಡಿಸುತ್ತಿದ್ದೆವು. ಅವರಿಗೆ ಆ ಬಸ್‌ಗಳ ಬಾಡಿಗೆಯನ್ನು ಕೊಡುತ್ತಿದ್ದೆವು. ನಮ್ಮ ಸಂಸ್ಥೆಯ ವತಿಯಿಂದ ಆ ಬಸ್‌ಗಳನ್ನು ಓಡಿಸುತ್ತಿದ್ದೆವು. ಕೋಟ್ಯಾಂತರ ರೂಪಾಯಿ ಅಂದರೆ ಒಂದು ನೂರು ಕೋಟಿಗೂ ಹೆಚ್ಚು ಹಣವನ್ನು ಅವರಿಗೆ ಕೊಟ್ಟಿದ್ದೇವೆ. ಒಳ್ಳೆಯ ರೂಟ್‌ಗಳು ಮಾತ್ರ ಇವರಿಗೆ ಸಿಗುತ್ತಿತ್ತು. ಕೆಟ್ಟ ರೂಟ್‌ಗಳು ನಮಗೆ ಸಿಗುತ್ತಿತ್ತು. ಇವತ್ತು ಒಂದು ಖಾಸಗಿ ಬಸ್‌ಗಳೂ ಇಲ್ಲ. ಎಲ್ಲವನ್ನೂ ತೆಗೆದು ಹಾಕಿದ್ದೇವೆ. ಖಾಸಗಿಯವರ ಒಂದು ಬಸ್ ಕೂಡ ನಮ್ಮ ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯಲ್ಲಿ ಇಲ್ಲದ ಹಾಗೆ ಮಾಡಿದ್ದೇವೆ. ಎಲ್ಲಾ ಬಸ್‌ಗಳನ್ನು ವಾಪಸ್ ಕೊಟ್ಟಿದ್ದೇವೆ. ನಮ್ಮ ಸಾರಿಗೆ ಸಂಸ್ಥೆಯೇ ಪೂರ್ಣ ಮಟ್ಟದಲ್ಲಿ ಕೆಲಸವನ್ನು ನಿರ್ವಹಿಸುತ್ತಿದೆ. ಮಾನ್ಯ ಹೊರಟ್ಟಿಯವರು ಹೇಳಿದಂತೆ ಇವೆಲ್ಲವನ್ನೂ ಒಂದೇ ಸಲ ಸರಿ ಮಾಡುವುದಕ್ಕಾಗುವುದಿಲ್ಲ. ಈ ರೀತಿಯ ತಪ್ಪುಗಳನ್ನೆಲ್ಲಾ ಒಂದೇ ಸಲ ಸರಿ ಮಾಡುವುದಕ್ಕಾಗುವುದಿಲ್ಲ. 1600–1700ಕ್ಕೂ ಹೆಚ್ಚು ಖಾಸಗಿ ಬಸ್‌ಗಳು ಇವೆ. ಇವೆಲ್ಲವನ್ನೂ ಒಂದೇ ಸಲ ತೆಗೆದು ಹಾಕಿದರೆ ಅಷ್ಟೂ ಬಸ್‌ಗಳನ್ನು ಒಂದೇ ದಿನ ಹಾಕುವುದಕ್ಕೆ ನಮಗೆ ಸಾಕಷ್ಟು ಶಕ್ತಿ ಬೇಕಾಗುತ್ತದೆ. ಆರ್.ಟಿ.ಓ.

ಇರಬಹುದು, ಬೇರೆಯವರೂ ಇರಬಹುದು. ಅವರುಗಳ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಯಾರು ಸರಿಯಾಗಿ ಕ್ರಮವನ್ನು ತೆಗೆದುಕೊಂಡಿಲ್ಲ ಅವರ ಮೇಲೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ರಾಜ್ಯದಲ್ಲಿ ಪರ್ಮಿಟ್ ಇಲ್ಲದೆಯೇ ಯಾವುದೇ ಬಸ್‌ಗಳನ್ನು ಓಡಿಸುವುದಕ್ಕೆ ನಾವು ಬಿಡುವುದಿಲ್ಲ. ಆ ರೀತಿ ಇಲ್ಲವೂ ಇಲ್ಲ. ಇನ್ನು ವಯೋಲೇಷನ್ಸ್ ಬಗ್ಗೆ ಈಗಾಗಲೇ ಕೋರ್ಟುಗಳ ಮೆಟ್ಟಿಲನ್ನು ಹತ್ತಿದೆ. ಕೋಲಾರ ಇರಬಹುದು ಬೇರೆ ಬೇರೆ ಕಡೆಯಲ್ಲಿ ವಯೋಲೇಶನ್ಸ್ ಇರಬಹುದು. ನಾವು ಅವರಿಗೆ ಅನುಮತಿ ಕೊಟ್ಟಿರುವ ರೂಟ್ ಒಂದು ಅವರು ಬರುವ ರೂಟ್ ಇನ್ನೊಂದು. ಈ ರೀತಿಯಾದ ವಯೊಲೇಶನ್ಸ್ ಇದೆ. ಈ ವಯೋಲೇಶನ್ಸ್ ಬಗ್ಗೆ ಕೋರ್ಟಗಳಲ್ಲಿ ಕೇಸ್ ನಡೆಯುತ್ತಿದೆ. ಅಲ್ಲಿ ಇತ್ಯರ್ಥವಾದ ನಂತರ ಅದಕ್ಕೆ ಒಂದು ಅಂತಿಮ ರೂಪ ಬರುತ್ತದೆ. ಮಾನ್ಯ ಹೊರಟ್ಟಿಯವರು ಹೇಳಿದ ಹಾಗೆ ಯಾರು ಈ ರೀತಿಯ ತಪ್ಪುಗಳನ್ನು ಮಾಡುತ್ತಿದ್ದಾರೆ. ಅವರ ಮೇಲೆ ಕೂಡಲೇ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

**ಸಭಾಪತಿಯವರು :** ಈಗ ಇನ್ನು ಒಂದು ಪ್ರಶ್ನೆ ಉಳಿದಿದೆ. ಅದರ ಬಗ್ಗೆ ಹೆಚ್ಚು ಚರ್ಚೆ ಬೇಡ. ಪ್ರಶ್ನೆ ಉತ್ತರ ಅಷ್ಟಕ್ಕೆ ಸೀಮಿತಗೊಳಿಸಿ, ಒಂದು ಉಪ ಪ್ರಶ್ನೆಗೆ ಅವಕಾಶ ಇದೆ. ಭಾಷಣ ಅಲ್ಲ.

## ರಾಜ್ಯದ ವಿದ್ಯುತ್ ಸಮಸ್ಯೆ ಬಗ್ಗೆ

**87; ಶ್ರೀ ಅಶ್ವಥ್ ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು)**

**(ಅ)** ಕಳೆದ ಎರಡು ವರ್ಷಗಳಿಂದ ರಾಜ್ಯಕ್ಕೆ ಯಾವ ಯಾವ ಮೂಲಗಳಿಂದ ವಿದ್ಯುತ್ ಖರೀದಿಸಲಾಗಿದೆ; ಎಷ್ಟು ಪ್ರಮಾಣದ ವಿದ್ಯುತ್ ಖರೀದಿಸಲಾಗಿದೆ?

**(ಆ)** ಖಾಸಗಿ ಮೂಲಗಳಿಂದ ಖರೀದಿಸಿದ ವಿದ್ಯುಚ್ಛಕ್ತಿ ಪ್ರಮಾಣ ಎಷ್ಟು; ಸರ್ಕಾರಿ ಮತ್ತು ಇತರೆ ಮೂಲಗಳಿಂದ ಖರೀದಿಸಿದ ವಿದ್ಯುಚ್ಛಕ್ತಿ ಪ್ರಮಾಣ ಎಷ್ಟು ಹಾಗೂ ಖಾಸಗಿಯವರಿಂದ ಖರೀದಿಸಿದ ವಿದ್ಯುಚ್ಛಕ್ತಿಗೆ ನೀಡಿರುವ ಹಣವೆಷ್ಟು; ಸರ್ಕಾರಿ ಮತ್ತು ಇತರೆ

ಬಾಬ್ತಿನಿಂದ ಖರೀದಿಸಿದ ವಿದ್ಯುಚ್ಛಕ್ತಿಗೆ ನೀಡಿರುವ ಹಣವೆಷ್ಟು (ವಿವರ ನೀಡುವುದು).

(ಇ) ಕಾಳಿಕೊಡಸಳ್ಳಿ ಜಲವಿದ್ಯುತ್ ಯೋಜನೆಯಿಂದ ವಾರ್ಷಿಕ ಉತ್ಪತಿಯಾಗುತ್ತಿರುವ ವಿದ್ಯುತ್ ಪ್ರಮಾಣ ಎಷ್ಟು?

(**ಈ**) ಕಾಳಿಕೊಡಸಳ್ಳಿ ಜಲವಿದ್ಯುತ್ ಸ್ಥಾಪನೆಯಿಂದ ಮುಳುಗಡೆಯಾದ ಪ್ರದೇಶ ಎಷ್ಟು; ಈ ಯೋಜನೆಯಿಂದ ಮುಳುಗಡೆಯಾದ ಗ್ರಾಮಗಳೆಷ್ಟು; ಮುಳುಗಡೆಯಾದ ರೈತರ ಜಮೀನು ಮತ್ತು ಮನೆಗಳಿಗೆ ಪರಿಹಾರ ನೀಡಲಾಗಿದೆಯೆ; ಪರಿಹಾರ ರೂಪದಲ್ಲಿ ನೀಡಿರುವ ಒಟ್ಟು ಹಣವೆಷ್ಟು (ವಿವರ ನೀಡುವುದು)

(**ಉ**) ಕಾಳಿಕೊಡಸಳ್ಳಿ ಜಲವಿದ್ಯುತ್ ಯೋಜನೆಯಿಂದ ಜಮೀನು ಮತ್ತು ಮನೆಗಳನ್ನು ಕಳೆದುಕೊಂಡ ರೈತರಿಂದ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆಯೆ; ಹೂಡಿದ್ದರೆ ದಾವೆಗಳು ಯಾವ ಹಂತದಲ್ಲಿವೆ (ವಿವರ ನೀಡುವುದು)

(**ಊ**) ಕಾಳಿಕೊಡಸಳ್ಳಿ ಜಲವಿದ್ಯುತ್ ಸ್ಥಾಪನೆಯಿಂದ ಮುಳುಗಡೆಯಾದ ಗ್ರಾಮಸ್ಥರಿಗೆ ಪುನರ್ವಸತಿ ಕಲ್ಪಿಸಲಾಗಿದೆಯೆ; ಈ ಯೋಜನೆಯಿಂದ ಜಮೀನು ಕಳೆದುಕೊಂಡ ರೈತರಿಗೆ ಎಕರೆಗೆ ಎಷ್ಟು ಹಣವನ್ನು ಪರಿಹಾರವಾಗಿ ನೀಡಲಾಗಿದೆ? (ವಿವರ ನೀಡುವುದು).

**ಶೋಭಾ ಕರಂದ್ಲಾಜೆ (ಇಂಧನ ಸಚಿವರು)**

(ಅ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ : ಕಳೆದ 2 ವರ್ಷಗಳಿಂದ ಖರೀದಿಸಲಾದ ವಿದ್ಯುತ್ ಪ್ರಮಾಣದ ಮೂಲವಾರು ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ. | ಮೂಲ | ಖರೀದಿಸಲಾದ ವಿದ್ಯುತ್‌ನ ಪ್ರಮಾಣ (ಮಿಲಿಯನ್ ಯೂನಿಟ್ಟುಗಳಲ್ಲಿ) | |
|---|---|---|---|
| | | 2009–10 | 2010–11 |
| 1 | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ | 24,771 | 21,520 |
| 2 | ಕೇಂದ್ರೀಯ ವಿದ್ಯುತ್ ಉತ್ಪಾದನಾ ಘಟಕಗಳಿಂದ ರಾಜ್ಯದ ಪಾಲು (ಯು.ಐ. ಸೇರಿದಂತೆ) | 11,019 | 11,026 |
| 3 | ಸ್ವತಂತ್ರ ವಿದ್ಯುತ್ ಉತ್ಪಾದಕರ ವಿದ್ಯುತ್ ಉತ್ಪಾದನಾ ಘಟಕಗಳು (ಕ್ಯಾಪ್ಟಿವ್ ಜನರೇಷನ್ ಸೇರಿದಂತೆ) | 659 | 2,186 |
| 4 | ಅಸಂಪ್ರದಾಯಕ ವಿದ್ಯುತ್ ಉತ್ಪಾದನಾ ಘಟಕಗಳು (ಎನ್.ಸಿ.ಇ. ಯೋಜನೆಗಳು) | 5,270 | 5,872 |
| 5 | ಇತರ ಮೂಲಗಳಿಂದ ವಿದ್ಯುತ್ ಖರೀದಿ | 1,570 | 7,104 |
| | **ಒಟ್ಟು** | **43,289** | **47,708** |

**(ಆ)** ಕಳೆದ 2 ವರ್ಷಗಳಿಂದ ಖಾಸಗಿ, ಸರ್ಕಾರಿ ಮತ್ತು ಇತರ ಮೂಲಗಳಿಂದ ಖರೀದಿಸಿದ ವಿದ್ಯುತ್‌ನ ಪ್ರಮಾಣ ಹಾಗೂ ವಿದ್ಯುತ್ ಖರೀದಿಗೆ ನೀಡಿದ ಹಣದ ಪ್ರತ್ಯೇಕ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

(ಇ) **ಕರ್ನಾಟಕ ವಿದ್ಯುತ್ ನಿಗಮ ನಿಯಮಿತ :** ಕೊಡಸಳ್ಳಿ ಜಲವಿದ್ಯುತ್ ಯೋಜನೆಯಿಂದ ವಾರ್ಷಿಕ ಉತ್ಪತ್ತಿಯಾಗುತ್ತಿರುವ ವಿದ್ಯುತ್ ಪ್ರಮಾಣದ ವಿವರ ಈ ಕೆಳಗಿನಂತಿದೆ.

(ವಿದ್ಯುತ್ ಉತ್ಪಾದನೆ) (ದಶ ಲಕ್ಷ ಯೂನಿಟ್ಟುಗಳಲ್ಲಿ)

| | |
|---|---|
| 2009–10 | 31.811 |
| 2010–11 | 256.14 |
| 2011–12 | 410.84 |

**(ಫೆಬ್ರವರಿ 2012 ವರೆಗೆ)**

**(ಈ)** ಕಾಳಿಕೊಡಸಳ್ಳಿ ಜಲವಿದ್ಯುತ್ ಯೋಜನೆಯಿಂದ ಮುಳುಗಡೆಯಾದ ಪ್ರದೇಶ

| | ಕದ್ರಾ | ಕೊಡಸಳ್ಳಿ | ಒಟ್ಟು |
|---|---|---|---|
| ಮಾಲ್ಕಿ | 443 | 386 | 829 ಹೆಕ್ಟೇರ್ |
| ಕಂದಾಯ | 87 | 141 | 228 ಹೆಕ್ಟೇರ್ |
| ಅರಣ್ಯ | 2718 | 1518 | 4236 ಹೆಕ್ಟೇರ್ |
| ಒಟ್ಟು | 3248 | 2045 | 5293 ಹೆಕ್ಟೇರ್ |
| ಮುಳುಗಡೆ ಗೊಂಡ ಗ್ರಾಮ | 8 | 9 | 17 |
| ಕುಟುಂಬ | 364 | 415 | 779 |
| ಭಾದಿತರಾದ ಸಂತ್ರಸ್ತರು | 1458 | 1433 | 2891 |
| ನೀಡಿರುವ ಪರಿಹಾರ | 215.6 ಲಕ್ಷ | 1974.5 ಲಕ್ಷ | 2190.1 ಲಕ್ಷ |

**(ಉ)** ಒಟ್ಟು ಹೂಡಲಾದ ದಾವೆ 478 ಪ್ರಕರಣಗಳು

ತೀರ್ಮಾನವಾದ ದಾವೆ : 171 ಪ್ರಕರಣಗಳು ಲೋಕ್‌ಅದಾಲತ್ ಮೂಲಕ

: 16 ಪ್ರಕರಣ ನ್ಯಾಯಾಲಯಗಳ ಮೂಲಕ

: 12 ಪ್ರಕರಣ ಡಿ.ಸಿ. ನ್ಯಾಯಾಲಯದ ಮೂಲಕ

ಉಳಿದಿರುವ ಪ್ರಕರಣಗಳು : 310 ಪ್ರಕರಣ ಯಲ್ಲಾಪುರ ನ್ಯಾಯಾಲಯ ದಲ್ಲಿ ಬಾಕಿ ಇರುವುದು.

**(ಊ)** ಹೌದು. ಅಂಕೋಲಾ ತಾಲ್ಲೂಕಿನ ಹೆಗ್ಗಾರ, ಕಲ್ಲೇಶ್ವರ ಮತ್ತು ಹಳವಳ್ಳಿ ಎಂಬಲ್ಲಿ 3 ಮತ್ತು ಕದ್ರಾದಲ್ಲಿ 1 ಒಟ್ಟು 4 ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲಾಗಿದೆ.

ರೈತರಿಗೆ ನೀಡಿರುವ ಪರಿಹಾರ :

ರೂ. 20,000/– ಪ್ರತಿ ಎಕರೆಗೆ 1 ಬೆಳೆ ತರಿ ಭೂಮಿಗೆ (1991ರಲ್ಲಿ)

ರೂ. 28,000/– ಪ್ರತಿ ಎಕರೆಗೆ 2 ಬೆಳೆ ತರಿ ಭೂಮಿಗೆ (1991ರಲ್ಲಿ)

**ಕಳೆದ 2 ವರ್ಷಗಳಿಂದ ಸರ್ಕಾರಿ, ಖಾಸಗಿ ಮತ್ತು ಇತರ ಮೂಲಗಳಿಂದ ಖರೀದಿಸಿದ ವಿದ್ಯುತ್‌ನ ಪ್ರಮಾಣ ಹಾಗೂ ವಿದ್ಯುತ್ ಖರೀದಿಗೆ ಹಣದ ಪ್ರತ್ಯೇಕ ವಿವರಗಳು.**

| ಕ್ರ. ಸಂ. | ಮೂಲ | ವಿದ್ಯುತ್ ಖರೀದಿಯ ವಿವರಗಳು | | | |
|---|---|---|---|---|---|
| | | 2009–10 | | 2010–11 | |
| | | ವಿದ್ಯುತ್ ಖರೀದಿಯ ಪ್ರಮಾಣ (ಮಿ. ಯೂನಿಟ್ಟುಗಳಲ್ಲಿ) | ವಿದ್ಯುತ್ ಖರೀದಿಗೆ ನೀಡಿದ ಹಣ (ರೂ.ಕೋಟಿಗಳಲ್ಲಿ) | ವಿದ್ಯುತ್ ಖರೀದಿಯ ಪ್ರಮಾಣ (ಮಿ. ಯೂನಿಟ್ಟುಗಳಲ್ಲಿ) | ವಿದ್ಯುತ್ ಖರೀದಿಗೆ ನೀಡಿದ ಹಣ (ರೂ.ಕೋಟಿಗಳಲ್ಲಿ) |
| 1 | ಸರ್ಕಾರಿ ಮೂಲಗಳಿಂದ ಖರೀದಿಸಲಾದ ವಿದ್ಯುತ್ | 35,790 | 6,925.77 | 32,546 | 6,801.98 |
| 2 | ಖಾಸಗಿ ವಲಯದಲ್ಲಿನ ಬೃಹತ್ ಸ್ವತಂತ್ರ ವಿದ್ಯುತ್ ಉತ್ಪಾದಕರ ವಿದ್ಯುತ್ ಉತ್ಪಾದನಾ ಘಟಕಗಳು ಹಾಗೂ ಅಸಂಪ್ರದಾಯಕ ವಿದ್ಯುತ್ ಉತ್ಪಾದನಾ ಘಟಕಗಳಿಂದ ಖರೀದಿಸಲಾದ ವಿದ್ಯುತ್ | 5929 | 2,238.32 | 8,058 | 2,967.05 |
| 3 | ಇತರ ಮೂಲಗಳಿಂದ ಖರೀದಿಸಲಾದ ವಿದ್ಯುತ್ | 1,570 | 1,041.06 | 7,104 | 3,898.30 |
| | **ಒಟ್ಟು ಮೊತ್ತ** | **43,289** | **10205.15** | **47,708** | **13667.33** |

**ಶ್ರೀ ಅಶ್ವತ್ ನಾರಾಯಣ :** ಮಾನ್ಯ ಸಭಾಪತಿಯವರೆ, ಕಾಳಿಕೊಡಸಳ್ಳಿ ಜಲವಿದ್ಯುತ್ ಘಟಕಕ್ಕೆ ಸಂಬಂಧಪಟ್ಟ ಹಾಗೆ ಒಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ. ಅದರಲ್ಲೂ ವಿಶೇಷವಾಗಿ ರೈತರಿಗೆ ಆಗಿರತಕ್ಕಂಥ ಅನ್ಯಾಯದ ಬಗ್ಗೆ ಒಂದು ಪ್ರಶ್ನೆ ಕೇಳುತ್ಥೇನೆ. ರೈತರು 1997 ರಿಂದ ಇಲ್ಲಿಯವರೆಗೆ ಕೋರ್ಟುಗಳಲ್ಲಿ ಕೇಸುಗಳನ್ನು ಹಾಕಿಕೊಂಡು ಕೋರ್ಟಿನ ಮುಖಾಂತರ ಶಕ್ತಿ ಭವನವನ್ನು ಜಪ್ತಿ ಮಾಡಿ ಅದರಲ್ಲಿ ಬರತಕ್ಕಂತಹ ಹಣದಲ್ಲಿ ಪರಿಹಾರವನ್ನು ಕೊಡಿ ಎನ್ನುವ ಮಟ್ಟಕ್ಕೆ ಆ ಇಲಾಖೆ ಇದೆ. ಇದು ಬಹಳ ಮುಖ್ಯವಾದದ್ದು.

**ಸಭಾಪತಿಯವರು :** ಇದರ ಬಗ್ಗೆ ಭಾಷಣ ಬೇಡ. ಪ್ರಶ್ನೆ ಮಾತ್ರ ಕೇಳಿ, ಇಲ್ಲವಾದಲ್ಲಿ ಸಮಯ ಆಗಿದೆ ಎಂದು ಮುಂದಕ್ಕೆ ಹೋಗುತ್ತೇನೆ. ನೇರ ಪ್ರಶ್ನೆಗೆ ಬನ್ನಿ. ನನಗೆ ಸಮಯ ಕೂಡ ಬಹಳ ಮುಖ್ಯವಾದದ್ದು.

**ಕು. ಶೋಭಾ ಕರಂದ್ಲಾಜೆ :** ಮಾನ್ಯ ಸಭಾಪತಿಯವರೆ, 1991ರಲ್ಲಿ ಈ ಕಾಳಿಕೊಡಸಳ್ಳಿಲ ಯೋಜನೆ ಆಗಿದೆ. ಆಗಿನ ಪ್ರಕಾರ ನಾವು ಪರಿಹಾರ ಮತ್ತು ಉಳಿದಂತಹ ಕೆಲಸಗಳಿಗೆ 21 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು. ನಂತರ ಕೋರ್ಟಿಗೆ ಹೋದರು. ಆಗ ಕೋರ್ಟಿನಲ್ಲಿ ಎನ್‌ಹ್ಯಾನ್ಸ್‌ಮೆಂಟ್ ಮಾಡಿತ್ತು. ಇದೆಲ್ಲವೂ ಆಗಿ ಸುಮಾರು 75 ಕೋಟಿ ಖರ್ಚನ್ನು ನಾನು ಅಲ್ಲಿಗೆ ಮಾಡಿದ್ದೇವೆ. ಅದರಲ್ಲಿ ಪರಿಹಾರ ಇರಬಹುದು. ರಸ್ತೆ ಇರಬಹುದು, ಆಸ್ಪತ್ರೆ ಇರಬಹುದು. ಅಲ್ಲಿ ಕಟ್ಟಿದಂತಹ ಕಟ್ಟಡ ಇರಬಹುದು ಇವೆಲ್ಲ ಸೇರಿ 21 ಕೋಟಿ ಇದ್ದುದು 75 ಕೋಟಿ ಆಗಿದೆ. ಇನ್ನೂ 310 ಪ್ರಕರಣಗಳು ನ್ಯಾಯಾಲ ಯದಲ್ಲಿ ಬಾಕಿ ಇರುತ್ತದೆ. ಆ ನ್ಯಾಯಾಲಯ ಈ ಪ್ರಕರಣಗಳ ಬಗ್ಗೆ ಯಾವಾಗ ತೀರ್ಮಾನವನ್ನು ಕೊಡುತ್ತದೆಯೋ ಆ ನ್ಯಾಯಾಲಯ ಏನು ಹೇಳುತ್ತದೆಯೋ ಅದರಂತೆ ನಾವು ನಡೆದುಕೊಳ್ಳುವುದಕ್ಕೆ ತಯಾರಿದ್ದೇವೆ. ಮತ್ತು ಪರಿಹಾರವನ್ನು ಕೊಡುವುದಕ್ಕೆ ತಯಾರಿದ್ದೇವೆ. ಅಂದರೆ ಅವರು

ಪರಿಹಾರವನ್ನು ಆಗ ತೆಗೆದುಕೊಂಡಿದ್ದರು. ಆದರೆ ಹೆಚ್ಚುವರಿ ಪರಿಹಾರವನ್ನು ಕೊಡಬೇಕೆಂದು ನ್ಯಾಯಾಲಯಕ್ಕೆ ಹೋಗಿದ್ದಾರೆ. 310 ಪ್ರಕರಣಗಳು ಇತ್ಯರ್ಥವಾದ ತಕ್ಷಣ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಪತ್ತೆಯಾಗದಿರುವ ಕೊಲೆ ಮತ್ತು ದರೋಡೆ ಪ್ರಕರಣಗಳ ಬಗ್ಗೆ :**

**19; ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳಿಯ ಸಂಸ್ಥೆಗಳ ಕ್ಷೇತ್ರ)**

**(ಅ)** ಕಳೆದ 5 ವರ್ಷಗಳಲ್ಲಿ ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ದಾಖಲಾದ ಕೊಲೆ, ದರೋಡೆ ಪ್ರಕರಣಗಳ ಸಂಖ್ಯೆ ಎಷ್ಟು : ಈ ಪ್ರಕರಣಗಳ ತನಿಖೆ ಯಾವ ಹಂತದಲ್ಲಿದೆ; (ಠಾಣಾವಾರು, ದಿನಾಂಕವಾರು ವಿವರ ನೀಡುವುದು)

**(ಆ)** ಸದರಿ ಪ್ರಕರಣಗಳಲ್ಲಿ ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ ಎಷ್ಟು; ಆರೋಪಿಯನ್ನು ಗುರುತಿಸದೇ ಇರುವ ಪ್ರಕರಣಗಳನ್ನು ಸಿಐಡಿ ತನಿಖೆಗೆ ನೀಡುವ ಉದ್ಧೇಶ ಸರ್ಕಾರಕ್ಕಿದೆಯೇ?

**ಆರ್. ಅಶೋಕ (ಗೃಹ ಮತ್ತು ಸಾರಿಗೆ ಸಚಿವರು)**

**(ಅ)** ಕಳೆದ 5 ವರ್ಷಗಳಲ್ಲಿ ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ದಾಖಲಾದ ಕೊಲೆ, ದರೋಡೆ ಪ್ರಕರಣಗಳ ಸಂಖ್ಯೆ ಒಟ್ಟು 590. ವಿವರ ಕೆಳಕಂಡಂತಿದೆ.

**ಗುಲ್ಬರ್ಗಾ ಜಿಲ್ಲೆ :**

| | |
|---|---|
| ಕೊಲೆ | 423 |
| ದರೋಡೆ | 40 |

**ಯಾದಗಿರಿ ಜಿಲ್ಲೆ :**

| | |
|---|---|
| ಕೊಲೆ | 121 |

| | |
|---|---|
| ದರೋಡೆ | 06 |

ಈ ಪ್ರಕರಣಗಳ ಪೈಕಿ ತನಿಖೆಯಲ್ಲಿರುವ ಪ್ರಕರಣಗಳ ಠಾಣಾವಾರು ದಿನಾಂಕವಾರು ಮಾಹಿತಿಯನ್ನು **ಅನುಬಂಧ–ಅ** ರಲ್ಲಿ ಒದಗಿಸಲಾಗಿದೆ.

**(ಆ)** ಸದರಿ 590 ಪ್ರಕರಣಗಳಲ್ಲಿ ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ ಒಟ್ಟು 536. ವಿವರ ಕೆಳಕಂಡಂತಿದೆ.

**ಗುಲ್ಬರ್ಗಾ ಜಿಲ್ಲೆ :**

| | |
|---|---|
| ಕೊಲೆ | 390 |
| ದರೋಡೆ | 36 |

**ಯಾದಗಿರಿ ಜಿಲ್ಲೆ :**

| | |
|---|---|
| ಕೊಲೆ | 105 |
| ದರೋಡೆ | 05 |

ಆರೋಪಿಯನ್ನು ಗುರುತಿಸದೇ ಇರುವ ಪ್ರಕರಣಗಳಲ್ಲಿ ಪತ್ತೆ ಕಾರ್ಯವನ್ನು ಮುಂದುವರೆಸಲು ಕ್ರಮ ಕೈಗೊಳ್ಳಲಾಗಿದ್ದು, ಇವುಗಳನ್ನು ಸಿಐಡಿ ತನಿಖೆಗೆ ನೀಡುವ ಉದ್ದೇಶ ಇರುವುದಿಲ್ಲ.

**ಅನುಬಂಧ – ಅ**

**ಗುಲ್ಬರ್ಗಾ ಜಿಲ್ಲೆಯಲ್ಲಿ ತನಿಖೆಯಲ್ಲಿರುವ ಕೊಲೆ ಮತ್ತು ದರೋಡೆ ಪ್ರಕರಣಗಳ ಠಾಣಾವಾರು, ದಿನಾಂಕವಾರು ವಿವರ**

**ಕೊಲೆ ಪ್ರಕರಣಗಳು :**

| ಕ್ರ. ಸಂ. | ಠಾಣೆಯ ಹೆಸರು ಗುನ್ನೆ ನಂ ಕಲಂ | ವರದಿ ದಿನಾಂಕ | ತನಿಖೆಯ ಹಂತ |
|---|---|---|---|
| 1 | ರಾಘವೇಂದ್ರ ನಗರ ಠಾಣೆ ಗುನ್ನೆ ನಂ. 104/11 ಕಲಂ 302, ಸಂ. | 27.12.2011 | ಆರೋಪಿ ಪತ್ತೆ ಕುರಿತು |

| | | | |
|---|---|---|---|
| | 34 ಐಪಿಸಿ & 3(1) (10.2)(ಗಿ) (ಗಿಖಖ) ಎಸ್.ಸಿ/ಎಸ್.ಟಿ. ಯಾಕ್ಟ್ 1989 | | ತನಿಖೆಯಲ್ಲಿರುತ್ತದೆ. |
| 2 | ಸ್ಟೇಶನ್ ಬಜಾರ ಪೊಲೀಸ್ ಠಾಣೆ 129/2011 ಕಲಂ, 302 ಐಪಿಸಿ | 13.07.2011 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 3 | ಮಹಿಳಾ ಠಾಣೆ ಗುನ್ನೆ ನಂ 12/2012 ಕಲಂ 498(ಎ), 302 ಐಪಿಸಿ | 06.02.2012 | ಆರೋಪಿ ಪತ್ತೆ & ಪಿ.ಎಮ್.ಈ ವರದಿ ಕುರಿತು ತನಿಖೆಯಲ್ಲಿರುತ್ತದೆ. |
| 4 | ಅಶೋಕ ನಗರ ಪೊಲೀಸ್ ಠಾಣೆ ಗುನ್ನೆ ನಂ 19/12 ಕಲಂ 302, 201 ಸಂ 34 ಐ.ಪಿ.ಸಿ | 04.03.2012 | ಆರೋಪಿ ಪತ್ತೆ & ಪಿ.ಎಮ್.ಈ ವರದಿ ಕುರಿತು ತನಿಖೆಯಲ್ಲಿರುತ್ತದೆ. |
| 5 | ಚೌಕ ಠಾಣೆ ಗುನ್ನೆ ನಂ. 217/2011 ಕಲಂ 143, 148, 341, 504, 302, ಸಂ 149 ಐ.ಪಿ.ಸಿ. | 17.10.2011 | ಎಫ್.ಎಸ್.ಎಲ್.ವರದಿ ಬರುವ ಕುರಿತು |
| 6 | ಚೌಕ ಠಾಣೆ ಗುನ್ನೆ ನಂ. 219/2011 ಕಲಂ. 341, 504, 302 ಐ.ಪಿ.ಸಿ. | 23.10.2011 | ಎಫ್.ಎಸ್.ಎಲ್. ವರದಿ & ಪಿ.ಎಮ್.ಈ. ವರದಿ ಬರುವ ಕುರಿತು ತನಿಖೆಯಲ್ಲಿರುತ್ತದೆ. |
| 7 | ಚೌಕ ಠಾಣೆ ಗುನ್ನೆ ನಂ. 248/11 ಕಲಂ 143, 147, 148, 302, ಸಂ 149 ಐ.ಪಿ.ಸಿ. | 26.12.2011 | ಎಫ್.ಎಸ್.ಎಲ್. ವರದಿ ಕುರಿತು ತನಿಖೆಯಲ್ಲಿರುತ್ತದೆ. |
| 8 | ರೋಜಾ ಪೊಲೀಸ್ ಠಾಣೆಯ ಗುನ್ನೆ ನಂ. 114/11 ಕಲಂ 302 ಐ.ಪಿ.ಸಿ. | 05.12.2011 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |

| | | | |
|---|---|---|---|
| 9 | ಮಹಾಗಾಂವ ಠಾಣೆ ಗುನ್ನೆ ನಂ. 59/10 ಕಲಂ 302, 201 ಐ.ಪಿ.ಸಿ. | 24.05.2010 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 10 | ಮಹಾಗಾಂವ ಠಾಣೆ ಗುನ್ನೆ ನಂ. 02/2012 ಕಲಂ 302, 201 ಐ.ಪಿ.ಸಿ. ಸಂ. 34 ಐಪಿಸಿ. | 02.01.2012 | ಪಿ.ಎಮ್.ಈ. ವರದಿ ಪಡೆಯುವ ಕುರಿತು |
| 11 | ವಿಶ್ವವಿದ್ಯಾಲಯ ಠಾಣೆ ಗುನ್ನೆ ನಂ. 266/10 ಕಲಂ. 302, 201 ಐಪಿಸಿ | 19.10.2010 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 12 | ವಿಶ್ವವಿದ್ಯಾಲಯ ಠಾಣೆ ಗುನ್ನೆ ನಂ. 57/2011 ಕಲಂ 302 ಐಪಿಸಿ | 08.032011 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 13 | ಫರತಾಬಾದ ಠಾಣೆ ಗುನ್ನೆ ನಂ. 108/10 ಕಲಂ 302 ಐ.ಪಿ.ಸಿ. | 03.06.2010 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 14 | ಫರತಾಬಾದ ಠಾಣೆ ಗುನ್ನೆ ನಂ. 153/11 ಕಲಂ. 143, 147, 504, 309, 306, 302, ಸಂ: 149 ಐಪಿಸಿ | 07.08.2011 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 15 | ಜೇವರ್ಗಿ ಠಾಣೆ ಗುನ್ನೆ ನಂ. 92/2011 ಕಲಂ 341, 143, 147, 148, 149, 302, ಸಂ: 149 ಐಪಿಸಿ | 23.05.2011 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 16 | ಅಫಜಲಪೂರ ಠಾಣೆ ಗುನ್ನೆ ನಂ. 183/11 ಕಲಂ 302 ಐ.ಪಿ.ಸಿ. | 06.11.2011 ರಂದು 06:00 ಪಿ.ಎಮ್. | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 17 | ಅಫಜಲಪೂರ ಠಾಣೆ ಗುನ್ನೆ ನಂ. 90/11 ಕಲಂ 302, 201 ಐ. ಪಿ. ಸಿ. | 23.05.2011 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |

| | | | |
|---|---|---|---|
| 18 | ನರೋಣಾ ಠಾಣೆ ಗುನ್ನೆ ನಂ. 95/11 ಕಲಂ, 323, 324, 504, 506, 302 ಐ.ಪಿ.ಸಿ. | 23.09.2011 | ಎಫ್.ಎಸ್.ಎಲ್. ವರದಿ ಕುರಿತು |
| 19 | ನರೋಣಾ ಠಾಣೆ ಗುನ್ನೆ ನಂ. 10/12 ಕಲಂ 302, 201 ಐ.ಪಿ.ಸಿ. | 16.01.2012 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 20 | ಆಳಂದ ಪೊಲೀಸ್ ಠಾಣೆ ಗುನ್ನೆ ನಂ. 283/11 ಕಲಂ 448, 302 ಐ.ಪಿ.ಸಿ. | 06.12.2011 | ಎಫ್.ಎಸ್.ಎಲ್. ವರದಿ ಕುರಿತು. |
| 21 | ಆಳಂದ ಪೊಲೀಸ್ ಠಾಣೆ ಗುನ್ನೆ ನಂ. 13/12 ಕಲಂ 302, 201 ಐ.ಪಿ.ಸಿ. | 20.01.2012 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 22 | ಆಳಂದ ಪೊಲೀಸ್ ಠಾಣೆ ಗುನ್ನೆ ನಂ. 27/12 ಕಲಂ 302, 201 ಐ.ಪಿ.ಸಿ. | 05.02.2012 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 23 | ಆಳಂದ ಪೊಲೀಸ್ ಠಾಣೆ ಗುನ್ನೆ ನಂ. 28/12 ಕಲಂ 302, 504 ಐ.ಪಿ.ಸಿ. | 06.02.2012 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 24 | ನಿಂಬರ್ಗಾ ಪೊಲೀಸ್ ಠಾಣೆ ಗುನ್ನೆ ನಂ. 5/11 ಕಲಂ 302, 201. 109, ಸಂಗಡ 34 ಐ.ಪಿ.ಸಿ. | 13.01.2011 | ಪಿ.ಎಮ್.ಈ. ವರದಿ ಪಡೆಯುವ ಕುರಿತು |
| 25 | ಮಾದನಹಿಪ್ಪರಗಾ ಪೊಲೀಸ್ ಠಾಣೆ 5/11 ಕಲಂ 302, 201 ಐ.ಪಿ.ಸಿ. | 17.01.2011 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 26 | ಮಾದನಹಿಪ್ಪರಗಾ ಪೊಲೀಸ್ ಠಾಣೆ 52/11 ಕಲಂ 3143, 147, 148, 302, 506, 149, ಐ.ಪಿ.ಸಿ. | 05.09.2011 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |

| | | | |
|---|---|---|---|
| 27 | ಚಿಂಚೋಳಿ ಪೊಲೀಸ್ ಠಾಣೆ ಗುನ್ನೆ ನಂ. 25/12 ಕಲಂ 302 ಐ.ಪಿ.ಸಿ. | 09.03.2012 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 28 | ರಟಕಲ್ ಪೊಲೀಸ್ ಠಾಣೆ ಗುನ್ನೆ ನಂ. 6/12 ಕಲಂ 143, 147, 148, 302, 149 ಐ.ಪಿ.ಸಿ. | 18.02.2012 | ಆರೋಪಿ ಪತ್ತೆ & ಪಿ.ಎಮ್.ಈ. ವರದಿ ಕುರಿತು ತನಿಖೆಯಲ್ಲಿರುತ್ತದೆ. |
| 29 | ಚಿತ್ತಾಪೂರ ಪೊಲೀಸ್ ಠಾಣೆ ಗುನ್ನೆ ನಂ. 24/12 ಕಲಂ 324, 302, 109, ಸಂ 34 ಐ.ಪಿ.ಸಿ. ಮತ್ತು ಆಯುಧ ಕಾಯ್ದೆ | 14.03.2012 | ಆರೋಪಿ ಪತ್ತೆ & ಪಿ.ಎಮ್.ಈ. ವರದಿ ಕುರಿತು ತನಿಖೆಯಲ್ಲಿರುತ್ತದೆ. |
| 30 | ಸೇಡಂ ಪೊಲೀಸ್ ಠಾಣೆ ಗುನ್ನೆ ನಂ. 128/11 ಕಲಂ 498(ಎ), 302 ಐ.ಪಿ.ಸಿ. | 30.07.2011 | ಎಫ್.ಎಸ್.ಎಲ್. ವರದಿ & ಪಿ.ಎಮ್.ಈ. ವರದಿ ಕುರಿತು |
| 31 | ಸೇಡಂ ಪೊಲೀಸ್ ಠಾಣೆ ಗುನ್ನೆ ನಂ. 10/12 ಕಲಂ 302 ಐ. ಪಿ. ಸಿ. | 07.01.2012 | ಎಫ್.ಎಸ್.ಎಲ್. ವರದಿ & ಪಿ.ಎಮ.ಈ. ವರದಿ ಕುರಿತು |
| 32 | ಸೇಡಂ ಪೊಲೀಸ್ ಠಾಣೆ ಗುನ್ನೆ ನಂ. 231/10 ಕಲಂ 376, 302, 231 ಐ. ಪಿ. ಸಿ. | 27.11.2010 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ |
| 33 | ಸೇಡಂ ಪೊಲೀಸ್ ಠಾಣೆ ಗುನ್ನೆ ನಂ. 241/10 ಕಲಂ 302, 201 ಐ. ಪಿ. ಸಿ. | 14.12.2010 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 34 | ರೇವೂರ ಪೊಲೀಸ್ ಠಾಣೆ ಗುನ್ನೆ ನಂ. 64/11 ಕಲಂ 302, ಐ. ಪಿ. ಸಿ. | 12.09.2011 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |

| | | | |
|---|---|---|---|
| 35 | ಗುಲಬರ್ಗಾ ಗ್ರಾಮೀಣ ಪೋಲೀಸ್ ಠಾಣೆ ಗುನ್ನೆ ನಂ. 211/11 ಕಲಂ 302, 201 ಐ. ಪಿ. ಸಿ. | 18.08.2011 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 36 | ಗುಲಬರ್ಗಾ ಗ್ರಾಮೀಣ ಪೋಲೀಸ್ ಠಾಣೆ ಗುನ್ನೆ ನಂ. 338/11 ಕಲಂ 302 ಐ. ಪಿ. ಸಿ. | 15.11.2011 | ಎಪ್.ಎಸ್.ಎಲ್.ವರದಿ & ಆರೋಪಿ ಪತ್ತೆ ಕುರಿತು |
| 37 | ಗುಲಬರ್ಗಾ ಗ್ರಾಮೀಣ ಪೋಲೀಸ್ ಠಾಣೆ ಗುನ್ನೆ ನಂ. 62/12 ಕಲಂ 302, 201 ಐ. ಪಿ. ಸಿ. | 28.02.2012 | ಪಿ. ಎಮ್. ಈ. & ಆರೋಪಿ ಪತ್ತೆ ಕುರಿತು |
| 38 | ಗುಲಬರ್ಗಾ ಗ್ರಾಮೀಣ ಪೋಲೀಸ್ ಠಾಣೆ ಗುನ್ನೆ ನಂ. 82/12 ಕಲಂ 143, 147, 148, 504, 324, 326, 307, 302, 149, ಐ.ಪಿ.ಸಿ. | 14.03.2012 | ಪಿ.ಎಮ್.ಈ. & ಆರೋಪಿ ಪತ್ತೆ ಕುರಿತು |
| 39 | ಶಹಾಬಾದ್ ಪೋಲೀಸ್ ಠಾಣೆ ಗುನ್ನೆ ನಂ. 74/11 ಕಲಂ 302 ಐ. ಪಿ. ಸಿ. | 06.05.2011 | ಎಪ್.ಎಸ್.ಎಲ್. ವರದಿ ಪಡೆಯುವ ಕುರಿತು |
| 40 | ಶಹಾಬಾದ್ ಪೋಲೀಸ್ ಠಾಣೆ ಗುನ್ನೆ ನಂ. 17/12 ಕಲಂ 354, 307, 302 ಐ. ಪಿ. ಸಿ. | 22.02.2012 | ಆರೋಪಿ ದಸ್ತಗಿರಿ ಮತ್ತು ಪಿ. ಎಮ್. ಈ. ವರದಿ ಕುರಿತು |
| 41 | ಸುಲೇಪೇಟ ಪೋಲೀಸ್ ಠಾಣೆಯ ಗುನ್ನೆ ನಂ. 128/2010 ಕಲಂ 302, 201 ಐ. ಪಿ. ಸಿ. | 10.01.2010 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |

**ದರೋಡೆ :**

| ಕ್ರ. ಸಂ. | ಠಾಣೆಯ ಹೆಸರು ಗುನ್ನೆ ನಂ ಕಲಂ | ವರದಿ ದಿನಾಂಕ | ತನಿಖೆಯ ಹಂತ |
|---|---|---|---|
| 1 | ಬ್ರಹ್ಮಪೂರ ಪೊಲೀಸ್ ಠಾಣೆ ಗುನ್ನೆ ನಂ. 142/2011 ಕಲಂ 397 ಐಪಿಸಿ | 17.07.2011 | ಆರೋಪಿ ಮತ್ತು ಮಾಲು ಮತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 2 | ಬ್ರಹ್ಮಪೂರ ಪೊಲೀಸ್ ಠಾಣೆ ಗುನ್ನೆ ನಂ. 13/12 ಕಲಂ. 395 ಐಪಿಸಿ | 19.01.2012ರಂದು 18:30 ಗಂಟೆಗೆ | ಆರೋಪಿ ಮತ್ತು ಮಾಲು ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 3 | ದೇವಲಗಾಣಗಾಪೂರ ಠಾಣೆ ಗುನ್ನೆ ನಂ. 99/10 ಕಲಂ 395 ಐ.ಪಿ.ಸಿ. | 08.12.2010 | ಆರೋಪಿ ಮತ್ತು ಮಾಲು ಪತ್ತೆ ಕುರಿತು ತನಿಖೆಯಲ್ಲಿರುತ್ತದೆ |
| 4 | ವಾಡಿ ಪೊಲೀಸ್ ಠಾಣೆ 240/2011 ಕಲಂ 395 ಐ.ಪಿ.ಸಿ | 30.12.2011 | ಆರೋಪಿ ದಸ್ತಗಿರಿ ಕುರಿತು ತನಿಖೆಯಲ್ಲಿರುತ್ತದೆ. |
| 5 | ಅಶೋಕ ನಗರ ಪೊಲೀಸ್ ಠಾಣೆ 84/2011 ಕಲಂ 397 ಐಪಿಸಿ | 04.08.2011 | ಆರೋಪಿ ಮತ್ತು ಮಾಲು ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |

## ಯಾದಗಿರಿ ಜಿಲ್ಲೆಯಲ್ಲಿ ತನಿಖೆಯಲ್ಲಿರುವ ಕೊಲೆ ಮತ್ತು ದರೋಡೆ ಪ್ರಕರಣಗಳ ಠಾಣಾವಾರು, ದಿನಾಂಕವಾರು ವಿವರ

**ಕೊಲೆ ಪ್ರಕರಣಗಳು :**

| ಕ್ರ. ಸಂ. | ಪೊಲೀಸ್ ಠಾಣೆ | ಮೊ. ಸಂ. ಮತ್ತು ಕಲಂ | ವರದಿ ದಿನಾಂಕ | ಪ್ರಕರಣದ ಪ್ರಸ್ತುತ ಹಂತ |
|---|---|---|---|---|
| 1 | ಶಹಾಪೂರ ಠಾಣೆ | 26/12 ಕಲಂ 302 ಐಪಿಸಿ | 25.02.2012 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 2 | ವಡಗೇರಾ ಠಾಣೆ | 19/12 ಕಲಂ 302, 201 ಸಂ 34 ಐಪಿಸಿ | 20.02.2012 | ಏಫ್.ಎಸ್.ಎಲ್. ವರದಿ ಬಾಕಿಯಿರುವುದರಿಂದ ತನಿಖೆಯಲ್ಲಿರುತ್ತದೆ. |
| 3 | ಸೈದಾಪೂರ ಠಾಣೆ | 49/2011 ಕಲಂ 302 ಸಂಗಡ 34 ಐಪಿಸಿ | 09.04.2011 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 4 | ಗುರುಮಠಕಲ ಠಾಣೆ | 17/2012 ಕಲಂ 302, ಸಂಗಡ 34 ಐ.ಪಿ.ಸಿ. | 10.02.2012 | ದೋಷರೋಪ ಪತ್ರ ಸಲ್ಲಿಸಲು ಪರಿಶೀಲನೆಯಲ್ಲಿರುತ್ತದೆ. |
| 5 | ಗುರುಮಠಕಲ ಠಾಣೆ | 28/2012 ಕಲಂ 376, 302 ಐ. ಪಿ. ಸಿ. | 07.03.2012 | ಎಫ್.ಎಸ್.ಎಲ್ ವರದಿ ಬಾಕಿಯಿರುವುದರಿಂದ ತನಿಖೆಯಲ್ಲಿರುತ್ತದೆ. |
| 6 | ಯಾದಗಿರಿ ಗ್ರಾಮೀಣ | 35/12 ಕಲಂ:114, | 03.03.2012 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |

| | | | | |
|---|---|---|---|---|
| | | 302, ರೆ/ವಿ 34 ಐ.ಪಿ.ಸಿ. | | |
| 7 | ಶೋರಾಪೂರ ಠಾಣೆ | 295/10 ಕಲಂ: 302, 109 ಸಂ: 34 ಐಪಿಸಿ | 07.12.2010 | ಆರೋಪಿ ಪತ್ತೆ ಕುರಿತು ತನಿಖೆಯಲ್ಲಿರುತ್ತದೆ. |
| 8 | ಕೆಂಭಾವಿ | 37/08 ಕಲಂ: 302, 201 ರೆ/ವಿ 34 ಐಪಿಸಿ | 26.03.2008 | ತನಿಖೆಯಲ್ಲಿರುತ್ತದೆ. |

<u>ದರೋಡೆ ಪ್ರಕರಣಗಳು ಯಾವುದು ತನಿಖೆಯಲ್ಲಿರುವುದಿಲ್ಲ.</u>

**ಹಾಸ್ಟೇಲ್ ವಿದ್ಯಾರ್ಥಿಗಳಿಗೆ ಪೌಷ್ಠಿಕ ಆಹಾರ ನೀಡುವ ಬಗ್ಗೆ**

**20; ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**(ಅ)** ಹಾಸ್ಟೆಲ್ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪೌಷ್ಠಿಕ ಆಹಾರ ನೀಡಲು ಯಾವುದಾದರೂ ಹೊಸ ಯೋಜನೆಗಳನ್ನು ಸರ್ಕಾರ ರೂಪಿಸಿದೆಯೇ;

**(ಆ)** ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಾಸ್ಟೆಲ್‌ಗಳು ಎಷ್ಟು; ಸದರಿ ಹಾಸ್ಟೆಲ್ ಗಳಲ್ಲಿರುವ ವಿದ್ಯಾರ್ಥಿಗಳ ವಿವರ ನೀಡುವುದು.

**(ಇ)** ಸಮಾಜ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಸ್ಕಾಲರ್ ಶಿಪ್ ನೀಡುವ ಯೋಜನೆಯಡಿಯಲ್ಲಿ ದುರುಪಯೋಗದವಾದ ಹಣ ಎಷ್ಟು;

ಈ ಹಗರಣದಲ್ಲಿ ಒಳಗೊಂಡಿರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗಿದೆಯೇ; ಹಾಗಿದ್ದಲ್ಲಿ ವಿವರ ನೀಡುವುದು?

**ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂಧೀಖಾನೆ ಸಚಿವರು)**

**(ಅ)** ಸಮತೋಲನಾ ಆಹಾರವನ್ನು ನೀಡಲಾಗುತ್ತಿದೆ. ಆದ್ದರಿಂದ ಅನ್ವಯಿಸುವುದಿಲ್ಲ.

**(ಆ)**

| ಜಿಲ್ಲೆ | ವಿದ್ಯಾರ್ಥಿ ನಿಲಯಗಳ ಸಂಖ್ಯೆ | | | | | | ದಾಖಲಾತಿ ಸಂಖ್ಯೆ | | | |
|---|---|---|---|---|---|---|---|---|---|---|
| | ಮೆಟ್ರಿಕ್ ಪೂರ್ವ | | | ಮೆಟ್ರಿಕ್ ನಂತರ್ | | | ಮೆ. ಪೂ. | | ಮೆಟ್ರಿಕ್ ನಂ | |
| | ಪ. ಜಾತಿ | ಪ. ವರ್ಗ | ಒಟ್ಟು | ಪ. ಜಾತಿ | ಪ. ವರ್ಗ | ಒಟ್ಟು | ಪ. ಜಾತಿ | ಪ. ವರ್ಗ | ಪ. ಜಾತಿ | ಪ. ವರ್ಗ |
| ಗುಲ್ಬರ್ಗಾ | 72 | 03 | 75 | 20 | 01 | 21 | 5275 | 150 | 2610 | 50 |
| ಯಾದಗಿರಿ | 38 | 03 | 41 | 09 | 02 | 11 | 2375 | 150 | 765 | 100 |

**(ಇ)** ಈ ಯೋಜನೆಯಡಿಯಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿ ಸುಮಾರು ರೂ. 2,30,75,216/- ಗಳ ಹಣ ದುರುಪಯೋಗವಾಗಿದೆ.

ಹೌದು.

ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ತಾಲ್ಲೂಕಿನಲ್ಲಿ 2010-11ನೇ ಸಾಲಿನಲ್ಲಿ ಈ ಯೋಜನೆಗೆ ಸಂಬಂಧಿಸಿದಂತೆ ಹಣ ದುರುಪಯೋಗ ಮಾಡಿದರೆನ್ನಲಾದ ಅಂದಿನ ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ, ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ, ಗುಲ್ಬರ್ಗ ಇವರುಗಳನ್ನು ಶಿಸ್ತುಕ್ರಮ ಬಾಕಿ ಇರಿಸಿ ಸೇವೆಯಿಂದ ಅಮಾನತ್ತು ಗೊಳಿಸಲಾಗಿದೆ. ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇವರುಗಳ ನ್ನೊಳಗೊಂಡಂತೆ ದ್ವಿತೀಯ ದರ್ಜೆ ಸಹಾಯಕ ಹಾಗೂ ಸಂಬಂಧಿಸಿದ ಶಿಕ್ಷಣ ಸಂಸ್ಥೆಯ ವಿರುದ್ಧ ದಿನಾಂಕ: 26.02.2011 ರಂದು ಸ್ಟೇಷನ್ ಬಜಾರ್, ಗುಲ್ಬರ್ಗಾ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ಸಂ. 13/2011 ರಲ್ಲಿ ದಾಖಲಿಸಿದ್ದು ತನಿಖೆಯ ಪ್ರಗತಿ ಹಂತದಲ್ಲಿದೆ.

## ಭಾಗ್ಯಜ್ಯೋತಿ ಯೋಜನೆ ಬಗ್ಗೆ

**22; ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**(ಅ)** ಭಾಗ್ಯಜ್ಯೋತಿ ಯೋಜನೆ ಫಲಾನುಭವಿಗಳಿಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆಯೇ;

**(ಆ)** ರಾಜ್ಯದಲ್ಲಿರುವ ಈ ಯೋಜನೆಯ ಫಲಾನುಭವಿಗಳ ಸಂಖ್ಯೆ ಎಷ್ಟು;

**(ಇ)** ಇತ್ತೀಚೆಗೆ ಭಾಗ್ಯಜ್ಯೋತಿ ಫಲಾನುಭವಿಗಳಿಂದ ವಿದ್ಯುತ್ ಬಿಲ್ಲುಗಳನ್ನು ಸರ್ಕಾರ ಕಟ್ಟಿಸಿಕೊಳ್ಳಲಾಗುತ್ತಿದೆಯೇ;

**(ಈ)** ಹಾಗಿದ್ದರೆ, ಯೋಜನೆಯ ಪ್ರಯೋಜನ ಏನು; (ವಿವರ ನೀಡುವುದು)

**ಶೋಭಾ ಕರಂದ್ಲಾಜೆ (ಇಂಧನ ಸಚಿವರು) :**

**(ಅ)** ಹೌದು, ಭಾಗ್ಯಜ್ಯೋತಿ / ಕುಟೀರ್ ಜ್ಯೋತಿ ಯೋಜನೆಯಡಿಯಲ್ಲಿ ಬಡತನರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಒಂದು ಪಾಯಿಂಟ್‌ಗೆ ಮಿತಿಗೊಳಿಸಿ ಮಾಹೆಯಾನ 18 ಯೂನಿಟ್‌ಗಳ ಬಳಕೆಯ ಮಿತಿಗೆ ಒಳಪಟ್ಟು ಉಚಿತ ವಿದ್ಯುತ್ ಸರಬರಾಜು ನೀಡಲಾಗುತ್ತಿದೆ.

**(ಆ)** ರಾಜ್ಯದಲ್ಲಿರುವ ಭಾಗ್ಯಜ್ಯೋತಿ/ಕುಟೀರ್ ಜ್ಯೋತಿ ಯೋಜನೆಯ ಫಲಾನುಭವಿಗಳ ಒಟ್ಟು ಸಂಖ್ಯೆ 24,71,232.

(ಇ) ಭಾಗ್ಯಜ್ಯೋತಿ/ಕುಟೀರಜ್ಯೋತಿ ಯೋಜನೆಯಡಿಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಒಂದು ಪಾಯಿಂಟ್‌ಗೆ ಮಿತಿಗೊಳಿಸಿ ಮಾಹೆಯಾನ 18 ಯೂನಿಟ್‌ಗಳ ಬಳಕೆಯ ಮಿತಿಗೆ ಒಳಪಟ್ಟು ಉಚಿತ ವಿದ್ಯುತ್ ಸರಬರಾಜು ನೀಡಲಾಗುತ್ತಿದೆ. ಮಾಸಿಕ ವಿದ್ಯುತ್ ಬಳಕೆಯು 18 ಯೂನಿಟ್ಟುಗಳನ್ನು ಮೀರಿದರೆ, ಅಂತಹ ಸ್ಥಾವರಗಳಿಗೆ ವಿದ್ಯುತ್ ದರ ಅನುಸೂಚಿ ಎಲ್.ಟಿ.–2 (ಎ) ಪ್ರಕಾರ ವಿದ್ಯುತ್ ದರಗಳನ್ನು ವಿಧಿಸಲಾಗುತ್ತದೆ.

## ಸಾರಿಗೆ ಇಲಾಖೆಯಲ್ಲಿ ಹುದ್ದೆಗಳನ್ನು ತೋರಿಸಲು ನಿಯಮ ಉಲ್ಲಂಘನೆ

**35; ಶ್ರೀ ಕೆ. ಸಿ. ಕೊಂಡಯ್ಯ, ವಿಧಾನ ಪರಿಷತ್ ಸದಸ್ಯರು**

**(ಅ)** ಸಾರಿಗೆ ಇಲಾಖೆಯಲ್ಲಿ ವಿವಿಧ ಹುದ್ದೆಯಲ್ಲಿ ನೇಮಕಾತಿಯಾದ ದಿನದಿಂದ ಕರ್ತವ್ಯ ನಿರ್ವಹಿಸಲು ಸಿಬ್ಬಂದಿಗಳಿಗೆ ಇರುವ ನಿಯಮಗಳೇನು (ವೃಂದವಾರು ನಿಯಮ, ನಿಬಂಧನೆಗಳ ವಿವರ ಒದಗಿಸುವುದು);

**(ಆ)** ಇಲಾಖೆಯ ಕೆಲವು ವೃಂದದ ಸಿಬ್ಬಂದಿಗಳಿಗೆ ಹುದ್ದೆಗಳನ್ನು ನೀಡಲು ನಿಯಮ ನಿಬಂಧನೆಗಳನ್ನು ಉಲ್ಲಂಘಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**(ಇ)** ಉಲ್ಲಂಘನೆಯಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಸರ್ಕರ ತೆಗೆದುಕೊಂಡಿರುವ ಕ್ರಮಗಳೇನು (ವಿವರ ಒದಗಿಸುವುದು);

**ಆರ್. ಅಶೋಕ (ಗೃಹ ಮತ್ತು ಸಾರಿಗೆ ಸಚಿವರು)**

**(ಅ)** ಸಾರಿಗೆ ಇಲಾಖೆಯಲ್ಲಿ ನೇಮಕಗೊಂಡ ವಿವಿಧ ವೃಂದದ ಅಧಿಕಾರಿಗಳು ಮತ್ತು ನೌಕರರು ಕರ್ನಾಟಕ ನಾಗರೀಕ ಸೇವಾ ನಿಯಮವಳಿಗಳು 1958 ರಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಕಛೇರಿಯ ಸಾಮಾನ್ಯ ಕಾರ್ಯವಿಧಾನದಂತೆ ಕೇಂದ್ರ ಮೋಟಾರು ವಾಹನ ಕಾಯಿದೆ / ನಿಯಮಗಳು ಕರ್ನಾಟಕ ಮೋಟಾರು ವಾಹನ ನಿಯಮಗಳು ಹಾಗೂ ಕರ್ನಾಟಕ ಮೋಟಾರು ವಾಹನ ತೆರಿಗೆ ನಿಯಮಗಳನ್ನು ಜಾರಿಗೊಳಿಸುವ ಕೆಲಸ ನಿರ್ವಹಿಸುತ್ತಾರೆ.

**(ಆ)** ಅಂತಹ ಪ್ರಕರಣಗಳಾವುವೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

**(ಇ)** ಅನ್ವಯಿಸುವುದಿಲ್ಲ.

**ಹಿಂದುಳಿದ ವರ್ಗಗಳ ಹಾಸ್ಟೇಲ್‌ಗಳ ನಿರ್ಮಾಣ**

**38; ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)**

**(ಅ)** ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಹಾಸ್ಟ್ವಲ್‌ಗಳನ್ನು ನಿರ್ಮಾಣ ಮಾಡಲು ರಾಜ್ಯ ಸರ್ಕಾರ 2011–12ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಹಣವೆಷ್ಟು?

**(ಆ)** ಈ ಅನುದಾನದಲ್ಲಿ ಇಲ್ಲಿಯವರೆಗೆ ನಿರ್ಮಾಣ ಮಾಡಿರುವ ಹಾಸ್ಟಲ್‌ಗಳ ಸಂಖ್ಯೆ ಎಷ್ಟು? ಇದಕ್ಕಾಗಿ ಖರ್ಚಾಗಿರುವ ಹಣವೆಷ್ಟು;

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :** ಮಾನ್ಯ ಸಭಾಪತಿಯವರೆ, ಯಾವ ನಿರಪರಾಧಿಗಳಿಗೂ ನಾವು ಶಿಕ್ಷೆ ಕೊಡುವುದಕ್ಕೆ ತಯಾರಾಗಿಲ್ಲ. ಹಾಗೂ ಮುಂದೆ ಬರುವುದಿಲ್ಲ. ಶಿಕ್ಷೆ ಕೊಡುವುದಿಲ್ಲ. ಆದರೆ ಕೋಲಾರದಲ್ಲಿ ಹಾಗಾಯಿತು, ಹೀಗಾಯಿತು ಎಂದು ಇದೆ. ನಾನು ದಯಮಾಡಿ ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನಮ್ಮ ಇಲಾಖೆಯಿಂದ ನಿರಪರಾಧಿಗಳ ಮೇಲೆ ಕ್ರಮ ಆಗದೇ ಇರುವಂತೆ ನಾನು ನೋಡಿಕೊಳ್ಳುತ್ತೇನೆ. ಆದರೆ ಏಕೆ ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದು ಇದೆ. ಏನಾಯಿತು ಎಂದು ಹೇಳಿಬಿಡುತ್ತೇನೆ. ಏನಾಯಿತು ಅಂದರೆ ಪ್ರಶ್ನೆ ಪತ್ರಿಕೆ ಬಂತು. ಅಂದರೆ ಓರಿಜಿನಲ್ ಪ್ರಶ್ನೆ ಪತ್ರಿಕೆ ಮುಂಚಿನ ದಿನ ಬಂತು. ಯಾವಗ ಅಂದರೆ 19ನೇ ತಾರೀಖು ಸಂಜೆ. ಸಂಜೆ ಸಿಕ್ಕಿದ ಮೇಲೆ ಈ ಟ್ಯೂಶನ್ ನಡೆಸುವವರು ಕೆಲವರು ಅವರ ವಿದ್ಯಾರ್ಥಿಗಳನ್ನು ಕರೆದು ಪ್ರಶ್ನೆ ಪತ್ರಿಕೆ ಬಂದಿದೆ ಇದಕ್ಕೆ ಹೀಗೆ ಉತ್ತರ ಬರೆಯಿರಿ ಎಂದು ಕ್ಲಾಸ್ ತೆಗೆದುಕೊಂಡಿದ್ದಾರೆ. ಅವರು ಮಾಡಿದ್ದಾರೋ ಇಲ್ಲವೋ ಪ್ರಶ್ನೆ ಬೇರೆ. ಅವರು ಪರೀಕ್ಷೆಗೆ ಬೇಕಾಗಿರುವಂಥ ಪ್ರಶ್ನೆ ಪತ್ರಿಕೆ ಹಿಡಿದುಕೊಂಡು ಈ ಪ್ರಶ್ನೆಗೆ ಹೇಗೆ ಉತ್ತರ ಬರೆಯಬೇಕೆಂದು ಕ್ಲಾಸ್ ತೆಗೆದುಕೊಂಡಿದ್ದಾರೆ. ಅಂತಹ ಸಮಯದಲ್ಲಿ ನಾವು ಏನು

ಮಾಡಬೇಕು? ಅವರಿಗೆ ಪ್ರಶ್ನೆ ಪತ್ರಿಕೆ ಹೇಗೆ ಬಂತೆಂದು ನಾವು ಹುಡುಕುತ್ತಿದ್ದೇವೆ. ಅದರ ಬಗ್ಗೆ ಸಿ.ಐ.ಡಿ. ತನಿಖೆ ಮಾಡುತ್ತಿದ್ದೇವೆ. ಅದರ ತನಿಖೆ ನಡೆದಿದೆ. ಈಗ ನಾವು ಅಲ್ಲಿ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಅವರಿಗೆ ಎಲ್ಲಿ ಸಿಕ್ಕಿದೆ ಎನ್ನುವ ಮಾಹಿತಿಯನ್ನು ತೆಗೆದುಕೊಂಡಿದ್ದೇವೆ. ಈಗಾಗಲೇ ಅವರು ಕೆಲವರನ್ನು ಬಂಧಿಸಿದ್ದಾರೆ. ಅವರು ಎಲ್ಲಾ ಮಾಹಿತಿಗಳನ್ನು ಸಂಗ್ರಹ ಮಾಡುತ್ತಿದ್ದಾರೆ. ಸಿ.ಐ.ಡಿ. 3 ದಿನಗಳಿಂದ ಕೆಲಸ ಮಾಡುತ್ತಿದೆ. ನಾವು ಕಾಲಮಿತಿಯೊಳಗೆ ಕೆಲಸ ಮಾಡಬೇಕೆಂದು ಹೇಳಿದ್ದೇವೆ. ಹಾಗಾಗಿ ಪಾಲಕರಲ್ಲಿ ಮತ್ತು ಮಕ್ಕಳಲ್ಲಿ ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುವುದೇನೆಂದರೆ ಅವರು ಯಾವುದೇ ರೀತಿಯ ಆತಂಕ ಪಡಬೇಕಾಗಿಲ್ಲ.

ಅಷ್ಟೊಂದು ಭದ್ರವಾದ ವ್ಯವಸ್ಥೆ ಇದ್ದರೂ ಕೂಡ, ಅಷ್ಟೊಂದು ವ್ಯವಸ್ಥೆ ಇದ್ದರೂ ಕೂಡ ಎಲ್ಲಿ ಈ ಪ್ರಶ್ನೆ ಪತ್ರಿಕೆ ಬಹಿರಂಗಗೊಂಡಿದೆ ಎಂದು ನಮ್ಮ ಮುಂದೆ ಒಂದು ಯಕ್ಷ ಪ್ರಶ್ನೆ ಇದೆ. ಅದಕ್ಕೆ ನಾವು ಏನು ಉತ್ತರವನ್ನು ಕೊಡಬೇಕಾಗಿದೆ ಅದನ್ನು ಕೊಟ್ಟೇ ಕೊಡೋಣ. ಸಿ.ಐ.ಡಿಯವರಿಗೆ ನಾವು ತನಿಖೆಯನ್ನು ಕಾಲಮಿತಿಯೊಳಗಡೆ ಮಾಡಬೇಕೆಂದು ಹೇಳಿದ್ದೇವೆ. ಅದೇ ಸಂದರ್ಭದಲ್ಲಿ ಈಗಾಗಲೇ ಏನು ಬಂಧನದ ಪ್ರಕ್ರಿಯೆ ನಡೆದಿದೆ. ತನಿಖೆ ನಡೆದಿದೆ, ನಾವೆಲ್ಲರೂ ಆ ತನಿಖೆಗೆ ಸಹಕರಿಸುವಂಥ ರೀತಿಯಲ್ಲಿ ನಮ್ಮ ಧ್ವನಿಗಳೆಲ್ಲವೂ ಇದ್ದರೆ ನಮ್ಮ ಅಧಿಕಾರಿಗಳು ಸಹ ಅಂದರೆ ಸಿ.ಐ.ಡಿ. ಅಧಿಕಾರಿಗಳು ಸಹ ಮುಕ್ತವಾಗಿ ತನಿಖೆ ಮಾಡುವಂಥ ವಾತಾವರಣ ಸೃಷ್ಟಿಸಬೇಕು. ಅವರು ಮುಕ್ತ ತನಿಖೆ ಮಾಡಬೇಕು ನಾವು ಯಾವುದೇ ಕಾರಣಕ್ಕೂ ನಿರಪರಾಧಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಿಲ್ಲವೆಂದು ನಿಶ್ಚಿತವಾಗಿ ಹೇಳುತ್ತೇನೆ.

**ಶ್ರೀ ವೀರಣ್ಣ ಮತ್ತಿಕಟ್ಟಿ :** ಮಾನ್ಯ ಸಭಾಪತಿಯವರೆ, ಕಾಗೇರಿಯವರು ಏನು ಮಾಡುತ್ತಾರೆಂದು ಕರೆದು ಕೇರ್ ಹಾಕಿಸಿಕೊಳ್ಳುವುದು ಎಂದು ಹೇಳುತ್ತಾರಲ್ಲ ಆ ರೀತಿ ಮಾಡುತ್ತಾರೆ ನೇರವಾಗಿ ಇದ್ದದ್ದನ್ನು ಹೇಳಿಬಿಟ್ಟರೆ ಮುಗಿದು ಹೋಗುತ್ತದೆ. ಸಮಸ್ಯೆಯೇ ಮುಗಿದು ಹೋಗುತ್ತದೆ.

**ಶ್ರೀ ವೀಶ್ವೇಶ್ವರ ಹೆಗಡೆ ಕಾಗೇರಿ :** ಮಾನ್ಯ ಸಭಾಪತಿಯವರೆ, ಬಹಳಷ್ಟು ಶಾಸಕರು ಪತ್ರವನ್ನು ಬರೆದು ತಮ್ಮ ತಮ್ಮ ಅಭಿಪ್ರಯಗಳನ್ನು ಹೇಳಿದ್ದಾರೆ. ಅವರವರ ಅಭಿಪ್ರಾಯಗಳಿಗೆ ನಾನು ಸ್ಪಂದಿಸಬೇಕೆನ್ನುವ ಹಿನ್ನೆಲೆಯಲ್ಲಿ ಉಲ್ಲೇಖ ಮಾಡಿದ್ದೇನೆ ಹೊರತು ಬೇರೆ ಯಾವುದೇ ಉದ್ಧೇಶ ಇಲ್ಲ. ಈಗ ಇನ್ನೊಂದು ಪ್ರಶ್ನೆ ಇದೆ. ಇದರ ಬಗ್ಗೆ ಮಾನ್ಯ ಹೊರಟ್ಟಿಯವರು ಕೂಡ ಹೇಳಿದ್ದಾರೆ. ಅವರ ಹೆಸರು ಹೇಳಿದ ತಕ್ಷಣ ನೀವು ಯಾರೂ ಅನ್ಯಥಾ ಭಾವಿಸಬಾರದು. ಅವರು ತಮ್ಮ ಪತ್ರದಲ್ಲಿ ಮುಂದೆ ಪರೀಕ್ಷೆ ಪದ್ಧತಿಯನ್ನು ಹೇಗೆ ಸುಧಾರಣೆ ಮಾಡಬೇಕು ಎನ್ನುವುದರ ಬಗ್ಗೆ ಶ್ರೀ ಬಸವರಾಜ ಹೊರಟ್ಟಿಯವರು ಅವರ ಅನುಭವದ ಆಧಾರದ ಮೇಲೆ ಸಲಹೆಗಳನ್ನೆಲ್ಲಾ ಕೊಟ್ಟಿದ್ದಾರೆ. ಅದು ಬಹಳ ಒಳ್ಳೆಯದಿದೆ. ಮೊನ್ನೆಯ ದಿವಸ ಇದೆಲ್ಲಾ ಆದನಂತರ ಅನೇಕರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಇಷ್ಟು foolproof ಆಗಿ ನಡೆಸಿದ ಮೇಲೆಯೂ ಈ ರೀತಿ ಪ್ರಶ್ನೆ ಪತ್ರಿಕೆಗಳೂ ಲೀಕ ಆಗುತ್ತದೆಂದರೆ ಯಾವ ರೀತಿಯಲ್ಲಿ foolproof system ಮಾಡಬಹುದು ಎನ್ನುವುದರ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ನನ್ನ ಸರ್ಕಾರವಾಗಿ, ಅದರಲ್ಲಿಯೂ ನನ್ನ ಇಲಾಖೆಯಾಗಿರುವುದರಿಂದ ಮೊದಲ ಆದ್ಯತೆಯಾಗಿ ಈಗ ನಮ್ಮ ಮುಂದೆ ಇರುವಂಥದ್ದು ಈ ಪರೀಕ್ಷೆಯನ್ನು ಚೆನ್ನಾಗಿ ಮತ್ತು ಸಮರ್ಪಕವಾಗಿ ಮತ್ತು ಭದ್ರತೆಯಿಂದ ನಡೆಸಬೇಕು. ಮಕ್ಕಳಿಗೆ ಮತ್ತು ಪಾಲಕರಿಗೆ ಆತಂಕವಾಗುವ ರೀತಿಯಲ್ಲಿ ನಡೆಸಬೇಕು. ಪಿಯುಸಿಯ ಪರೀಕ್ಷೆಯು 5ನೇ ತಾರೀಖಿನ ವರೆಗೂ ಇದೆ. 2 ನೇ ತಾರೀಖಿನಿಂದ ಎಸ್ ಎಸ್ ಎಲ್ ಸಿ ಪರೀಕ್ಷೆಯು ಬರುತ್ತದೆ. ಪಿ.ಯು.ಸಿ. ಪರೀಕ್ಷೆಯನ್ನು ಮರು ಹೊಂದಿಸುವುದು ಎಷ್ಟು ಕಷ್ಟವಾಯಿತು ಎಂದರೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯು 2ನೇ ತಾರೀಖಿನಿಂದ ಪ್ರಾರಂಭವಾಗುತ್ತದೆ. ಪಿಯುಸಿ ಪರೀಕ್ಷೆಯು 31ನೇ ತಾರೀಖಿಗೆ ಮುಗಿಯುತ್ತಿತ್ತು. ಈಗ 1ನೇ ತಾರೀಖು ಆಲ್ ಇಂಡಿಯ ಲೇವಲ್ ಪರೀಕ್ಷೆ ಇದೆ. 2ನೇ ತಾರೀಖಿನಿಂದ ಎಸ್ ಎಸ್ ಎಲ್ ಸಿ ಪರೀಕ್ಷೆಯು 3,000 ಕ್ಕಿಂತಲೂ ಹೆಚ್ಚು ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯುತ್ತದೆ. ಪಿಯುಸಿ ಪರೀಕ್ಷೆಯು ಬರೀ 950 ಪರೀಕ್ಷಾ ಕೇಂದ್ರಗಳಲ್ಲಿ ನಡೆಯುತ್ತದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 8.5 ಲಕ್ಷ ವಿದ್ಯಾರ್ಥಿಗಳಿದ್ದಾರೆ.

ಪಿಯುಸಿ ಯಲ್ಲಿ 6 ಲಕ್ಷ ವಿದ್ಯಾರ್ಥಿಗಳಿದ್ದಾರೆ. ಹಾಗಾಗಿ re-schedule ಮಾಡಿ ಎಲ್ಲಾ ಪರೀಕ್ಷೆಗಳನ್ನು ನಡೆಸುತ್ತೇವೆ. ಈ re-schedule ಪ್ರಕಾರ ನಾಳೆಯಿಂದ ಪರೀಕ್ಷೆ ಪ್ರಾರಂಭವಾಗುತ್ತಿದೆ. ಈಗ ಏನೇನು ಪ್ರಶ್ನೆ ಪತ್ರಿಕೆಗಳು ಲೀಕ್ ಆಗಿದೆ ಅದಕ್ಕೆ ಬದಲಾಗಿ ಹೊಸ ಪ್ರಶ್ನೆ ಪತ್ರಿಕೆಗಳನ್ನು ಮುದ್ರಿಸಿ ತರಿಸುವುದು, ವಿತರಿಸುವುದು ಎಲ್ಲವನ್ನೂ ಮಾಡಿ ನಾವು ಮುಗಿಸಿದ್ದೇವೆ. ನಾಳೆಯಿಂದ ಬಿಗಿ ಭದ್ರತೆಯಲ್ಲಿಯೇ ಪರೀಕ್ಷೆಯನ್ನು ಮಾಡುವುದಕ್ಕೆ ಎಚ್ಚರಿಕೆಯನ್ನು ವಹಿಸಿಕೊಂಡಿದ್ಧೇವೆ. ಹಾಗಾಗಿ ಎರಡು ಘಟನೆಗಳಿಂದ ಆತಂಕ ಪಡುವಂತಹ ಸನ್ನಿವೇಶ ಬಂದಿದೆ. ಆದರೆ ಈ ಸ್ಥಿತಿಯನ್ನು ಮುಂದುವರೆಸುವುದಕ್ಕೆ ಸರ್ಕಾರವಾಗಿ ನಾವು ಬಿಡುವುದಿಲ್ಲ. ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಮತ್ತು ಮುಂದೆಯೂ ತೆಗೆದುಕೊಳ್ಳುತ್ತೇವೆ. ಪರೀಕ್ಷೆ ನಿರ್ದಿಷ್ಟವಾಗಿ, ಮಕ್ಕಳು ಪರೀಕ್ಷೆಯನ್ನು ಮುಕ್ತವಾಗಿ ಬರೆಯುವಂತಹ ವಾತಾವರಣವನ್ನು ಸೃಷ್ಟಿಸುತ್ತೇವೆ. ಅವರ ಶೈಕ್ಷಣಿಕ ಭವಿಷ್ಯ ಚೆನ್ನಾಗುವಂತೆ ನಾವು ನೋಡಿಕೊಳ್ಳುತ್ಥೇವೆ. ಇದಕ್ಕೆ ನಿಮ್ಮೆಲ್ಲರ ಸಹಕಾರವೂ ಕೂಡ ಬೇಕು. ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ರೀತಿ ಮಕ್ಕಳ ಭವಿಷ್ಯದ ಜೊತೆಯಲ್ಲಿ ಚೆಲ್ಲಾಟವನ್ನು ಆಡುತ್ತಿರುವಂತಹ, ಶಿಕ್ಷಣ ಇಲಾಖೆಯ ಪಾವಿತ್ರ್ಯತೆಯನ್ನು ಕೆಡಿಸುವುದಕ್ಕೆ ಪ್ರಯತ್ನ ಮಾಡುತ್ತಿರುವಂತಹ ಯಾವ ದುಷ್ಟ ಶಕ್ತಿ ಇದೆಯೇ ಅದರ ಬಗ್ಗೆ ನಿಮ್ಮ ಹತ್ತಿರ ಮಾಹಿತಿ ಇದ್ದರೆ ಕೊಡಿ. ಇಲ್ಲದೇ ಹೋದರೂ ಕೂಡ ಸಿಐಡಿ ಇಲಾಖೆಯವರು ತನಿಖೆಯನ್ನು ಮಾಡಿಯೇ ಮಾಡುತ್ತಾರೆ. ನೀವು ಮಾಹಿತಿಯನ್ನು ಬೇಕಾದರೆ ಸಿಐಡಿಯವರಿಗಾದರೂ ಕೊಡಿ. ನಾವೆಲ್ಲರೂ ಒಟ್ಟಿಗೆ ಆ ಮಕ್ಕಳಿಗೆ ಭವಿಷ್ಯದ ಸಂದೇಶವನ್ನು ಕಳುಹಿಸಬೇಕು. ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಮುಂದಾಗುತ್ತಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಹೇಳುವುದಕ್ಕೆ ಬಯಸುತ್ತಿದ್ದೇನೆ. ಇನ್ನು ಅನೇಕ ವಿಷಯಗಳು ಮಾನ್ಯ ಸದಸ್ಯರಿಗೆ ಹೇಳುವಂಥದ್ದು ಇರಬಹುದು. ನನ್ನದು ಒಂದೇ ಒಂದು ವಿನಂತಿ ಏನೆಂದರೆ, ತನಿಖೆಗೆ ಪೂರಕವಾದಂತಹ ರೀತಿಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಇದು ತಪ್ಪಾಗಿದೆ, ಇದನ್ನು ಯಾರೂ ಸಮರ್ಥಿಸಿಕೊಳ್ಳುವುದಿಲ್ಲ ಮತ್ತು ಒಪ್ಪಿಕೊಳ್ಳುವುದಿಲ್ಲ. ಆದರೆ ನಾಳೆಯಿಂದ

ಮಕ್ಕಳು ವಿಶ್ವಾಸದಿಂದ ಪರೀಕ್ಷೆಯನ್ನು ಬರೆಯಬೇಕು. ಆ ವಿಶ್ವಾಸದ ಸಂದೇಶವೂ ಇಲ್ಲಿಂದ ಸಿಗುವಂತೆ ಆಗಬೇಕೆಂದು ವಿನಂತಿಸುತ್ತಿದ್ದೇನೆ.

**ಸಭಾಪತಿಯವರು** : ಇಂತಹ ಗಂಭೀರವಾದಂತಹ ವಿಷಯದ ಬಗ್ಗೆ ಚರ್ಚೆ ಮಾಡದೇ ಇನ್ನೇನು ವಿಷಯಗಳನ್ನು ಚರ್ಚೆ ಮಾಡಬೇಕಾಗಿದೆ. ಆದುದರಿಂದ ಮೊದಲು ವಿರೋಧ ಪಕ್ಷದ ನಾಯಕರು ಮಾತನಾಡಲಿ. ನಂತರ ಎಲ್ಲರಿಗೂ ಕೂಡ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಒಟ್ಟಿಗೆ ಮಾತನಾಡಿದರೆ ಅದಕ್ಕೆ ಗಾಂಭೀರ್ಯ ಬರುವುದಿಲ್ಲ. ಅದಕ್ಕೆ ಒಬ್ಬರಾದ ಮೇಲೆ ಒಬ್ಬರು ಮಾತನಾಡಿ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು)** : ಮಾನ್ಯ ಸಭಾಪತಿಯವರೆ, ನಿಮ್ಮಲ್ಲಿ ಒಂದು ಮನವಿ ಏನೆಂದರೆ, ಇದು ಬಹಳ ಗಂಭೀರವಾದಂತಹ ಪ್ರಶ್ನೆ ಬಂದಿರುವುದರಿಂದ ಇದರ ಬಗ್ಗೆ ಪ್ರತ್ಯೇಕವಾಗಿ ಮಾತನಾಡುವುದಕ್ಕೆ ಅರ್ಧ ಗಂಟೆ ಮಾತನಾಡುವುದಕ್ಕೆ ಕಾಲಾವಕಾಶವನ್ನು ಮಾಡಿಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ. ಸಚಿವರು ಸಿಐಡಿ ತನಿಖೆಗೆ ವ್ಯವಸ್ಥೆಯನ್ನು ಮಾಡಿದ್ದೇವೆಂದು ಹೇಳಿದರು ಅಥವಾ ಇನ್ನು ಯಾರನ್ನು ಶಿಕ್ಷೆಗೆ ಗುರಿ ಮಾಡುವುದಿಲ್ಲವೆಂದು ಹೇಳುವುದರ ಬದಲಾಗಿ ಆಡಳಿತದಲ್ಲಿ ಸ್ವಲ್ಪ ದೋಷ ಇದೆ ಎನ್ನುವುದನ್ನು ಅವರು ಒಪ್ಪಿಕೊಳ್ಳಬೇಕಾಗುತ್ತದೆ. ಏನಾನುಗತ್ತದೆಂದರೆ ಈಗ ನಡೆದಂತಹ ವಿದ್ಯಾಮಾನಗಳಲ್ಲಿ ಇಲಾಖೆಯವರು ಬಹಳ ಗಂಭೀರವಾಗಿ ತೆಗೆದುಕೊಂಡಿಲ್ಲ. ಸರ್ಕಾರ ಏನೋ ಮಾಡುತ್ತಿದೆ ಎಲ್ಲಿಯೋ ನಡೆಯುತ್ತಿದೆ ಹಾಗಾಗಿ ಯಾರು Serious ಆಗಿಲ್ಲವೆಂದು ಇಲಾಖೆಯವರು ನಿದ್ದೆ ಹೊಡೆದಾಗ ಇವರು ಹೇಳಿದಂತೆ ಒಂದು ರೀತಿಯ ಮಾಫಿಯ. ಬೇರೆ ಬೇರೆ ರೀತಿಯ ಮಾಫಿಯ ಇದೆಯಲ್ಲಾ ಅದೇ ರೀತಿ ಪ್ರಶ್ನೆ ಪತ್ರಿಕೆಯ ಬಗ್ಗೆಯೂ ಮಾಫಿಯ ಇದೆ. ಈ ಮಾಫಿಯದವರು ಮಾಡುತ್ತಿರುವಂತಹ ಕೆಲಸವನ್ನು ಹತ್ತಿಕ್ಕುವುದಕ್ಕೆ ಪ್ರಯತ್ನ ಮಾಡಬೇಕಾಗಿತ್ತು. ಅದನ್ನು ಮಾಡಿಲ್ಲ. ಆದುದರಿಂದ ಇದರ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು** : ಈಗ ಬಸವರಾಜ ಹೊರಟ್ಟಿಯವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತಿರುವಂತಹ ಉದ್ದೇಶವೇ ಈ ಇಲಾಖೆಯನ್ನು ಅವರು ಕೂಡ ನಿರ್ವಹಿಸಿದ್ದರು. ತದನಂತರ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ನಿರ್ವಹಿಸುತ್ತಿದ್ಧಾರೆ. ಆದರೆ ನೀವಿಬ್ಬರು ನಡೆಸುತ್ತಿದ್ದಂತಹ ನಾಲ್ಕಾರು ವರ್ಷಗಳಲ್ಲಿ ಈ ರೀತಿಯ ದುರ್ಘಟನೆ ಎಂದೂ ನಡೆಯಲಿಲ್ಲ. ಆದರೆ ಈ ವರ್ಷ ನಡೆದು ಬಿಟ್ಟಿದೆ. ಅದಕ್ಕಾಗಿ ತಮ್ಮ ಅನುಭವದ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಏನಾದರೂ ಹೇಳುತ್ತೀರಾ?

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ)** : ಮಾನ್ಯ ಸಭಾಪತಿಯವರೆ, ನನ್ನ ಅನುಭವದಲ್ಲಿ ನನ್ನ ಸಲಹೆಗಳನ್ನು ಈಗಾಗಲೇ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಗೆ ಕೊಟ್ಟಿದ್ದೇನೆ.

**ಸಭಾಪತಿಯವರು** : ಒಳ್ಳೆಯದು.

**ಶ್ರೀ ಬಸವರಾಜ ಹೊರಟ್ಟಿ** : ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆ ಏನೆಂದರೆ, ಮಾನ್ಯ ಸಚಿವರು ಹೇಳಿದಂತೆ ಮಕ್ಕಳಿಗೆ ಮಾನಸಿಕ ನೆಮ್ಮದಿ ರೂಪಿಸುವಂತಹ ಕಲ್ಪನೆ ನಮಗೆ ಬೇಕು. ಮಕ್ಕಳಿಗೆ ನಾಳೆ ದಿವಸ ಪರೀಕ್ಷೆ ಬರೆಯುವುದಕ್ಕೆ ಭಯ ಇರಬಾರದು ಎನ್ನುವಂತಹ ವಾತಾವರಣ ನಿರ್ಮಾಣವನ್ನು ಸರ್ಕಾರ ಮತ್ತು ನಾವೆಲ್ಲರೂ ಕೂಡಿ ಮಾಡಬೇಕು. ಅದನ್ನು ಮೊದಲು ಮಾಡಬೇಕು. ಒಂದು ಅವರು ಏನು ಹೇಳಿದ್ದಾರೆಂದರೆ ಒಂದು ಓರಿಜಿನಲ್ ಪ್ರಶ್ನೆ ಪತ್ರಿಕೆ ಒಬ್ಬ ಟೀಚರ್ ಹತ್ತಿರ ಸಿಕ್ಕಿದೆ ಎಂದು ಹೇಳಿದರು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ಮಾನ್ಯ ಸಭಾಪತಿಯವರೆ, ಕೈಯಲ್ಲಿ ಬರೆದಿರುವುದು ಸಿಕ್ಕಿದೆ ಎಂದು ನಾನು ಹೇಳಿರುವುದು.

**ಶ್ರೀ ಬಸವರಾಜ ಹೊರಟ್ಟಿ** : ಮಾನ್ಯ ಸಭಾಪತಿಯವರೆ, ಅದು ಲೀಕ್ ಆದಂತಹ ಪ್ರಶ್ನೆ ಪತ್ರಿಕೆ. ಅದು ಎಲ್ಲಿಂದ ಬಂತು ಎಂದು ಮೊದಲು ತಿಳಿದುಕೊಳ್ಳಬೇಕು.

**ಸಭಾಪತಿಯವರು** : ಅದನ್ನೇ ಅವರು ಪ್ರಯತ್ನ ಮಾಡುತ್ತಿರುವುದು.

**ಶ್ರೀ ಬಸವರಾಜ ಹೊರಟ್ಟಿ :** ಮಾನ್ಯ ಸಭಾಪತಿಯವರೆ, ಅವರನ್ನು ಬಿಡಬಾರದು. ಅದು ಎಲ್ಲಿಂದ ಬಂತು ಅವರಿಂದಲೇ ತಿಳಿದುಕೊಳ್ಳಬೇಕು. ಸರ್ಕಾರ ಖಾಸಗಿಯವರು ಅಥವಾ ಟೀಚರ್‌ಗಳು ಟ್ಯೂಷನ್‌ಗಳನ್ನು ಮಾಡುವುದನ್ನು ಮೊದಲು ಬಂದ್ ಮಾಡಬೇಕು. ಟ್ಯೂಷನ್‌ಗಳನ್ನು ಬಂದ್ ಮಾಡಿದರೆ ಈ ರೀತಿ ಪ್ರಶ್ನೆ ಪತ್ರಿಕೆಗಳು ಲೀಕ್ ಆಗುವುದಿಲ್ಲ. ಏಕೆಂದರೆ ಟ್ಯೂಷನ್ ಮಾಡುವುದರಿಂದ ಶಾಲೆಗಳಲ್ಲಿಯೂ ಕೂಡ ಪಾಠವನ್ನು ಸರಿಯಾಗಿ ಮಾಡುವುದಿಲ್ಲ ಎನ್ನುವುದು ಬರುತ್ತದೆ. ಟ್ಯೂಷನ್ ನಡೆಸುವವರು ಇಂಥದೆಲ್ಲಾ ಲಾಬಿ ಮಾಡುತ್ತಾರೆ. ಏಕೆಂದರೆ 95% ಮಾರ್ಕ್ಸ್ ತೆಗೆದುಕೊಂಡವರನ್ನು ಮಾತ್ರ ಮುಂದಿನ ವಿದ್ಯಾಭ್ಯಾಸಕ್ಕೆ ಕೆಲವು ಕಾಲೇಜಿನವರು ಪ್ರವೇಶವನ್ನು ಕೊಡುತ್ತಾರೆ. ಅದಕ್ಕೆ ನಾನು ಹಿಂದೆ 50% ಅಂಕವನ್ನು ಪಡೆದುಕೊಂಡರೂ ಕೂಡ ಕಾಲೇಜಿಗೆ ಪ್ರವೇಶವನ್ನು ಕೊಡಬೇಕೆಂದು ಒಂದು ಸಲಹೆಯನ್ನು ಕೊಟ್ಟಿದ್ದೆ. ಇಲ್ಲಿ ಇರುವಂಥದ್ದು ಎರಡು ಇಶ್ಯೂಗಳು ಮಾತ್ರ ಮೊದಲನೆಯದಾಗಿ ತನಿಖೆಯನ್ನು ಮಾಡಿಸಿ ಯಾರೂ ತಪ್ಪಿತಸ್ಥರು ಇದ್ದಾರೆ ಅವರು ಯಾರೇ ಆಗಿದ್ದರು ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಳ್ಳಿ. ಒಂದು ಏನೆಂದರೆ ಪತ್ರಿಕೆಯಲ್ಲಿ ಬಂದಿರುವ ಹಾಗೆ ಮತ್ತು ನಮಗೆ ಕೇಳಿ ಬಂದಿರುವ ಹಾಗೆ ಪಿಯು ಬೋರ್ಡ್‌ನಲ್ಲಿ ಏನೂ ನಿರ್ದೇಶಕರಿದ್ದಾರೆ. ಅವರು ಬಹಳ strict ಆಗಿ ಒಳ್ಳೆ ಕೆಲಸವನ್ನು ಮಾಡುವಂತಹ ಹೆಣ್ಣುಮಗಳು ಅಲ್ಲಿ ಭ್ರಷ್ಟಾಚಾರ ನೆಡೆಯುತ್ತಿದ್ದಕ್ಕೆಲ್ಲಾ ಕಡಿವಾಣವನ್ನು ಹಾಕಿದ್ದರಿಂದ ಆ ಹೆಣ್ಣುಮಗಳ ಹೆಸರನ್ನು ಕೆಡಿಸಬೇಕು ಎನ್ನುವ ದೃಷ್ಟಿಯಿಂದ ಅಲ್ಲಿ ಹೀಗೆ ಮಾಡುತ್ತಿದ್ದಾರೆ ಎಂದು ಬಂದಿರುವಂತಹ ವರದಿ ಕೂಡ ಇದೆ. ನಮಗೆ ಏನೆಂದು ಗೊತ್ತಿಲ್ಲ. ಇದರ ಜೊತೆಗೆ ಖಾಸಗಿಯಾಗಿ ಟ್ಯೂಷನ್ ಮಾಡುವವರು ಕೂಡ ಶಾಮೀಲಾಗಿದ್ದಾರೆ ಎನ್ನುವಂಥದ್ದು ಕೂಡ ಇದೆ. ಪತ್ರಿಕೆಗಳಲ್ಲಿ ಈ ಟೀಚರ್‌ಗಳು ಆ ಟೀಚರಗಳು ಶಾಲೆಯನ್ನು ನಡೆಸುತ್ತಿದ್ದಾರೆ ಎನ್ನುವಂಥದ್ದೆಲ್ಲಾ ಇದೆಯಲ್ಲಾ ಇದಕ್ಕೆ ಏನಾದರೂ ಒಂದು ಮಾಡಿ ಸರಿಯಾದ ರೀತಿಯಲ್ಲಿ ತನಿಖೆಯನ್ನು ಮಾಡಿ ಯಾರೇ ಎಷ್ಟು ದೊಡ್ಡವರು ಇದ್ದರೂ ಕೂಡ ಅವರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಬರುವಂತಹ ದಿನಗಳಲ್ಲಿ ಮಕ್ಕಳ ಪರೀಕ್ಷೆ ಬಹಳ

ಗಂಭೀರವಾಗುತ್ತದೆ ಎನ್ನುವುದನ್ನು ನೆನಪು ಇಟ್ಟುಕೊಳ್ಳಬೇಕು. ಪರೀಕ್ಷೆ ಬರೆಯುಂತಹ ಮಕ್ಕಳು ಯಾವುದೇ ರೀತಿಯಲ್ಲೂ ಮಾನಸಿಕವಾಗಿ ನೆಮ್ಮದಿ ಕಳೆದುಕೊಳ್ಳದ ರೀತಿಯಲ್ಲಿ ವಾತಾವರಣವನ್ನು ನಿರ್ಮಾಣ ಮಾಡಬೇಕು ಎನ್ನುವಂತಹ ಸಲಹೆಯನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಕೊಡುತ್ತಿದ್ದೇನೆ. ಮುಂದೆ ಯಾವ ರೀತಿಯಾಗಿ ಇದನ್ನು ಸರಿ ಮಾಡಬೇಕೆಂದು ನಾನು ಎಲ್ಲಾ ರೀತಿಯಿಂದ ಸ್ಟಡಿ ಮಾಡಿ ಸಲಹೆಯನ್ನು ಮಾನ್ಯ ಸಚಿವರಿಗೆ ಕೊಟ್ಟಿದ್ದೇನೆ. ಅದರಲ್ಲಿ ಸರಿಯಾದ ಪರಿಹಾರವನ್ನು ಅವರು ತೆಗೆದುಕೊಳ್ಳಲಿ.

**ಶ್ರೀ ವೈ. ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :** ಮಾನ್ಯ ಸಭಾಪತಿ ಯವರೆ, ಪ್ರಶ್ನೆ ಪತ್ರಿಕೆ ಬಯಲಾಗಿರುವುದು ನಮಗೆಲ್ಲಾ ನೋವಾಗಿದೆ. ಇಡೀ ವಿದ್ಯಾರ್ಥಿಗಳು ಮತ್ತು ಪೋಷಕರು ಆತಂಕದಿಂದ ಇದ್ದಾರೆ. ಸರ್ಕಾರ ಬೇಗ ಸ್ಪಂದಿಸಿ ಅದನ್ನು ಸಿಐಡಿ ತನಿಖೆಗೆ ಒಪ್ಪಿಸಿದ್ದನ್ನು ನಾವೆಲ್ಲರೂ ಕೂಡ ಸ್ವಾಗತಿಸುತ್ತೇವೆ. ಇದರ ಮೂಲ ಯಾವುದು ಎಂದು ಕಂಡು ಹಿಡಿಯಲೇ ಬೇಕಾಗುತ್ತದೆ. It is a challenge to the Government ಇದು ಒಂದು ರೀತಿಯಲ್ಲಿ ಗೌರ್ನಮೆಂಟ್ ವಿರುದ್ಧ ಸೆಡ್ಡು ಹೊಡೆದ ವಾತಾವರನ ಕ್ರಿಯೇಟ್ ಆಗಿದೆ. ನನಗೆ ಏನು ಬಹಳ ನೋವು ಎಂದರೆ ಇಡೀ ರಾಜ್ಯದಲ್ಲಿ ಎಲ್ಲಾ ಕಡೆ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂದು ವಿಷಯ ಗೊತ್ತಾಗಿದ್ದರೂ ಕೂಡ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸ್ವಲ್ಪ ಜಾಸ್ತಿಯಾಗಿದೆ ಎಂದು ತಿಳಿದು ಬಹಳ ನೋವಾಗಿದೆ. ಇದರಲ್ಲಿ ಇಲಾಖೆ ಸಹಾ ಭಾಗಿಯಾಗಿದ್ದಾರೆಂದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಸುಮಾರು ಉಪನ್ಯಾಸಕರುಗಳನ್ನು ಅಮಾನತ್ತು ಮಾಡಿದ್ದಾರೆ. ನಾನು ಯಾರ್ಯಾರು ತಪ್ಪು ಮಾಡಿದ್ದಾರೆ ಅವರ ಪರ ವಕಾಲತ್ತು ವಹಿಸಿಕೊಳ್ಳುವುದಕ್ಕೆ ನಿಂತುಕೊಂಡಿಲ್ಲ. ಯಾರೇ ತಪ್ಪು ಮಾಡಿರಲಿ, ಯಾವುದೇ ಶಕ್ತಿಗಳ ಕೈವಾಡವಿರಲಿ ಅವರನ್ನು ನೇಣಿಗೆ ಹಾಕಬೇಕು. ಅವರನ್ನು ಅಮಾನತ್ತುಗೊಳಿಸುವುದಲ್ಲ ಅವರನ್ನು ಡಿಸ್‌ಮಿಸ್ ಮಾಡಬೇಕು. ನಾವೆಲ್ಲರೂ ಅದಕ್ಕೆ ಸಪೋರ್ಟ ಮಾಡುತ್ತೇವೆ. ಆದರೆ ನನ್ನ ಒಂದು ಕಳಕಳಿ ಮನವಿ ಏನೆಂದರೆ, ಯಾರು ನಿರಾಪರಾಧಿ ಗಳಿದ್ದಾರೆ. ಯಾರು ಇದಕ್ಕೆ ಸಂಬಂಧಪಡದೇ ಇರುವವರಿದ್ದಾರೆ

ಅವರ್ಯಾರಿಗೂ ತೊಂದರೆಯಾಗಬಾರದೆಂದು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ನನಗೆ ಏಕೆ ಈ ಅನುಮಾನ ಬಂತು ಎಂದರೆ ಪಿಸಿಎಂಬಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಲೀಕ್ ಆಗಿದೆ ಎಂದು ನಾನು ಅಂದುಕೊಂಡಿದ್ದೇನೆ. ಆದರೆ ಕನ್ನಡ ಉಪನ್ಯಾಸಕರನ್ನು, ವಾಣಿಜ್ಯ ಉಪನ್ಯಾಸಕರನ್ನು, ಇಂಗ್ಲೀಷ್ ಉಪನ್ಯಾಸಕರನ್ನು ಇವರನ್ನೆಲ್ಲಾ ಅಮಾನತ್ತು ಮಾಡಿರುವುದನ್ನು ನೋಡುತ್ತಿದ್ದೇನೆ. ಇದರಲ್ಲಿ ಇವರುಗಳು ಇನ್‌ವಾಲ್ವ್ ಆಗಿದ್ದಾರೋ ಇಲ್ಲವೋ ಎಂದು ಎಲ್ಲಿಯೋ ಒಂದು ಕಡೆ ಮನಸ್ಸಿನಲ್ಲಿ ಗೊಂದಲ ಇದೆ. ಇದರಲ್ಲಿ ಅವರುಗಳು ಇನ್‌ವಾಲ್ವ್ ಆಗಿದ್ದಾರೆ ನಿಜವಾಗಿಯೂ ಅವರನ್ನು ಬಲಿ ಹಾಕಿ. ಅದಕ್ಕೆ ನಾವುಗಳ್ಯಾರೂ ಅಡ್ಡ ಬರುವುದೇ ಇಲ್ಲ. ಏಕೆಂದರೆ ನಮ್ಮೆಲ್ಲರಿಗೂ ಈ ರಾಜ್ಯದ ಭವಿಷ್ಯ ಮುಖ್ಯ. ಮಕ್ಕಳ ವಿದ್ಯಾಭ್ಯಾಸ ಮುಖ್ಯ. ಪೋಷಕರ ಆತಂಕ ನಿವಾರಣೆ ಮಾಡುವುದು ಮುಖ್ಯವಾಗುತ್ತದೆ. ಆದ್ದರಿಂದ ಮುಂದುವರೆದ ಭಾಗವಾಗಿ ಸಿಐಡಿ ತನಿಖೆಯನ್ನು ಪ್ರಾರಂಭ ಮಾಡಿದ್ದೀರಿ. ತನಿಖೆ ವರದಿ ಬಂದಮೇಲೆ ಯಾರು ತಪ್ಪಿತಸ್ಥರೋ ಅವರನ್ನು ಅಮಾನತ್ತು ಮಾಡದಿದ್ದರೆ ಚೆನ್ನಾಗಿ ಇರುತ್ತಿತ್ತೇನೋ ಗೊತ್ತಿಲ್ಲ. ಆದರೂ ಕೂಡ ಕೆಲವು ಉಪನ್ಯಾಸಕರನ್ನು ಅಮಾನತ್ತುಗೊಳಿಸಲಾಗಿದೆ. ಆದರೆ ನಿರಾಪರಾಧಿಗಳನ್ನು ಕೈ ಬಿಡಬೇಕೆಂದು ತನ್ನ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) :** ಮಾನ್ಯ ಸಭಾಪತಿಯವರೆ, ನಾನು ನೆನ್ನೆಯ ದಿವಸ ಪಿಯು ಮಂಡಳಿಯ ನಿರ್ದೇಶಕರ ಜೊತೆಯಲ್ಲಿ ಮಾತನಾಡಿದೆ, ಆದರೆ ಒಂದು ಏನೆಂದರೆ, ಮಕ್ಕಳು ಮತ್ತು ಪೋಷಕರು ಬಹಳ ಆತಂಕಕ್ಕೆ ಒಳಗಾಗಿದ್ದಾರೆ. ನಾವೆಲ್ಲರೂ ಸೇರಿ ಅದನ್ನು ದೂರ ಮಾಡಬೇಕು. ಇದರಲ್ಲಿ ಎರಡು ಮಾತುಗಳಿಲ್ಲ. ಸಾರ್ವಜನಿಕರ ದೃಷ್ಟಿಯನ್ನು ಬೇರೆ ಕಡೆ ಸೆಳೆಯುವ ನಿಟ್ಟಿನಲ್ಲಿ ನೀವು ಬರೀ ಉಪನ್ಯಾಸಕರನ್ನು ಅಮಾನತ್ತು ಮಾಡುವುದಕ್ಕೆ ಹೊರಟ್ಟಿದ್ದೀರಿ. ನಾನು ಏಕೆ ಹೇಳುತ್ತಿದ್ದೇನೆಂದರೆ ಎಲ್ಲಿ ಇದು ಆಗಿದೆ ಎಂದು ನಾವು ಕಲ್ಪಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲವೆಂದು ಮಾನ್ಯ ಸಚಿವರು ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಹೇಳಿದರು. ಆದರೆ ಇವರು ಅಮಾನತ್ತು ಮಾಡಿರುವುದನ್ನು ನೋಡಿದರೆ ಶ್ರೀಮತಿ ಎಸ್. ಗೀತಾ ಎನ್ನುವವರು

ವಾಣಿಜ್ಯ ಶಾಸ್ತ್ರದ ಉಪನ್ಯಾಸಕರಾಗಿದ್ದಾರೆ. ಮತ್ತೆ ಶ್ರೀಮತಿ ಕಲಾವತಿ ಎಂಬ ಇಂಗ್ಲೀಷ್ ಉಪನ್ಯಾಸಕರನ್ನು ಅಮಾನತ್ತುಗೊಳಿಸಲಾಗಿದೆ. ನಾನು ಬರುವಾಗ ಹೊರಗಡೆ ಅವರುಗಳು ಅಳುತ್ತಾ ಕುಳಿತುಕೊಂಡಿದ್ದಾರೆ. ಮತ್ತೆ ಶ್ರೀ ವೆಂಕಟೇಶ್ ರೆಡ್ಡಿ ಎಂಬ ಕನ್ನಡ ಉಪನ್ಯಾಸಕರನ್ನು, ಇನ್ನೊಬ್ಬರು ವೆಂಕಟರೆಡ್ಡಿ ಎಂಬ ವಾಣಿಜ್ಯ ಶಾಸ್ತ್ರದ ಉಪನ್ಯಾಸಕರನ್ನು ಹಾಗೂ ಶ್ರೀ ಗೋಪಾಲಕೃಷ್ಣ ಎನ್ನುವ ಅರ್ಥಶಾಸ್ತ್ರದ ಉಪನ್ಯಾಸಕರನ್ನು ಅಮಾನತುಗೊಳಿಸಲಾಗಿದೆ. ಇವರೆಲ್ಲರೂ ಅಫಿಷಿಯಲಿ ಪ್ರಶ್ನೆ ಪತ್ರಿಕೆಗಳನ್ನು ಮಾರಾಟ ಮಾಡುವುದಕ್ಕೆ ಹೋಗಿದ್ದರೆ? ಇವರೆಲ್ಲರ ಸಿಐಡಿ ತನಿಖೆಯನ್ನು ಮಾಡಿಸಿ, ಇವರುಗಳು ತಪ್ಪು ಮಾಡಿದ್ದರೆ ಇವರುಗಳನ್ನು ಡಿಸ್‌ಮಿಸ್ ಮಾಡಿ. ಮಾನ್ಯ ಸಚಿವರು ಪ್ರಿಂಟ್ ಆಗಿದ್ದಂತಹ ಪ್ರಶ್ನೆ ಪತ್ರಿಕೆ ಲೀಕ್ ಆಗಿದೆ ಎಂದು ಹೇಳಿದ್ದರು. ಪ್ರಿಂಟೆಡ್ ಪ್ರಶ್ನೆ ಪತ್ರಿಕೆ ಯಾವ ರೀತಿಯಾಗಿ ಹೊರಗಡೆ ಬರುವುದಕ್ಕೆ ಸಾಧ್ಯ? ಆಯಿತು ಖಾಸಗಿ ಶಿಕ್ಷಣ ಸಂಸ್ಥೆಯವರು ಮಾಡಿರಬಹುದು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :** ಮಾನ್ಯ ಸಭಾಪತಿಯವರೆ, ಪ್ರಿಂಟೆಡ್ ಪ್ರಶ್ನೆ ಪತ್ರಿಕೆ ಎಂದು ನಾನು ಹೇಳಿಲ್ಲ. ಕೈಯಲ್ಲಿ ಬರೆದಂತಹ ಪ್ರಶ್ನೆ ಪತ್ರಿಕೆ ಎಂದು ಹೇಳಿರುವುದು.

**ಶ್ರೀ ಪುಟ್ಟಣ್ಣ :** ಮಾನ್ಯ ಸಭಾಪತಿಯವರೆ, ಆಯಿತು ಕೈಯಲ್ಲಿ ಬರೆದಿರುವಂತಹ ಪ್ರಶ್ನೆ ಪತ್ರಿಕೆಯೇ ಇರಲಿ. ಈಗ ಖಾಸಗಿ ಶಿಕ್ಷಣ ಸಂಸ್ಥೆ ಇರಬಹುದು ಅಥವಾ ಟ್ಯೂಷನ್ ಮಾಫಿಯನೇ ಇರಬಹುದು. ಅವರುಗಳು ಸರ್ಕಾರದ ಸಿಸ್ಟಂನಲ್ಲಿ ಪ್ರಶ್ನೆ ಪತ್ರಿಕೆಯನ್ನು ಯಾವ ರೀತಿಯಾಗಿ ಹೊರಗಡೆ ತೆಗೆದುಕೊಂಡು ಬರುವುದಕ್ಕೆ ಸಾಧ್ಯ ಎನ್ನುವುದನ್ನು ಹೇಳಬೇಕು. ಈಗ ಅಮಾನತ್ತು ಮಾಡಿರುವವರು ಪ್ರಶ್ನೆ ಪತ್ರಿಕೆಗಳನ್ನು ಸೆಟ್ ಮಾಡಿರುವಂಥವರಲ್ಲ. ನಿಮ್ಮ ಪರೀಕ್ಷಾ ವಿಷಯಗಳಲ್ಲಿ ಯಾವುದರಲ್ಲಿಯೂ, ಅವರು ಭಾಗಿಯಾಗಿಲ್ಲ. ಅದರಲ್ಲಿ ಭಾಗಿಯಾಗಿರುವವರು ನಿಮ್ಮ ಪದವಿಪೂರ್ವ ಶಿಕ್ಷಣ ಮಂಡಳಿಯವರೆ. ನೆನ್ನೆಯ ದಿವಸ ಮಾಧ್ಯಮಗಳಲ್ಲಿ ವರದಿಯಾಗಿರುವ ಪ್ರಕಾರ, ಒಂದು ಕಡೆ ನಿರ್ದೇಶಕರನ್ನು ಟಾರ್ಗೆಟ್ ಮಾಡಿಕೊಂಡು ಅವರೇನು ಕಟ್ಟುನಿಟ್ಟಾದ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ

ಹೊರಟಿದ್ದಾರೆ ಅದಕ್ಕೆ ವಿರುದ್ಧವಾಗಿ ಆಕೆಯನ್ನು ವರ್ಗಾವಣೆ ಮಾಡಿಸಬೇಕೆನ್ನುವಂತಹ ಉದ್ದೇಶದಿಂದ ಈ ರೀತಿ ಮಾಡಿದ್ದಾರೆ ಎನ್ನುವಂಥದ್ದು ಒಂದು ವಿಚಾರ. ಮತ್ತೊಂದು ವಿಚಾರವೆಂದರೆ, ಹಿಂದಿನ ಯಾವ ವರ್ಷವೂ ಸಹ ಪ್ರಶ್ನೆಪತ್ರಿಕೆಗಳನ್ನು ಸ್ಕ್ಯಾನಿಂಗ್ ಮಾಡಿಸುತ್ತಿರಲಿಲ್ಲ. ಆದರೆ ಪ್ರಸ್ತುತ ವರ್ಷದಲ್ಲಿ ಉಪನ್ಯಾಸಕರೇನು ಪ್ರಶ್ನೆಪತ್ರಿಕೆಗಳನ್ನು ಸೆಟ್ ಮಾಡಿ ಬೋರ್ಡ್‌ಗೆ ಸಲ್ಲಿಸಿದ್ದ ಪ್ರಶ್ನೆಪತ್ರಿಕೆಗಳನ್ನು ನಿರ್ದೇಶಕರು ಸ್ಕ್ಯಾನಿಂಗ್ ಮಾಡಿಸಿದರು. ಈ ರೀತಿ ಸ್ಕ್ಯಾನಿಂಗ್ ಮಾಡಿಸುವಂತಹ ಸಂದರ್ಭವನ್ನು ದುರುಪಯೋಗಪಡಿಸಿ ಕೊಂಡಿದ್ದಾರೆ. ಅಂದರೆ ಅವರಿಗೆ ಆಗದೆ ಇದ್ದಂತಹವರು ಇದನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಹೇಳಲಾಗುತ್ತಿದೆ. ಈ ಪ್ರಶ್ನೆಪತ್ರಿಕೆಗಳು ಎಲ್ಲಿ ಮುದ್ರಣಕ್ಕೆ ಹೋಗಿರುತ್ತವೆ ಎನ್ನುವಂತಹ ವಿಚಾರ ಪರೀಕ್ಷಾ ಮಂಡಳಿಯಲ್ಲಿರುವಂತಹ ಸುಮಾರು ನಾಲ್ಕೈದು ಜನರನ್ನು ಹೊರತುಪಡಿಸಿದರೆ ಇನ್ನಾವುದೇ ಉಪನ್ಯಾಸಕರಿಗಾಗಲಿ, ಖಾಸಗಿ ಶಿಕ್ಷಣ ಸಂಸ್ಥೆಯವರಿಗಾಗಲಿ, ಶಾಸಕರಿಗಾಗಲಿ ಅಥವಾ ಮಂತ್ರಿಗಳಿಗಾಗಲಿ ಗೊತ್ತಿರುವುದಿಲ್ಲ. ಗೊತ್ತಿದ್ದರೆ ಮಾನ್ಯ ಶಿಕ್ಷಣ ಸಚಿವರಿಗೆ ಗೊತ್ತಿರಬಹು ದೇನೋ, ಅದು ನಮಗಂತೂ ಗೊತ್ತಿಲ್ಲ. ಬಹುಶಃ ಅದು ಮಾನ್ಯ ಶಿಕ್ಷಣ ಸಚಿವರ ಗಮನಕ್ಕೂ ಬಂದಿರುವುದಿಲ್ಲವೇನೊ, ಆ ರೀತಿಯ ಗೌಪ್ಯತೆಯನ್ನು maintain ಮಾಡಲಾಗುತ್ತದೆ. ಇಷ್ಟೆಲ್ಲಾ ಇದ್ದರೂ ಸಹ ಹೇಗೆ ಈ ಪ್ರಶ್ನೆಪತ್ರಿಕೆಗಳು ಮಾರಾಟವಾದವು? ಹೇಗೆ ಇವು ಹೊರಬಂದವು ಎನ್ನುವುದು ಇಲ್ಲಿರುವಂತಹ ವಿಚಾರ. ಅದು ಈ ರಾಜ್ಯದ ಜನತೆಗೆ ಗೊತ್ತಾಗಬೇಕು. ಏಕೆಂದರೆ ಆ ವಿದ್ಯಾರ್ಥಿಗಳಿಗೆ ಎಷ್ಟು ಅನ್ಯಾಯವಾಗಿದೆ ಎಂದರೆ ಅವರು ಬಹಳಷ್ಟು ಕುಗ್ಗಿಹೋಗಿದ್ದಾರೆ. ಅವರು ಪರೀಕ್ಷೆಯ ಸಲುವಾಗಿ ಏನು ಓದಿದ್ದರು ಅದನ್ನು ಮರೆತುಬಿಟ್ಟಿದ್ದಾರೆ. ಆ ದೃಷ್ಟಿಯಿಂದ ನಾನು ಹೇಳುವುದೇನೆಂದರೆ ಇಷ್ಟು ಜನ ಉಪನ್ಯಾಸಕರೆಲ್ಲರನ್ನೂ ಏಕಾಏಕಿ ಸಸ್ಪೆಂಡ್ ಮಾಡುವ ಮೂಲಕ ಸಾರ್ವಜನಿಕ ದೃಷ್ಟಿಯನ್ನು ಆ ಕಡೆ ಸೆಳೆಯುವ ಬದಲು, ನಾನು ಮೊನ್ನೆ ತಮ್ಮೊಂದಿಗೆ ಮಾತನಾಡುವಂತಹ ಸಂದರ್ಭದಲ್ಲಿ 'ಸಿ.ಐ.ಡಿ. ತನಿಖೆಗೆ ಹದಿನೈದು ದಿವಸ ಟೈಮ್ ಕೊಡಿ ಸಾರ್, ಹದಿನೈದು ದಿವಸಗಳೊಳಗೆ ಅವರು ತನಿಖೆ ಮಾಡಿ ವರದಿ ಸಲ್ಲಿಸಬೇಕು,

ಬೇಕಾದರೆ ಮಧ್ಯಂತರ ವರದಿಯನ್ನು ಪಡೆದುಕೊಳ್ಳಿ, ಯಾರು ಇದಕ್ಕೆ ಕಾರಣರಿದ್ದಾರೆ ಅವರನ್ನೆಲ್ಲಾ ಸಸ್ಪೆಂಡ್ ಮಾಡಿ ಡಿಸ್ಮಿಸ್ ಮಾಡಿ, ಜೊತೆಗೆ ಜೈಲಿಗೆ ಹಾಕುವಂತಹ ಕೆಲಸವನ್ನೂ ಸಹ ಮಾಡಿ, ಅದನ್ನು ಬಿಟ್ಟು ಇದನ್ನು ಡೈವರ್ಷನ್ ಮಾಡುವುದಕ್ಕೆ ತಾವು ಅವಕಾಶ ಕೊಡಬೇಡಿ' ಎಂದು ತಮ್ಮಲ್ಲಿ ವಿನಂತಿಸಿದ್ದೆ. ಏಕೆಂದರೆ ಇದನ್ನೇಲ್ಲಾ ನಿಮ್ಮ ಗಮನಕ್ಕೆ ತಂದು ಮಾಡಬೇಕು. ನಾನು ಈ ವಿಚಾರವನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಪದವಿಪೂರ್ವ ಶಿಕ್ಷಣ ಮಂಡಳಿಲಯಲ್ಲಿರುವಂತಹ ಜಂಟಿ ನಿರ್ದೇಶಕರಿರಬಹುದು, ಉಪ ನಿರ್ದೇಶಕರುಗಳಿರಬಹುದು ಅವರು ಏನು ಮಾಡುತ್ತಿದ್ದಾರೆ ಎಂದರೆ ತಾವು ತಪ್ಪಿಸಿಕೊಳ್ಳುವುದಕ್ಕೆ ಇದನ್ನು ಬೇರೆ ಕಡೆಗೆ divert ಮಾಡುತ್ತಿದ್ದಾರೆ ಎಂಬುದು ನಮ್ಮ ಭಾವನೆ. ಆ ರೀತಿ divert ಆಗುವುದಕ್ಕೆ ತಾವು ಅವಕಾಶ ಕೊಡಬೇಡಿ. ಚಿಂತಾಮಣಿಗಾಗಲಿ, ಚಿಕ್ಕಬಳ್ಳಾಪುರಕ್ಕಾಗಲಿ ಈ ಪ್ರಶ್ನೆಪತ್ರಿಕೆಗಳು ಹೇಗೆ ಹೋಗಲಿಕ್ಕೆ ಸಾಧ್ಯ? ನೀವು ಯಾವುದೋ ರಾಜ್ಯದಲ್ಲಿ ಪ್ರಿಂಟ್ ಮಾಡಿಸಿರುತ್ತೀರಿ, ಆ ವಿಚಾರ ಮಂಡಳಿಯಲ್ಲಿನ ನಾಲ್ಕೈದು ಜನರಿಗೆ ಮಾತ್ರ ಗೊತ್ತಿರುತ್ತದೆ. ಹೀಗಿರುವಾಗ ಇದೆಲ್ಲಾ ಹೇಗೆ ಹೊರಬರಲಿಕ್ಕೆ ಸಾಧ್ಯ? ಸರ್ಕಾರ ಕೂಡ ಈ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣಿಸಿದೆ ಎಂಬುದನ್ನು ನಾವು ಸಹ ಒಪ್ಪುತ್ತೇವೆ. ಆದ್ದರಿಂದ ದಯಮಾಡಿ ನಾವು ಮಾನ್ಯ ಸಚಿವರನ್ನಾಗಲಿ ಅಥವಾ ಪದವಿಪೂರ್ವ ಶಿಕ್ಷಣ ಮಂಡಳಿಯ ನಿರ್ದೇಶಕರನ್ನಾಗಲಿ ರಾಜೀನಾಮೆ ಕೊಡಬೇಕೆನ್ನುವಂತಹ ದೃಷ್ಟಿಯಿಂದ ಮಾತನಾಡುತ್ತಿಲ್ಲ. ಆದರೆ ಈ ರಾಜ್ಯದ ವಿದ್ಯಾರ್ಥಿಗಳು ಮತ್ತು ಅವರ ಪೋಷಕರೇನಿದ್ದಾರೆ ಅವರ ಆತಂಕ ದೂರವಾಗಬೇಕು. ಅವರು ಯಾವುದೇ ರೀತಿಯ ಮಾನಸಿಕ ಒತ್ತಡಕ್ಕೆ ಒಳಗಾಗದೆ ಪರೀಕ್ಷೆಯನ್ನು ಬರೆಯುವಂತಾಗಬೇಕು. ಇದು ಒಂದು ಹಂತವಾಯಿತು. ಇನ್ನೊಂದು ಹಂತಕ್ಕೆ ಸಿ.ಇ.ಟಿ. ಪರೀಕ್ಷೆ ಬರುತ್ತದೆ, ಅದಕ್ಕೆ ತನ್ನದೇ ಆದಂತಹ ಮಾಫಿಯಾ ಇದೆ. ಅದನ್ನು ತಡೆಗಟ್ಟುವುದಕ್ಕೆ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಈಗಲೇ ಕೈಗೊಳ್ಳಿ. ಅನಂತರ drop out seat ವಿಚಾರ ಬರುತ್ತದೆ, ಈ ಎಲ್ಲ ವಿಚಾರಗಳು ಹಂತ ಹಂತವಾಗಿ ಬರುವಂತಹವುಗಳು ಎಂಬುದು ತಮಗೂ ಸಹ ಗೊತ್ತಿದೆ. Drop out seat ವಿಚಾರವನ್ನು ಇದೇ ರೀತಿ ತನಿಖೆಗೆ ವಹಿಸಲಾಗಿತ್ತು, ನಾನು ಈ

ವಿಚಾರವನ್ನು ಹೇಳುತ್ತಿರುವುದಕ್ಕೆ ಕಾರಣವೇನೆಂದರೆ ನೀವೀಗ ಸಿ.ಐ.ಡಿ. ತನಿಗೆ ಕಾಲಾವಧಿಯನ್ನು ನಿಗದಿಪಡಿಸಿಲ್ಲ, ತನಿಖೆಗೆ ಮಾತ್ರ ವಹಿಸಲಾಗಿದೆ. ಈ ವಿಚಾರದ ಬಗ್ಗೆ ನಾವೆಲ್ಲರೂ ಮಾತನಾಡುತ್ತೇವೆ, ಪತ್ರಿಕೆಯವರು ಸಹ ಬರೆಯುತ್ತಾರೆ, ಜನರು ಆತಂಕಕ್ಕೊಳಗಾಗುತ್ತಾರೆ, ಇನ್ನೊಂದು ತಿಂಗಳಾದ ನಂತರ ಎಲ್ಲವನ್ನು ಮರೆತು ಬಿಡುತ್ತಾರೆ, ನೀವು ಬಿಟ್ಟು ಬಿಡುತ್ತೀರಿ, ವಿಷಯ ಡೈಲ್ಯೂಟ್ ಆಗಿಬಿಡುತ್ತದೆ. ಆ ರೀತಿ ಡೈಲ್ಯೂಟ್ ಆಗುವುದಕ್ಕೆ ಬಿಡಬೇಡಿ. ಯಾವುದೇ ಕಾರಣಕ್ಕೂ ಇದು ಡೈಲ್ಯೂಟ್ ಆಗಬಾರದು. Drop out seat ವಿಚಾರದ ಮೇಲಿನ ತನಿಖೆಯನ್ನು ಸಿ.ಸಿ.ಬಿ. ತನಿಖೆಗೆ ವಹಿಸಿರುವುದಾಗಿ ಸದನದಲ್ಲಿ ತಿಳಿಸಲಾಗಿತ್ತು. ಆದರೆ ಅದು ತಳಹಿಡಿದು ಹೋಯಿತು. ಎಲ್ಲವನ್ನೂ ಮುಚ್ಚಿ ಹಾಕಿದರು, ದೊಡ್ಡ ದೊಡ್ಡ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿರುವಂತಹ ಅಧ್ಯಕ್ಷರು, ಕಾರ್ಯದರ್ಶಿಗಳು, ಪ್ರಾಚಾರ್ಯರುಗಳೆಲ್ಲಾ ಭಾಗಿಗಳಾಗಿ ಏನೆಲ್ಲಾ ಮಾಡುತ್ತಿದ್ದರು ಅದನ್ನು ವ್ಯವಸ್ಥಿತವಾಗಿ ಮುಚ್ಚಿಬಿಟ್ಟರು. ಆದ್ದರಿಂದ ಆ ರೀತಿ ಇದನ್ನು ಸಹ ಮುಚ್ಚಿಹಾಕುವುದಕ್ಕೆ ತಾವು ದಯಮಾಡಿ ಅವಕಾಶ ಕೊಡಬೇಡಿ. ಇದರ ಬಗ್ಗೆ ಸರ್ಕಾರ ಬೆಳಕು ಚೆಲ್ಲಿ ಇದರಲ್ಲಿ ಯಾರು ಭಾಗಿಗಳಾಗಿದ್ದಾರೆ ಅಂತಹವರನ್ನು ನಿರ್ದಾಕ್ಷಿಣ್ಯವಾಗಿ ಜೈಲಿಗೆ ಕಳುಹಿಸ ತಕ್ಕಂತಹ ಕೆಲಸವನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

**ಶ್ರೀ ಆರ್. ವಿ. ವೆಂಕಟೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :** ಮಾನ್ಯ ಸಭಾಪತಿಯವರೇ, ಇದೇ ತಿಂಗಳ 19ನೇ ತಾರೀಖಿನಂದು ಸಂಜೆ ಗಣಿತ ವಿಷಯದ ಪ್ರಶ್ನೆಪತ್ರಿಕೆ ಲೀಕ್ಔಟ್ ಆಗಿದೆ ಎಂದು ಮಾಧ್ಯಮಗಳಲ್ಲಿ ಸುದ್ದಿ ಪ್ರಸಾರವಾಗುತ್ತಿತ್ತು. ಅದು ಎಷ್ಟರಮಟ್ಟಿಗೆ ಸತ್ಯ ಎನ್ನುವಂಥದ್ದರ ಬಗ್ಗೆ ನಮಗೆ ನಂಬಿಕೆ ಇರಲಿಲ್ಲ. ಮಾರನೆಯ ದಿವಸ ಬೆಳಿಗ್ಗೆ ನಾನು ಮಾನ್ಯ ಸಚಿವರನ್ನು ಭೇಟಿಯಾದಾಗ ಅವರು ಸಹ 'ನಾನು ಟ್ರೈನ್‌ನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಈ ವಿಷಯ ದೂರದರ್ಶನದಲ್ಲಿ ಪ್ರಸಾರವಾಗುತ್ತಿದ್ದುದನ್ನು ನೋಡಿದೆ. ಮಧ್ಯ ರಾತ್ರಿಯ ವೇಳೆಗೆ ಇಂತಹ ಪ್ರಶ್ನೆಪತ್ರಿಕೆ ಎಂಬುದು ಕನ್‌ಫರ್ಮ್ ಆಯಿತು. ಆದ್ದರಿಂದ ಅದನ್ನು ತಡೆಹಿಡಿದು ಪೋಸ್ಟ್‌ಪೋನ್ ಮಾಡಿದ್ದೇವೆ' ಎಂದು

ತಿಳಿಸಿದರು. ನಾವೂ ಸಹ ಆ ವಿಚಾರದಲ್ಲಿ ನಮ್ಮ ಕಳವಳವನ್ನು ವ್ಯಕ್ತಪಡಿಸಿದೆವು. ಏನೋ ಆಗಿಹೋಗಿದೆ, ಬಹಳ ವರ್ಷಗಳಿಂದ ಈ ರೀತಿ ಆಗಿರಲಿಲ್ಲ. ಆದರೂ ಆಗಿದೆ, ಇಷ್ಟೆಲ್ಲಾ foolproof methods, security measures ಇದ್ದರೂ ಈ ರೀತಿ ಆಗಿದೆ ಎಂದರೆ ಇದನ್ನು ನಂಬುವುದಕ್ಕಾಗುತ್ತಿಲ್ಲ, ಇನ್ನು ಮುಂದೆಯಾದರೂ ಈ ರೀತಿ ಆಗಬಾರದು ಎಂದಾಗ ಇಲ್ಲ, ಇನ್ನು ಮುಂದೆ ಯಾವುದೇ ಕಾರಣಕ್ಕೂ ಈ ರೀತಿ ಆಗುವುದಕ್ಕೆ ಸಾಧ್ಯವೇ ಇಲ್ಲ. ಆ ರೀತಿಯ ಕ್ರಮಗಳನ್ನು ಸಹ ತೆಗೆದುಕೊಂಡಿದ್ದೇವೆ ಎನ್ನುವಂತಹ ವಿಚಾರವನ್ನು ಸನ್ಮಾನ್ಯ ಸಚಿವರು ತಿಳಿಸಿದರು. ಆದಾದ ಎರಡನೇ ದಿವಸಕ್ಕೆ ಮತ್ತೆ ಇನ್ನೊಂದು ಪ್ರಶ್ನೆ ಪತ್ರಿಕೆ ಲೀಕ್‌ಔಟ್ ಆಗಿದೆ ಎನ್ನುವಂತಹ ಸುದ್ದಿ ಬಂತು, ನಂತರ ಇನ್ನೂ ಒಂದೆರಡು ಪಶ್ನೆ ಪತ್ರಿಕೆಗಳು, ಕೆಮಿಸ್ಟ್ರಿ ಮತ್ತು ಇಂಗ್ಲೀಷ್ ಪ್ರಶ್ನೆ ಪತ್ರಿಕೆಗಳು ಕೂಡ ಲೀಕ್‌ಔಟ್ ಆಗಿರುವುದಾಗಿ ಸುದ್ದಿಗಳು ಬರುತ್ತಿವೆ. ಇದು ಯಾವ ರೀತಿಯಲ್ಲಿ ಎಂದರೆ ಮಾನ್ಯ ಸಚಿವರು ತಕ್ಷಣಕ್ಕೆ ಹೇಗೋ 'ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡರೆ ನೂರು ವರ್ಷ ಆಯಸ್ಸು' ಎನ್ನುವಂತೆ ತಪ್ಪಿಸಿಕೊಂಡು ಹೋಗುವುದಲ್ಲ. ಇನ್ನು ಎರಡು-ಮೂರು ದಿವಸಗಳು ಕಳೆದ ಮೇಲೆ ಈ ಅಧಿವೇಶನ ಮುಗಿದುಹೋಗುತ್ತದೆ, ಹೇಗೋ ಎಲ್ಲರೂ ಮರೆತುಹೋಗುತ್ತಾರೆ ಎಂದು ಭಾವಿಸುವಂತಿಲ್ಲ. ಈ ಕೆಲಸವನ್ನು ಯಾರೇ ಮಾಡಿರಲಿ, ಇದು ರಾಜದ್ರೋಹದ ಕಾರ್ಯವಾದ್ದರಿಂದ ಇದನ್ನು ಅತೀ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಈ ವಿಚಾರದಲ್ಲಿ ಎಷ್ಟೇ ರಾಜಕೀಯ ಒತ್ತಡಗಳು ಬರಲಿ, ಅದರಲ್ಲಿ ಮತ್ತೇನೇ ಪ್ರಶ್ನೆಗಳು ಎದುರಾಗಲಿ ಇನ್ನು ಮುಂದಕ್ಕೆ ಈ ರೀತಿ ಯಾರೂ ಸಹ ಧೈರ್ಯ ಮಾಡಬಾರದು, ಈ ರೀತಿ ಮಾಡಿದ್ದೇ ಆದರೆ ಅವರನ್ನು ಕೆಲಸದಿಂದ ವಜಾಗೊಳಿಸುವುದಷ್ಟೇ ಅಲ್ಲದೆ ಜೈಲಿಗೆ ಕೂಡ ಕಳುಹಿಸಬೇಕಾಗುತ್ತದೆ. ಅಂತಹವರಿಗೆ ಛೀಮಾರಿ ಹಾಕುವಂತಹ ಕೆಲಸ ಕೂಡ ಆಗಬೇಕು. ಈ ವಿಷಯದಲ್ಲಿ ನನಗೆ ಸ್ವಲ್ಪ ಹೆಚ್ಚು ಕಳವಳ ಉಂಟಾಗುತ್ತಿದೆ, ಏಕೆಂದರೆ ನನ್ನ ಮಗ ಕೂಡ ಈ ಸಾಲಿನ ದ್ವಿತೀಯ ಪಿ.ಯು.ಸಿ. ಪರೀಕ್ಷೆಗೆ ಕುಳಿತಿದ್ದಾನೆ. ಈ ರೀತಿ ಆಗುವುದಕ್ಕೆ ಒಂದು ಕಾರಣವಿರಬಹುದೆಂದು ಆತನ ಫ್ರೆಂಡ್ಸ್ ಎಲ್ಲಾ ಹೇಳಿದರು. ಆ ವಿಚಾರವನ್ನು

ನಾನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಕಳೆದ ಎರಡು ವರ್ಷಗಳಿಂದ ದ್ವಿತೀಯ ಪಿ.ಯು.ಸಿ. ಫಲಿತಾಂಶದಲ್ಲಿ ಇಳಿಮುಖವಾಗಿದೆ. ಈ ಇಳಿಮುಖವನ್ನು ಸರಿದೂಗಿಸಲಿಕ್ಕೆ ಪದವಿಪೂರ್ವ ಶಿಕ್ಷಣ ಮಂಡಳಿಯವರೇ ಕೆಲವರನ್ನು ಬಿಟ್ಟಿದ್ದಾರೆ. ಏಕೆಂದರೆ ಈ ಪ್ರಶ್ನೆಪತ್ರಿಕೆಗಳು ಲೀಕೌಟ್ ಆಗಿದ್ದುದು ಕೆಲವು ಕಡೆ ಮಾತ್ರ, ಎಲ್ಲಾ ಕಡೆ ಆಗಿರಲಿಲ್ಲ. ಏಕೆಂದರೆ ಅನೇಕ ಶಾಲಾ ಕಾಲೇಜುಗಳಲ್ಲಿ ಆವತ್ತು ಪರೀಕ್ಷೆ ಬರೆಯಲು ಸುಮಾರು ಮುಕ್ಕಾಲು ಭಾಗದಷ್ಟು ವಿದ್ಯಾರ್ಥಿಗಳು ಹಾಜರಾಗಿದ್ದರು. ಪ್ರಶ್ನೆ ಪತ್ರಿಕೆಗಳಲ್ಲಿ ಶೇಕಡ 20 ರಿಂದ 25ರಷ್ಟು ಪ್ರಶ್ನೆಗಳು ಮಾತ್ರ ಲೀಕೌಟ್ ಆಗಿದ್ದವು. ಫಲಿತಾಂಶದಲ್ಲಿ ಈ ರೀತಿಯ ಒಂದು ಇಳಿಮುಖ ಏನಾಗಿತ್ತು ಇದಕ್ಕೆ ಇಲಾಖೆಯಲ್ಲಿ ಉನ್ನತ ಮಟ್ಟದಲ್ಲಿರುವಂತಹ ಕೆಲವು ಅಧಿಕಾರಿಗಳೇ ಸ್ವಲ್ಪಮಟ್ಟಿಗೆ ಸಡಿಲ ಬಿಟ್ಟಿದ್ದಾರೆ. ಹೀಗಾಗಿ ಈ ರೀತಿಯಾಗವುದಕ್ಕೆ ಅದೂ ಒಂದು ಕಾರಣವಿರಬಹುದೆಂಬುದು ಅವರ ಸಂಶಯವಾಗಿದೆ. ಆದ್ದರಿಂದ ಈ ವಿಷಯವನ್ನು ಸಹ ನಾನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಯಾರೇ ಇರಲಿ, ಏನೇ ಇರಲಿ, ಈಗ ಅನೇಕ ಸದಸ್ಯರು ಮಾತನಾಡುತ್ತಾ ಕೆಲವು ನಿರ್ದೋಷಿಗಳನ್ನು ಕೂಡ ಬಂಧಿಸಿದ್ದಾರೆ ಎನ್ನುವಂತಹ ವಿಚಾರವನ್ನು ತಿಳಿಸಿದರು. ಆ ರೀತಿ ಆಗುತ್ತದೆ, ಏಕೆಂದರೆ ಪ್ರಕ್ರಿಯೆ ಮಾಡುವಾಗ ಅದೆಲ್ಲಾ ಆಗುತ್ತದೆ. ಅದು ಏನೇ ಇರಲಿ, ಕಡೆಯದಾಗಿ ಯಾವ ನಿರ್ದೋಷಿಗಳಿಗೂ ತೊಂದರೆಯಾಗದಂತೆ ನೋಡಿಕೊಂಡು, ನಿಜವಾಗಿಯೂ ಯಾರು ಈ ರೀತಿಯ ಕೃತ್ಯವನ್ನು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಮನಸ್ಸು ಮಾಡಿದರೆ ಅದು ಸರ್ಕಾರಕ್ಕೇನೂ ದೊಡ್ಡ ಕೆಲಸವಲ್ಲ. ಈ ಪ್ರಕರಣವನ್ನು ಸಿ.ಐ.ಡಿ. ತನಿಖೆಗೆ ವಹಿಸಿರುವುದಾಗಿ ಮಾನ್ಯ ಸಚಿವರು ತಿಳಿಸಿದ್ದಾರೆ. ಮಾನ್ಯ ಪುಟ್ಟಣ್ಣನವರು ತಿಳಿಸಿರುವಂತೆ ಸುಮಾರು ನಾಲ್ಕೈದು ದಿವಸಗಳ ಕಾಲ ಪತ್ರಿಕೆಗಳಲ್ಲಿ ಏನೋ ಬರೆಯುತ್ತಾರೆ. ಸದಸನದಲ್ಲಿಯೂ ಚರ್ಚೆಯಾಗುತ್ತದೆ. ಸ್ವಲ್ಪ ದಿನಗಳು ಕಳೆದ ಮೇಲೆ ಅದೆಲ್ಲಾ ಮರೆತುಹೋಗಿ ಈ ಕೆಲಸವನ್ನು ಮಾಡಿದವರು ಯಥಾಪ್ರಕಾರ ಮತ್ತೆ ಸೇವೆಯಲ್ಲಿ ಮುಂದುವರೆದುಕೊಂಡು ಹೋಗುವಂತಹ ಧೈರ್ಯ ಮಾಡಬಾರದೆಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಡಾ: ಎ. ಹೆಚ್. ಶಿವಯೋಗಿಸ್ವಾಮಿ (ವಿಧಾನಸಭಾ ಕ್ಷೇತ್ರ)** ಸನ್ಮಾನ್ಯ ಸಭಾಪತಿಯವರೇ, ಇದೊಂದು ಅತ್ಯಂತ ದುರದೃಷ್ಟಕರವಾದ ಹಾಗೂ ಗಂಭೀರವಾದಂತಹ ಸಂಗತಿ ಎನ್ನುವಂತಹ ವಿಚಾರ ನಮಗೆಲ್ಲಾ ಗೊತ್ತಿದೆ. ಎಲ್ಲ ಗೌರವಾನ್ವಿತ ಸದಸ್ಯರೂ ಕೂಡ ಈ ವಿಚಾರದ ಬಗ್ಗೆ ಈಗಾಗಲೇ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಒಂದೆರಡು ಅಂಶಗಳನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಬಹಳ ಪ್ರಮುಖವಾಗಿ ಈ ಪ್ರಶ್ನೆಪತ್ರಿಕೆ ಬಯಲಾಗಿರುವಂತಹ ವಿಷಯದಲ್ಲಿ ಕೋಲಾರ, ಚಿಕ್ಕಬಳ್ಳಾಪುರ, ಚಿಂತಾಮಣಿಯಲ್ಲಿರುವಂತಹ ಉಪನ್ಯಾಸಕರು ಹೇಗೆ ಭಾಗಿಗಳಾಗುವುದಕ್ಕೆ ಸಾಧ್ಯವಿರುತ್ತದೆ? ಮಾನ್ಯ ಸಚಿವರು ತಿಳಿಸಿರುವಂತೆ ಪ್ರಶ್ನೆಪತ್ರಿಕೆ ಸಿಕ್ಕಿದ ಮೇಲೆ ಅದನ್ನು ದುರುಪಯೋಗ ಪಡಿಸಿಕೊಳ್ಳುವುದು ಸಹಜವೇ, ಯಾವುದೇ ವ್ಯಕ್ತಿಯಾಗಿದ್ದರೂ ಕೂಡ ಆ ರೀತಿ ಮಾಡುವುದಕ್ಕೆ ಸಾಧ್ಯತೆ ಇರುತ್ತದೆ. ಹಾಗಾಗಿ ಮಾಡಿರಬಹುದು. ಆದರೆ ಆ ಉಪನ್ಯಾಸಕರನ್ನು ಸಸ್ಪೆಂಡ್ ಮಾಡುವ ಮೂಲಕ ಅವರನ್ನು demoralize ಮಾಡಿದರೆ ಅದರ ಫಲಿತಾಂಶ ಏನಾಗುತ್ತದೆ ಎಂಬುದನ್ನು ಸಹ ನಾವು ಗಮನಿಸಿಕೊಳ್ಳ ಬೇಕಾಗುತ್ತದೆ. ವಿಶೇಷವಾಗಿ ಈ ರೀತಿ ಲೀಕ್ ಆಗುವುದಕ್ಕೆ ಇಲಾಖೆಯಲ್ಲಿನ ಯಾವುದಾದರೂ ಕೆಳಮಟ್ಟದ ಅಧಿಕಾರಿಗಳಿರಬಹುದು ಅಥವಾ ಈ ಪ್ರಶ್ನೆ ಪತ್ರಿಕೆಗಳು ಎಲ್ಲಿ ಪ್ರಿಂಟ್ ಆಗಿರುತ್ತವೆ ಅದಕ್ಕೆ ಸಂಬಂಧಪಟ್ಟಂತಹ ವಿಷಯವೋ ಇಂತಹವುಗಳನ್ನು ಗಮನಿಸಿಕೊಳ್ಳುವ ದೃಷ್ಟಿಯಿಂದ ತಾವೇನು ಈಗಾಗಲೇ ಸಿ.ಐ.ಡಿ. ಮುಖಾಂತರ ತನಿಖೆಯನ್ನು ಮಾಡಿಸಲಾಗುತ್ತಿದೆ ಎಂದು ಹೇಳಿದ್ದೀರಿ, ಅದನ್ನು ಖಂಡಿತವಾಗಿಯೂ ಮಾಡಿಸಿ. ನಾನು ತಮ್ಮ ಮುಖಾಂತರ ಸನ್ಮಾನ್ಯ ಸಚಿವರಲ್ಲಿ ಎರಡು ಪ್ರಮುಖ ಅಂಶಗಳ ಬಗ್ಗೆ ವಿನಂತಿ ಮಾಡಿಕೊಳ್ಳುತ್ತೇನೆ. ಅಮಾಯಕರು, ನಿರಪಾಧಿಗಳು ಯಾರಿರುತ್ತಾರೆ ಅಂಹವರಿಗೆ ಶಿಕ್ಷೆಯಾಗಬಾರದು. ಇದು ಮೊದಲನೆಯ ಸಂಗತಿ. ನೀವು ಕೆಲವು ಉಪನ್ಯಾಸಕರನ್ನು ಸಸ್ಪೆಂಡ್ ಮಾಡಿ ಅವರ ಮೇಲೆ ಎನ್‌ಕ್ವೈರಿ ಕಂಡಕ್ಟ್ ಮಾಡಿ ನಂತರ ಸಸ್ಪೆನ್ಷನ್ ರಿವೋಕ್ ಮಾಡಬಹುದು, ಆದರೆ ಅಲ್ಲಿಯವರೆಗೆ ಆ ವ್ಯಕ್ತಿ ಮಾನಸಿಕವಾಗಿ ಏನು ಹಿಂಸೆ ಅನುಭವಿಸುತ್ತಾನೆ, ಊರಿನಲ್ಲಿ ಓಡಾಡುವಂತಹ ಸಂದರ್ಭದಲ್ಲಿ ಇನ್ನುಳಿದ ಉಪನ್ಯಾಸಕರೇನು

ಅವರ ಬಗ್ಗೆ ಮಾತನಾಡಿಕೊಳ್ಳುವ ಮೂಲಕ ಇವರ ಗೌರವಕ್ಕೆ ಧಕ್ಕೆ ಉಂಟಾಗುತ್ತದೆ ಅದನ್ನು ನಾವು ಮತ್ತೆ reinstate ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ ವಿಶೇಷವಾಗಿ ಈ ರೀತಿ ಪ್ರಶ್ನೆಪತ್ರಿಕೆಗಳು ಲೀಕ್ ಆಗಿರುವುದಕ್ಕೆ ಇಲಾಖೆಯೊಳಗೆ ಏನು ಸಮಸ್ಯೆ ಆಗಿದೆ, ಅಲ್ಲೇನಾದರೂ ವ್ಯತ್ಯಾಸಗಳು ಅಥವಾ ಕೊರತೆಗಳುಂಟಾಗಿ ಈ ರೀತಿ ಆಗಿದೆಯೇ ಎಂಬುದನ್ನು ಗಮನಿಸುವಂತಹ ಕೆಲಸವನ್ನು ಸರ್ಕಾರ ಬಹಳ ಪ್ರಮುಖವಾಗಿ ಮಾಡಬೇಕಾಗುತ್ತದೆ. ಇದು ಒಂದು ವಿಚಾರ.

ಇನ್ನು ಎರಡನೆಯದಾಗಿ, ಆ ಶಿಕ್ಷಣ ಸಂಸ್ಥೆಗಳ ಮಾನ್ಯತೆಯನ್ನು ರದ್ದುಪಡಿಸಲಾಗುತ್ತದೆ ಎಂಬುದಾಗಿ ನೋಟೀಸ್‌ಗಳನ್ನು ಕಳುಹಿಸಿಕೊಡುವಂತಹ ಪ್ರಕ್ರಿಯೆ ನಡೆಯುತ್ತಿದೆ ಎಂಬುದಾಗಿ ನಮಗೆ ಗೊತ್ತಾಗಿದೆ. ಹಾಗಾಗಿ ಯಾರೋ ಒಬ್ಬ ವ್ಯಕ್ತಿ ಮಾಡಿರುವಂತಹ ತೊಂದರೆ ಅಥವಾ ತಪ್ಪಿಗೆ ಆ ಸಂಸ್ಥೆಯನ್ನು ಹೊಣೆಗಾರಿಕೆ ಮಾಡಿ ಅದರ ಮಾನ್ಯತೆಯನ್ನೇ ರದ್ದುಪಡಿಸಲಾಗುತ್ತದೆ ಎಂದರೆ ಅಲ್ಲಿ ವಿಧ್ಯಾಭ್ಯಾಸ ಮಾಡುತ್ತಿರುವಂತಹ ವಿದ್ಯಾರ್ಥಿಗಳು, ಅಲ್ಲಿ ಕೆಲಸ ಮಾಡುತ್ತಿರುವಂತಹ ಉಪನ್ಯಾಕರು ಮತ್ತು ಇನ್ನಿತರ ಸಿಬ್ಬಂದಿಗಳ ಗತಿ ಏನು? ಈ ದೃಷ್ಟಿಯಿಂದ ನಾನು ತಮ್ಮ ಮೂಲಕ ಸನ್ಮಾನ್ಯ ಸಚಿವರಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳು ವುದೇನೆಂದರೆ, ಸನ್ಮಾನ್ಯ ಪುಟ್ಟಣ್ಣನವರು ತಿಳಿಸಿರುವಂತಹ ಒಂದು ಅಂಶ ಬಹಳ ಸರಿಯಾಗಿದೆ. ಯಾವುದೇ ತನಿಖೆಗಳು ಕಾಲಮಿತಿಯೊಳಗೆ ಪೂರ್ಣ ಗೊಳ್ಳಬೇಕು. ಒಂದು ವಾರ ಆಗಲಿ, 10 ದಿವಸ ಆಗಲಿ ಅಥವಾ 15 ದಿವಸಗಳಾಗಲಿ, ಆ ಅವಧಿ ಪೂರ್ಣಗೊಂಡ ನಂತರ ತಪ್ಪಿತಸ್ಥರು ಯಾರೆಂಬುದು ತನಿಖೆಯಿಂದ ಸರ್ಕಾರದ ಗಮನಕ್ಕೆ ಬರುತ್ತದೆ. ಅಂತಹವರ ವಿರುದ್ಧ ಯಾವುದೇ ಕ್ರಮವನ್ನು ತೆಗೆದುಕೊಳ್ಳಬಹುದಾಗಿದೆ. ಕೇವಲ ಸಸ್ಪೆಂಡ್ ಮಾಡಿದರೆ ಸಾಕಾಗುವುದಿಲ್ಲ. ನಿರ್ದಾಕ್ಷಿಣ್ಯವಾಗಿ ಅವರನ್ನು terminate ಮಾಡಿ ಅಥವಾ hang ಮಾಡಿ ಅಥವಾ ಬೇರೆ ಏನು ಬೇಕಾದರೂ ಮಾಡಬಹುದು. ಆ ವಿಚಾರದಲ್ಲಿ ನಮ್ಮ ಆಕ್ಷೇಪಣೆ ಏನೂ ಇಲ್ಲ. ಆದರೆ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಮತ್ತು ಇವೊತ್ತಿನ ದಿವಸ ಪೋಷಕರೇನು ಆತಂಕಕ್ಕೆ

ಒಳಗಾಗಿದ್ದಾರೆ. ಆ ಎಲ್ಲ ಕಾರಣಗಳಿಂದ ಆದಷ್ಟೂ ಕಾಲಮಿತಿಯೊಳಗೆ ಈ ಸಮಸ್ಯೆಗೆ ಒಂದು ಪರಿಹಾರವನ್ನು ಕಂಡುಹಿಡಿಯಬೇಕೆಂದು ನಾನು ತಮ್ಮ ಮೂಲಕ ಸನ್ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ವಿ. ಆರ್. ಸುದರ್ಶನ್ (ವಿಧಾನಸಭಾ ಕ್ಷೇತ್ರ) :** ಮಾನ್ಯ ಸಭಾಪತಿಯವರೆ, ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ, ಮಾನ್ಯ ಕಾಗೇರಿಯವರು ಶಿಕ್ಷಣ ಸಚಿವರಾಗಿದ್ದರೂ ಸಹ ತಮ್ಮ ಮಕ್ಕಳನ್ನು ಸರ್ಕಾರಿ ಶಾಲಾ ಕಾಲೇಜುಗಳಿಗೆ ಕಳುಹಿಸುತ್ತಿದ್ದಾರೆಂಬ ವಿಷಯವನ್ನು ನಾನು ಪತ್ರಿಕೆಗಳಲ್ಲಿ ಓದಿ ತಿಳಿದಿದ್ದೇನೆ. ಅನೇಕ ಸಂದರ್ಭದಲ್ಲಿ ಸದನದಲ್ಲಿ ಶಿಕ್ಷಕರುಗಳ ಹಕ್ಕುಗಳ ಬಗ್ಗೆ, ಅವರಿಗೆ ಆಗಬೇಕಾಗಿರುವಂತಹ ಅನುಕೂಲಗಳ ಬಗ್ಗೆ ನಾವೆಲ್ಲರೂ ಹೆಚ್ಚು ಚರ್ಚೆ ಮಾಡಿದ್ದೇವೆ. ಆದರೆ ಬಹಳ ಕಡಿಮೆ ಸಂದರ್ಭದಲ್ಲಿ ಶಿಕ್ಷಣದ ಗುಣಮಟ್ಟದ ಬಗ್ಗೆ ಚರ್ಚೆ ಮಾಡಿದ್ದೇವೆ. ಅದಕ್ಕೆ ಅನೇಕ ಕಾರಣಗಳು ಇರಬಹುದು. ಮಾನ್ಯ ಸಭಾಪತಿಯವರೇ, ತಾವೂ ಸಹ ಉನ್ನತ ಶಿಕ್ಷಣ ಸಚಿವರಾಗಿ ಕೆಲಸ ಮಾಡಿರುವಂಥವರು. ಇಲ್ಲಿ ಮುಖ್ಯವಾಗಿ ಸರ್ಕಾರ ಉಪಾಧ್ಯಾಯರಿಗೆ ಒಳ್ಳೆಯ ಸಂಬಳವನ್ನು ಕೊಡುತ್ತಿದೆ. ಇಲ್ಲಿ ಎರಡು ವಿಷಯಗಳನ್ನು ನಾವು ಗುರುತುಮಾಡಬೇಕಾಗಿದೆ. ಮೊದಲನೆಯದಾಗಿ 10+2 ಏನಿದೆ, ಇದು ವಿದ್ಯಾರ್ಥಿಗಳ ದೃಷ್ಟಿಯಿಂದ ಬಹಳ ಮಹತ್ತರವಾದಂತಹ ತಿರುವು. ಅವರ ಭವಿಷ್ಯ ಯಾವ ಟ್ರ್ಯಾಕ್‌ನಲ್ಲಿ ಹೋಗಬೇಕು, ಅಂದರೆ ಕಾಮರ್ಸ್‌ನಲ್ಲಿ ಹೋಗಬೇಕೆ, ಸೈನ್ಸ್‌ನಲ್ಲಿ ಹೋಗಬೇಕೆ ಅಥವಾ ಆರ್ಟ್ಸ್ ತೆಗೆದುಕೊಳ್ಳಬೇಕೆ ಎಂಬ ಆತಂಕವಿರುತ್ತದೆ. ತಂದೆ ತಾಯಿಗೂ ಸಹ ತಮ್ಮ ಮಕ್ಕಳು ಎಷ್ಟು ಅಂಕಗಳನ್ನು ಗಳಿಸುತ್ತಾರೋ ಎಂಬ ಆತಂಕವಿರುತ್ತದೆ. ಅವರು ತೆಗೆದುಕೊಳ್ಳುವಂತಹ ಅಂಕಗಳ ಆಧಾರದ ಮೇಲೆ ಯಾವ ಟ್ರ್ಯಾಕಿನಲ್ಲಿ ಹೋಗಬೇಕು ಎಂಬ ಭವಿಷ್ಯ ನಿರ್ಧಾರವಾಗುತ್ತದೆ. ಬಹಳಷ್ಟು ಊರುಗಳಲ್ಲಿ ಇದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರಿ ಕಾಲೇಜುಗಳ ಉಪಾಧ್ಯಾಯರುಗಳು ಕಾಲೇಜುಗಳಲ್ಲಿ ಹೆಚ್ಚು ಪಾಠ ಮಾಡುವುದಕ್ಕಿಂತ ಹೆಚ್ಚಾಗಿ ಟ್ಯೂಷನ್ ಮಾಡುವುದರ ಬಗ್ಗೆಯೇ ಗಮನ ಹರಿಸುತ್ತಿದ್ದಾರೆ. ಇದರ

ಬಗ್ಗೆಯೂ ಸಹ ಸರ್ಕಾರ ಆಲೋಚನೆ ಮಾಡಬೇಕಲ್ಲವೆ? ಇದನ್ನು ನಿಯಂತ್ರಣ ಮಾಡುವುದಕ್ಕೆ ಏನಾದರೂ ಗಮನ ಹರಿಸಬೇಕಲ್ಲವೆ? ಈ ರೀತಿ ಏಕೆ ಆಗುತ್ತಿದೆ ಎಂದರೆ ನಾಳೆ ದಿವಸ ಇವುಗಳು ಅಟ್ರ್ಯಾಕ್ಟೀವ್ ಸೆಂಟರ್‌ಗಳು ಆಗುತ್ತಿವೆ. ಅಂದರೆ ಕಾಲೇಜಿಗೆ ಹೋಗದೆ ಇದ್ದರೂ ಪರವಾಗಿಲ್ಲ, ಅಲ್ಲಿ ಟ್ಯೂಶನ್ಸ್ ಸೆಂಟರ್ಸ್‌ಗೆ ಹೋದರೆ ನಾನು ಹೆಚ್ಚು ಅಂಕಗಳನ್ನು ಗಳಿಸಬಹುದು, ಈ ರೀತಿಯಾದಂತಹ ಅವಕಾಶಗಳನ್ನು, ಪ್ರಶ್ನೆ ಪತ್ರಿಕೆಗಳನ್ನು ಪಡೆದುಕೊಳ್ಳು ವಂತಹ ಅವಕಾಶಗಳು ಸಿಗುತ್ತದೆ ಎನ್ನುವಂತಹ ಮೆಸೇಜ್ ವಿದ್ಯಾರ್ಥಿಗಳಲ್ಲಿ ಹಾಗೂ ತಂದೆ–ತಾಯಿಗಳಲ್ಲಿ ಹೋಗುತ್ತಿದೆ. ಇದಕ್ಕೆ ಸರ್ಕಾರ ಕಠಿಣ ವಾದಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇವತ್ತಿನ ದಿವಸ ಅನೇಕ ಜನ ಉಪನ್ಯಾಸಕರೇನಿದ್ದಾರೆ ಅವರ ಕುಟುಂಬ ವರ್ಗದ ಸದಸ್ಯರುಗಳೇ ಕಾಲೇಜುಗಳನ್ನು ಪ್ರಾರಂಭ ಮಾಡಿದ್ದಾರೆ. ಅಂದರೆ ಈ ರೀತಿ ಮಾಡುವುದರಿಂದ ಆಸಕ್ತಿ ಕಡಿಮೆ ಆಗುತ್ತದೆಯೋ ಇಲ್ಲವೋ ತಿಳಿಸಿ. ಅಂದರೆ ವಿದ್ಯಾರ್ಥಿಗಳು ಸರ್ಕಾರಿ ಕಾಲೇಜಿಗೆ ಹೊಗುವ ಬದಲು ಅವರ ಕಾಲೇಜಿಗೆ ಹೋಗಿ ಸೇರಿಕೊಳ್ಳುವುದಕ್ಕೆ ಒಂದು ರೀತಿಯಲ್ಲಿ ಇನ್ಸ್‌ಪೈರ್ ಆಗುತ್ತಾರೆ. ತಾವು ಶಿಕ್ಷಣ ಸಚಿವರಾಗಿ ಮೂರ್‍ನಾಲ್ಕು ವರ್ಷಗಳಾಗುತ್ತಾ ಬಂದಿರುವುದರಿಂದ ಇದರ ಬಗ್ಗೆಯೂ ಸಹ ತಾವು ಗಮನಹರಿಸಬೇಕು. ಕೇವಲ ಇದು ಇಲಾಖೆಯ ತಪ್ಪು ಎಂದು ಹೇಳುವುದು ಸರಿಯಲ್ಲ. ಅಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ ಆಗಿದ್ದವರು ಒಬ್ಬರು ಇದ್ದಾರೆ. ಈ ಹಿಂದೆ ಇದ್ದಂತವರು ಸಹ ಇದೇ ರೀತಿಯಾಗಿ ಕೆಲಸ ಮಾಡಿಕೊಂಡು ಬಂದಂಥವರು ಇದ್ದಾರೆ. ಶ್ರೀ ಹರೀಶ್‌ಗೌಡ ಕಾಲದಿಂದಲೂ ಸಹ ಒಂದು ಒಳ್ಳೆಯ ಪದ್ಧತಿ ಪ್ರಾರಂಭವಾಗಿದೆ. ಮಾನ್ಯ ವೀರಪ್ಪಮೊಯಿಲಿಯವರು ಸಾಕಷ್ಟು ಒಳ್ಳೆಯ ಪ್ರಯತ್ನಗಳನ್ನು ಅಂದರೆ, ಸಿ.ಇ.ಟಿ. 10+2 ಇದೆಲ್ಲದಕ್ಕೂ ವಿಶೇಷವಾದಂತಹ ಪ್ರಯತ್ನಗಳನ್ನು ಆ ಸಂದರ್ಭದಿಂದಲೂ ಮಾಡಿಕೊಂಡು ಬಂದಿದ್ದಾರೆ. ಆದುದರಿಂದ ಕೇವಲ ಇಲಾಖೆಯವರ ಮೇಲೆ ದೂರುಗಳನ್ನು ಮಾಡುವಂಥದ್ದಲ್ಲ. ಈ ಹಂತದಲ್ಲಿ ಏನು ನಡೆಯುತ್ತಿದೆ ಇದರ ಬಗ್ಗೆ ಗಮನ ಹರಿಸಿ ಇದಕ್ಕೆ ಏನು ಕಡಿವಾಣ ಹಾಕಬಹುದು ಎಂಬುದರ ಬಗ್ಗೆ ಕ್ರಮವನ್ನು

ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತಹ ಎಲ್ಲಾ ಸಂಗತಿಗಳಿಗೂ ಸಹ ನನ್ನ ಧ್ವನಿಯನ್ನು ಸೇರಿಸುತ್ತಾ, ಈ ವರ್ಷ ಮಾತ್ರ ಇಷ್ಟು ದೊಡ್ಡ ಹಂತದಲ್ಲಿ ಈ ರೀತಿಯ ಪ್ರಕರಣ ನಡೆದಿದೆ ಎಂದು ನಾವು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಬಹಳ ಹಿಂದಿನಿಂದಲೂ ಸಹ ಈ ರೀತಿಯಾದಂತಹ ವ್ಯವಸ್ಥಿತವಾದಂತಹ ಸಂಚು ನಡೆಯುತ್ತಿತ್ತು. ಆದರೆ ಅದು ಗೊತ್ತಾಗುತ್ತಿರಲಿಲ್ಲ. ಇಷ್ಟು ವರ್ಷದಲ್ಲಿ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಯಾವುದೋ ಕಾರಣದಿಂದ ಆಗಿ ಹೋಗಿದೆ. ಹಾಗಾಗಿ ತನಿಖೆ ಮಾಡಬೇಕಾದರೆ ಇದರ ಹಿಂದೆ ಇರುವಂತಹ ಒಂದು ತಂಡ ಏನಿದೆ, ಅವರ ಹಿನ್ನೆಲೆಯನ್ನೂ ಸಹ ಪತ್ತೆ ಹಚ್ಚಿ ಈ ರೀತಿಯಾಗಿ ಎಷ್ಟು ವರ್ಷದಿಂದ ಮಾಡಿಕೊಂಡು ಬರುತ್ತಿದ್ದಾರೆ ಎಂಬುದನ್ನು ಗಮನಿಸಬೇಕು. ಎರಡನೆಯದಾಗಿ, ಸರ್ಕಾರ 19 ಜನರ ಮೇಲೆ ಶಿಸ್ತಿನ ಕ್ರಮ ಕೈಗೊಂಡು ಅವರನ್ನು ಸಸ್ಪೆಂಡ್ ಮಾಡಿದೆ. ಇದರಿಂದಾಗಿ ಕೇವಲ ಉಪನ್ಯಾಸಕರು ಮಾತ್ರ ಇದರಲ್ಲಿ ಭಾಗಿಯಾಗಿದ್ದಾರೆ ಎಂಬ ಒಂದು ಸಂದೇಶ ರಾಜ್ಯದ ಜನತೆಗೆ ಹೋಗಿದೆ. ಈ ಬಗ್ಗೆ ಮಾನ್ಯ ಪುಟ್ಟಣ್ಣನವರು ಹಾಗೂ ಡಾ॥ ಶಿವಯೋಗಿಸ್ವಾಮಿಯವರು ಉಲ್ಲೇಖ ಮಾಡಿದರು. ಸುಮಾರು 9 ರಿಂದ 10 ಲೆವೆಲ್‌ನವರಿಗೂ ಸೀಕ್ರೆಸಿ ಇದೆ ಎಂದು ಹೇಳಿದರು, ಅದರ ಬಗ್ಗೆ ನನಗೆ ಸರಿಯಾಗಿ ಮಾಹಿತಿ ಇಲ್ಲ. ಇದನ್ನು ಬಹಳ ಕಟ್ಟುನಿಟ್ಟಾಗಿ ಫಾಲೋ ಮಾಡುತ್ತಾರೆಂದು ಹೇಳಿದರು. ಕೊನೆಯ ಲಿಂಕ್‌ನಲ್ಲಿ ಏನು ಡಿಸ್ಟ್ರಿಬ್ಯೂಶನ್ ಮಾಡಲಾಗಿದೆ ಅದನ್ನು ಮನಸ್ಸಿನಲ್ಲಿಟ್ಟುಕೊಂಡು, ಆ ರೀತಿ ಮಾಡಿದ್ದು ತಪ್ಪು, ಆ ವಿಷಯವನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗ ತನಿಖೆ ನಡೆಯುತ್ತಿದೆ. ಈಗ ಹೊರಗಡೆ ಒಂದು ಸಂದೇಶ ಹೋಗುತ್ತಿರುವಂಥದ್ದು ಏನೆಂದರೆ ಕೇವಲ ಒಂದಷ್ಟು ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಉಪನ್ಯಾಸಕರು ಈ ಕೆಲಸವನ್ನು ಮಾಡುತ್ತಿದ್ದಾರೆಂದು ಹೇಳುವುದು ಸರಿಯಾದ ವ್ಯವಸ್ಥೆ ಅಲ್ಲವೆಂದು ನಾನು ಭಾವಿಸುತ್ತೇನೆ. ಯಾವುದೇ ಒಂದು ಶಿಸ್ತಿನ ಕ್ರಮ ಕೈಗೊಳ್ಳಬೇಕಾದರೆ

ನಿರ್ದಿಷ್ಟವಾದ ಸಾಕ್ಷಿಗಳು, ದಾಖಲೆಗಳ ಆಧಾರದ ಮೇಲೆ ಕ್ರಮ ಕೈಗೊಳ್ಳಬೇಕೇ ಹೊರತು ಈ ರೀತಿ ಮಾಡಿದಾಗ ಒಂದು ತಪ್ಪು ಮೆಸೇಜ್ ಹೋಗುತ್ತದೆ. ಇಲಾಖೆಯ ಇನ್‌ವಾಲ್ವ್‌ಮೆಂಟ್ ಇದರಲ್ಲಿ ಆಗುವುದಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ ಯಾರು ಪೇಪರ್ ಸೆಟ್ ಮಾಡುತ್ತಾರೆ. ಯಾವ ಪೇಪರ್ ಸೆಲೆಕ್ಟ್ ಆಗುತ್ತದೆ, ಎಲ್ಲಿ ಪ್ರಿಂಟ್ ಆಗುತ್ತದೆ ಎನ್ನುವುದು ಯಾರಿಗೂ ಗೊತ್ತಿರುವುದಿಲ್ಲ. ಕೊನೆಯ ಹಂತದಲ್ಲಿ ಆ ರೀತಿಯಾದಂತಹ ದಂಧೆ ನಡೆಸುವಂಥವರು ಪ್ರಶ್ನೆ ಪತ್ರಿಕೆಯನ್ನು ಮಾರಾಟಕ್ಕೆ ಬಿಡುಗಡೆ ಮಾಡಿದಾಗ ಅವರು ಅದರಲ್ಲಿ ಇನ್‌ವಾಲ್ವ ಆಗಿರಬಹುದು ಅದು ನಮಗೆ ಗೊತ್ತಿಲ್ಲ. ಆದರೆ ಅದನ್ನೇ ದೊಡ್ಡ ಸಾಕ್ಷಿಯನ್ನಾಗಿಟ್ಟುಕೊಂಡು ಶಿಕ್ಷೆ ಕೊಡುವುದಕ್ಕಿಂತ ಇದರ ಹಿಂದೆ ವ್ಯವಸ್ಥಿತವಾಗಿರುವಂತಹ ಜಾಲವನ್ನು ಬಯಲಿಗೆಳೆದು ಈ ರೀತಿ ಎಷ್ಟು ವರ್ಷಗಳಿಂದ ನಡೆದು ಬರುತ್ತಿದೆ ಎಂಬುದನ್ನು ಪತ್ತೆ ಹಚ್ಚುವಂತಹ ಅವಶ್ಯಕತೆ ಇದೆ. ಎರಡನೆಯದಾಗಿ, ಇವತ್ತು ಪುನಃ ಆ ಪತ್ರಿಕೆಯ ಪರೀಕ್ಷೆ ನಡೆಸುತ್ತಿದ್ದೀರಿ, ಆ ಪತ್ರಿಕೆಯೂ ಸಹ ಬಯಲಾಗುತ್ತಿದೆ ಎಂಬ ಸುದ್ದಿ ಇವತ್ತು ಬೆಳಿಗ್ಗೆ ಬಂದಿದೆ. ಕೆಲವೇ ದಿನಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆ ನಡೆಯಲಿದೆ, ಅದಾದ ನಂತರ ಸಿ.ಇ.ಟಿ. ನಡೆಯಲಿದೆ. ಸಿ.ಇ.ಟಿ.ಯಲ್ಲಿ ನಾನು ತಿಳಿದಂತೆ ಬ್ಲ್ಯಾಂಕ್ ಪತ್ರಿಕೆಯನ್ನು ಮೊದಲೇ ಗುರುತುಮಾಡಿಕೊಂಡು ಬ್ಲ್ಯಾಂಕ್ ಪತ್ರಿಕೆಯನ್ನು ಕೊಟ್ಟುಬಿಡುವುದು. ಅದಾದನಂತರ ಅವರು ಅದನ್ನು ಟಿಕ್ ಮಾಡುವುದು ವ್ಯವಸ್ಥಿತವಾಗಿ ನಡೆಯುತ್ತಿದೆ. ಈ ಸಂಗತಿಗಳು ಕೂಡ ಇಡೀ ರಾಜ್ಯದ ಪರೀಕ್ಷಾ ವ್ಯವಸ್ಥೆಯ ಬಗ್ಗೆ ಒಂದು ದೊಡ್ಡ ಗೊಂದಲ ಸೃಷ್ಟಿ ಮಾಡುವಂತಹ ಸನ್ನಿವೇಶ ಉಂಟಾಗಿದೆ. ಬಹುಶಃ ನಾವೆಲ್ಲರೂ ಒಟ್ಟಾಗಿ ಕುಳಿತುಕೊಂಡು ಇದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯಬೇಕು. ಇದರಲ್ಲಿ ಯಾರು ತಪ್ಪಿತಸ್ಥರಿದ್ದಾರೆ ಅವರಿಗೆ ಅತ್ಯುಗ್ರವಾದಂತಹ ಶಿಕ್ಷೆಯನ್ನು ಕೊಟ್ಟು, ಇನ್ನು ಮುಂದೆ ಈ ರೀತಿ ಆಗದಿರುವಂತೆ ನೋಡಿಕೊಳ್ಳುವ ಅವಶ್ಯಕತೆ ಇದೆ ಎಂದು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ವಿನಂತಿಸುತ್ತೇನೆ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :** ಮಾನ್ಯ ಸಭಾಪತಿಯವರೇ, ಪ್ರಶ್ನೆ ಪತ್ರಿಕೆ ಬಯಲುಗೊಂಡಿದೆ ಎನ್ನುವುದರ ಬಗ್ಗೆ ಸರ್ಕಾರ ಈ ರೀತಿ ಪ್ರಶ್ನೆ ಪತ್ರಿಕೆ ಬಹಳ ಸಲ ಬಹಿರಂಗಗೊಂಡಿದೆ ಎಂದು ಹೇಳಿದಾಗ ಡಿಫೆಂಡ್ ಮಾಡಿಕೊಳ್ಳುವಂತಹ ಕೆಲಸ ಆಗುತ್ತಿತ್ತು. ಅಂದರೆ ಆ ಪ್ರಶ್ನೆ ಪತ್ರಿಕೆ ಅಲ್ಲ, ಹಾಗೆ, ಹೀಗೆ ಎಂದು ಹೇಳುವುದನ್ನು ಬಹಳ ಸಲ ನೋಡಿದ್ದೇವೆ. ಆದರೆ ಪ್ರಥಮ ಬಾರಿಗೆ ಪ್ರಶ್ನೆ ಪತ್ರಿಕೆ ಬಹಿರಂಗಗೊಂಡಿರುವುದನ್ನು ಒಪ್ಪಿಕೊಂಡು ಸಿ.ಓ.ಡಿ.ಗೆ ತಕ್ಷಣ ರೆಫರ್ ಮಾಡಿರುವುದರ ಬಗ್ಗೆ ಸರ್ಕಾರಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸಲು ಬಯಸುತ್ತೇನೆ ಹಾಗೂ ಇದು ಒಂದು ಒಳ್ಳೆಯ ಕ್ರಮವೆಂದು ನಾನು ಭಾವಿಸುತ್ತೇನೆ. ಸನ್ಮಾನ್ಯ ಸಭಾಪತಿಯವರೇ, ಈಗ ತೆಗೆದುಕೊಂಡಿರುವಂತಹ ಕ್ರಮ ಏನೇ ಇರಬಹುದು, ಆದರೆ ಇದರ ಮೂಲ ಎಲ್ಲಿದೆ ಎಂದು ಹುಡುಕಬೇಕಾಗಿರುವುದು ಪ್ರಮುಖವಾದಂತಹ ವಿಷಯವಾಗಿದೆ. ಏಕೆಂದರೆ, ಇದರಲ್ಲಿ ಪಿ.ಯು. ಬೋರ್ಡ್ ಇನ್‌ವಾಲ್ವ್‌ಮೆಂಟ್ ಇಲ್ಲದೆಯೇ ಈ ರೀತಿ ಆಗುವುದಕ್ಕೆ ಸಾಧ್ಯವಿಲ್ಲ. ಪತ್ರಿಕೆಗಳಲ್ಲಿಯೇ ವರದಿಯಾಗಿರುವ ರೀತಿ ಆ ಕಮೀಶನರ್ ವರ್ಗಾವಣೆಗಾಗಿಯೇ ಆಗಿರಬಹುದು ಎನ್ನುವಂತಹ ಊಹಾಪೋಹದ ಚರ್ಚೆ ನಡೆಯುತ್ತಿದೆ. ಆ ನಿಟ್ಟಿನಲ್ಲಿ ತನಿಖೆ ಸಾಗಬೇಕಾಗಿರುವುದು ಅಗತ್ಯವಿದೆ ಎನ್ನುವುದು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಇವತ್ತು ಪ್ರಶ್ನೆ ಪತ್ರಿಕೆ ಎಲ್ಲಿ ಸಿಕ್ಕಿದೆ ಎಂಬ ಒಂದು ಭಾಗ ಮಾತ್ರ ನೋಡುತ್ತಿದ್ದೇವೆ. ಆದರೆ ಸಿಕ್ಕಿರುವಂತಹ ಪ್ರಶ್ನೆ ಪತ್ರಿಕೆ ಇಡೀ ರಾಜ್ಯಾದ್ಯಂತ ಹಂಚಿಕೆಯಾಗಿದೆ ಎನ್ನುವುದು ಅಷ್ಟೇ ಗಂಭೀರವಾದಂತಹ ವಿಷಯ. ಈ ನಿಟ್ಟಿನಲ್ಲಿ ಕಾಲಮಿತಿಯೊಳಗಡೆ ಮತ್ತು ಇಲಾಖೆಯ ಒಳಗಡೆ ಏನು ನಡೆಯುತ್ತಿದೆ ಎನ್ನವುವುದರ ಬಗ್ಗೆಯೂ ಸಹ ತನಿಖೆಗೆ ಒಳಪಡಿಸಬೇಕು ಎನ್ನುವಂತಹ ಅಗ್ರಹವನ್ನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಬಯಸುತ್ತೇನೆ.

**ಶ್ರೀ ಗೋ. ಮದುಸೂಧನ್ : (ಪದವೀಧರ ಕ್ಷೇತ್ರ) :** ಮಾನ್ಯ ಸಭಾಪತಿಯವರೇ, ಒಂದು ಮೆಡಿಕಲ್ ಸೀಟಿಗೆ 50 ಲಕ್ಷ ರೂಪಾಯಿ ಖರ್ಚು ಮಾಡಬೇಕು, ಒಂದು ಇಂಜಿನೀಯರಿಂಗ್ ಸೀಟಿಗೆ 10 ಲಕ್ಷ

ರೂಪಾಯಿಯವರೆಗೆ ಖರ್ಚು ಮಾಡಬೇಕು ಎನ್ನುವಂತಹ ಸ್ಥಿತಿ ಏನು ನಿರ್ಮಾಣವಾಗಿದೆ, ಈ ಕಾರಣಕ್ಕೋಸ್ಕರ ಇದು ಒಂದು ಪ್ರಾಫಿಟಬಲ್ ದಂದೆಯಾಗಿ ಪರಿವರ್ತನೆಯಾಗುವುದಕ್ಕೆ ಸಾಧ್ಯವಾಗಿದೆ. ಈ ದಂಧೆ ನಡೆಯುವುದೇ ರಾತ್ರಿ 12 ಗಂಟೆಯ ನಂತರ. 12 ಗಂಟೆಯ ನಂತರ ಪ್ರಶ್ನೆ ಪತ್ರಿಕೆಯನ್ನು ಹಾಟ್ ಕೇಕ್ ರೀತಿಯಲ್ಲಿ ಮಾರಾಟ ಮಾಡಿದರೆ ರಾತ್ರೋರಾತ್ರಿ, ಕೋಟ್ಯಾಂತರ ರೂಪಾಯಿ ಬಾಚಿಕೊಳ್ಳಬಹುದು ಎನ್ನುವಂತಹ ದುರಾಸೆಯ ಹೊಟ್ಟೆಬಾಕತನದ ಮಾನಸಿಕ ಪ್ರವೃತ್ತಿ ಏನಿದೆ, ಅದು ಈ ಒಂದು ಕೆಲಸ ಮಾಡಿಸುವುದಕ್ಕೆ ಪ್ರೇರೇಪಿಸುತ್ತದೆ. ಈ ಕೆಲಸವನ್ನು ಮಾಸ್ಟರ್ ಮಾಡಿರಬಹುದು, ಪೋಷಕರು ಮಾಡಿರಬಹುದು, ಟ್ಯೂಶನ್ ಸೆಂಟರ್‌ರವರು ಮಾಡಿರಬಹುದು ಅಥವಾ ಬೇರೆ ಬೇರೆ ಕಂಪ್ಯೂಟರ್ ಸೆಂಟರ್‌ರವರೂ ಸಹ ಮಾಡಿರಬಹುದು. ಇಲ್ಲಿಯವರೆವಿಗೆ ಪ್ರಶ್ನೆ ಪತ್ರಿಕೆ ಬಯಲಾಯಿತು ಎಂದರೆ ಲೋಕಲೈಸ್ ಮಾತ್ರ ಇರುತ್ತಿತ್ತು. ತುಮಕೂರಿನಲ್ಲಿ ಲೀಕ್ ಆದರೆ ತುಮಕೂರಿನಲ್ಲಿ ಒಂದು ಸ್ವಲ್ಪ ಜನರಿಗೆ ಸಿಗುತ್ತಿತ್ತು. ಮೈಸೂರಿನಲ್ಲಿ ಲೀಕ್ ಆಯಿತು ಎಂದರೆ, ಒಂದು ಪೇಪರ್ ಸಿಕ್ಕಿದರೆ ಇನ್ನೊಂದು ಪೇಪರ್ ಇನ್ನೊಂದು ಕಾಲೇಜಿನವರಿಗೆ ಸಿಗುತ್ತಿರಲಿಲ್ಲ. ಈ ರೀತಿಯದನ್ನೇಲ್ಲಾ ನಾವು ಕಂಡಿದ್ದೇವೆ, ಇಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಆದರೆ ಇವತ್ತಿನ ದಿವಸ ಕಮ್ಯುನಿಕೇಶನ್ ಸಿಸ್ಟಂ ಎಷ್ಟು ತುಂಬಾ ಚೆನ್ನಾಗಿ ಬೆಳೆದಿದೆ ಎಂದರೆ, ಒಂದೇ ಸಲ ಹತ್ತು ಹದಿನೈದು ನಿಮಿಷದಲ್ಲಿ ಎಲ್ಲಾ ಜಿಲ್ಲಾ ಕೇಂದ್ರಗಳಿಗೆ, ತಾಲ್ಲೂಕು ಕೇಂದ್ರಗಳಿಗೆ ಕಳಿಸುವಂತಹ ಮಟ್ಟಿಗೆ ಕಮ್ಯುನಿಕೇಶನ್ ಸಿಸ್ಟಂ ಚೆನ್ನಾಗಿ ಬೆಳೆದಿದೆ. ಎಲ್ಲಾ ಕಡೆಗಳಲ್ಲಿಯೂ ಸಹ ಏಜೆಂಟ್‌ಗಳು ಇದ್ದಾರೆ. ಎಲ್ಲಾ ಕಡೆಗಳಲ್ಲಿಯೂ ಮಾರಾಟ ಮಾಡುವಂಥದ್ದು, ಹಣ ಸಂಗ್ರಹ ಮಾಡುವಂತಹ ಸೆಂಟರ್‌ಗಳು ನಿರ್ಮಾಣವಾಗಿದೆ. ಭೂಕಂಪ ಹೇಗೆ ಎಲ್ಲಾ ಕಡೆಗಳಿಗೂ ಹೋಗಿ ತಲುಪುತ್ತದೆಯೋ, ಆ ರೀತಿ ಎಲ್ಲಾ ಕಂಪನಿಗಳಿಗೂ ತಲುಪುತ್ತಿವೆ. ಆದುದರಿಂದ epicenter ಎಲ್ಲಿದೆ ಎಂದು ಹುಡುಕಬೇಕಾಗಿರುವಂಥದ್ದು ತುಂಬಾ ದೊಡ್ಡದಾದಂತಹ ಕೆಲಸ. ಅದಕ್ಕೆ ಸಿ.ಒ.ಡಿ. ತನಿಖೆಯನ್ನು ಮಾಡುವುದಕ್ಕೆ ಮಾನ್ಯ ಸಚಿವರು ಹಾಗೂ ಸರ್ಕಾರ ಆದೇಶ ಮಾಡಿದೆ. ಇದನ್ನು ನಾನು ಸ್ವಾಗತಿಸುತ್ತಾ, ಒಂದು ವಿಷಯವನ್ನು ನಾವು ಯೋಚನೆ

ಮಾಡಬೇಕಾಗಿದೆ. ಏನೆಂದರೆ ಯಾರ ಪರವಾಗಿ ಯಾರೂ ಇದರ ವಕಾಲತ್ತನ್ನು ವಹಿಸುತ್ತಿಲ್ಲ, ಎಲ್ಲರೂ ಶಿಕ್ಷಣದ ಪರವಾಗಿಯೇ ಇದ್ದೇವೆ, ನಾವೆಲ್ಲರೂ ಸಹ ಪೋಷಕರ ಪರವಾಗಿ, ಹಾಗೂ ವಿದ್ಯಾರ್ಥಿಗಳ ಪರವಾಗಿದ್ದೇವೆ. ನನಗೆ ಒಂದು ಸಂಗತಿ ಅನ್ನಿಸುತ್ತಿರುವುದೇನೆಂದರೆ, ಈ ಹಿಂದೆ ಇದ್ದಂತಹ ವಿದ್ಯಾಭ್ಯಾಸದ ಪದ್ಧತಿಯಲ್ಲಿ ನಾವು ಮೊದಲು ಪಿ.ಯು.ಸಿ. ಅಂಕ ಪಟ್ಟಿಯನ್ನು ಇಂಜಿನೀಯರಿಂಗ್ ಹಾಗೂ ಮೆಡಿಕಲ್‌ಗೆ ಮಾತ್ರ ಯೋಚನೆ ಮಾಡುತ್ತಿದ್ದೆವು. ಯಾವಾಗ ಕಾಪಿ ಸಂಗತಿಗಳು ಜಾಸ್ತಿ ಆಗುತ್ತಾ ಬಂತು ಆಗ ಯೋಚನೆ ಪಿ.ಯು.ಸಿ. ಪರೀಕ್ಷೆ ನಮಗೆ ಫುಲಫ್ರೂಪ್ ಅಲ್ಲ, ಆದುದರಿಂದ ಒಂದು ಸಿ.ಇ.ಟಿ, ಮಾಡುತ್ತೇವೆಂದು ಮಾಡಿದರು. ಈಗ ನನಗೆ ಅನ್ನಿಸುತ್ತಿರುವುದೇನೆಂದರೆ, ಬಹುಶಃ ಸಿ.ಇ.ಟಿ. ಆಧಾರದ ಮೇಲೆಯೇ ಸೀಟು ಕೊಡುತ್ತೇವೆ, ಸಿ.ಇ.ಟಿ. ಒಂದನ್ನೇ ನಾವು ಬಹಳ ಸ್ಟ್ರೀಟ್ ಆಗಿ ಕನ್‌ಸಿಡರ್ ಮಾಡುತ್ತೇವೆ ಎನ್ನುವ ಹಾಗೆ ಇದ್ದರೆ ಪಿ. ಯು. ಸಿ. ಆನ್ಯುಯಲ್ ಮಾರ್ಕ್ಸ್‌ಕಾರ್ಡನ್ನು ನಾವು ಮೆಡಿಕಲ್ ಆಂಡ್ ಇಂಜಿನೀಯರಿಂಗ್ ಸೀಟಿಗೆ ಕನ್‌ಸಿಡರ್ ಮಾಡುವುದಿಲ್ಲ ಎಂದು ತೀರ್ಮಾನ ಮಾಡುವ ಹಾಗಿದ್ದರೆ ಬಹುಶಃ ಇಷ್ಟು ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರದ ಅಥವಾ ಒಂದು ದಂಧೆಯಾಗಿ ಪರಿವರ್ತನೆ ಆಗುವುದಿಲ್ಲವೆಂದು ನನಗನ್ನಿಸುತ್ತದೆ. ಈ ರೀತಿಯ ಅನೇಕ ಸಂಗತಿಗಳ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ಪರೀಕ್ಷೆ ಒಂದು ಸಾಮಾಜಿಕವಾದಂತಹ ಹಬ್ಬದ ರೀತಿಯಲ್ಲಿ ಇಡೀ ಊರಿಗೆ ಊರೇ ಪರೀಕ್ಷೆಯಲ್ಲಿ ಪಾಲ್ಗೊಳ್ಳುವಂಥದ್ದನ್ನು ಅನೇಕ ಕಡೆಗಳಲ್ಲಿ ನಾವು ನೋಡಿದ್ದೇವೆ. ಈ ವಿಚಾರದಲ್ಲಿ ನಮ್ಮ ಸ್ನೇಹಿತರೊಬ್ಬರು ಈಗ ತಮಾಷೆ ಯಾಗಿ ಮಾತನಾಡುತ್ತಿದ್ದರು. 'Board' Examination ಎಂದರೆ ಬೋರ್ಡ್ ಮೇಲೆ ಬರೆದು ವಿದ್ಯಾರ್ಥಿಗಳಿಗೆ ಉತ್ತರ ಬರೆಸುವಂಥದ್ದು, 'public' Examination ಎಂದರೆ public participation in examination ಎನ್ನುವಂತಹ ರೀತಿಯಲ್ಲಿ ಇವೊತ್ತು ನಮ್ಮ ರಾಜ್ಯದ ಅನೇಕ ಕಡೆಗಳಲ್ಲಿ ಪರೀಕ್ಷೆಗಳು ನಡೆಯುವಂಥದ್ದನ್ನು ನಾವು ನೋಡುತ್ತಿದ್ದೇವೆ. ಇದು ದುರ್ದೈವದ ಸಂಗತಿಯಾಗಿದ್ದು ಇದಕ್ಕೆಲ್ಲಾ ಕಾರಣವೆಂದರೆ ಮೆಡಿಕಲ್ ಸೀಟ್‌ಗೆ 50 ಲಕ್ಷ, ಇಂಜಿನೀಯರಿಂಗ್ ಸೀಟ್‌ಗೆ 10 ಲಕ್ಷ ಈ ರೀತಿಯಾಗಿರು ವುದರಿಂದ

ಅತ್ಯಂತ ಕಡಿಮೆ ಹಣದಲ್ಲಿ ನಾವು ಏನಾದರೂ ದಂಧೆ ಮಾಡಿ ಮಕ್ಕಳನ್ನು ಆ ಕೋರ್ಸ್‌ಗಳಿಗೆ ಸೇರಿಸಿಬಿಡಬಹುದು ಎನ್ನುವಂತಹ ಹೊಟ್ಟೆ ಬಾಕತನದ ಕಾರಣ ಇದೆ. ಇದರ ಬಗ್ಗೆ ಬಹಳ ಗಂಭೀರವಾದಂತಹ ಒಂದು ಚಿಂತನೆ ನಡೆಯಬೇಕೆಂಬುದು ನನ್ನ ವಿನಂತಿ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :** ಸನ್ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಪತ್ರಿಕೆ ಬಯಲಾಗಿರುವುದರಿಂದ ವಿದ್ಯಾರ್ಥಿಗಳಿಗೆ ಆಗಿರತಕ್ಕಂತಹ ಅನ್ಯಾಯವನ್ನು ಸರಿದೂಗಿಸಲಿಕ್ಕೆ ನಮಗೆ ಯಾರಿಂದಲೂ ಸಹ ಸಾಧ್ಯವಿಲ್ಲ ಎನ್ನುವಂತಹ ವಿಚಾರ ಬಹಳ ಸ್ಪಷ್ಟವಾಗಿದೆ. ಆದರೆ ಮುಂದೆ ಈ ರೀತಿ ಆಗದಂತೆ ಕ್ರಮ ವಹಿಸತಕ್ಕಂಥದ್ದು ಬಹಳ ಪ್ರಮುಖವಾದಂತಹ ವಿಚಾರವಾಗಿದೆ. ಈಗಾಗಲೇ ಮಾತನಾಡಿರುವಂತಹ ಬಹಳಷ್ಟು ಮಾನ್ಯ ಸದಸ್ಯರುಗಳು ಈ ವಿಚಾರದಲ್ಲಿ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಸರ್ಕಾರ ಈಗಾಗಲೇ ಈ ಪ್ರಕರಣದ ಬಗ್ಗೆ ಸಿ.ಐ.ಡಿ. ತನಿಖೆಗೆ ಆದೇಶಿಸುವ ಮೂಲಕ ಬಹಳ ತುರ್ತಾಗಿ ಕ್ರಮ ಕೈಗೊಂಡಿದೆ. ಈ ವಿಚಾರದಲ್ಲಿ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಪ್ರಶ್ನೆ ಪತ್ರಿಕೆಗಳು ಸರಣಿಯಾಗಿ ಏನು ಬಯಲಾಗುತ್ತಿವೆ ಇದು ಎಲ್ಲಿಯೂ ಒಂದು ಕಡೆ ಪರೀಕ್ಷಾ ಕೇಂದ್ರಕ್ಕೆ ಸರಣಿ ಬಾಂಬ್ ದಾಳಿ ನಡೆದಂತಾಗಿದೆ. ವಿದ್ಯಾರ್ಥಿಗಳು ಮತ್ತು ಪೋಷಕರು ಮುಂದೇನಾಗಬಹುದು ಎಂದು ಬಹಳ ಆತಂಕದ ಮಡುವಿನಲ್ಲಿದ್ದಾರೆ. ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರದ ಪ್ರಶ್ನೆಪತ್ರಿಕೆಗಳು ಬಯಲಾಗಿರುವುದಾಗಿ ಈಗಾಗಲೇ ಸನ್ಮಾನ್ಯ ಸಚಿವರು ತಿಳಿಸಿದ್ದಾರೆ. ಬಹಳಷ್ಟು ಪತ್ರಿಕೆಗಳಲ್ಲಿ ಈ ವಿಚಾರದ ಬಗ್ಗೆ ಅಲ್ಪಸ್ವಲ್ಪ ವರದಿಯಾಗಿರುವುದನ್ನು ನೋಡಿದೆವು. ರಸಾಯನಶಾಸ್ತ್ರ ಮತ್ತು ಇಂಗ್ಲಿಷ್ ವಿಷಯದ ಪ್ರಶ್ನೆಪತ್ರಿಕೆಗಳೂ ಕೂಡ ಬಯಲಾಗಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಆದರೆ ಇಂಥದ್ದೊಂದು ಘಟನೆ ಬಹಳ ಅಪರೂಪವಾಗಿ ನಡೆದಿದೆ. ಬಹಳಷ್ಟು ವರ್ಷಗಳಿಂದ ಇಂತಹ ಪರಿಸ್ಥಿತಿ ನಿರ್ಮಾಣ ವಾಗಿರಲಿಲ್ಲ. ಈಗ ಈ ರೀತಿ ಪ್ರಶ್ನೆಪತ್ರಿಕೆಗಳು ಬಯಲಾಗಿರುವುದರ ಹಿಂದೆ

ಏನಿರಬಹುದು ಎನ್ನುವಂಥದ್ದರ ಬಗ್ಗೆ ಕೂಡ ಈಗಾಗಲೇ ಮಾನ್ಯ ಸಚಿವರಿಗೆ ಎಲ್ಲಾ ಮಾಹಿತಿ ಇದೆ ಎಂದು ನಾನು ಭಾವಿಸಿದ್ದೇನೆ.

ಈ ಸಂದರ್ಭದಲ್ಲಿ ನಾನು ಒಂದು ಅಂಶವನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಈ ಹಿಂದೆ ಒಂದು ಸುದ್ದಿ ಬಹಳವಾಗಿ ಹರಡಿತ್ತು. ಕಳೆದ ಬಾರಿ ಸಿ.ಇ.ಟಿ. ಪರೀಕ್ಷೆ ನಡೆದು ಅದರ ಫಲಿತಾಂಶವನ್ನು ಕೊಡತಕ್ಕಂತಹ ಸಂದರ್ಭದಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ಈಗಿರತಕ್ಕಂತಹ ಆಯುಕ್ತರು ಬಹಳ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಂಡರು. ಪ್ರತಿ ವರ್ಷ ಸಿ.ಇ.ಟಿ. ಪರೀಕ್ಷೆ ಮತ್ತು ಫಲಿತಾಂಶದ ಸಂದರ್ಭದಲ್ಲಿ ಬಹಳ ಗೋಲ್ಮಾಲ್ ನಡೆಯುತ್ತಿತ್ತು. ಆದರೆ ಈಗಿರುವಂತಹ ಆಯುಕ್ತರು ಬಂದಮೇಲೆ ಆ ಬಗ್ಗೆ ಕಟ್ಟುನಿಟ್ಟಿನ ಕ್ರಮವಹಿಸಿ ಬಹಳ ಪ್ರಾಮಾಣಿಕವಾಗಿ ಸಿ.ಇ.ಟಿ. ಫಲಿತಾಂಶ ಹೊರಬರುತ್ತಿದೆ ಎನ್ನುವಂತಹ ವಿಚಾರ ಬಹಳವಾಗಿ ಸುದ್ದಿಯಲ್ಲಿದ್ದುದನ್ನು ಪತ್ರಿಕೆಗಳು ಹಾಗೂ ಇನ್ನಿತರ ಮಾಧ್ಯಮಗಳ ಮುಖಾಂತರ ಗಮನಿಸಿದ್ದೆವು. ಅನಂತರ ಆಯುಕ್ತರು ಮುಂದುವರೆದ ಮೇಲೆ ಈಗ ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಂತಹ ಬಹುತೇಕ ಅಧಿಕಾರಿಗಳ ಪೈಕಿ ಕೆಲವರು ತಾವಾಗಿಯೇ ಬೇರೆ ಬೇರೆ ಕಡೆಗಳಿಗೆ ವರ್ಗಾವಣೆ ಪಡೆದುಕೊಂಡು ಹೊರಟುಹೋಗಿದ್ದಾರೆ. ಅದಕ್ಕೆ ಕಾರಣವೇನೆಂಬುದು ಗೊತ್ತಿಲ್ಲ. ಸುಮಾರು ಹತ್ತಿಪ್ಪತ್ತು ವರ್ಷಗಳಿಂದ ಅಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದಂತಹ ಅವರನ್ನು ಬೇರೆ ಕಡೆಗೆ ವರ್ಗಾವಣೆ ಮಾಡಬೇಕೆಂದು ನಾವು ನಿರ್ಣಯ ಮಾಡಿ ಇವರನ್ನೆಲ್ಲಾ ಹೊರಗಡೆ ಹಾಕಿ ಎಂದು ಒಮ್ಮೆ ಸರ್ಕಾರದಲ್ಲಿ ನಿರ್ಣಯ ಮಾಡಿದ್ದರೂ ಕೂಡ ಅವರು ಪದವಿಪೂರ್ವ ಶಿಕ್ಷಣ ಮಂಡಳಿಯನ್ನು ಬಿಟ್ಟು ಹೋಗಿರಲಿಲ್ಲ. ಅವರು ಅಲ್ಲಿಯೇ ಝುಂಡಾ ಹೂಡಿದ್ದರು. ಈ ಸಂಗತಿ ಸನ್ಮಾನ್ಯ ಹೊರಟ್ಟಿಯವರಿಗೂ ಸಹ ಗೊತ್ತು. ಅಂತಹ ಕೆಲವರು ಈಗ ತಾವಾಗಿಯೇ ಪದವಿಪೂರ್ವ ಶಿಕ್ಷಣ ಮಂಡಳಿಯನ್ನು ಬಿಟ್ಟು ಹೋಗಿದ್ದಾರೆ. ಇದು ಒಂದು ವಿಚಾರವಾದರೆ ಇನ್ನು ಕೆಲವರು ಪದವಿಪೂರ್ವ ಶಿಕ್ಷಣ ಮಂಡಳಿಯ ಪರೀಕ್ಷಾ ಕಾರ್ಯದಲ್ಲಿಯೇ ಬಹಳ ವರ್ಷಗಳಿಂದ ತಮ್ಮನ್ನು

ತೊಡಗಿಸಿಕೊಂಡಿದ್ದಾರೆ. ಪರೀಕ್ಷಾ ಕಾರ್ಯವನ್ನು ಬಿಟ್ಟು ಅವರು ಬೇರೆ ಕಾರ್ಯಗಳಿಗೆ ಹೋಗುವುದೇ ಇಲ್ಲ. ಅಂತಹ ಕೆಲವರು ಸಹ ಅಲ್ಲಿಯೇ ಝಂಡಾ ಹೂಡಿಕೊಂಡಿದ್ದಾರೆ.

ಇವೊತ್ತು ಏನಾಗಿದೆ ಎಂದರೆ, ಯಾವುದೋ ಮಾಹಿತಿ ಬಂದಿದೆ ಎನ್ನುವಂತಹ ಕಾರಣಕ್ಕಾಗಿ ಅನುಮಾನಾಸ್ಪದವಾಗಿ ಕೆಲವು ಕಡೆ ಉಪನ್ಯಾಸಕರನ್ನು ಸಸ್ಪೆಂಡ್ ಮಾಡಿದ್ದಾರೆ. ಆ ರೀತಿ ಅವರನ್ನು ಸಸ್ಪೆಂಡ್ ಮಾಡಿರುವುದು ತಪ್ಪು ಎಂದು ನಾನು ಖಂಡಿತವಾಗಿಯೂ ಭಾವಿಸುವುದಿಲ್ಲ. ಏಕೆಂದರೆ ಇಂತಹ ಒಂದು ಪ್ರಕರಣದ ಬಗ್ಗೆ ತನಿಖೆ ನಡೆಯುವಾಗ ಕೆಲವರನ್ನು ವಿಚಾರಣೆಗೆ ಒಳಪಡಿಸಬೇಕಾದಂತಹ ಪರಿಸ್ಥಿತಿ ಬರುತ್ತದೆ. ಆದರೆ ಪರೀಕ್ಷಾ ಕೇಂದ್ರದಲ್ಲಿ ಎಲ್ಲಿಯೋ ಅವರು ಟ್ಯೂಷನ್ ಮಾಡುತ್ತಿರುವಾಗ ಅವರು ತಮ್ಮ ವಿದ್ಯಾರ್ಥಿಗಳಿಗೆ ಸಂಭವನೀಯ ಪ್ರಶ್ನೆಗಳನ್ನು ಕೊಡತಕ್ಕಂಥದ್ದು ಸ್ವಾಭಾವಿಕ, ಎಲ್ಲಿಯಾದರೂ ಸುಳಿವು ಸಿಕ್ಕಿದರೆ ಟ್ಯೂಷನ್ ಮಾಡುವಂತಹ ಶಿಕ್ಷಕರು ಅವರ ವಿದ್ಯಾರ್ಥಿಗಳಿಗೆ ಅದನ್ನು ಹೇಳತಕ್ಕಂಥದ್ದು ಸ್ವಾಭಾವಿಕ. ಆದರೆ ಒಂದು ಉದಾಹರಣೆ ನೀಡುವುದಾದರೆ ಕೋಲಾರದ ಸಹ್ಯಾದ್ರಿ ಕಾಲೇಜಿಗೆ ಪರೀಕ್ಷಾ ಕೇಂದ್ರವೇ ಇಲ್ಲ, ಅಂತಹ ಕಾಲೇಜಿಗೆ ಅನುಮತಿಯನ್ನು ರದ್ದುಪಡಿಸಬೇಕು ಎಂದು ತಿಳಿಸಲಾಗಿದೆ.

ಈಗಾಗಲೇ ಸನ್ಮಾನ್ಯ ಪುಟ್ಟಣ್ಣನವರು ಒಂದು ಉದಾಹರಣೆಯನ್ನು ಕೊಡುತ್ತಾ ಕಲಾ ವಿಭಾಗದ ಶಿಕ್ಷಕರು ಮತ್ತಿತರ ಉಪನ್ಯಾಸಕರನ್ನೆಲ್ಲಾ ಅಮಾನತುಗೊಳಿಸಿರುವಂತಹ ವಿಚಾರವನ್ನು ತಿಳಿಸಿದರು. ಆದರೆ ನಾನು ಈ ವಿಚಾರದಲ್ಲಿ ಹೇಳಬಯಸುವುದೇನೆಂದರೆ ಅವರು ಯಾರೇ ಇರಲಿ, ಯಾವುದೇ ವಿಭಾಗದ ಉಪನ್ಯಾಸಕರಿರಲಿ, ಇದರ ಬಗ್ಗೆ ನಿರ್ದಿಷ್ಟ ಸಮಯದಲ್ಲಿ ನಿಷ್ಪಕ್ಷಪಾತವಾದಂತಹ ತನಿಖೆ ನಡೆಸಿ ನಿಜಕ್ಕೂ ಈ ಪ್ರಕರಣದಲ್ಲಿ ಯಾರು ಭಾಗಿಗಳಾಗಿದ್ದಾರೆ ಅವರಿಗೆ ಬಹಳ ಕಠಿಣವಾದ ಶಿಕ್ಷೆಯನ್ನು ವಿಧಿಸುವಂತಾಗಬೇಕು. ಈ ವಿಚಾರದಲ್ಲಿ ನಾವು ಯಾರ ಪರವಾಗಿಯೂ ವಾದ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಈಗಾಗಲೇ ನಿಜಕ್ಕೂ ಬಹಳವಾಗಿ ಹರಡಿರುವಂತಹ ಒಂದು ವದಂತಿಯೆಂದರೆ, ಸಚಿವರು

ಆಯುಕ್ತರಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟುಬಿಟ್ಟಿದ್ದಾರೆ, ಆಯುಕ್ತರು ಬಹಳ ಅಧಿಕಾರವನ್ನು ಚಲಾಯಿಸುತ್ತಿದ್ದಾರೆ, ಇಲಾಖೆಯಲ್ಲಿ ಬಹಳ strict ಮಾಡುತ್ತಿದ್ದಾರೆ. ಈ ಆಯುಕ್ತರನ್ನು ಹೇಗಾದರೂ ಮಾಡಿ ಮುಂದಿನ ಸಿ.ಇ.ಟಿ. ಬರುವ ವೇಳೆಗೆ ಎತ್ತಂಗಡಿ ಮಾಡಿಸಬೇಕು ಎಂಬುದಾಗಿ ಒಂದು ದೊಡ್ಡ ಜಾಲ ಬಹಳ ಪ್ರಯತ್ನ ನಡೆಸುತ್ತಿದೆ, ಈ ಹುನ್ನಾರದಿಂದಲೇ ಇಷ್ಟೆಲ್ಲಾ ನಡೆಯುತ್ತಿರುವುದು ಎನ್ನುವಂತಹ ವಿಚಾರವನ್ನು ನಾವೆಲ್ಲರೂ ಸಹ ಕೇಳಿದ್ದೇವೆ. ಆ ಹಿನ್ನೆಲೆಯಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆಯ ಪರೀಕ್ಷಾ ಕೇಂದ್ರದಲ್ಲಿ ಬಹಳ ದೀರ್ಘ ಕಾಲದಿಂದ ಯಾರು ಕೆಲಸ ಮಾಡುತ್ತಿದ್ದಾರೆಯೋ ಅವರನ್ನು ಕೂಡ ಮೊಟ್ಟಮೊದಲನೆಯದಾಗಿ ತನಿಖೆಗೆ ಒಳಪಡಿಸಬೇಕೆಂಬುದಾಗಿ ನಾನು ವಿನಂತಿಸುತ್ತೇನೆ. ಅದೇ ರೀತಿ ನಿರಪರಾಧಿಗಳಿಗೆ ಯಾವುದೇ ಕಾರಣಕ್ಕೂ ಶಿಕ್ಷೆಯಾಗದ ರೀತಿಯಲ್ಲಿ ನಿಷ್ಪಕ್ಷಪಾತವಾದಂತಹ ತನಿಖೆ ನಡೆಸಬೇಕು. ಮುಂಬರಲಿರುವಂತಹ ಎಸ್.ಎಸ್.ಎಲ್.ಸಿ. ಪರೀಕ್ಷೆ ಉತ್ತಮ ಸ್ಥಿತಿಯಲ್ಲಿ ನಡೆಯುವಂತೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು) :** ಸನ್ಮಾನ್ಯ ಸಭಾಪತಿಯವರೇ, ಇದುವರೆಗೆ ಈ ವಿಷಯದಲ್ಲಿ ನಡೆದಂತಹ ಚರ್ಚೆ ಮತ್ತು ಸನ್ಮಾನ್ಯ ಶಿಕ್ಷಣ ಸಚಿವರು ನೀಡಿರುವಂತಹ ಉತ್ತರದಿಂದ ನನಗೆ ಒಂದು ವಿಚಾರ ಸ್ಪಷ್ಟವಾಗಿದೆ. ಮಾನ್ಯ ಶಿಕ್ಷಣ ಸಚಿವರು ಉತ್ತರ ಕೊಡಬೇಕಾಗಿತ್ತು. ಕೊಟ್ಟಿದ್ದಾರೆ. ಯಾರೋ ಒಬ್ಬರು ಟ್ಯೂಷನ್ ಮಾಡುವಂತಹ ಅಧ್ಯಾಪಕರು ಆ ವಿದ್ಯಾರ್ಥಿಗಳಿಗೆ ಇಂತಹ ಪ್ರಶ್ನೆಗಳು ಬರುತ್ತದೆ, ನೋಟ್ ಮಾಡಿಕೊಂಡು ನಾಳೆ ಇದರ ಬಗ್ಗೆ ಸರಿಯಾಗಿ ಪೂರ್ವಸಿದ್ಧತೆ ಮಾಡಿಕೊಳ್ಳಿ ಎಂಬುದಾಗಿ ಒಂದು hint ಕೊಟ್ಟರು ಎನ್ನುವಂತಹ ಮಾತನ್ನು ಮಾನ್ಯ ಸಚಿವರು ತಿಳಿಸಿದ್ದಾರೆ. ಇದನ್ನು ನೋಡಿದಾಗ ನಮಗೆಲ್ಲಾ ಏನು ಅರ್ಥವಾಗುತ್ತದೆ ಎಂದರೆ, ಈಗಿರುವಂತಹ ಒಂದು ನೀತಿಯ ಪ್ರಕಾರ ಟ್ಯೂಷನ್ ಇನ್‌ಸ್ಟಿಟ್ಯೂಷನ್‌ಗಳೇನಿದೆ ಅವುಗಳ

ನಡುವೆಯೂ ಪೈಪೋಟಿ ಇದೆ. ನನ್ನ ಇನ್‌ಸ್ಟಿಟ್ಯೂಷನ್‌ಗಳಿಗೆ ಮಕ್ಕಳು ಬರಬೇಕೆಂದರೆ ಆ ಇನ್‌ಸ್ಟಿಟ್ಯೂಷನ್‌ಗೆ ಬರುವಂತಹ ವಿದ್ಯಾರ್ಥಿಗಳಿಗೆ ಹೆಚ್ಚು ಪರ್ಸೆಂಟೇಜ್ ಬಂದರೆ ಒಂದು ಕ್ರೆಡಿಟ್. ಹೆಚ್ಚು ಮಕ್ಕಳು ನಮ್ಮ ಇನ್‌ಸ್ಟಿಟ್ಯೂಷನ್‌ಗೆ ಬರುತ್ತಾರೆ ಎನ್ನುವಂತಹ ಕಾರಣಕ್ಕಾಗಿ ಈ ರೀತಿ ನಡೆಯುತ್ತಿದೆ. ಪ್ರೈವೇಟ್ ಕಾಲೇಜ್‌ಗಳಿಗೂ ಅದೇ ರೀತಿಯ ಒಂದು ಸೋಗಿದೆ. ಏಕೆಂದರೆ ಯಾವ ಕಾಲೇಜಿನ ಫಲಿತಾಂಶದಲ್ಲಿ ಪರ್ಸೆಂಟೇಜ್ ಜಾಸ್ತಿ ಬರುತ್ತದೆ ಆ ಕಾಲೇಜಿಗೆ ಹೆಚ್ಚಿನ ವಿದ್ಯಾರ್ಥಿಗಳು ಸೇರಬಯಸುತ್ತಾರೆ ಎನ್ನುವಂತಹ ವಿಚಾರ ಕೂಡ ಎಲ್ಲರಿಗೂ ಗೊತ್ತಿದೆ. ಈಗ ತನಿಖೆ ನಡೆಸುವಂತಹ ಸಂದರ್ಭದಲ್ಲಿ ಈ ಎರಡು ಸಂಗತಿಗಳ ಬಗ್ಗೆಯೂ ಸರ್ಕಾರ ಹದ್ದಿನ ಕಣ್ಣಿಟ್ಟು ವಾಚ್ ಮಾಡಿದರೆ ಮಾತ್ರ ಈ ಪ್ರಕರಣದ ಹಿಂದೆ ಇರುವಂತಹ ನಿಜವಾದ ಜಾಲವನ್ನು ಪತ್ತೆ ಹಚ್ಚುವುದಕ್ಕೆ ಸಾಧ್ಯ ಎನ್ನುವಂತಹ ವಿಚಾರವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತಿದ್ದೇನೆ.

ನನಗೆ ತಿಳಿದು ಬಂದಿರುವ ಮಾಹಿತಿ ಪ್ರಕಾರ ಬೆಂಗಳೂರಿನಲ್ಲಿ ನಿವೃತ್ತ ಪ್ರೊಫೆಸರ್ ಒಬ್ಬರು ನಡೆಸುತ್ತಿರುವಂತಹ ಟ್ಯೂಷನ್ ಸೆಂಟರ್ ಇದ್ದು, ಅವರು ಬಹಳ ಪವರ್‌ಫುಲ್, ಜೊತೆಗೆ ಅವರು ರಾಜಕೀಯವಾಗಿ ಬಹಳ ಪ್ರಭಾವಶಾಲಿಗಳೆಂದು ಹೇಳುತ್ತಾರೆ. ಅವರನ್ನು ಕೂಡ ವಿಚಾರ ಮಾಡಿ ಕೊಳ್ಳಬೇಕಾಗುತ್ತದೆ. ಎಂತಹವರೇ ಆಗಲಿ, ಪ್ರೈವೇಟ್ ಇನ್‌ಸ್ಟಿಟ್ಯೋಷನ್‌ಗಳು ಏಕೆ ಇಷ್ಟೊಂದು ಬೆಳೆಯುತ್ತಿವೆ ಎಂದರೆ ಇದರಲ್ಲಿ ನಮ್ಮ ಸರ್ಕಾರಿ ಕಾಲೇಜುಗಳ ಉಪನ್ಯಾಸಕರ ವೈಫಲ್ಯತೆ ಕೂಡ ಇರುತ್ತದೆ. ಏಕೆಂದರೆ ಅವರು ಕಾಲೇಜುಗಳಲ್ಲಿ ಸರಿಯಾಗಿ ಪಾಠ ಮಾಡುವುದಿಲ್ಲ. ಹೀಗಾಗಿ ಪೋಷಕರು ತಮ್ಮ ಮಕ್ಕಳನ್ನು ಟ್ಯೂಷ್‌ನ್‌ಗಳಿಗೆ ಕಳುಹಿಸುತ್ತಾರೆ. ಅಥವಾ ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ, ಈ ವಿಷಯಗಳು ಕಷ್ಟ ಇದ್ದರೆ ಉಪನ್ಯಾಸಕರೇ ಇಂತಹ ಕಡೆ ಟ್ಯೂಷನ್‌ಗೆ ಹೋಗಿ ಬಂದು ರೇಫರ್ ಮಾಡಿಬಿಡುತ್ತಾರೆ. ಹಾಗಾಗಿ ಇದೆಲ್ಲಾ ಒಂದು ಜಾಲವೆಂದೇ ಹೇಳಬಹುದು. ಇದುವರೆಗೆ ಈ ವಿಚಾರದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ ಎಲ್ಲ ಸದಸ್ಯರ ಮಾತುಗಳನ್ನೇನು ಕೇಳಿದ್ದೇವೆ ಈ ಜಾಲವನ್ನು ಪತ್ತೆ ಹಚ್ಚಬೇಕಾಗುತ್ತದೆ. ಇದು

ಕೂಡ ಈ ಇಲಾಖೆಗೆ ಒಂದು ರೀತಿಯಲ್ಲಿ ಕಳಂಕವೇ ಆಗಿದ್ದು ಈ ಪರಿಸ್ಥಿತಿ ಒಂದು ರೀತಿಯಲ್ಲಿ 'ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರುವುದಿಲ್ಲ' ಎನ್ನುವಂತಹ ಗಾದೆ ಮಾತಿನಂತಾಗಿದೆ. ಇಷ್ಟರವರೆಗೆ ಈ ರೀತಿ ನಡೆದಿರಲಿಲ್ಲ, ಈಗ ನಡೆದಿದೆ. ಇದಕ್ಕೆ ಸರಿಯಾದಂತಹ ಒಂದು ತನಿಖೆ ನಡೆಸಬೇಕಾಗುತ್ತದೆ. ಸಿ.ಐ.ಡಿ. ತನಿಖೆಗೆ ವಹಿಸಿರುವುದು ಒಂದು ಕಡೆಯಾದರೆ ಇಲಾಖೆಯ ವತಿಯಿಂದ ಕೂಡ ಇದರ ಬಗ್ಗೆ ತನಿಖೆಯಾಗಬೇಕಾಗುತ್ತದೆ. ವಿಚಾರ ಮಾಡಬೇಕಾಗುತ್ತದೆ. ನನಗೆ ಗೊತ್ತಿರುವ ಪ್ರಕಾರ ಪದವಿಪೂರ್ವ ಶಿಕ್ಷಣ ಇಲಾಖೆಯ ಆಯುಕ್ತರಾಗಿರುವ ಶ್ರೀಮತಿ ರಶ್ಮಿ ಇವರು ನಮ್ಮ ಇಲಾಖೆಯಲ್ಲಿ ಕೂಡ ಕೆಲಸ ಮಾಡಿದಂತಹ ಹೆಣ್ಣುಮಗಳು, ಒಳ್ಳೆಯ ಅಧಿಕಾರಿ. ಅದಕ್ಕೆ ಅವರ ಮೇಲೆ ಇದನ್ನೆಲ್ಲಾ ತರಬೇಕೆಂದು ಹೇಳಿ ಇಷ್ಟೆಲ್ಲಾ ಒಂದು ದೊಡ್ಡ ಜಾಲ ಹುಟ್ಟಿಕೊಂಡಿದೆ ಎಂದರೆ ಪಾಪ! ನಮ್ಮ ವಿದ್ಯಾರ್ಥಿಗಳನ್ನೇಕೆ ಇದಕ್ಕೆ ಬಲಿಕೊಡಬೇಕು, ಅವರ ಪೋಷಕರಂತೆ ಸಂಕಟ ಪಡಬೇಕು? ದಯಮಾಡಿ ಈಗ ತಾವೇನು ನಿಗಾ ಇಟ್ಟು ಇದರ ಬಗ್ಗೆ ತನಿಖೆ ಮಾಡಿಸುತ್ತೇವೆ ಎಂದು ಹೊರಟಿದ್ದೀರಿ ಆ ತನಿಖೆಯನ್ನು ಸರಿಯಾದ ರೀತಿಯಲ್ಲಿ ಮಾಡಿಸಿ ಸರಿಯಾದಂತಹವರಿಗೆ ಶಿಕ್ಷೆಯಾಗುವಂತಾಗಬೇಕೇ ಹೊರತು ಯಾರೋ ಬಡಪಾಯಿಗಳು ಕೋಲಾರದಲ್ಲಿನ ಅಥವಾ ಇನ್ನೆಲ್ಲಿಯೋ ಉಪನ್ಯಾಸಕರನ್ನು ಶಿಕ್ಷಿಸುವುದರಲ್ಲಿ ಅರ್ಥವಿಲ್ಲ. ಇದರಲ್ಲಿ ಸರ್ಕಾರಿ ಕಾಲೇಜುಗಳ ಉಪನ್ಯಾಸಕರುಗಳ ಕೈವಾಡವಿರುವುದಿಲ್ಲ. ಇದನ್ನು ತಾವು ದಯವಿಟ್ಟು ತಿಳಿದುಕೊಳ್ಳಿ. ಆ ರೀತಿಯ competitive mind ಯಾವುದೇ ಜೂನಿಯರ್ ಕಾಲೇಜಿನ ಉಪನ್ಯಾಸಕರಿಗಾಗಲಿ ಅಥವಾ ಪ್ರಾಂಶುಪಾಲರಿಗಾಗಲಿ ಇರುವುದಿಲ್ಲ.

**ಶ್ರೀ ಕಾಗೇರಿ ವಿಶ್ವೇಶ್ವರ ಹೆಗಡೆ :** ನಾನು ಎರಡು ನಿಮಿಷದಲ್ಲಿ ಉತ್ತರವನ್ನು ಹೇಳಿ ಮುಗಿಸುತ್ತಿದ್ದೆನು.

**ಸಭಾಪತಿಯವರು:** ಭೋಜನ ವಿರಾಮಕ್ಕೆ ಈಗ ಸದನವನ್ನು ಮುಂದೂಡೋಣ. ನಂತರ ಎಲ್ಲರೂ ಒಪ್ಪಿದರೆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ. ಈಗ 4-15ರ ವರೆಗೆ ಸದನವನ್ನು ಮುಂದೂಡುತ್ತೇನೆ.

(ಭೋಜನ ವಿರಾಮಕ್ಕೆಂದು 3ಗಂಟೆ 11 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಮತ್ತು ಸಂಜೆ 4.40ಗಂಟೆಗೆ ಸಮಾವೇಶಗೊಂಡಿತು. ಉಪಸಭಾಪತಿ ಗಳಾದ ಶ್ರೀಮತಿ ವಿಮಾಲಾಗೌಡರು ಪೀಠವನ್ನಲಂಕರಿಸಿದರು).

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು) :** ಮಾನ್ಯ ಸಭಾಪತಿಗಳೆ, ಭೋಜನ ವಿರಾಮದ ನಂತರ ಸೇರುವ ಸಮಯವನ್ನೇನು ಘೋಷಣೆ ಮಾಡಿದ್ದರೋ ಆ ಸಮಯ ಮೀರಿ ಹೋಗಿದೆ, ತಡವಾಗಿ ಸದನ ಪ್ರಾರಂಭವಾಗುತ್ತಿದೆ. ದಯವಿಟ್ಟು ಈ ರೀತಿ ಸಮಯ ವ್ಯರ್ಥವಾಗದ ಹಾಗೆ ನೋಡಿಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ವಿ. ಆರ್. ಸುದರ್ಶನ್ :** ಮಾನ್ಯ ಸಭಾಪತಿಗಳೆ, ಈ ಅಧಿವೇಶನ ಎಷ್ಟು ದಿವಸ ನಡೆಯುತ್ತದೆ, ಕಾರ್ಯಕ್ರಮಗಳೇನು, ಕಾರ್ಯಕಲಾಪಗಳೇನು ನಮಗೆ ಗೊತ್ತಾಗುತ್ತಿಲ್ಲ. ಬಿಎಸಿ ಸಭೆಯನ್ನೂ ಕರೆದಿಲ್ಲ. ಕಳೆದ ವಾರ ಅಧಿವೇಶನ ಪ್ರಾರಂಭವಾಯಿತು. ಬಿಎಸಿ ಸಭೆಯನ್ನು ಯಾವಾಗ ಕರೆಯುತ್ತಿದ್ದೀರಿ?

**ಉಪಸಭಾಪತಿಯವರು :** ನಾಳೆ ಕರೆಯುತ್ತಿದ್ದೇವೆ.

**ಶ್ರೀ. ವಿ. ಆರ್. ಸುದರ್ಶನ್ :** ಸದನ ಎಪ್ರಿಲ್ 15ರ ತನಕ ಮುಂದುವರೆಯುತ್ತದೆ ಎಂದು ನಾವು ತಿಳಿದುಕೊಳ್ಳಬಹುದೇ? ಏಕೆಂದರೆ ನಾವು ಪ್ರಶ್ನೆಗಳನ್ನಾದರೂ ಕಳುಹಿಸಬಹುದು.

**ಶ್ರೀ ವೀರಣ್ಣ ಮತ್ತೀಕಟ್ಟಿ :** ಎಪ್ರಿಲ್ 1ರ ತನಕ ಸದನ ನಡೆದರೆ ಸಾಕು!

**ಉಪಸಭಾಪತಿಯವರು :** ನೀವೂ ಕೂಡ ಬಿಎಸಿ ಯ ಗೌರವಾನ್ವಿತ ಸದಸ್ಯರಾಗಿದ್ದೀರಿ. ನಾಳೆ ಕರೆಯುವ ಸಭೆಯಲ್ಲಿ ತಾವು ಮಾತನಾಡಬಹುದು.

**ಶ್ರೀ ವಿ. ಆರ್. ಸುದರ್ಶನ :** ಸದನ ಎಷ್ಟು ದಿವಸ ನಡೆಯುತ್ತದೆ ಎಂದು ಗೊತ್ತಾದರೆ ನಾವು ಪ್ರಶ್ನೆಗಳನ್ನು ಕಳುಹಿಸಿ ಕೊಡಬಹುದು. ಅದಕ್ಕೆ ಕೇಳಿದೆ.

**ಉಪಸಭಾಪತಿಯವರು** : ನಾಳೆ ಬಿಎಸಿ ಕರೆಯಲಾಗುತ್ತದೆ. ಈಗ, ಭೋಜನ ವಿರಾಮಕ್ಕೆ ಮುಂಚೆ ಏನು ಮೊದಲನೆಯ ಶೂನ್ಯವೇಳೆ ವಿಚಾರ ಇತ್ತು ಆ ಕುರಿತು ಮಾನ್ಯ ಡಿ.ಎಸ್. ವೀರಯ್ಯನವರು ಮಾತನಾಡುತ್ತಾರೆ.

**ಶ್ರೀ ಡಿ. ಎಸ್. ವೀರಯ್ಯ (ವಿಧಾನಸಭಾ ಕ್ಷೇತ್ರ)** : ಮಾನ್ಯ ಸಭಾಪತಿಗಳೆ, ಒಂದು ಜವಾಬ್ದಾರಿಯುತ ಸರ್ಕಾರ ಈ ಗಂಭೀರವಾದ ವಿಚಾರಕ್ಕೆ ಸಂಬಂಧಿಸಿದಂತೆ ಏನು ಕ್ರಮ ತೆಗೆದುಕೊಳ್ಳಬೇಕಾಗಿತ್ತೋ ಅದನ್ನು ಸಿಓಡಿಗೆ ಒಪ್ಪಿಸುವ ಮೂಲಕ ಆ ಜವಾಬ್ದಾರಿಯನ್ನು ನಿಭಾಯಿಸಿದೆ. ಸರ್ಕಾರ ಯಾವರೀತಿ ಸ್ಪಂದಿಸಬೇಕೋ ಆ ರೀತಿ ಸ್ಪಂದಿಸಿದೆ.

ಮಾನ್ಯ ಸಭಾಪತಿಗಳೆ, ಒಂದು ಮನೆಯಲ್ಲಿ ಬಂಗಾರ ಅಥವಾ ಇನ್ನಿತರ ವಸ್ತುಗಳು ಕಳ್ಳತನವಾದರೆ ಅನುಮಾನ ಬರುವುದು ಕೆಲಸದವನ ಮೇಲೆ. ಮನೆಯ ಮಾಲೀಕ ಕದ್ದರೂ ಅವನ ಮೇಲೆ ಅನುಮಾನ ಬರುವುದಿಲ್ಲ. ಪ್ರಸ್ತುತ ಪ್ರಕರಣದಲ್ಲಿ ಈ ರೀತಿ ಆಗಬಾರದು. ಎಲ್ಲಿ ಪ್ರಶ್ನೆ ಪತ್ರಿಕೆ ಸ್ಕ್ಯಾನಿಂಗ್ ಆಗುತ್ತದೆಯೋ, ಎಲ್ಲಿ ಪ್ರಿಂಟ್ ಆಗುತ್ತದೆಯೋ ಆ ಹಂತದಲ್ಲಿ ಅಪರಾಧ ನಡೆದಿದೆ. ನಮ್ಮ ಕೋಲಾರದವರು ಇದರಲ್ಲಿ ಶಾಮೀಲಾಗಿರುವುದರಿಂದ ನಾನು ಈ ವಿಚಾರವಾಗಿ ಮಾತನಾಡುತ್ತಿದ್ದೇನೆ. ಈ ಪ್ರಕರಣ ನಿಷ್ಪಕ್ಷಪಾತವಾಗಿ ತನಿಖೆ ಆಗಬೇಕು, ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು. ಎಲ್ಲ ಮಾನ್ಯ ಸದಸ್ಯರು ಹೇಳಿರುವ ಅಂಶಗಳ ಹಿನ್ನೆಲೆಯಲ್ಲಿ ಇಂತಹ ತಪ್ಪು ಮುಂದೆ ನಡೆಯದ ಹಾಗೆ ಆಗಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕುತ್ತಾರೆ ಎನ್ನುವ ಹಾಗೆ ಆಗಬಾರದು. ನಿಜವಾದ ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು. ಇಂತಹ ಘಟನೆಗಳು ನಡೆಯದ ಹಾಗೆ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಬೇಕು. ಮುಂದೆ ನಡೆಯುವಂತಹ ಪರೀಕ್ಷೆಯನ್ನು ದೃಷ್ಟಿಯಲ್ಲಿಟ್ಟು ಕೊಂಡು, ಪ್ರಶ್ನೆ ಪತ್ರಿಕೆಗಳು ಬಹಿರಂಗ ಆಗುವಂತಹ ಪ್ರಕ್ರಿಯೆಗಳು ನಡೆಯದ ಹಾಗೆ, ವಿದ್ಯಾರ್ಥಿಗಳಿಗೆ ಅನ್ಯಾಯವಾಗದ ಹಾಗೆ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಪ್ರೊ: ಪಿ. ವಿ. ಕೃಷ್ಣಭಟ್ಟ (ನಾಮನಿರ್ದೇಶಿತರು) :** ಮಾನ್ಯ ಸಭಾಪತಿಗಳೆ, ಈ ವಿಚಾರವಾಗಿ ಅನೇಕ ಜನ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರ ಎಲ್ಲ ಭಾವನೆಗಳ ಜೊತೆಯಲ್ಲಿ ನಾನು ಧ್ವನಿಗೂಡಿಸುತ್ತಾ ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಶ್ನೆ ಪತ್ರಿಕೆ ಬಹಿರಂಗಗೊಂಡಿರುವಂಥದ್ದು ಅನೇಕ ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಅನೇಕ ಬಾರಿ ಪರೀಕ್ಷಾ ಸಂದರ್ಭದಲ್ಲಿ ಪ್ರಶ್ನೆ ಪತ್ರಿಕೆಗಳು ಬಹಿರಂಗಗೊಂಡಿರುವಂಥದ್ದನ್ನು, ಚಲಾವಣೆಯಲ್ಲಿರುವಂಥದ್ದನ್ನು ನಾವು ಕಂಡಿದ್ದೇವೆ. ಅನೇಕ ಸಲ ಅದು ಅಧಿಕೃತ ಪ್ರಶ್ನೆ ಪತ್ರಿಕೆ ಹೌದೋ ಅಲ್ಲವೋ ಎನ್ನುವ ಸಂಶಯ ವಿದ್ಯಾರ್ಥಿಗಳನ್ನು ಕಾಡುತ್ತಿತ್ತು. ಅನೇಕ versions ಪ್ರಚಾರವಾಗುತ್ತಿತ್ತು. ಆದರೆ ಹಿಂದೆ ನಡೆಯುತ್ತಿದ್ದ ಪ್ರಶ್ನೆ ಪತ್ರಿಕೆಗಳ ಬಹಿರಂಗಕ್ಕೂ, ಪ್ರಚಲಿತದಲ್ಲಿ ನಡೆಯುತ್ತಿರುವಂಥದ್ದಕ್ಕೂ ಗಹನವಾದ ವ್ಯತ್ಯಾಸ ಇದೆ. ಆ ವ್ಯತ್ಯಾಸವೇನೆಂದರೆ, ಹಿಂದೆಲ್ಲ ಊಹಾಪೋಹದ ಆಧಾರದ ಮೇಲೆ ನಡೆಯುತ್ತಿತ್ತು ಅಥವಾ ಯಾರೋ ಪರೀಕ್ಷಾ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿರತಕ್ಕಂಥ ಅಧ್ಯಾಪಕರೋ, ಮುಖ್ಯಸ್ಥರೋ ಅಥವಾ ಬೇರೆ ಅಧಿಕಾರಿಗಳೋ ಒಂದಿಷ್ಟು ದುರಾಸೆಯಿಂದ ಅದನ್ನು ಪ್ರಚಾರ ಮಾಡುತ್ತಿದ್ದರು. ಆದರೆ ಈಗಿನ ಸಂದರ್ಭದಲ್ಲಿ ಮುಖ್ಯವಾಗಿ ಮೂರು ಜನ ಪ್ಲೇಯರ್‌ಗಳನ್ನು ಕಾಣುತ್ತಿದ್ದೇವೆ. ಮೊದಲನೆಯದಾಗಿ, ಖಾಸಗಿ ಮನೆ ಪಾಠ ಮಾಡುತ್ತಿರುವಂತಹ ಅಧ್ಯಾಪಕರು. ಖಾಸಗಿ ಮನೆ ಪಾಠವನ್ನು ನಿಷೇಧಿಸಿ ಸರ್ಕಾರ ಆದೇಶವನ್ನು ಹೊರಡಿಸಿದೆ. ಆದರೆ ಅದು ಕಾರ್ಯರೂಪಕ್ಕೆ ಬಂದಿಲ್ಲ. ತಮ್ಮ ಹತ್ತಿರ ಹೆಚ್ಚಿನ ವಿದ್ಯಾರ್ಥಿಗಳು ಪಾಠಕ್ಕೆ ಬರಬೇಕು ಅಥವಾ ಆ ರೀತಿ ಮನೆ ಪಾಠಕ್ಕೆ ಹೋದರೆ ನಮಗೆ ಪರೀಕ್ಷಾ ದೃಷ್ಟಿಯಿಂದ ಅನುಕೂಲವಾಗುತ್ತದೆ ಎನ್ನುವ ನಿಟ್ಟಿನಲ್ಲಿ ವಿದ್ಯಾರ್ಥಿಗಳನ್ನು ಆಕರ್ಷಿಸುವ ಉದ್ದೇಶಗಳನ್ನು ಒಂದಿಷ್ಟು ಜನ ಅಧ್ಯಾಪಕರುಗಳು ಹೊಂದಿರುತ್ತಾರೆ. ಇಂಥವರನ್ನು ಅಧ್ಯಾಪಕರೆಂದು ಕರೆಯುವುದೂ ಕೂಡ ತಪ್ಪಾಗುತ್ತದೆ. ಆದರೂ ಈ ವೃತ್ತಿಯಲ್ಲಿರುವ ಕೆಲವು ಜನ ಈ ಪ್ರಕರಣದಲ್ಲಿ ಪಾಲುದಾರರಾಗಿದ್ದಾರೆ.

ಎರಡನೆಯದಾಗಿ, ಇತ್ತೀಚೀನ ದಿನಗಳಲ್ಲಿ non-grant institutions ಬಂದನಂತರ ಅನೇಕ ವಿದ್ಯಾ ಸಂಸ್ಥೆಗಳು ವಿದ್ಯಾರ್ಥಿಗಳನ್ನು ಆಕರ್ಷಣೆ ಮಾಡುವುದಕ್ಕೋಸ್ಕರವಾಗಿ, ಉದ್ದೇಶಪೂರ್ವಕವಾಗಿ, ವ್ಯವಸ್ಥಿತವಾಗಿ ಅವರಿಗೆ ಬೇಕಾದಂತಹ ಸಹಕಾರ ಕೊಡುವಂಥದ್ದು ಇನ್ನೊಂದು ರೀತಿಯಲ್ಲಿ ನಡೆಯುತ್ತಿದೆ. ಇದು ಉನ್ನತ ಶಿಕ್ಷಣ ಮಟ್ಟದಲ್ಲೂ ನಡೆಯುತ್ತದೆ. ಪರೀಕ್ಷೆಗಳನ್ನು ತೆಗೆದುಕೊಳ್ಳುವುದಕ್ಕೋಸ್ಕರವಾಗಿ ಕೆಲವು ಸಂಸ್ಥೆಗಳನ್ನು ಆಯ್ಕೆ ಮಾಡಿಕೊಂಡು ಪರೀಕ್ಷಾ ಕೇಂದ್ರಗಳನ್ನೇ ಬದಲಾಯಿಸುವ ವ್ಯವಸ್ಥೆ ಆಗುತ್ತಿದೆ. ಏಕೆಂದರೆ, ಅಂತಹ ಕಡೆ ಹೋದರೆ ಅಲ್ಲಿ ಪರೀಕ್ಷೆ ಬರೆಯುವುದಕ್ಕೆ ಎಲ್ಲಾ ರೀತಿಯ ನೆರವು ಸಿಗುತ್ತದೆ. ಹಿಂದೆ ಒಂದು ಸಲ ನಡೆದಂತಹ ಪ್ರಸಂಗ ಮಾನ್ಯ ಸದಸ್ಯರಿಗೂ ಗೊತ್ತಿರುತ್ತದೆ ಎಂದು ಭಾವಿಸುತ್ತೇನೆ. ಒಂದು ಶಾಲೆಯಲ್ಲಿ ಪರೀಕ್ಷೆ ಬರೆಯುವಂತಹ ವಿದ್ಯಾರ್ಥಿಗಳಿಗೆ ಸಹಾಯ ಮಾಡಬೇಕು ಎನ್ನುವ ಉದ್ದೇಶದಿಂದ ಒಂದು ಯೋಜನೆ ಮಾಡಿದ್ದರು. ಅಧ್ಯಾಪಕರು ಬೋರ್ಡಿನ ಮೇಲೆ ಎಲ್ಲಾ ಉತ್ತರಗಳನ್ನು ಬರೆಯುತ್ತಿದ್ದರು. ಆ ಉತ್ತರವನ್ನು ವಿದ್ಯಾರ್ಥಿಗಳು ಕಾಪಿ ಮಾಡುತ್ತಿದ್ದರು. ಒಂದು ಕೊಠಡಿಯಲ್ಲಿ ಎರಡು ಬೋರ್ಡ್‌ಗಳಿತ್ತು. ಅಲ್ಲಿನ ಅಧ್ಯಾಪಕರು ಒಂದು ಬೋರ್ಡಿನ ತುಂಬಾ ಉತ್ತರ ಬರೆದು, ಕೆಳಗೆ "ಉತ್ತರಕ್ಕಾಗಿ ಮುಂದಿನ ಬೋರ್ಡ್‌ನ್ನು ನೋಡಿ" ಎಂದು ಬರೆದಿದ್ದರು. ಉತ್ತರವನ್ನು ಬರೆಯುತ್ತಿದ್ದ ವಿದ್ಯಾರ್ಥಿ ತನ್ನ ಉತ್ತರದಲ್ಲಿ ಅದನ್ನು ಕೂಡ ಬರೆದಿದ್ದ. ಇದು, ಅಂತಹ ಕಡೆ ಕಾಪಿ ನಡೆದೇ ನಡೆಯುತ್ತದೆ ಎನ್ನುವುದನ್ನು ಸ್ವಾಭಾವಿಕವಾಗಿ ತೋರಿಸಿ ಕೊಡುತ್ತದೆ.

ಮೂರನೆಯದಾಗಿ, ಇದು ಇಲಾಖಾ ಅಧಿಕಾರಿಗಳ ನೆರವು, ಸಹಕಾರ ಇಲ್ಲದೆ ಇಂತಹ ಪ್ರಸಂಗಗಳು ನಡೆಯುವುದಕ್ಕೆ ಸಾಧ್ಯವಿಲ್ಲ. ಅವರದ್ದು ದೊಡ್ಡ ಪ್ರಮಾಣದಲ್ಲಿ involvement ಇದೆ. ಅನೇಕ ರೀತಿಯ ಕಥೆಗಳು ಇದರಲ್ಲಿ ಕೇಳಿ ಬರುತ್ತಿವೆ. ಇದು ಬಹುಶಃ ಸದಸ್ಯರ ಗಮನಕ್ಕೂ ಬಂದಿರಬಹುದು ಎಂದು ನಾನು ಭಾವಿಸುತ್ತೇನೆ. ಒಂದು ವಿವರಣೆ ನನಗೆ ಕೇಳಿ ಬಂದಿರುವುದೇನೆಂದರೆ, ಈಗ ಇರತಕ್ಕಂಥ ಪದವಿ ಪೂರ್ವ ಶಿಕ್ಷಣ ಇಲಾಖೆಯ ಆಯುಕ್ತರು ಸ್ವಲ್ಪ ಬಿಗಿಯಾಗಿರತಕ್ಕಂಥ ಆಡಳಿತವನ್ನು ನಡೆಸಿ

ಈ ರೀತಿ ನಡೆಯುತ್ತಿರತಕ್ಕಂಥ ಅವ್ಯವಹಾರಗಳನ್ನು ತಡೆಗಟ್ಟುವುದಕ್ಕೋಸ್ಕರವಾಗಿ ಕ್ರಮ ಕೈಗೊಳ್ಳುತ್ತಿರುವುದರಿಂದ ಅವರನ್ನು ಆ ಜಾಗದಿಂದ ಎತ್ತಂಗಡಿ ಮಾಡಿಸಬೇಕೆನ್ನುವ ಉದ್ದೇಶವನ್ನಿಟ್ಟುಕೊಂಡು ಒಂದು ಸಂಚು ನಡೆದಿದೆ ಎನ್ನುವಂತಹ ಮಾತನ್ನು ಕೂಡ ನಾನು ಕೇಳಿದ್ದೇನೆ. ಇದನ್ನು insiders ಕಡೆಯಿಂದಲೇ ಕೇಳಿದ್ದೇನೆ. ಆದ್ದರಿಂದ ಮುಖ್ಯವಾಗಿ ಕೇಳಬೇಕಾಗಿರುವುದೇನೆಂದರೆ, ಇದು ಎಲ್ಲೆಲ್ಲಿ ನಡೆಯುತ್ತಿದೆ ಎಂಬುದು ಗೊತ್ತಿಲ್ಲ. ಈಗ ಸದ್ಯಕ್ಕೆ ಬಂದಿರುವ ಮಾಹಿತಿಯ ಪ್ರಕಾರ 'ರೈಂಬೋ ಶಿಕ್ಷಣ ಸಂಸ್ಥೆ, ಬೆಂಗಳೂರು' ಎನ್ನುವ ಈ ಹೆಸರಿನಲ್ಲಿ ನೋಂದಣಿಯಾಗಿದ್ದಂತಹ ಸಂಸ್ಥೆ, ಅದು ಕೋಲಾರ ಜಿಲ್ಲೆಯಲ್ಲಿ ಒಂದು ಶಿಕ್ಷಣ ಸಂಸ್ಥೆಯನ್ನು ನಡೆಸುತ್ತಿದೆ. ಸನ್ಮಾನ್ಯ ವೆಂಕಟಶಿವ ರೆಡ್ಡಿ ಎನ್ನುವಂಥವರು ಅದರ ಕಾರ್ಯದರ್ಶಿಯಾಗಿದ್ದರು. ಈಗ ಅವರ ಕುಟುಂಬ ಪರಿವಾರದವರು ಇದನ್ನು ನಡೆಸುತ್ತಿದ್ದಾರೆ. ಬಹಳ ವಿಚಿತ್ರವಾಗಿರುವಂತಹ ಸನ್ನಿವೇಶ. ಒಬ್ಬ ವ್ಯಕ್ತಿ ಒಂದು ಕಾಲೇಜಿನಲ್ಲಿ ಸ್ವತಃ ಅಧ್ಯಾಪಕನಾಗಿದ್ದಾನೆ. ಅವನು ಬೇನಾಮಿ ಹೆಸರಿನಲ್ಲಿ ಬೇರೆಯವರ ಹೆಸರಿನಲ್ಲಿ ತನ್ನ ಹೆಂಡತಿ, ತನ್ನ ಕುಟುಂಬದವರ ಪರವಾಗಿ ಬೇರೆ ಒಂದು ಸಂಸ್ಥೆಯನ್ನು ಇದೇ ರೀತಿಯಲ್ಲಿ ನಡೆಸುತ್ತಾನೆ. ಅಷ್ಟೇ ಅಲ್ಲ ಈ ಸಂಸ್ಥೆ ಇತಿಹಾಸವನ್ನೇ ನಿರ್ಮಾಣ ಮಾಡಿದೆ. ಅದೇನೆಂದರೆ, ಪರೀಕ್ಷೆ ಸಮಯದಲ್ಲಿ ವಿದ್ಯಾರ್ಥಿಗಳು ಪ್ರತಿ ದಿವಸ ಸಾಯಂಕಾಲ ಅಲ್ಲೇ ಬಂದು ಉಳಿದುಕೊಳ್ಳಬೇಕೆಂದು ಅವರು ಆಗ್ರಹ ಮಾಡುತ್ತಾರೆ. ಆ ವಿದ್ಯಾರ್ಥಿಗಳಿಗೆ ಮಾರನೆಯ ದಿವಸದ ಪರೀಕ್ಷೆಗೆ ಬೇಕಾಗಿರತಕ್ಕಂಥ ಎಲ್ಲಾ ಉತ್ತರಗಳನ್ನು ಒದಗಿಸುವಂತಹ ಪ್ರಯತ್ನ ಅಧ್ಯಾಪಕರ ಕಡೆಯಿಂದ ನಡೆಯುತ್ತದೆ. ಹಾಗೆ ನೋಡಿದರೆ ಈ ಪರೀಕ್ಷೆಗಳು ನಡೆಯುತ್ತಿದ್ದಾಗ ಪರೀಕ್ಷೆಯ ಆ ಒಂದು ಆವರಣದಲ್ಲಿ ಯಾರೂ ಪ್ರವೇಶ ಮಾಡಬಾರದು ಎನ್ನುವಂತಹ ನಿಯಮ ಇರುತ್ತದೆ. ಆ ಎಲ್ಲಾ ನಿಯಮಗಳನ್ನು ಉಲ್ಲಂಘನೆ ಮಾಡಿ ವಿದ್ಯಾರ್ಥಿಗಳಿಗೆ ಬೇಕಾಗಿರತಕ್ಕಂಥ ಉತ್ತರಗಳನ್ನು ಒದಗಿಸುವ ಪ್ರಯತ್ನ ನಡೆದಿದೆ. ತಮಗೆ ಆಶ್ಚರ್ಯವಾಗಬಹುದು, ಆ ಒಂದು ಪದವಿ ಪೂರ್ವ ಕಾಲೇಜಿನಲ್ಲಿ ಒಂದು ಸಾವಿರ ವಿದ್ಯಾರ್ಥಿಗಳಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ :** ಆ ರೀತಿ ಅದೊಂದೇ ಕಾಲೇಜು ಅಲ್ಲ.

**ಪ್ರೊ. ಪಿ. ವಿ. ಕೃಷ್ಣಭಟ್ಟ :** ಒಂದೇ ಕಾಲೇಜು ಎಂದು ನಾನು ಹೇಳುತ್ತಿಲ್ಲ.

**ಶ್ರೀ ಬಸವರಾಜ ಹೊರಟ್ಟಿ :** ರಾಜ್ಯದಲ್ಲಿ ಈ ರೀತಿ ಬಹಳ ಕಡೆ ಇವೆ. ಅಲ್ಲಿ ಪ್ಯಾಕೇಜ್ ಸಿಸ್ಟಮ್ ಇದೆ. ಪರೀಕ್ಷೆಗಾಗಿ ಜಾಗ ಕೊಡಿಸುವುದರಿಂದ ಹಿಡಿದು ಪಾಸ್ ಮಾಡಿಸುವವರೆಗೆ ಸೀಟ್ ಕೊಡಿಸುವುದಿದೆ.

**ಪ್ರೊ. ಪಿ. ವಿ. ಕೃಷ್ಣಭಟ್ಟ :** ಆ ಪಾಯಿಂಟ್‌ಗೆ ನಾನು ಬರುತ್ತಿದ್ದೇನೆ. ಈ ವಿಷಯದಲ್ಲಿ ನನಗಿಂತ ನಿಮಗೆ ಹೆಚ್ಚಿನ ಅನುಭವ ಇದೆ.

ಮಾನ್ಯ ಸಭಾಪತಿಯವರೇ, ಒಂದು ಸಾವಿರ ವಿದ್ಯಾರ್ಥಿಗಳಿಗೆ ಆ ಕಾಲೇಜಿನಲ್ಲಿರತಕ್ಕಂಥವರು ನಾಲ್ಕು ಜನ ಉಪನ್ಯಾಸಕರು. ಈ ರೀತಿ ಪಿ. ಯು. ಕಾಲೇಜಿನಲ್ಲಿ ಉಪನ್ಯಾಸಕರು ಯಾರು ಇರುತ್ತಾರೆ ಅವರು ಎರಡನೇ ಪಿ. ಯು. ಸಿ. ಪರೀಕ್ಷೆಗೆ ಮೌಲ್ಯಮಾಪಕರಾಗಿ ಅವರು ನೋಂದಣಿ ಮಾಡಿಕೊಳ್ಳಬೇಕು. ಈ ಸಂಸ್ಥೆಯಲ್ಲಿ ಅದಕ್ಕೆ ಅರ್ಹತೆ ಉಳ್ಳಂತಹ ಇಬ್ಬರು ಅಧ್ಯಾಪಕರು ಮಾತ್ರ. ಉಳಿದವರು ಯಾರೂ ಕೂಡ ಅರ್ಹತೆ ಇಲ್ಲದಿರತಕ್ಕಂಥವರು. ಉಳಿದವರೆಲ್ಲರೂ ಕೂಡ ಪಾರ್ಟ್‌ಟೈಮ್ ಆಧಾರದ ಮೇಲೆ ಆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರತಕ್ಕಂಥವರು. ಈ ಒಂದು ಸಂಸ್ಥೆಯಲ್ಲಿರತಕ್ಕಂಥ ಬಹಳಷ್ಟು ಜನ ಆಡಳಿತ ಮಂಡಳಿಯ ಸದಸ್ಯರು ಯಾರೆಂದರೆ ಆ ಕಾಲೇಜುಗಳ ಉಪನ್ಯಾಸಕರ ಪತ್ನಿ ಅಥವಾ ಅವರ ಅವಲಂಬಿತರು ಎಂದು ತಿಳಿದು ಬಂದಿದೆ. ಇದು ಸರ್ಕಾರದ ಡಿಪಾರ್ಟ್‌ಮೆಂಟ್ ಕಡೆಯಿಂದ ಬಂದಿರತಕ್ಕಂಥ ಒಂದು ವರದಿ. ಈಗ ನಡೆಯತ್ತಿರತಕ್ಕಂಥ ಮಾರ್ಚ್ ದ್ವಿತೀಯ ಪರೀಕ್ಷೆಯಲ್ಲಿ ನಿಯಮಗಳಿರುತ್ತವೆ. ಆ ಒಂದು ಕಟ್ಟಡದ ಆವರಣದಲ್ಲಿ ಪರೀಕ್ಷೆಯ ಅವಧಿ ಮುಗಿದ ನಂತರ ಯಾರೂ ಕೂಡ ಅಲ್ಲಿ ಇರಬಾರದು ಎಂದು ನಿಯಮವಿದೆ. ಆದರೆ, ಆ ಎಲ್ಲಾ ನಿಬಂಧನೆಗಳನ್ನು ಉಲ್ಲಂಘನೆ ಮಾಡಿ ಸಂಜೆ ವೇಳೆ ಆ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಬರುವುದಕ್ಕೆ ಹೇಳಿ ಅಲ್ಲಿ ಅವರಿಗೆ ವ್ಯವಸ್ಥೆ ಮಾಡಿ

ಮಾರನೆಯ ದಿವಸದ ಪರೀಕ್ಷೆಗೆ ಬೇಕಾಗಿರತಕ್ಕಂಥ ತರಬೇತಿಯನ್ನು ಕೊಡುವಂತಹ, ಅವರಿಗೆ ಬೇಕಾಗಿರುವಂತಹ ಪ್ರಶ್ನೆ ಪತ್ರಿಕೆಗಳನ್ನು ಒದಗಿಸುವುದರ ಜೊತೆಗೆ ಸಹಕಾರವನ್ನು ಕೊಡತಕ್ಕಂಥದ್ದು ನಡೆದಿದೆ. ನಾನು ಈ ವಿವರಗಳನ್ನು ತಮಗೆ ಏಕೆ ಹೇಳುತ್ತಿದ್ದೇನೆಂದರೆ, ವಿದ್ಯಾಭ್ಯಾಸ ಎನ್ನುವ ಅದರ ಪಾವಿತ್ರ್ಯ ಏನಿತ್ತು ಅದು ಸಂಪೂರ್ಣವಾಗಿ ಭಸ್ಮಗೊಂಡುಬಿಟ್ಟಿದೆ. ಮೂಲ ನದಿಯೇ ಕಲುಷಿತವಾಗಿಬಿಟ್ಟಾಗ ಮುಂದೆ ಹರಿದು ಬರತಕ್ಕಂಥ ನದಿ ಕಲುಷಿತವಾಗಿರುವಂಥದ್ದು ಸ್ವಾಭಾವಿಕವಾದದ್ದು. ಆ ರೀತಿಯಲ್ಲಿ ವಿದ್ಯಾರ್ಥಿಗಳು ಆತಂಕಗೋಸ್ಕರ, ಪರೀಕ್ಷೆಯ ಭೀತಗೋಸ್ಕರವಾಗಿ ಅವರು ಕಾಪಿ ಮಾಡುವಂಥದ್ದನ್ನು ನಾವು ಅರ್ಥ ಮಾಡಿಕೊಳ್ಳಬಹುದು. ಅದನ್ನು ನಿರ್ಬಂಧ ಮಾಡುವುದಕ್ಕೆ ನಾವು ಪ್ರಯತ್ನ ಮಾಡಬಹುದು. ಆದರೆ, ಅಧ್ಯಾಪಕರೇ ಮುಂದೆ ನಿಂತು ಅವರನ್ನು ಕಾಪಿ ಮಾಡಿಸುವುದಕ್ಕೆ ಉತ್ತೇಜನ ಕೊಟ್ಟಾಗ ಅಥವಾ ಸಂಸ್ಥೆಗಳೇ ಈ ರೀತಿ ಬಹಳ organized ವ್ಯವಸ್ಥೆ ಮಾಡಬೇಕಾದರೆ it assumes the proportion of an organized crime. ಆದ್ದರಿಂದ ಈ ಒಂದು organized crime ಅನ್ನು ತಡೆಗಟ್ಟುವ ನಿಟ್ಟಿನಲ್ಲಿ ಇದನ್ನು ನಿಷೇಧಿಸತಕ್ಕಂಥ ನಿಟ್ಟಿನಲ್ಲಿ ಇವತ್ತಿನ ದಿವಸ ಬಹಳ ಬಿಗಿಯಾಗಿರುವಂಥಹ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ರೀತಿಯ ಅನೇಕ ಸಂದರ್ಭಗಳಲ್ಲಿ ಒಂದಿಷ್ಟು ತನಿಖೆಗಳು ನಡೆಯುತ್ತವೆ. ಪರೀಕ್ಷೆಗಳು ನಡೆಯುತ್ತಿದ್ದಾಗ ವಿದ್ಯಾರ್ಥಿಗಳು ಆ ಸಮಯದಲ್ಲಿ ಸ್ವಲ್ಪ ಆತಂತಕ್ಕೆ ಒಳಗಾಗುತ್ತಾರೆ. ಪತ್ರಿಕೆಗಳಲ್ಲೂ ಸುದ್ದಿಯಾಗುತ್ತದೆ. ಅನಂತರ ಆ ವಿಷಯಗಳು ತಣ್ಣಗಾಗುತ್ತವೆ. ಈ ಒಂದು ಧೈರ್ಯದ ಮೇಲೆ ಈ ರೀತಿಯ ಕೃತ್ಯಗಳು ನಿರಂತರವಾಗಿ ನಡೆಯುತ್ತಿವೆ. ಪರೀಕ್ಷೆಯ ಪಾವಿತ್ರ್ಯವೆಲ್ಲವೂ ಧ್ವಂಸವಾಗುವುದರ ಜೊತೆಯಲ್ಲಿ ಇಡೀ ಸಮಾಜದ ಮೇಲೆ ಬಹಳ ಘಾತಕವಾದಂತಹ ಪರಿಣಾಮ ಬೀರುತ್ತದೆ. ಸನ್ಮಾನ್ಯ ಮಂತ್ರಿಗಳು ಈಗಾಗಲೇ ಇದರ ಬಗೆ ನಿರ್ದಿಷ್ಟವಾದ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆಂದು ಹೇಳಿದ್ದಾರೆ. ಇದರಿಂದ ಯಾರ್‍ಯಾರಿಗೆ ನೋವಾಗಿದೆ? ನಾನು ಹೇಳಿದ್ದೇನೆ, ಇದರಲ್ಲಿ ಮೂರು ವಿಭಾಗಕ್ಕೆ ಸಂಬಂಧ ಪಟ್ಟಿರತಕ್ಕಂಥವರು ಭಾಗಿಯಾಗಿರುವ ಸಾಧ್ಯತೆಗಳು ಕಂಡು ಬರುತ್ತಿವೆ. ಒಂದನೆಯದು ಪಿ.ಯು. ಶಿಕ್ಷಣದ ವಿಭಾಗ, ಎರಡನೆಯದು ಆಡಳಿತ

ಮಂಡಳಿಗಳು, ಮೂರನೆಯದು ಅಧ್ಯಾಪಕರು. ಇದರ ಮೇಲೆ ಬಹಳ ಬಿಗಿಯಾಗಿರುವಂಥಹ ಕಟ್ಟುನಿಟ್ಟಿನ ಕ್ರಮವನ್ನು ಸರ್ಕಾರ ಈ ಸಂದರ್ಭದಲ್ಲಿ ಕೈಗೊಳ್ಳಬೇಕು. ಒಂದು ಸಲ ಕ್ರಮವನ್ನು ಕೈಗೊಂಡರೆ ಯಾರ್‍ಯಾರು ಇದರಲ್ಲಿ ಭಾಗಿಯಾಗಿರುತ್ತಾರೆ they must be dismissed from their service ಮತ್ತು ಅದಕ್ಕೆ ಬೇಕಾಗಿರತಕ್ಕಂಥ ಗರಿಷ್ಠ ದಂಡವನ್ನು ಹಾಕಬೇಕು. ಆಗ ಮಾತ್ರ ಈ ರೀತಿ ಆಗುವುದನ್ನು ತಡೆಗಟ್ಟಬಹುದು. ಮನುಸ್ಮೃತಿಯಲ್ಲಿ "ದಂಡಸ್ಯ ಹಿ ಭಯಾತ್ಸರ್ವಂ ಜಗತ್ ಭೋಗಾಯ ಕಲ್ಪತೇ" ಎಂಬ ಒಂದು ಮಾತಿದೆ. ಜಗತ್ತಿನಲ್ಲಿ ಎಲ್ಲಾ ವ್ಯವಹಾರಗಳು ಸುಸೂತ್ರವಾಗಿ ನಡೆಯಬೇಕಾದರೆ ದಂಡದ ಭಯ ಇರಬೇಕು ಎನ್ನುವುದು. ಆ ಭಯ ಇಲ್ಲದಿದ್ದರೆ ಇಂತಹ ಕೃತ್ಯಗಳು ಬಹಳ ಸುಲಲಿತವಾಗಿ ನಡೆದುಕೊಂಡು ಹೋಗುತ್ತವೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ವಿಷಯದಲ್ಲಿ ಶೀಘ್ರವಾಗಿ ತನಿಖೆ ಮಾಡಿಸಬೇಕು. ಯಾರ್‍ಯಾರು ಈ ಸಂಚಿನಲ್ಲಿ, ವ್ಯವಹಾರಗಳಲ್ಲಿ ಪ್ರಭಾವಿ ವ್ಯಕ್ತಿಗಳಾಗಿರಲಿ, ಪ್ರಭಾವಿ ಸಂಸ್ಥೆಗಳಾಗಿರಲಿ, ಅವರ ಮೇಲೆ ನಿರ್ದಾಕ್ಷಿಣ್ಯವಾಗಿರತಕ್ಕಂಥ ಕ್ರಮಗಳನ್ನು ಸಾಧ್ಯವಾದಷ್ಟು ಬೇಗ, ಹೆಚ್ಚು ಎಂದರೆ ಕೊನೆ ಪಕ್ಷ ಒಂದು ತಿಂಗಳ ಅವಧಿಯಲ್ಲೇ ತನಿಖೆಯನ್ನು ಪೂರ್ಣಗೊಳಿಸಿದರೆ ಒಳ್ಳೆಯದು. ಮುಂದೆ ಇನ್ನೂ ಕೆಲವು ಪರೀಕ್ಷೆಗಳು ನಡೆಯಬೇಕಾಗಿರುವುದಿದೆ. ಅವುಗಳೆಲ್ಲವೂ ಸುಸೂತ್ರವಾಗಿ ನಡೆಯಬೇಕಾಗಿರತಕ್ಕಂಥ ವಾತಾವರಣ ನಿರ್ಮಾಣವಾಗುತ್ತದೆ. ಈ ರೀತಿಯ ಕೃತ್ಯಗಳಲ್ಲಿ ತೊಡಗಿಸಿಕೊಳ್ಳುವಂಥವರಿಗೆ ಒಂದು ಭೀತಿ ಅವರ ಮನಸ್ಸಿನಲ್ಲಿ ಉತ್ಪನ್ನವಾಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರ ಗಮನಿಸಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಅಲ್ಲಮ ಪ್ರಭು ಪಾಟೀಲ್ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಪತ್ರಿಕೆ ಬಯಲಾಗಿರುವ ಬಗ್ಗೆ ಸಾಕಷ್ಟು ವಿಚಾರಗಳು ನಮ್ಮ ಸದನದಲ್ಲಿ ಚರ್ಚೆಯಾಗಿದೆ. ಯಾವ ರೀತಿ ವಿದ್ಯಾರ್ಥಿ ಗಳು ಪರೀಕ್ಷೆಯನ್ನು ಪಾಸ್ ಮಾಡುವುದಕ್ಕೆ ಭ್ರಷ್ಟಾಚಾರ, ವಾಮಮಾರ್ಗ ಗಳು ನಡೆಯುತ್ತಿವೆ ಎನ್ನುವುದನ್ನು ಗಮನಿಸಿದ್ದೇವೆ.

**ಉಪಸಭಾಪತಿಯವರು** : ಮಾನ್ಯ ಅಲ್ಲಮಪ್ರಭು ಪಾಟೀಲ್‌ರವರೇ, ಈ ವಿಚಾರವಾಗಿ ಬೆಳಿಗ್ಗೆಯಿಂದ ಸುದೀರ್ಘವಾದ ಚರ್ಚೆ ನಡೆದಿದೆ. ಮೂರು ನಿಮಿಷದಲ್ಲಿ ತಮ್ಮ ಮಾತನ್ನು ಮುಗಿಸಿ,

**ಶ್ರೀ ಅಲ್ಲಮಪ್ರಭು ಪಾಟೀಲ್** : ಮಾನ್ಯ ಸಭಾಪತಿಯವರೇ, ಇದರಿಂದ ಹೈದರಾಬಾದ್ ಕರ್ನಾಟಕದ ಭಾಗದಲ್ಲಿರುವ ವಿದ್ಯಾರ್ಥಿಗಳಿಗೆ ಹೆಚ್ಚು ಹಾನಿಯಾಗಿದೆ. ಏಕೆಂದರೆ, ನಮಗೆ ಮೊದಲೇ ವಿದ್ಯುತ್ತಿನ ಕೊರತೆ ಇದೆ. ನಿನ್ನೆ, ಇವತ್ತು ಉಷ್ಣಾಂಶ $45^0$ ಡಿಗ್ರಿ ಇದೆ. ಆ ಬಿಸಿಲಿನಲ್ಲಿ ವಿದ್ಯಾರ್ಥಿಗಳು ಒಳ್ಳೆಯ ರೀತಿಯಲ್ಲಿ ವಿದ್ಯಾಭ್ಯಾಸ ಮಾಡಿ ಬೆಳಿಗ್ಗೆ ಹೋಗತಕ್ಕಂಥ ಸಂದರ್ಭದಲ್ಲಿ ದಿಢೀರ್ ಆಗಿ ಪರೀಕ್ಷೆ ಮುಂದೆ ಹೋಗಿದೆ ಎಂದು ಹೇಳಿದರೆ ಅದು ಬಹಳ ಕಷ್ಟಕರವಾಗಿರುವಂಥದ್ದು. ನಮ್ಮ ಭಾಗದ ಹೆಚ್ಚು ವಿದ್ಯಾರ್ಥಿ ಗಳು ನೊಂದುಕೊಂಡಿದ್ದಾರೆ. ನಮ್ಮ ಭಾಗದಲ್ಲಿರತಕ್ಕಂಥ ವಿದ್ಯಾರ್ಥಿಗಳು ರಾತ್ರಿ ಸಮಯದಲ್ಲಿ ಜನರೇಟರ್ ತಂದು ಪರೀಕ್ಷೆಗಾಗಿ ಒಂದೇ ಕಡೆ ಅಭ್ಯಾಸ ಮಾಡುತ್ತಿರುವ ಈ ಸಂದರ್ಭದಲ್ಲಿ ಪ್ರಶ್ನೆ ಪತ್ರಿಕೆ ಬಯಲಾಗಿರುವುದು ಅವರಿಗೆ ದೊಡ್ಡ ಆಘಾತ ತಂದಿದೆ. ಇದರಿಂದ ಹೆಚ್ಚಿನ ಹಾನಿ ನಮ್ಮ ಭಾಗಕ್ಕೆ ಆಗಿದೆ. ನಾನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳದೆ ಮೂರೇ ನಿಮಿಷದಲ್ಲಿ ನನ್ನ ಮಾತನ್ನ ಮುಗಿಸುತ್ತೇನೆ. ಒಂದು ಕಡೆ ಸಂದರ್ಭ ಬಂದಾಗ ಶ್ರೀ ವೀರೇಂದ್ರ ಹೆಗಡೆಯವರು ಒಂದು ಮಾತನ್ನು ಹೇಳಿದರು. ಒಂದು ಹಳ್ಳಿಯ ಬಾವಿಯ ಹತ್ತಿರ ಇಬ್ಬರು ಹುಡುಗರು ಆಟ ಆಡುವಾಗ ಒಬ್ಬ ಶಿಕ್ಷಕ ಬರುತ್ತಿದ್ದನಂತೆ. ಆ ಶಿಕ್ಷಕ ಈಜಿನಲ್ಲಿ ಪಿಹೆಚ್.ಡಿ. ಪಡೆದಿದ್ದ. ಬರತಕ್ಕಂಥ ಸಂದರ್ಭದಲ್ಲಿ ಒಬ್ಬ ವಿದ್ಯಾರ್ಥಿ ಬಾವಿಯಲ್ಲಿ ಬಿದ್ದ. ಬಾವಿಯಲ್ಲಿ ಬಿದ್ದಾಗ ತೆಗೆಯಿರಿ, ತೆಗೆಯಿರಿ ಎಂದು ಚೀರಾಡುತ್ತಿದ್ದ. ಈಜಿನಲ್ಲಿ ಪಿಎಚ್.ಡಿ. ಪಡೆದಿರತಕ್ಕಂಥ ಶಿಕ್ಷಕ ಸುಮ್ಮನೆ ನಿಂತ. ಅವನು ಹೋಗಲಿಲ್ಲ. ತೆಗೆಯಲಿಲ್ಲ. ಅವನ ಕೂಗು ಕೇಳಿ ಊರಿನ ಜನ ಬಂದು ಬಾವಿಗೆ ಹಾರಿ ಆ ವಿದ್ಯಾರ್ಥಿಯನ್ನು ಬದುಕಿಸುತ್ತಾರೆ. ಬದುಕಿಸಿದ ಮೇಲೆ ಆ ಶಿಕ್ಷಕನನ್ನು ಕೇಳುತ್ತಾರೆ. "ಏನಪ್ಪ ನೀನು ಇಲ್ಲೇ ಇದ್ದೀಯಾ, ನೀನು ಗುರುವಾಗಿದ್ದೀಯಾ, ಈಜಿನಲ್ಲಿ ಪಿ.ಎಚ್.ಡಿ. ತೆಗೆದುಕೊಂಡಿದ್ದೀಯಾ, ನೀನು ಏಕೆ ಅವನನ್ನು

ಬದುಕಿಸಲಿಲ್ಲ" ಎಂದು ಕೇಳಿದರು. ತಪ್ಪಾಯಿತು. ನಾನು ಓದುವುದಕ್ಕೆ ಬರದಿದ್ದರೂ ನನಗೆ ಪಿ.ಎಚ್.ಡಿ. ಕೊಟ್ಟಿದ್ದಾರೆ ಎಂದು ಆ ಶಿಕ್ಷಕ ಹೇಳಿದ. ಈ ರೀತಿಯಲ್ಲಿ ಕಳಪೆ ಮಟ್ಟದ ವೈದ್ಯರು, ಇಂಜಿನಿಯರ್ ಬಂದರೆ ನಮ್ಮ ಕರ್ನಾಟಕ ರಾಜ್ಯದ ಪರಿಸ್ಥಿತಿ ಅಧೋಗತಿಗೆ ಹೋಗುತ್ತದೆ. ವೀರೇಂದ್ರ ಹೆಗಡೆಯವರು ಒಂದು ಮಾತನ್ನು ಹೇಳಿದರು. ಬೇಲಿಯೇ ಎದ್ದು ಹೊಲ ಮೇಯ್ದರೆ ಹೇಗೆ? ಮನೆಯ ಮಾಲೀಕರು ಕಾಗೇರಿ ಸಾಹೇಬರು. ಕಾಗೇರಿ ಸಾಹೇಬರ ಮೇಲೆ ಈ ಅಪವಾದ ಬಂದಿದೆ. ಇದನ್ನು ತಕ್ಷಣ ಪತ್ತೆ ಹಚ್ಚಿ. ಆದ್ದರಿಂದ, ಈ ವಿಚಾರವಾಗಿ ಪತ್ತೆ ಹಚ್ಚಿ ಒಂದು ಒಳ್ಳೆಯ ರೀತಿಯಲ್ಲಿ ಜನರಿಗೆ ಒಂದು ಸಂದೇಶ ಹೋಗುವಂತೆ ಮಾಡಬೇಕು.

**ಶ್ರೀ ಡಿ. ಎಸ್. ವೀರಯ್ಯ :** ನಾನು ಆ ನಿಟ್ಟಿನಲ್ಲಿ ಹೇಳಿಲಿಲ್ಲ. ಮನೆ ಮಾಲೀಕರು ಬೇರೆ. ಇಲ್ಲಿ ಅಡಿಗೆ ಮಾಡುವವರು ಬೇರೆ. ಅಡಿಗೆ ಮಾಡಿಸು ವವರು ಬೇರೆ. ಅಡಿಗೆ ಮಾಡಿದವರೇ ವಿಷ ಹಾಕಿದರೆ ಇನ್ನು ಊಟ ಮಾಡಿದವರು ಏನು ಮಾಡುವುದಕ್ಕಾಗುತ್ತದೆ? ಸಾಮಾನು ತರುವುದಷ್ಟೆ ಅವರ ಕೆಲಸ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ನಾಯಕರು ಒಳಗೊಂಡಂತೆ ಎಲ್ಲಾ ಗೌರವಾನ್ವಿತ ಸದಸ್ಯರು ಸಹ ತಮ್ಮ ಅನುಭವದಿಂದ, ವಿದ್ಯಾರ್ಥಿಗಳ ಪರವಾದ ಶೈಕ್ಷಣಿಕ ಚಟುವಟಿಕೆಗಳ ಪರವಾದಂತಹ ಒಂದು ಕಾಳಜಿಯನ್ನು ಜವಾಬ್ದಾರಿಯುತ ವಾಗಿ ಇಲ್ಲಿ ವ್ಯಕ್ತಪಡಿಸಿದ್ದಾರೆ. ಅವರು ಈ ವ್ಯವಸ್ಥೆಯಲ್ಲಿ ತರಬೇಕಾದಂತಹ ಸುಧಾರಣೆಗಳ ಬಗ್ಗೆ ಯಾವ ಒಂದು ಮುನ್ನೆಚ್ಚರಿಕೆಯನ್ನು ವಹಿಸಿಕೊಳ್ಳ ಬೇಕೋ ಆ ವಿಷಯಗಳ ಬಗ್ಗೆ ಸಾಕಷ್ಟು ಸಲಹೆ-ಸೂಚನೆಗಳನ್ನು ಕೊಟ್ಟಿದ್ದಾರೆ. ನಾನು ಆ ಎಲ್ಲಾ ಸದಸ್ಯರನ್ನು ಅಭಿನಂದಿಸುತ್ತಾ, ನಾವೆಲ್ಲರೂ ಜೊತೆ ಸೇರಿ ಈ ರೀತಿಯಲ್ಲಿ ರಚನಾತ್ಮಕವಾದಂತಹ ಚರ್ಚೆಯನ್ನು ಮಾಡಿ ಏನು ಈ ಒಂದು ರೀತಿಯಲ್ಲಿ ದೋಷವಾಗಿದೆ. ತಪ್ಪಾಗಿದೆ, ಇದನ್ನು ಒಟ್ಟಾಗಿ ಎಲ್ಲರೂ ಏಕ ಕಂಠದಿಂದ ಸರಿಪಡಿಸುವಂತಹ ಜವಾಬ್ದಾರಿಯನ್ನು ಸ್ವೀಕರಿಸಿ ದ್ದೇವೆ ಎನ್ನುವಂತಹ ಸಂದೇಶಗಳು ಸಿಕ್ಕಿದರೆ ಸಮಾಜದಲ್ಲಿ ಈ ರೀತಿ

ನಡೆಸುತ್ತಿರುವಂತಹ ದುಷ್ಟ ಶಕ್ತಿಗಳಿಗೆ ಒಂದು ನಿಯಂತ್ರಣವನ್ನು ಹಾಕಿದಂತಾಗುತ್ತದೆ. ಅವರು ಈ ರೀತಿಯ ಚಟುವಟಿಕೆ ಮಾಡುವುದಕ್ಕೆ ಮುಂದೆ ಆಗುವುದಿಲ್ಲ ಎನ್ನುವಂತಹ ವಿಷಯವನ್ನು ತಿಳಿದುಕೊಳ್ಳುತ್ತಾರೆ. ಏಕೆಂದರೆ, ಯಾರೂ ಬಿಡುವುದಿಲ್ಲ. ನಮ್ಮ ಪರವಾಗಿ ಯಾರೂ ಇಲ್ಲ ಎನ್ನುವಂತಹ ಸಂದೇಶ ಸ್ಪಷ್ಟವಾಗಿ ಈ ಸದನದ ಮೂಲಕ ಇವತ್ತು ಸಿಕ್ಕಿದೆ. ನಾನು ಅದಕ್ಕಾಗಿ ಎಲ್ಲಾ ಸದಸ್ಯರನ್ನು ಅಭಿನಂದಿಸುತ್ತೇನೆ. ತಾವು ಸಹ ಇದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ತಪ್ಪು ಮಾಡಿದವರನ್ನು ಹಾಗೆಯೇ ಬಿಡಬೇಡಿ ಎಂದು ಸದನದಲ್ಲಿ ಪ್ರತಿಯೊಬ್ಬರು ಹೇಳಿದ್ದಾರೆ. ಎಲ್ಲಿ ತಪ್ಪಾಗಿದೆ, ಅಲ್ಲಿ ನಾವು ಶಿಕ್ಷೆಗೆ ಗುರಿಪಡಿಸಲು ಸಿದ್ಧರಿದ್ದೇವೆ. ಆ ರೀತಿಯ ಕ್ರಮವನ್ನು ತೆಗೆದುಕೊಳ್ಳಿ ಎನ್ನುವಂತಹ ಮಾತುಗಳನ್ನು ತಾವುಗಳೆಲ್ಲರೂ ಹೇಳಿದ್ದೀರಿ. ಅದು ನಿಜ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ, ಪಾಲಕರಿಗೆ ಅವರದ್ದೇ ಆದಂತಹ ಆತಂಕ ನಿರ್ಮಾಣವಾಗಿದೆ. ನಮ್ಮೆಲ್ಲರಿಗೂ ಅವರ ಭಾವನೆಗಳು ಅರ್ಥವಾಗುತ್ತದೆ. ನಾವು ಎಷ್ಟೇ foolproof ಅನ್ನು ಕ್ರೀಯೇಟ್ ಮಾಡಿದರೂ ಅದರೊಳಗೆ ಹೇಗೆ ದೋಷವನ್ನು ಹುಡುಕಿ ಈ ರೀತಿಯ ದುರ್ಲಾಭವನ್ನು ತೆಗೆದುಕೊಳ್ಳುವಂತಹ ಶಕ್ತಿಗಳಿವೆ ಎನ್ನುವಂಥಹದ್ದನ್ನು ನಾವು ನೋಡಬಹುದು. ಆ ರೀತಿಯಲ್ಲಿ ಆಗಿದೆ. ನಾವು ಟ್ರಜರಿಯೊಳಗೆ ಪ್ರಶ್ನೆಪತ್ರಿಕೆಗಳನ್ನಿಡುತ್ತೇವೆ. ಅದನ್ನು ಗೋಪ್ಯವಾಗಿ ಎಲ್ಲಿಯೋ ಇರುವಂತಹ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಮುದ್ರಣ ಮಾಡಿಸಿ ಅದನ್ನು ಟ್ರಜರಿಯಲ್ಲಿಡುತ್ತೇವೆ. ಅದನ್ನು ನಾವು ಕಂಟೈನರ್‌ನಲ್ಲಿ ತರುತ್ತೇವೆ. ಅಷ್ಟೊಂದು foorlproof ಕಂಟೈನರ್‌ನಲ್ಲಿ ಪ್ರಶ್ನೆಪತ್ರಿಕೆಗಳನ್ನು ಎಲ್ಲಿ ಮುದ್ರಣ ಮಾಡಿಸುತ್ತೇವೆಯೋ ಅದನ್ನು ಅಲ್ಲಿಂದ ತರಿಸಿ, ಅದನ್ನು reorganize ಮಾಡಿ ಕಳುಹಿಸುತ್ತೇವೆ. ಅವರು ಯಾವ ರೀತಿ ಪಾಕೇಟ್ ಮಾಡಿ ಕಳುಹಿಸುತ್ತಾರೋ ಹಾಗೆಯೇ ಇರುತ್ತದೆ. ನಾವು ಎಲ್ಲಿಯೂ ಯಾರೂ ಸಹ ಅದನ್ನು ತೆಗೆಯುವಂತಹ ಪ್ರಶ್ನೆಯೇ ಬರುವುದಿಲ್ಲ. ಯಾವ್ಯಾವ ಸೆಂಟರ್‌ಗೆ ಹೋಗಬೇಕೋ ಅಲ್ಲಿಗೆ ಹೋಗುತ್ತದೆ. ಅದನ್ನು ಟ್ರಜರಿಯಲ್ಲಿಡುತ್ತೇವೆ. ಟ್ರಜರಿಯಲ್ಲಿದ್ದ ಪೇಪರ್ ಅನ್ನು ಇವತ್ತಿನ ಪೇಪರ್ ಅನ್ನು ಇವತ್ತು ಬೆಳಿಗ್ಗೆ ಕೊಡುತ್ತೇವೆ. ಆದರೆ, ಗಣಿತ ಮತ್ತು ಭೌತಶಾಸ್ತ್ರ ಈ ಎರಡು ಪೇಪರ್‌ಗಳು ನಿನ್ನೆಯೇ ಸಿಕ್ಕಿವೆ. ಇವತ್ತಿನ ಬೆಳಿಗ್ಗೆಯ ಪೇಪರ್ ಅನ್ನು

ಇವತ್ತು ಬೆಳಿಗ್ಗೆ ಕೊಡುತ್ತೇವೆ. ಇಷ್ಟೊಂದು foolproof system ನಲ್ಲಿ ಮಾಡಿದರೂ ಸಹ ಆ ಬಂಡಲ್ ಅನ್ನು ಏನು ತೆಗೆದುಕೊಂಡು ಹೋಗುತ್ತಾರೆ, ತೆಗೆದುಕೊಂಡು ಹೋದಮೇಲೆ ವಿದ್ಯಾರ್ಥಿಗಳ ಹತ್ತಿರ ಸಹಿ ಹಾಕಿಸಿಕೊಳ್ಳುತ್ತೇವೆ. ಸಹಿ ಹಾಕಿಸಿಕೊಂಡ ನಂತರ ಅದನ್ನು ನಾವು ಕತ್ತರಿ ಯಲ್ಲಿ ಕಟ್ ಮಾಡಿ ತೆಗೆಯುತ್ತೇವೆ. ಅದರೊಳಗೆ ಎರಡು ಕವರ್ ಇರುತ್ತದೆ. ನಮ್ಮದು ಇಷ್ಟೊಂದು foolproof system ಇದೆ. ಈ ರೀತಿಯ ವ್ಯವಸ್ಥೆಯನ್ನು ನಾನು ಕಳೆದ 2–3 ವರ್ಷಗಳಿಂದ ವೈಯಕ್ತಿಕವಾಗಿ ತಿಳಿದುಕೊಂಡಿದ್ದೇನೆ. ಅಂದರೆ ಯಾರು, ಯಾವ ಹಂತದಲ್ಲೂ ಅದನ್ನು ತೆಗೆಯಲಿಕ್ಕೆ ಸಾಧ್ಯವಾಗು ವುದಿಲ್ಲವೆಂದು ಮೇಲ್ನೋಟಕ್ಕೆ ನಮಗೆ ಅನಿಸಿರುವಷ್ಟು ಒಂದು ಭದ್ರವಾ ದಂತಹ ರೀತಿಯಲ್ಲಿ ಮಾಡಿದ್ದೇವೆ. ಹಾಗಾಗಿ, ಈ ರೀತಿಯಲ್ಲಿ ಆಗಿದೆ. ಸಮಾಜದಲ್ಲಿ ಇಂತಹ ಶಕ್ತಿಗಳು ಅವರದ್ದೇ ಆದಂತಹ ಸ್ವಾರ್ಥದ ಕಾರಣಕ್ಕಾಗಿ ಈ ರೀತಿಯಲ್ಲಿ ಮಾಡುತ್ತಾರೆ. ಸ್ಮಗಲಿಂಗ್ ಆಗುತ್ತದೆ. ನಾವು ಎಷ್ಟು foolproof system ಮಾಡಿದರೂ ಸಹ ಸ್ಮಗಲಿಂಗ್ ಅಗುವುದನ್ನು ನೋಡುತ್ತೇವೆ. ಹಾಗೆಯೇ ಇದನ್ನೂ ಸಹ ಯಾರೋ ಎಲ್ಲಿಯೋ ಸ್ಮಗಲಿಂಗ್ ಮಾಡಿರುವುದೇ ಆಗಿದೆ. ಎಲ್ಲಿಯೋ ಯಾವುದೋ ಹಂತದಲ್ಲಿ ತೆಗೆದಿದ್ದಾರೆ. ಈ ವಿಚಾರ ಸಿಐಡಿ ತನಿಖೆಯಿಂದ ಹೊರಬರುತ್ತದೆ ಎನ್ನುವ ವಿಶ್ವಾಸ ಇದೆ. ಮತ್ತೆ, ಈ ರೀತಿ ಅದ್ಯಾವುದೇ ಸಂದರ್ಭದಲ್ಲಿ ಆಗದಿರುವಂತಹ ಎಚ್ಚರಿಕೆಯನ್ನು ನಮ್ಮ ಇಲಾಖೆಯವರು ವಹಿಸಿಕೊಳ್ಳಬೇಕು. ಆ ಒಂದು ಎಚ್ಚರಿಕೆಯನ್ನು ವಹಿಸಿಕೊಳ್ಳುವುದಕ್ಕೆ ನಮಗೆ ಸಾಧ್ಯವಾಗುತ್ತದೆ. ನಾವು ಅದನ್ನು ವಹಿಸಿಕೊಳ್ಳುತ್ತೇವೆ. ಮತ್ತೊಮ್ಮೆ ಈ ಸಂದರ್ಭದಲ್ಲಿ ತಮಗೆಲ್ಲಾ ಹೇಳಲಿಕ್ಕೆ ಬಯಸುವುದೇನೆಂದರೆ ಅದು ನಮ್ಮ ಇಲಾಖೆಯ ಹಂತದಲ್ಲಿರ ಬಹುದು, ಮುದ್ರಕರ ಹಂತದಲ್ಲಿರಬಹುದು, ಸಾಗಾಣಿಕೆಯ ಹಂತರದಲ್ಲಿರ ಬಹುದು, ಅಥವಾ ಟ್ರಜರಿ ಹಂತದಲ್ಲಿ, ವಿತರಣೆಯ ಹಂತದಲ್ಲಿ ಇರಬಹುದು, ಈ ರೀತಿಯ ಎಷ್ಟು ಹಂತಗಳಿವೆಯೋ ಅಷ್ಟೂ ಹಂತಗಳ ಬಗ್ಗೆ ನಮಗೆ ಗೊತ್ತಿದೆ ಮತ್ತು ಅದರ ಬಗ್ಗೆ ನಮಗೆ ಸ್ಪಷ್ಟತೆ ಇದೆ. ನಾವು ಸಿಐಡಿಗಳಿಗೆ, ಸಿಐಡಿ ಅಧಿಕಾರಿಗಳಿಗೆ ಈ ಎಲ್ಲಾ ಹಂತಗಳ ಬಗ್ಗೆ, ಈ ಎಲ್ಲಾ ವಿಷಯಗಳ ಬಗ್ಗೆ ಅಗತ್ಯ ಇರುವಂತಹ ಎಲ್ಲಾ ಮಾಹಿತಿಗಳನ್ನು ಈಗಾಗಲೇ

ಕೊಟ್ಟಿದ್ದೇವೆ, ಷೇರ್ ಮಾಡಿಕೊಂಡಿದ್ದೇವೆ, ನಾವು ಅವರಿಗೆ ತಲುಪಿಸುತ್ತಿದ್ದೇವೆ. ನಾವು ಅವರಿಗೆ ಮಾಹಿತಿಗಳನ್ನು ಕೊಡುತ್ತಿದ್ದೇವೆ. ವಿದ್ಯಾರ್ಥಿಗಳ ಭವಿಷ್ಯದ ಜೊತೆ ಈ ರೀತಿಯ ಚೆಲ್ಲಾಟಗಳನ್ನು ಆಡುತ್ತಿರುವಂತಹ ಈ ರೀತಿಯ ಯಾವ ದುಷ್ಟ ಶಕ್ತಿ ಇದೆಯೋ ನಿರ್ದಾಕ್ಷಿಣ್ಯವಾಗಿ ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಮುಂದಾಗುತ್ತೇವೆ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಮತ್ತೊಬ್ಬ ಸದಸ್ಯರು ಇದೇ ವಿಷಯವಾಗಿ ಬಹಳ ಕಾಳಜಿಯಿಂದ ಮಾತನಾಡಿದರು. ಅಲ್ಲಿ ಯಾರಿಗೋ ಉಪನ್ಯಾಸಕರಿಗೆ, ಯಾರಿಗೋ ಶಿಕ್ಷಕರಿಗೆ ತೊಂದರೆ ಕೊಡಲಾಗಿದೆ, ಅಲ್ಲಿ ಇಲ್ಲದೇ ಇದ್ದರೂ ಸಹ ಅವರ ಮೇಲೆ ಕ್ರಮ ಆಗಿದೆ ಎಂದು ಹೇಳಿದರು. ಒಂದು ವೇಳೆ ಆ ರೀತಿಯಲ್ಲಿ ಆಗಿದ್ದರೆ ನಾವು ನಿಶ್ಚಿತವಾಗಿ ಅವರ್‍ಯಾರಿಗೂ ತೊಂದರೆ ಕೊಡುವಂತೆ ಮಾಡುವುದಿಲ್ಲ. ಆದರೆ, ಈ ವಿಚಾರವಾಗಿ ನಾವು ಕ್ರಮ ತೆಗೆದುಕೊಳ್ಳುವ ಸಂದರ್ಭದಲ್ಲಿ ಅಂದಿನ ಸ್ಥಳೀಯ ಅಧಿಕಾರಿಗಳ ಮಾಹಿತಿಯನ್ನು ಆಧರಿಸಿ ಕ್ರಮ ತೆಗೆದುಕೊಳ್ಳಲಾಗಿದೆ. Suo moto ಬೆಂಗಳೂರಿನಲ್ಲಿ ಕುಳಿತು ನಾವು ಇಲ್ಲಿ ಅವರ ಮೇಲೆ ಕ್ರಮವನ್ನು ತೆಗೆದುಕೊಂಡಿಲ್ಲ. ಸ್ಥಳೀಯ ಮಟ್ಟದ ಅಧಿಕಾರಿಗಳಿಂದ ಅಗತ್ಯವಾದಂತಹ ಮಾಹಿತಿಗಳು ಬಂದಿರುವುದರಿಂದಾಗಿ ನಾವು ಆ ಕ್ರಮತೆಗೆದುಕೊಳ್ಳುವಂತಾಗಿದೆ. ಅಂತಹ ಸಂಸ್ಥೆಗಳ ಮೇಲೂ ಕ್ರಮಕೈಗೊಳ್ಳುವುದರ ಮೂಲಕ ಆ ಸಂಸ್ಥೆಗಳ ಮಾನ್ಯತೆಯನ್ನು ರದ್ದು ಮಾಡಬೇಕಾದಂತಹ ಅನಿವಾರ್ಯತೆ ಇದೆ ಎಂದು ನೋಟೀಸ್ ಕೊಡುವುದಕ್ಕೂ ಕಾರಣವಾಗಿದೆ. ಆದರೆ, ಈ ರೀತಿಯ ಅಪರಾಧಗಳಾಗುವುದಕ್ಕೆ, ತಪ್ಪಾಗುವುದಕ್ಕೆ ಎಲ್ಲಿ ಯಾರ್‍ಯಾರು, ಯಾವ್ಯಾವ ರೀತಿಯಲ್ಲಿ ಜವಾಬ್ದಾರರು ಎಂದು ನಮ್ಮ ತನಿಖೆಯಿಂದ ಸ್ಪಷ್ಟಗೊಳ್ಳುತ್ತದೆ, ಹಾಗಾಗಿ, ಅಂತಹವರ್‍ಯಾರು ಭಾಗಿಯಾಗಿಲ್ಲವೆಂದರೆ ನಿಶ್ಚಿತವಾಗಿ ಅವರ ಮೇಲೆ ಏನೂ ಕ್ರಮವಾಗುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಮುಗ್ಧರ ಮೇಲೆ, ಅಮಾಯಕರ ಮೇಲೆ ಯಾವುದೇ ಕ್ರಮವಾಗದಂತೆ ನೋಡಿಕೊಳ್ಳುತ್ತೇವೆ. ಕೆಲವು ಸಂದರ್ಭದಲ್ಲಿ ಕೆಲವರನ್ನು ವಿಚಾರಣೆಗೆಂದು ಒಳಪಡಿಸಬೇಕಾಗುತ್ತದೆ. ಈ ರೀತಿಯಲ್ಲಿ ಸ್ಥಳೀಯ ಅಧಿಕಾರಿಗಳು ಕೆಲವು ಮಾಹಿತಿ ಕೊಟ್ಟಾಗ ಅದರ ಮೇಲೆ ಕ್ರಮಗಳನ್ನು

ಮಾಡಬೇಕಾದುದು ಇರುತ್ತದೆ. ಆದರೆ, ಅವರಿಗೆ ಬೇರೆ ರೀತಿಯಲ್ಲಿ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. ಪರೀಕ್ಷೆಯ ಇಡೀ ವ್ಯವಸ್ಥೆಯನ್ನು ಮುಂದೆ ಸುಧಾರಣೆ ಮಾಡುವುದಕ್ಕೆ ಇನ್ನಷ್ಟು ಹೆಚ್ಚು ಚರ್ಚೆ ಅಗತ್ಯ ಇದೆ ಎಂದು ಅನೇಕರು ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚು foolproof ಆಗಿ ಈ ವ್ಯವಸ್ಥೆಯನ್ನು ಹೇಗೆ ಅಭಿವೃದ್ಧಿ ಪಡಿಸಬಹುದು. ಇವತ್ತಿನ ಆಧುನಿಕ ತಂತ್ರಜ್ಞಾನಗಳನ್ನು ಬಳಸಿ, ನಾವು ಹೇಗೆ ಈ ಪ್ರಶ್ನೆ ಪತ್ರಿಕೆಗಳನ್ನು ಅವರಿಗೆ ತಲುಪಿಸುವಂತಹ ಪ್ರಯತ್ನಗಳನ್ನು ಮಾಡಬಹುದು ಎನ್ನುವುದಕ್ಕೆ ಅನೇಕರು ಅನೇಕ ರೀತಿಯ ಸಲಹೆ–ಸೂಚನೆಗಳನ್ನು ಕೊಟ್ಟಿದ್ದಾರೆ. ನಿಶ್ಚಿತವಾಗಿ ಅದೆಲ್ಲವನ್ನೂ ಪರಿಶೀಲಿಸುತ್ತೇನೆ. ಮುಂದಿನ ದಿನಗಳಲ್ಲಿ ಅದಕ್ಕೆ ಹೆಚ್ಚಿನ ಸಮಯವನ್ನು ಕೊಟ್ಟು ಅದಕ್ಕೆ ಹೆಚ್ಚಿನ ಗಮನವನ್ನು ಕೊಟ್ಟು ಮಾಡುತ್ತೇನೆ. ಆದರೆ, ನಾಳೆಯಿಂದ ನಡೆಯುವಂತಹ ಎಲ್ಲಾ ಪರೀಕ್ಷೆಗಳನ್ನೂ ಸಹ ಮೊದಲು ಆದ್ಯತೆಯಿಂದ, ನಾವು ಬಿಗು–ಭದ್ರತೆಯಲ್ಲಿ ವಿಶ್ವಾಸಪೂರ್ಣವಾಗಿ ನಡೆಸಬೇಕಾಗಿದ್ದು, ಅದನ್ನು ನಡೆಸುತ್ತೇನೆ.

**ಶ್ರೀ ವಿ. ಆರ್. ಸುದರ್ಶನ್ :** ಇದನ್ನು ನಿಯಂತ್ರಣ ಮಾಡದೇ ಹೋದರೆ ನಿಮ್ಮ ರಾಜೀನಾಮೆಗೆ ಒತ್ತಾಯ ಮಾಡಬೇಕಾಗುತ್ತದೆ. ಏಕೆಂದರೆ, ಈ ವಿಚಾರ ಎಷ್ಟು ಗಂಭೀರವಾಗಿದೆ ಎನ್ನುವುದು ತಮಗೆ ಅರ್ಥವಾಗಿದೆ. ಇದನ್ನು ಕೇವಲ ಅಧಿಕಾರಿಗಳ ಮೇಲೆ ಹೇಳಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ನಿಮ್ಮದೂ ಕೂಡ ಬಹಳ ಜವಾಬ್ದಾರಿ ಇದೆ. ಇದು ವಿದ್ಯಾರ್ಥಿಗಳ ಬದುಕಿನ ಭವಿಷ್ಯದ ಪ್ರಶ್ನೆ ಕೂಡ ಇದೆ. ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :** ಮಾನ್ಯ ಸದಸ್ಯರಾದ ಶ್ರೀಯುತ ಸುದರ್ಶನ್‌ರವರು ಹೇಳುವಂತಹ ವಿಷಯಕ್ಕೆ ನಾವೆಲ್ಲರೂ ಜವಾಬ್ದಾರರಿದ್ದೇವೆ ಎನ್ನುವ ಮಾತನ್ನು ನಾನು ಒಪ್ಪಿಕೊಂಡಿದ್ದೇನೆ. ಈ ಬಗ್ಗೆ ಸಿಐಡಿಯಿಂದ ತನಿಖೆ ಆಗುತ್ತದೆ, ನಿಶ್ಚಿತವಾಗಿ ಅಪರಾಧಿಗಳು ಯಾರು

ಎಂದು ಗೊತ್ತಾಗಿಯೇ ಆಗುತ್ತದೆ, ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇದರ ಜೊತೆಗೆ ಪರೀಕ್ಷೆಯನ್ನೂ ಸಹ ನಡೆಸುತ್ತೇವೆ. ಉಳಿದ ವಿಷಯಗಳ ಪರೀಕ್ಷೆ ನಾಳೆಯಿಂದ ಇದೆ. ಉತ್ತರ ಕರ್ನಾಟಕದ ಗುಲ್ಬರ್ಗ, ಇತ್ಯಾದಿ ಕಲ್ಯಾಣ ಕರ್ನಾಟಕದ ಕೆಲವು ಭಾಗಗಳಲ್ಲಿ ಕೆಲವು ತೊಂದರೆಯಾಗಿದೆ ಎನ್ನುವ ಮಾತನ್ನು ಹೇಳಿದರು.

**ಶ್ರೀ ಅಲ್ಲಮಪ್ರಭು ಪಾಟೀಲ್ :** 'ಕಲ್ಯಾಣ ಕರ್ನಾಟಕ' ಯಾವಾಗ ಮಾಡುತ್ತೀರಿ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :** 'ಕಲ್ಯಾಣ ಕರ್ನಾಟಕ' ಎಂದು ನೀವೆಲ್ಲಾ ಹೇಳಿ ಹೇಳಿ ಆಗಬೇಕು. ನಮ್ಮ ಹೈದ್ರಾಬಾದ್ – ಕರ್ನಾಟಕ ಭಾಗದಲ್ಲಿ ಬಿಸಿಲು ಇದೆ. 31ನೇ ತಾರೀಖಿಗೆ ಪರೀಕ್ಷೆ ಮುಗಿಯುತ್ತಿತ್ತು. ಈಗ ಒಂದೆರಡು ಪರೀಕ್ಷೆಗಳು ಮಾತ್ರ ಸಂಸ್ಕೃತ–ಫ್ರೆಂಚ್‌ನಂತಹ ವಿಷಯಗಳು 5ನೇ ತಾರೀಖಿನಂದು ನಡೆಯುತ್ತವೆ. 3ನೇ ತಾರೀಖಿನಂದು ಗಣಿತ ಪರೀಕ್ಷೆ ಇದೆ. ಇವೆರಡು ಬಿಟ್ಟು ಉಳಿದೆಲ್ಲಾ ಪರೀಕ್ಷೆಗಳು ನಡೆಯುತ್ತವೆ. ಪರೀಕ್ಷೆಯನ್ನು ಬಹಳ ಮುಂದಕ್ಕೆ ಹಾಕಿಲ್ಲ. ಅದಕ್ಕೆ ಸಹಕರಿಸುತ್ತಾರೆನ್ನುವ ವಿಶ್ವಾಸ ನನಗಿದೆ. ನಾವು ದಿನಾಂಕಗಳನ್ನು ಸ್ಪಷ್ಟಪಡಿಸಿಕೊಂಡು foolproof ನಲ್ಲಿ ಈ ವ್ಯವಸ್ಥೆಯನ್ನು, ಮತ್ತೆ ಏನೇನು ಮುನ್ನೆಚ್ಚರಿಕೆ ವಹಿಸಿಕೊಂಡು, ಇನ್ನೇನು ಆಗಿರಬಹುದು ಎಂದು ಊಹಿಸಿಕೊಂಡು ಅದನ್ನು ಸರಿಪಡಿಸುವುದಕ್ಕೆ ಇನ್ನೇನು ಕ್ರಮ ಬೇಕೋ ಅದೆಲ್ಲವನ್ನೂ ತೆಗೆದುಕೊಂಡಿದ್ದೇವೆ.

ಕೊನೆಯದಾಗಿ ಒಂದು ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಈ ವರ್ಷ ಮೌಲ್ಯಮಾಪನ ಕೇಂದ್ರಗಳನ್ನೂ ಸಹ ಬಹಳ foolproof ಆಗಿ ನಡೆಸಬೇಕೆನ್ನುವುದನ್ನು ನಾವು ನಿರ್ಧಾರ ಮಾಡಿದ್ದೇವೆ. ಇಲ್ಲಿ ಇರುವಂತಹ ನಮ್ಮೆಲ್ಲಾ ಎಂಎಲ್‌ಸಿಗಳ ಮಧ್ಯೆ ಮತ್ತು ನಮ್ಮ ಅನೇಕ ಜನ ಪ್ರತಿನಿಧಿಗಳು, ಅಧಿಕಾರಿಗಳ ಮಧ್ಯೆ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಮೌಲ್ಯಮಾಪನ ಕೇಂದ್ರ ಒಂದು ಮುಕ್ತವಾದ ಕೇಂದ್ರವಾಗಿ ಇತ್ತು. ಈ ವಿಚಾರ ಶ್ರೀಯುತ ಹೊರಟ್ಟಿಯವರಿಗೆ ಸೇರಿದಂತೆ ನಮಗೆಲ್ಲರಿಗೂ ಗೊತ್ತಿದೆ. ಅದು ಒಂದು ಮುಕ್ತವಾದ ಸೆಂಟರ್. ನಮ್ಮ ಅನೇಕರು ಅದರಲ್ಲಿ ಹೋಗುತ್ತಿದ್ದರು,

ಬರುತ್ತಿದ್ದರು, ಅಂದರೆ ಅಲ್ಲೇನೋ ತೊಂದರೆ ಮಾಡುತ್ತಿದ್ದರು ಎಂದಲ್ಲ, ಮೌಲ್ಯಮಾಪನ ಮಾಡುವಾಗ ಮೌಲ್ಯಮಾಪನ ಮಾಡಬೇಕು ಪರೀಕ್ಷೆ ಬರೆಯುವಾಗ ಪರೀಕ್ಷೆ ಬರೆಯಬೇಕು ಮೌಲ್ಯಮಾಪನ ಕೇಂದ್ರಗಳಲ್ಲಿ ಮೌಲ್ಯಮಾಪನ ಮಾಡುವಾಗ ಮತ್ಯಾವುದೋ ಚಟುವಟಿಕೆಗಳು ನಡೆಯುವುದಕ್ಕೆ ಅವಕಾಶವಾಗಬಾರದು. ಆ ಹಿನ್ನೆಲೆಯಲ್ಲಿ ಮೌಲ್ಯಮಾಪನ ಕೇಂದ್ರಗಳನ್ನೂ ಸಹ foolproof ಮಾಡುವುದಕ್ಕೆ, ಅಲ್ಲಿ ಅನಗತ್ಯ ವ್ಯಕ್ತಿಗಳು ಯಾರೂ ಸಹ ಹೋಗದಂತೆ ಎಚ್ಚರಿಕೆ ವಹಿಸಿಕೊಳ್ಳುವುದಕ್ಕೂ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಚಿಂತನೆ ಮಾಡಿದ್ದೇವೆ. ಅದಕ್ಕೆ ಎಲ್ಲರ ಸಹಕಾರವನ್ನು ಕೇಳುತ್ತಿದ್ದೇವೆ. ಈ ವಿಚಾರದಲ್ಲಿ ಎಲ್ಲಿಯಾದರೂ ಯಾವುದೇ ಮಾಹಿತಿಗಳು ಸಿಕ್ಕಿದರೆ ದಯವಿಟ್ಟು ಸರ್ಕಾರಕ್ಕೆ ಕೊಡಿ. ನಾವು ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವುದಕ್ಕೆ ಮುಂದಾಗಿದ್ದೇವೆ. ಅದಕ್ಕೆ ಸಹಕಾರಿಯಾಗುತ್ತದೆನ್ನುವ ವಿಶ್ವಾಸವಿದೆ. ನಾವೆಲ್ಲರೂ ನಮ್ಮ ಮಕ್ಕಳ ಭವಿಷ್ಯದ ಬಗ್ಗೆ ಜವಾಬ್ದಾರಿಯಿಂದ ನಡೆದುಕೊಳ್ಳೋಣ. ಎಲ್ಲರೂ ಆ ಭಾವನೆಗಳನ್ನು ವ್ಯಕ್ತ ಮಾಡಿರುವುದಕ್ಕೆ ನಾನು ಅಭಿನಂದಿಸುತ್ತೇನೆ ಮತ್ತು ನಮ್ಮ ಜವಾಬ್ದಾರಿಗಳನ್ನು ನಾವು ಸ್ವೀಕರಿಸುತ್ತೇವೆ.

**ಶ್ರೀಮತಿ ಮೋಟಮ್ಮ :** ಮಾಹಿತಿ ಕೊಟ್ಟವರಿಗೆ ಬಹುಮಾನ ಘೋಷಣೆ ಮಾಡಿದರೆ ಒಳ್ಳೆಯದಿತ್ತು ಎಂದು ನನಗನಿಸುತ್ತದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :** ಈ ವಿಚಾರವಾಗಿ ನಿಮ್ಮ ಹೈ ಕಮಾಂಡ್‌ಗೆ ಮಾತನಾಡಬೇಕಾಗುತ್ತದೆ.

**ಉಪಸಭಾಪತಿಯವರು :** ಮಾನ್ಯ ಸಚಿವರು ಈ ವಿಚಾರವಾಗಿ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ಎಲ್ಲವನ್ನೂ ಸವಿಸ್ತಾರವಾಗಿ ಹೇಳಿದ್ದಾರೆ. ಬಹಳ ಹಿಂದೆ ಇದು ನಡೆಯುತ್ತಿತ್ತು. ಮಧ್ಯದಲ್ಲಿ ಬಿಟ್ಟು ಹೋಗಿತ್ತು. ಮತ್ತೆ ಇದು ಪ್ರಾರಂಭವಾಗಿದೆ ಎಂದರೆ ಈ ಸಮಾಜಘಾತುಕ ಶಕ್ತಿಗಳು ಮತ್ತೆ ತಲೆ ಎತ್ತುತ್ತಿವೆ. ಇದರ ಮಾಫಿಯಾವೇ ಇದೆ. ಇದನ್ನು ಏನು ಸಿಐಡಿ ತನಿಖೆಗೆ ಕೊಟ್ಟಿದ್ದೀರಿ, ನಿಷ್ಪಕ್ಷಪಾತವಾಗಿ ತನಿಖೆಯನ್ನು ಮಾಡಿ

ಅದನ್ನು ಪೂರ್ಣವಾಗಿ ಮಟ್ಟ ಹಾಕದಿದ್ದರೆ ಮುಂದೆ ಬಹಳ ಕಷ್ಟವಾಗುತ್ತದೆ. ತಾವು ಆ ಕೆಲಸವನ್ನು ಮಾಡಬೇಕು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :** ಮಾನ್ಯ ಸಭಾಪತಿಯವರೆ, ನಿಶ್ಚಿತವಾಗಿ ತಾವು ಹೇಳಿದಂತೆ ಈ ರೀತಿಯಾದ ಮಾಫಿಯಾ ಏನು ಇದೆ ಇದನ್ನು ಮಟ್ಟ ಹಾಕಬೇಕಾಗುತ್ತದೆ. ಸಿ.ಒ.ಡಿ ಎಂದು ಮೊದಲು ಇತ್ತು. ಅದನ್ನು ಈಗ ಸಿ.ಐ.ಡಿ. ಎಂದು reconvert ಮಾಡಲಾಗಿದೆ. ಎರಡು ಒಂದೇ ಇರುತ್ತದೆ. ನಾನು ನನ್ನ ಮೊದಲ ಹೇಳಿಕೆಯನ್ನು 20ನೇ ತಾರೀಖು ಸಂಜೆ ಈ ಪ್ರಕರಣವನ್ನು ಸಿ.ಒ.ಡಿ. ತನಿಖೆಗೆ ಕಳುಹಿಸುತ್ತಿದ್ದೇವೆ, ನೀಡಿದ್ದೇನೆ. ಸಿ.ಒ.ಡಿ ತನಿಖೆಗೆ ಕಳುಹಿಸುತ್ತಿದ್ದೇನೆ ಎಂಬ ಬಗ್ಗೆ ಲಿಖಿತ ಹೇಳಿಕೆಯನ್ನು ಎಲ್ಲಾ ಕಡೆಗೂ ಕಳುಹಿಸಿದ್ದೇನೆ. ಸರ್ಕಾರಿ ಆದೇಶವಾಗಿ ಬರುವಾಗ ಇದು ಸಿ.ಐ.ಡಿ. ಎಂದು ಬಂತು. ಇದನ್ನು ನೋಡಿ ನನಗೇ ಒಂದು ರೀತಿಯ ಗೊಂದಲವಾಯಿತು. CoD is converted as CID now. ಗೃಹ ಸಚಿವರಾದ ಮಾನ್ಯ ಅಶೋಕ್ ಅವರು ಇಲ್ಲೇ ಎಲ್ಲಿಯೋ ಇದ್ದರಲ್ಲ. ಎರಡಕ್ಕೂ ವ್ಯತ್ಯಾಸವೇನೂ ಇಲ್ಲ. ಅದೇ ಕೆಲಸ ಅದೇ ಸಿಬ್ಬಂದಿ ವರ್ಗದವರು ಇರುತ್ತಾರೆ.

**ಶ್ರೀ ವೀರಣ್ಣ ಮತ್ತಿಕಟ್ಟಿ :** ಇನ್ನೂ ಏನೇನು confusion ಮಾಡುತ್ತಾರೋ ಅದು ದೇವರಿಗೇ ಗೊತ್ತು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :** ರೂಢಿಯಲ್ಲಿ ಅದು ಸಿ.ಒ.ಡಿ. ಎಂದು ಬಂದಿದೆ.

**ಶ್ರೀ ವಿ. ಆರ್. ಸುದರ್ಶನ್ :** ಇದು ಸಿ.ಐ.ಡಿ / ಸಿ.ಒ.ಡಿ. ಅಲ್ಲ. ಇಡೀ ರಾಜ್ಯದ ಜನರನ್ನೇ ಒಂದು ರೀತಿಯ ಗೊಂದಲದಲ್ಲಿ ಇಟ್ಟಿದ್ದೀರಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ಆ ರೀತಿ ಏನೂ ಇಲ್ಲ. ಎಲ್ಲವೂ ಸರಿ ಹೋಗುತ್ತದೆ. ಆ ವಿಷಯದ ಬಗ್ಗೆ ನಂತರ ಮಾತನಾಡೋಣ. ತನಿಖೆಯಿಂದ ನಾವು ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ನಮ್ಮ ಕಾರ್ಯದರ್ಶಿಗಳು, ನಿರ್ದೇಶಕರು ಇರಬಹುದು ಎಲ್ಲಾ ಹಂತದಲ್ಲೂ

ಇದಕ್ಕೆ ಬೇಕಾದ ಎಲ್ಲಾ ಗಂಭೀರವಾದಂಥ ಪ್ರಯತ್ನಗಳನ್ನು ಮಾಡಿದ್ದೇವೆ. ತಾವು ಹೇಳಿದಂತೆ ಹಿರಿಯ ಅಧಿಕಾರಿಗಳ ಮೇಲೆ ಕೆಟ್ಟ ಹೆಸರು ಬರುವುದಕ್ಕೆ ಮಾಡುತ್ತಾ ಇರಬಹುದು. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನಮ್ಮ ಪಿ.ಯು. ಮಂಡಳಿಯ ನಿರ್ದೇಶಕರು ಬಹಳ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅದಕ್ಕೆ ಬೇಕಾದಂತಹ ಸಹಕಾರವನ್ನು ನಮ್ಮ ಕಾರ್ಯದರ್ಶಿಗಳು ಮತ್ತು ನಾವೆಲ್ಲರೂ ಕೊಡುವುದಕ್ಕೆ ಸಿದ್ಧರಿದ್ದೇವೆ. ನಾನು ಈ ಇಲಾಖಾ ಸಚಿವನಾಗಿ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಯಾವುದೇ ಸಂದರ್ಭದಲ್ಲೂ ಬದಲು ಮಾಡುವುದಿಲ್ಲವೆಂದು ಈ ಮೂಲಕ ಸ್ಪಷ್ಟ ಪಡಿಸುತ್ತೇನೆ.

**ಶ್ರೀ ಎಂ. ಸಿ. ನಾಣಯ್ಯ :** ಮಾನ್ಯ ಸಭಾಪತಿಯವರೆ, ನಮ್ಮ ರಾಜ್ಯದಲ್ಲಿನ ಒಳ್ಳೆಯ ಅಧಿಕಾರಿಗಳ ಬಗ್ಗೆ ಈ ಸದನದಲ್ಲಿ ಪ್ರಸ್ತಾಪ ಆಗುತ್ತಿರತಕ್ಕಂಥಾದ್ದೇ ಬಹಳ ವಿರಳ. ಬಹಳಷ್ಟು ಅಧಿಕಾರಿಗಳು ಯಾರೂ ಇದ್ದಾರೆ ಹಿರಿಯ ಅಧಿಕಾರಿಗಳು ಕಾರ್ಯದರ್ಶಿಗಳಿಂದ ಹಿಡಿದು ಕೆಳಹಂತದ ಅಧಿಕಾರಿಗಳು ಎಲ್ಲರೂ ಭ್ರಷ್ಟರೇ ಎಂದು ಹೇಳುವ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ಈ ಒಂದು ಹಿನ್ನೆಲೆಯಲ್ಲಿ ಎಲ್ಲೋ ಅಲ್ಲಿ ಒಬ್ಬರು ಇಲ್ಲೊಬ್ಬರು ಅಥವಾ ಕೆಲವು ಜನ ಒಳ್ಳೆಯ ಅಧಿಕಾರಿಗಳು ಕೆಲಸ ಮಾಡುತ್ತಿರತಕ್ಕಂಥ ಹಿನ್ನೆಲೆಯಲ್ಲಿ ಅವರನ್ನೂ ಕೂಡ ಎಲ್ಲೋ ಎತ್ತಂಗಡಿ ಮಾಡುವುದನ್ನು ಇತ್ತೀಚಿನ ದಿನಗಳಲ್ಲಿ ನಾವು ನೋಡುತ್ತಿದ್ದೇವೆ. ಇದರ ಬಗ್ಗೆ ತಾವು ಗಮನ ಹರಿಸಬೇಕೆಂದು ವಿನಂತಿ. ಸಿ.ಐ.ಡಿ. ತನಿಖೆ ನಿಷ್ಪಕ್ಷಪಾತವಾಗಿ ನಡೆಯಲಿ ಎಂದು ಒಂದು ಮಾತನ್ನು ಹೇಳಿದರು. ಈ ಮಾತನ್ನು ಏಕೆ ಹೇಳಿದರು ಎಂದರೆ, ಬಹಳಷ್ಟು ಸಿ.ಐ.ಡಿ. ತನಿಖೆಗಳು ನಿಷ್ಪಕ್ಷಪಾತವಾಗಿ ನಡೆಯುವುದಿಲ್ಲ. ಆದ್ದರಿಂದ ಅವರು ಈ ಮಾತನ್ನು ಹೇಳಿದರು. ನಮ್ಮ ಲೋಕಾಯುಕ್ತ ಪೋಲೀಸರು ಇವತ್ತು 'captive Lokayukta' ಆಗಿ ಬಿಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಇದರಲ್ಲಿ ಇರತಕ್ಕಂಥಹ ದಂದೆ ಇದೆಯಲ್ಲ ಇದು ಒಂದು ರೀತಿಯಲ್ಲಿ ಲಾಬಿಯಾಗಿ ಪರಿಣಮಿಸಿದೆ. Education lobby, Commercialization lobby in Education Department is a powerful

lobby ಇದರಲ್ಲಿ ಇಲಾಖೆಯವರು ಇದ್ದಾರೆ. ಪಿ.ಯು. ಬೋರ್ಡಿನಲ್ಲಿ ಇರತಕ್ಕಂಥ ಕೆಲವು ಅಧಿಕಾರಿಗಳು ಇದರಲ್ಲಿ ಇರಲಿಕ್ಕೂ ಸಾಕು. ಅದರ ಜೊತೆಯಲ್ಲಿ ಪೊಲೀಸಿನವರು ಸೇರಿರತಕ್ಕಂಥ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ಇವರ ಮಧ್ಯೆ ನಮ್ಮ ಮಕ್ಕಳು ಮತ್ತು ಪೋಷಕರು ತೊಂದರೆಯನ್ನು ಅನುಭವಿಸುವಂತಾಗಿದೆ. ಇದರ ಬಗ್ಗೆ ಮಾನ್ಯ ಸಚಿವರು ಗಮನವನ್ನು ಹರಿಸಬೇಕು. ಮಾನ್ಯ ಕಾಗೇರಿಯವರು ಇವೆಲ್ಲದರ ಕಡೆಗೆ ಗಮನಹರಿಸಿ ಕೆಲಸ ಮಾಡುತ್ತಾರೆ ಎಂಬ ಒಂದು ನಂಬಿಕೆ ನನ್ನಲ್ಲಿ ಇದೆ. ಆದರೂ ತಾವು ಸ್ವಲ್ಪ ಮಟ್ಟಿಗೆ ಇದನ್ನು ನೋಡಿಕೊಳ್ಳಬೇಕು. ಬಹಳಷ್ಟು ಒತ್ತಡಗಳು ನಿಮ್ಮ ಮೇಲೆ ಬರಬಹುದು. ನಿರಪರಾಧಿಗಳು ಅನಾವಶ್ಯಕವಾಗಿ ತೊಂದರೆಗೀಡಾಗದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿಕೆ ತಮ್ಮ ಮೇಲೆ ಇದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :** ನಾನು ಎರಡು ವಿಷಯವನ್ನು ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತೇನೆ. ನಿಷ್ಪಕ್ಷಪಾತವಾದ ತನಿಖೆಯನ್ನು ಮಾಡುವುದಕ್ಕೆ ಸಂಪೂರ್ಣವಾಗಿ ಜವಾಬ್ದಾರರಿದ್ದೇವೆ. ಯಾವುದೇ ಒತ್ತಡಗಳು, ಶಕ್ತಿಗಳು ಈ ಹಂತದಲ್ಲಿ ಕೆಲಸ ಮಾಡುತ್ತಿದ್ದರೂ ಸಹ ನಾವು ಅವರ ಮೇಲೆ ನಿರ್ದಾಕ್ಷಿಣ್ಯವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಮುಂದಾಗುತ್ತೇವೆ. ಇಡೀ ಸದನ ಅದನ್ನು ಅಪೇಕ್ಷೆ ಪಟ್ಟು ಹೇಳುತ್ತಿದೆ. ನಾನು ಮತ್ತೊಮ್ಮೆ ಹೇಳುತ್ತೇನೆ. ಅದನ್ನು ಸಹಜವಾಗಿ ಮಾಡಬೇಕಾದ ಜವಾಬ್ದಾರಿ ನಮ್ಮ ಮೇಲೆ ಇದೆ. ನಾವು ಮಾಡಬೇಕಾದ ಮತ್ತು ನಮ್ಮ ಜವಾಬ್ದಾರಿಯನ್ನು ನಾವು ನಿರ್ವಹಿಸುತ್ತೇವೆ. ಹಾಗೂ ಯಾವ ಅಧಿಕಾರಿಗಳು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದರೋ ಅವರಿಗೆ ಕೆಟ್ಟ ಹೆಸರನ್ನು ತರುವುದಕ್ಕೆ ಅಥವಾ ಅಲ್ಲಿನ ವ್ಯವಸ್ಥೆಗೆ ದೋಷ ತರುವಂಥಾದ್ದು, ಕೆಟ್ಟ ಹೆಸರನ್ನು ತರುವುದಕ್ಕೆ ಯಾರು ಪ್ರಯತ್ನ ಮಾಡುತ್ತಿದ್ದಾರೋ ಅವರ ಮೇಲೆ ನಿರ್ದಾಕ್ಷಿಣ್ಯ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮತ್ತು ಒಳ್ಳೆಯ ಅಧಿಕಾರಿಗಳನ್ನು ರಕ್ಷಿಸಬೇಕಾದ್ದು ಕೂಡ ನಮ್ಮ ಸರ್ಕಾರದ ಜವಾಬ್ದಾರಿಯಾಗಿದೆ. ಆ ರಕ್ಷಿಸುವ ಕೆಲಸವನ್ನು ನಾವು ಮಾಡುತ್ತೇವೆ. ಈ ಒಂದು ವಿಚಾರದ ಬಗ್ಗೆ ಯಾವ ಒಂದು ಗಂಭೀರತೆ

ಸರ್ಕಾರಕ್ಕೆ ನಿರ್ಮಾಣವಾಗಬೇಕೋ ಆ ಒಂದು ಗಂಭೀರತೆ ನಿರ್ಮಾಣ ವಾಗಿದೆ. ಆ ದಿಕ್ಕಿನಲ್ಲಿ ನಾವು ಪ್ರಯತ್ನವನ್ನು ಮಾಡುತಿದ್ದೇವೆ ಎಂದು ಈ ಮೂಲಕ ಸ್ಪಷ್ಟಪಡಿಸುತ್ತಿದ್ದೇನೆ. ನಮ್ಮ ಮಕ್ಕಳ ಭವಿಷ್ಯದ ಜೊತೆಗೆ ಇಲ್ಲವೇ ಇನ್ನು ಯಾವುದೇ ಉದ್ದೇಶ ಇಟ್ಟುಕೊಡು ಅವರು ತಮ್ಮ ಚಟುವಟಿಕೆಯನ್ನು ಮಾಡುತ್ತಿದ್ದರೆ, ಆ ಒಂದು ಸ್ವಾರ್ಥ ಸಾಧನೆಗೆ ಪ್ರಯತ್ನ ಮಾಡುತ್ತಿದ್ದರೆ ಅದಕ್ಕೆ ನಾವ್ಯಾರೂ ಅವಕಾಶವನ್ನು ಕೊಡುವುದಿಲ್ಲ. ಮತ್ತು ನಾವು ಯಾರೂ ಅಂಥಹದ್ದಕ್ಕೆ ಅವಕಾಶವನ್ನು ಮಾಡಿಕೊಡುವುದು ಬೇಡವೆಂದು ಹೇಳಿ ಇದಕ್ಕೆ ತಮ್ಮೆಲ್ಲರ ಸಹಕಾರವನ್ನ ಕೋರುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಅಲ್ಲಮಪ್ರಭು ಪಾಟೀಲ್ :** ಪಿ.ಯು. ಬೋರ್ಡಿನ ನಿರ್ದೇಶಕರ ಬಗ್ಗೆ . . . .

**ಉಪಸಭಾಪತಿಯವರು :** ಮಾನ್ಯ ಅಜೀಂ ಅವರೇ, ಇದರ ಬಗ್ಗೆ ತುಂಬಾ ಚರ್ಚೆ ಆಗಿದೆ ಸಾಕು.

**ಶ್ರೀ ಅಬ್ದುಲ್ ಅಜೀಂ :** ನಾನು ಇದರ ಬಗ್ಗೆ ಮಾತನಾಡಿಲ್ಲ. ಸಿ.ಓ.ಡಿ. ಬಗ್ಗೆ ಮಾತನಾಡುತ್ತಾರೆ. ಸಿ.ಐ.ಡಿ. ಬಗ್ಗೆ ಮಾತನಾಡುತ್ತಾರೆ. ಇದರ ಬಗ್ಗೆ ಯಾರಿಗೂ ಸರಿಯಾಗಿ ಗೊತ್ತಿಲ್ಲ. ನಾನೊಬ್ಬ ನಿವೃತ್ತ ಪೋಲೀಸ್ ಅಧಿಕಾರಿಯಾಗಿ ಇಲ್ಲಿ ಕುಳಿತಿದ್ದೇನೆ.

**ಉಪ ಸಭಾಪತಿಯವರು :** ಯಾರು ಸಹಿ ಮಾಡಿದ್ದಾರೆ ಅವರಿಗೆ ಅವಕಾಶ ಕೊಟ್ಟಿದ್ದೇವೆ.

**Sri ABDUL AZEEM :** ಮಾನ್ಯ ಸಭಾಪತಿಯವರೆ, I would like to enlighten the House, What is CID and what is COD ಎಂದು ಎಲ್ಲರಿಗೂ ಅದರ ಬಗ್ಗೆ ನಾಲೆಡ್ಜ್ ಬೇಕಲ್ಲ. ಮಾನ್ಯ ಸಚಿವರು ಸಿ.ಐ.ಡಿ. ತನಿಖೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇದೇನು ದೊಡ್ಡ ತನಿಖೆ ಅಲ್ಲ. As it is not a murder, it is not a dacoity or it is not a robbery case. ಇದು ಬಹಳ ಸಿಂಪಲ್ investigation ಆಗಿದೆ. ಬೇಕಾದರೆ ಇದಕ್ಕೆ ನನ್ನ ಸೇವೆಯನ್ನು ಉಪಯೋಗಿಸಿಕೊಳ್ಳಿ. ಈ ಪ್ರಕರಣವನ್ನು ನಾನೇ

investigation ಮಾಡುತ್ತೇನೆ. 4–5 ಜನ ಅಧಿಕಾರಿಗಳನ್ನು ನನಗೆ ಕೊಡಿ. ಮತ್ತು ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಹೊರಕ್ಕೆ ತೆಗೆಯಬೇಕಾದರೆ, ಯಾರು ಮಾಹಿತಿಯನ್ನು ಕೊಡುತ್ತಾರೆ ಅವರಿಗೆ ಇಂತಿಷ್ಟು ಬಹುಮಾನವನ್ನು ಕೊಡುತ್ತೇವೆಂದು ಸರ್ಕಾರದವರು ಘೋಷಣೆಯನ್ನು ಮಾಡಬೇಕು. ಆಗ ನಿಮಗೆ ಮಾಹಿತಿ ಬರುತ್ತದೆ. ನಾವು ಎಸ್.ಎಸ್.ಎಲ್.ಸಿ. ಓದುತ್ತಿರಬೇಕಾದರೆ ವಿದ್ಯಾರ್ಥಿಗಳ ಮಧ್ಯೆ ಈ ಪ್ರಶ್ನೆ ಪತ್ರಿಕೆ ಎಲ್ಲಿ print ಆಗುತ್ತದೆ ಎಂಬ ಬಗ್ಗೆ ಚರ್ಚೆ ನಡೆಯುತ್ತಿತ್ತು. ಈ ಪ್ರಶ್ನೆ ಪತ್ರಿಕೆ leak ಆಗುವುದಿಲ್ಲ ಏಕೆಂದರೆ ಈ ಪ್ರಶ್ನೆ ಪತ್ರಿಕೆಯನ್ನು ಜೈಲಿನಲ್ಲಿ ಓದು ಬರಹ ಬಾರದಿರುವ ಖೈದಿಗಳ ಹತ್ತಿರ ಮುದ್ರಣ ಮಾಡಿಸುತ್ತಾರೆ ಎಂದು ಮಾತನಾಡಿಕೊಳ್ಳುತ್ತಿದ್ದವರು. ಅಂದರೆ ಎಷ್ಟೊಂದು care ತೆಗೆದುಕೊಳ್ಳುತ್ತಿದ್ದರು ಎಂಬುದನ್ನು ವಿಚಾರ ಮಾಡಿ. ಈಗ leak ಆಗಿರುವ ಪ್ರಶ್ನೆ ಪತ್ರಿಕೆ ಬಗ್ಗೆ ಮಾಹಿತಿ ನಿಮಗೆ ಸಿಗಬೇಕಾದರೆ, ಆ ವಿಚಾರ ಬಹಿರಂಗವಾಗಬೇಕಾದರೆ ಆ ಮಾಹಿತಿಯನ್ನು ಕೊಡುವವರಿಗೆ ಇಂತಿಷ್ಟು ಬಹುಮಾನವನ್ನು ಕೊಡುತ್ತೇವೆಂದು ಘೋಷಣೆಯನ್ನು ಮಾಡಿ ಆಗ ಮಾಹಿತಿ ತಾನಾಗಿಯೇ ಹೊರಕ್ಕೆ ಬರುತ್ತದೆ. ಈ ಸಿ.ಐ.ಡಿ. ಮತ್ತು ಸಿ.ಒ.ಡಿ.ಗೆ ಅಂತಹ ವ್ಯತ್ಯಾಸವೇನೆಂದರೆ, ಮೊದಲು CID (Criminal Investigarion Department) ಎಂದು ಇತ್ತು. 25–30 ವರ್ಷಗಳಿಂದ ಅಂದರೆ ಸುಮಾರು 1975ರಲ್ಲಿ ಅದನ್ನು COD ಎಂದು ಬದಲಾವಣೆ ಮಾಡಿದರು. COD ಅಂದರೆ Corps of Detectives ಎಂದು ಮಾಡಿದರು. Corps ಅಂದರೆ body ಎಂದು ಅರ್ಥ ಬರುತ್ತದೆ. ಈ ಪತ್ತೆದಾರಿಕೆ ಮಾಡುವವರು ಏನು ಇದ್ದಾರೆ ಅವರದ್ದೊಂದು body ಎಂದು ಅರ್ಥ. ಈಗ ಪುನಃ ಅದನ್ನು ಸಿ.ಐ.ಡಿ. ಎಂದು ಬದಲಾವಣೆ ಮಾಡಿದ್ದಾರೆ. ಇವೆರಡರ ಮಧ್ಯೆ ಅಂತಹ ವ್ಯತ್ಯಾಸವೇನೂ ಇರುವುದಿಲ್ಲ. ಈಗ ಅದರಲ್ಲಿ ಅದೇ ಅಧಿಕಾರಿಗಳು ಇದ್ದಾರೆ. ಈ ಸಿ.ಐ.ಡಿ.– ಸಿ.ಒ.ಡಿ. ಬಗ್ಗೆ ನಮಗೆ ಬಹಳಷ್ಟು ನಂಬಿಕೆ ಇದೆ. ಒಳ್ಳೆಯ ತನಿಖೆಯಾಗುತ್ತದೆ ಎಂಬ ಒಂದು ನಂಬಿಕೆ ಇದೆ. ನಿಜ ಹೇಳಬೇಕೆಂದರೆ, ಸ್ಟೇಷನ್ ಲೆವೆಲ್‌ನಲ್ಲಿ ಏನು ತನಿಖೆ ನಡೆಯುತ್ತದೆ ಆ ಒಂದು ತನಿಖೆ ಈ ಸಿ.ಐ.ಡಿ.ಯಲ್ಲಿ ನಡೆಯುವುದಿಲ್ಲ. Because, all unwanted officers are

dumped over here. ಯಾರಿಗೆ influence ಇಲ್ಲ ಅಂತಹ ಅಧಿಕಾರಿಗಳನ್ನು ಅಲ್ಲಿ ಹಾಕಿದ್ದಾರೆ. ಒಬ್ಬ ಎಸ್. ಪಿ. ಒಂದು ಬ್ರಾಂಚಿನಲ್ಲಿ ಇರುತ್ತಾರೆ. ಅವರ ಕೈಕೆಳಗೆ ಇಬ್ಬರು ಡಿ.ಎಸ್.ಪಿ. ಇನ್ಸ್‌ಪೆಕ್ಟರ್ ಇಬ್ಬರು ಪೋಲೀಸ್ ಪೇದೆಗಳನ್ನು ಕೊಡುತ್ತಾರೆ ಅವರು ಇದಕ್ಕೆ ಸಂಬಂಧಪಟ್ಟ ಎಲ್ಲಾ ಕಡತಗಳನ್ನು ಹೊತ್ತುಕೊಂಡು ಹೋಗುತ್ತಾರೆ. ಆದರೆ ಅವರಿಗೆ ಸ್ಥಳೀಯ ಪೋಲೀಸರು ಸಹಕಾರವನ್ನು ಮಾಡುವುದಿಲ್ಲ. ಇದರ ಬಗ್ಗೆ ಬೇಕಾದರೆ ತನಿಖೆ ಮಾಡಿ ನೋಡಲಿ. ಒಳ್ಳೆಯ ತನಿಖೆ ಈ ಸಿ.ಐ.ಡಿ.ಯಲ್ಲಿ ಆಗುವುದಿಲ್ಲ. As the investigation date is also less. ಅಲ್ಲಿಗೆ ಒಳ್ಳೆಯ ಅಧಿಕಾರಿಗಳನ್ನು ಕಳುಹಿಸಬೇಕು. ಕೆಲವರು influence ಮಾಡಿಕೊಂಡು ಅಲ್ಲಿಯೇ ಕುಳಿತಿದ್ದಾರೆ. ಅವರುಗಳಿಗೆ term fix ಮಾಡಬೇಕು. ತಮಿಳುನಾಡು ಮತ್ತು ಬೇರೆ ಕಡೆಯಲ್ಲಿ ಮಾಡಿದ್ದಾರೆ. 3 ವರ್ಷ ನೀನು ಸಿ.ಓ.ಡಿ.ಯಲ್ಲಿ ಇರಬೇಕು. ಇನ್ನು 3 ವರ್ಷ ಇಂಟೆಲಿಜೆನ್ಸ್‌ನಲ್ಲಿ ಇರಬೇಕು ಇನ್ನು 3 ವರ್ಷ ಸ್ಟೇಷನ್ನಿನಲ್ಲಿ ಇರಬೇಕು ಎಂದು ನಿಗದಿಗೊಳಿಸಬೇಕು. ಆಗ ಆಟೋಮ್ಯಾಟಿಕ್ ಆಗಿ ಹೋಗುತ್ತಿರುತ್ತಾರೆ. Unwanted and inefficient officers ಗಳನ್ನು ಅಲ್ಲಿ ಹಾಕಿದರೆ ತನಿಖೆ ಎಲ್ಲಿ ಚೆನ್ನಾಗಿ ಆಗುತ್ತದೆ. ಈ ರೀತಿ ತನಿಖೆ ಮಾಡಿದರೆ ತಪ್ಪಿತಸ್ಥರು ಸಿಗುವುದಿಲ್ಲ. ದಯವಿಟ್ಟು ಬಹುಮಾನವನ್ನು ಘೋಷಣೆ ಮಾಡಿ ನಿಮಗೆ ಮಾಹಿತಿ ಬರುತ್ತದೆ. ಇಲ್ಲವಾದಲ್ಲಿ ಈ ಕುರಿತು ತನಿಖೆಯನ್ನು ಮಾಡುವುದಕ್ಕೆ ಸರ್ಕಾರ ನನಗೆ ಕೊಟ್ಟರೆ, ನಾನು ಸಿದ್ಧನಿದ್ದೇನೆ ತನಿಖೆ ಮಾಡಿಕೊಡುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :** ಈ ಕುರಿತಂತೆ ನಾನು ಮಾನ್ಯ ಗೃಹ ಸಚಿವರ ಹತ್ತಿರ ಮಾತನಾಡುತ್ತೇನೆ.

**ಶ್ರೀ ಎಂ. ಸಿ. ನಾಣಯ್ಯ :** ಮಾನ್ಯ ಅಜೀಂ ಅವರು ಈ ಪ್ರಶ್ನೆಯನ್ನು ಎತ್ತಿದ್ದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಸಿ.ಐ.ಡಿ. ಮತ್ತು ಸಿ.ಓ.ಡಿ. ಎನ್ನುವುದು ಎರಡೂ ಕೂಡ ಒಂದೇ ಆಗಿದೆ ನಿಜ ಅದನ್ನು ನಾನು ಒಪ್ಪುತ್ತೇನೆ. ಈ ಸಿ.ಐ.ಡಿ. ತನಿಖೆಯಲ್ಲಿ ಎಲ್ಲವೂ ಸರಿಯಾಗಿ ನಡೆಯುತ್ತದೆ ಎಂದು ಹೇಳುವುದಕ್ಕೆ ಅವಕಾಶವಿಲ್ಲ. Shall I make one suggestion now? ತಾವು ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಮಾತನಾಡುತ್ತೇನೆಂದು

ಹೇಳುತ್ತೀದ್ದೀರಿ, common appoint one senior honest officer, under his leadership let there be a Special Investigation Team, Sir, this requires a Special Investigation Team. ಈ ಸಿ.ಐ.ಡಿ. ಬಗ್ಗೆ ಮಾನ್ಯ ಅಜೀಂ ಅವರು ಅವರ ಅನುಭವದ ಆಧಾರದ ಮೇಲೆ ಹೇಳಿದ್ದಾರೆ. ಸಿ.ಐ.ಡಿ.ಯಲ್ಲಿ ಅವರು ಕೆಲಸ ಮಾಡಿಲ್ಲ. ಆದ್ದರಿಂದ ಅವರನ್ನು ಯಾರೂ ಅಲ್ಲಿಗೆ dump ಮಾಡುವುದಕ್ಕೆ ಹೋಗಿಲ್ಲ.

**ಮಾನ್ಯ ಉಪ ಸಭಾಪತಿಯವರು** : ಮಾನ್ಯ ಅಬ್ದುಲ್ ಅಜೀಂ ಅವರು ಸೇವೆಯಲ್ಲಿ ಇದ್ದಾಗ ಬಹಳ ಇನ್‌ಫ್ಲುಯೆನ್ಸ್ ಇರುವ ವ್ಯಕ್ತಿಯಾಗಿದ್ದರು.

**ಶ್ರೀ ಎಂ. ಸಿ. ನಾಣಯ್ಯ** : ಆ ವಿಚಾರ ನನಗೆ ಗೊತ್ತು ಮೇಡಮ್. ತೆಲಗಿ ಪ್ರಕರಣ ಬಂದಾಗ Special Investigation Team ಅನ್ನು ನಾವು ಮಾಡಿದ್ದೆವು. ಶ್ರೀಕುಮಾರ್ ಎಂಬುವವರು ಅದರಲ್ಲಿ ಇದ್ದರು. ಅದೇ ತರಹ this has to be investigated by the Special Investigation Team. ಈಗಲೂ ಒಂದು ಎಸ್.ಐ.ಟಿ. (ಸ್ಪೆಶಲ್ ಇನ್‌ವೆಸ್ಟಿಗೇಶನ್ ಟೀಮ್) ಮಾಡಿ. ಅಲ್ಲಿಗೆ ಒಬ್ಬ ದಕ್ಷ ಹಿರಿಯ ಅಧಿಕಾರಿಯನ್ನು ನೇಮಕ ಮಾಡಿ. ಅವರು ಈ ಕುರಿತು ಒಂದು ತನಿಖೆಯನ್ನು ಮಾಡಲಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ, ಈ ಪ್ರಕರಣವನ್ನು ಸಿ.ಐ.ಡಿ.ಗೆ ಕೊಡಬೇಕು ಎಂದು ನಿರ್ಧಾರ ಮಾಡಿದ್ದು, ಸಿ.ಐ.ಡಿ. ತನಿಖೆ ಪ್ರಕ್ರಿಯೆಯ ಹಂತದಲ್ಲಿ ಇದೆ. ತಾವುಗಳು ಈ ಸಿ.ಐ.ಡಿ. ತನಿಖೆಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರಬಹುದು. ಆದರೆ ನಾವು ಸರ್ಕಾರವಾಗಿದ್ದು, ನಮ್ಮ ಈ ಸಿ.ಐ.ಡಿ. ವ್ಯವಸ್ಥೆಯ ಬಗ್ಗೆ ನಮಗೆ ಸಂಪೂರ್ಣವಾದ ವಿಶ್ವಾಸ ಇದೆ. ಸಿ.ಐ.ಡಿ.ಯ ಈ ತನಿಖೆಯನ್ನು ಮಾಡುವಲ್ಲಿ ಯಶಸ್ವಿಯಾಗುತ್ತೇವೆ ಎಂಬ ನಂಬಿಕೆ ನಮಗೆ ಇದೆ. ಆದರೂ ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ ಯಾವುದಾದರೂ ಹಂತದಲ್ಲಿ, ಎಲ್ಲೋ ಒಂದು ಕಡೆ ನಮಗೆ ಕೊರತೆ ಆಗುತ್ತದೆ ಎಂದು ಅನಿಸಿದರೆ ನಿಶ್ಚಿತವಾಗಿ ನಾವು ಈ

ತನಿಖೆಯನ್ನು ಪೂರ್ಣಪ್ರಮಾಣದಲ್ಲಿ ಮಾಡುವುದಕ್ಕೆ ನಮಗೆ ಎಲ್ಲಾ ರೀತಿಯ ಶಕ್ತಿಯನ್ನು ಸಹ, ಆಡಳಿತ ವ್ಯವಸ್ಥೆಯನ್ನು ಸಹ ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದಕ್ಕೆ ನಾವು ಭದ್ರವಾಗಿದ್ದೇವೆ.

ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನಬೆಟ್ಟದ ಅರಣ್ಯ ಪ್ರದೇಶದಲ್ಲಿ ಕಾಳ್ಗಿಚ್ಚಿನಿಂದಾಗಿ ನೂರಾರು ಎಕರೆ ಅರಣ್ಯ ಪ್ರದೇಶ ನಾಶವಾಗಿದ್ದು, ಇಂತಹ ಅನಾಹುತಗಳನ್ನು ತಡೆಗಟ್ಟುವ ಕುರಿತು.

**ಶ್ರೀ ವೀರಣ್ಣ ಮತ್ತಿಕಟ್ಟಿ :** ಮಾನ್ಯ ಸಭಾಪತಿಯವರೆ, ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 26–3–2012ರ ದಿನಪತ್ರಿಕೆಗಳಲ್ಲಿ ಪ್ರಕಟವಾದಂತೆ ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನಬೆಟ್ಟದ ಅರಣ್ಯ ಪ್ರದೇಶ ಮತ್ತು ಹಾಸನ ಜಿಲ್ಲೆಯ ಸಕಲೇಶಪುರದ ಅರಣ್ಯ ಪ್ರದೇಶ ಹಾಗೂ ಉಪ್ಪಿನಂಗಡಿಯ ಶೀರಾಡಿ–ಶಿಶಿಲ ಮೀಸಲು ರಕ್ಷಿತಾರಣ್ಯದ ಗುಂಡ್ಯ ಭಾಗದಲ್ಲಿ ಕಾಳ್ಗಿಚ್ಚು ಕಾಣಿಸಿಕೊಂಡಿದ್ದು, ಇದರಿಂದಾಗಿ ನೂರಾರು ಎಕರೆ ಅರಣ್ಯ ಪ್ರದೇಶ, ಅಪರೂಪದ ಔಷಧೀಯ ಸಸ್ಯಗಳು, ಬೆಲೆಬಾಳುವ ಮರಗಳು, ಸರಿಸೃಪಗಳು, ಅನೇಕ ವನ್ಯಜೀವಿಗಳು ಹಾನಿಗೊಳಗಾಗಿರುತ್ತವೆ. ಬಿಳಿಗಿರಿ ರಂಗನಾಥಸ್ವಾಮಿ ದೇವಸ್ಥಾನದ ವನ್ಯಜೀವಿ ಹುಲಿ ಅರಣ್ಯಧಾಮ (ಬಿಆರ್‌ಟಿ) ಸನ್ 2010ರಲ್ಲಿಯೂ ಸಹ ಇದೇ ರೀತಿ ಅನಾಹುತ ಸಂಭವಿಸಿತ್ತು.

ಈ ದಿಸೆಯಲ್ಲಿ ಸರ್ಕಾರ ಇಂತಹ ಅನಾಹುತಗಳು ಸಂಭವಿಸದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂಥದ್ದು ಬಹಳ ಅವಶ್ಯಕವಿದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :** ಮಾನ್ಯ ಸಭಾಪತಿಯವರೆ, ಶೂನ್ಯವೇಳೆಯಲ್ಲಿ ನಮ್ಮ ಮಾಜಿ ಸಭಾಪತಿಯವರಾದ, ಹಿರಿಯರಾದ ಶ್ರೀ ವೀರಣ್ಣ ಮತ್ತಿಕಟ್ಟಿಯವರು ಚಾಮರಾಜ ನಗರ ಜಿಲ್ಲೆಯಲ್ಲಿ ಹಾಗೂ ಬೇರೆ ಬೇರೆ ಪ್ರದೇಶದಲ್ಲಿ ಅರಣ್ಯ ಪ್ರದೇಶದಲ್ಲಿ ಕಾಳ್ಗಿಚ್ಚು ಆಗುತ್ತಿರುವುದನ್ನು ಉಲ್ಲೇಖಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಈ ರೀತಿ ಪ್ರಕರಣಗಳು ನಡೆಯುತ್ತಿರುವ ಬಗ್ಗೆ, ಯಾವ ಕಾರಣಕ್ಕಾಗಿ ಆ

ರೀತಿ ಆಗಿದೆ ಇತ್ಯಾದಿಗಳ ಬಗ್ಗೆ ಚರ್ಚಿಸಲು ಹಾಗೂ ಏನೇನು ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಚರ್ಚಿಸಲು ಅರಣ್ಯ ಸಚಿವರು ಈ ಸಂಜೆ ಒಂದು ಸಭೆಯನ್ನು ನಡೆಸುತ್ತಿದ್ದಾರೆ. ನಾಳೆ ಅವರಿಂದ ಇಲ್ಲಿ ಸದನದಲ್ಲಿ ಉತ್ತರವನ್ನು ಕೊಡಿಸುತ್ತೇನೆ.

## 7. ಗಮನ ಸೆಳೆಯುವ ಸೂಚನೆ

ಸರ್ಕಾರವು ಪ್ರತಿ ಕ್ವಿಂಟಾಲ್ ತೊಗರಿಬೇಳೆಗೆ ನಾಲ್ಕು ಸಾವಿರ ರೂಪಾಯಿಗಳ ಬೆಂಬಲ ಬೆಲೆಯನ್ನು ನಿಗದಿಪಡಿಸಿ, ಹೈದ್ರಾಬಾದ್ ಕರ್ನಾಟಕ ತೊಗರಿ ಮಂಡಳಿ ವತಿಯಿಂದ ಖರೀದಿಸುತ್ತಿದ್ದ ಪ್ರಕ್ರಿಯೆನ್ನು ಹಣದ ಮುಗ್ಗಟ್ಟಿನಿಂದ ಏಕಾಏಕಿ ನಿಲ್ಲಿಸಿರುವುದರಿಂದ ರೈತರಿಗೆ ಉಂಟಾಗಿರುವ ತೊಂದರೆ ಬಗ್ಗೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು) :** ಮಾನ್ಯ ಸಭಾಪತಿಯವರೆ, ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿ, ರೈತರ ಅಭಿವೃದ್ಧಿಗಾಗಿ ಕೆಲಸ ಮಾಡುತ್ತೇವೆಂದು ಹೇಳಿ, ರೈತರಿಗೆ ಅನುಕೂಲವಾಗುವ ರೀತಿ, ಹೊಸ ರೀತಿಯ ಒಂದು ಕೃಷಿ ಬಜೆಟ್ ಅನ್ನು ಮಂಡನೆ ಮಾಡಿದ ಸರ್ಕಾರ ಗುಲ್ಬರ್ಗಾ, ಬೀದರ್, ಯಾದಗಿರಿ, ಬಿಜಾಪುರ, ರಾಯಚೂರು, ಬಾಗಲಕೋಟೆ ಜಿಲ್ಲೆಗಳಲ್ಲಿ ಏನು ತೊಗರಿ ಬೆಳೆಯುವ ರೈತರಿದ್ದಾರೆ ಅವರ ಬಗ್ಗೆ ಇವರಿಗೆ ಎಷ್ಟರಮಟ್ಟಿಗೆ ಕಾಳಜಿ ಇದೆ ಎನ್ನುವುದನ್ನು ನಾವು ಏನು ಇಲ್ಲಿ ಕೃಷಿ ಸಚಿವರು ತೆಗೆದುಕೊಂಡ ಒಂದು ತೊಗರಿ ಬೆಳೆ ಕೊಳ್ಳುವುದು ಇರಬಹುದು. ಅದಕ್ಕೆ ಬೆಂಬಲ ಬೆಲೆ ನಿಗದಿ ಮಾಡುವುದರ ಬಗ್ಗೆ ಅವರು ಏನು ಒಂದು ರೀತಿ ಗಮನಹರಿಸಿದ್ದಾರೆ ಎನ್ನುವುದನ್ನು ನಾವು ವಿಚಾರ ಮಾಡಿದಾಗ ಏನೇನು ಇಲ್ಲ. ನಮಗೆ ನಿಜವಾಗಲೂ ಈ ಸಂದರ್ಭದಲ್ಲಿ ನೋವಾಗುತ್ತದೆ. ಕಳೆದ ಅಧಿವೇಶನದಲ್ಲಿ.

**ಶ್ರೀ ವಿ. ಆರ್. ಸುದರ್ಶನ್ :** ಮಾನ್ಯ ಸಭಾಪತಿಯವರೆ, ಕೃಷಿ ಸಚಿವರು ಎಲ್ಲಿದ್ದಾರೆ? ಯಾರು ಉತ್ತರವನ್ನು ಕೊಡುತ್ತಾರೆ.

**ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :** ಮಾನ್ಯ ಸಭಾಪತಿಯವರೆ, ನಾನು ಅವರ ಪರವಾಗಿ ಉತ್ತರವನ್ನು ನೀಡುತ್ತೇನೆ.

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೆ, ಎಲ್ಲರೂ ಇನ್‌ಚಾರ್ಜ ಆದರೆ ಸರ್ಕಾರ ಯಾವಾಗ ಇರುತ್ತದೋ, ಹೋಗುತ್ತದೋ ಎಂದು ನಮಗೆ ಅರ್ಥವೇ ಆಗುತ್ತಿಲ್ಲವಲ್ಲ.

**ಶ್ರೀ ಸಿ. ಎಂ. ಉದಾಸಿ :** ಮಾನ್ಯ ಸಭಾಪತಿಯವರೆ, ಅವರಿಗೆ ಆರೋಗ್ಯ ಸರಿ ಇಲ್ಲ ಆದಕಾರಣ ನಾನು ಉತ್ತರವನ್ನು ನೀಡುತ್ತೇನೆ.

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೆ, ಇದನ್ನೆಲ್ಲಾ ನೋಡಿದರೆ ನನಗೆ ನನ್ನ ಒಂದು ಪದ್ಯ ನೆನಪಿಗೆ ಬರುತ್ತದೆ. ನಾನು ಒಂದು ಪದ್ಯವನ್ನು ಬರೆದಿದ್ದೆ. ಅದೇನೆಂದರೆ ಎಲ್ಲಾ ಮಾಯವೋ, ಬಿ.ಜೆ.ಪಿ.ಯಲ್ಲಿ ಎಲ್ಲಾ ಮಾಯವೋ ಎಂದು, ಮಂತ್ರಿಗಳು ಕೂಡ ಮಾಯ ಆಗಿದ್ದಾರಲ್ಲ, ಏನು ಕಥೆ ಇದು? ಎಲ್ಲಿದ್ದಾರೆ? ಅಲ್ಲಿ ದೆಹಲಿಯಲ್ಲಿ ಒಂದು ಸರ್ಕಾರ ಮಾಡುವುದಕ್ಕೆ ಯೋಚನೆ ಇದೆಯೇ? ಅಥವಾ ಇಲ್ಲಿರುವ ಸರ್ಕಾರ ಮಾಡುವುದಕ್ಕೆ ವಿಚಾರ ಇದೆಯೇ?

**ಉಪ ಸಭಾಪತಿಯವರು :** ಮಾನ್ಯ ವಿರೋಧ ಪಕ್ಷದ ನಾಯಕರೆ ಒಂದು ನಿಮಿಷ ಕುಳಿತುಕೊಳ್ಳಿ. ನಮ್ಮ ಕೃಷಿ ಸಚಿವರು ನನಗೆ ಒಂದು ಪತ್ರವನ್ನು ಬರೆದಿದ್ದಾರೆ. ಅವರು ಅನಾರೋಗ್ಯದ ಕಾರಣದಿಂದ ಚಿಕಿತ್ಸೆ ಪಡೆಯುತ್ತಿದ್ದಾರೆ. ಅದಕ್ಕಾಗಿ ಮಾನ್ಯ ಉದಾಸಿಯವರನ್ನು ಅವರ ಪರವಾಗಿ ಉತ್ತರವನ್ನು ನೀಡಲು ಕೇಳಿಕೊಂಡಿದ್ದಾರೆ.

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೆ, ನಾವು ಮೊನ್ನೆ ಅವರನ್ನು ಮಾಜಿ ಮುಖ್ಯಮಂತ್ರಿಯವರೊಂದಿಗೆ ದೆಹಲಿಯಲ್ಲಿ ಓಡಾಟವನ್ನು ಮಾಡುತ್ತಿರುವುದನ್ನು ನೋಡಿದ್ದೇವೆ. ನೀವು ಈಗ ಆರೋಗ್ಯ ಸರಿ ಇಲ್ಲ ಎಂದು ಪತ್ರ ಕಳುಹಿಸಿದ್ದಾರೆಂದು ಹೇಳುತ್ತಿದ್ದೀರಿ. ಇದು ಅವರಿಗೆ ಇಲ್ಲಿ ಬಂದು ಸದನದಲ್ಲಿ ಭಾಗವಹಿಸುವುದಕ್ಕೆ ಇಚ್ಛೆ ಇಲ್ಲ ಎಂದು ತೋರಿಸುತ್ತದೆ. ಎಷ್ಟೋ ಜನ ಸಚಿವರು ಇವೊತ್ತು ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ

ಕಾರ್ಯಕಲಾಪಗಳಲ್ಲಿ ಭಾಗವಹಿಸಲು ತಯಾರಿಲ್ಲ. ಅದಕ್ಕೆ ಹಠ ಹಿಡಿದುಕೊಂಡು ಗೋಲ್ಡನ್ ರೆಸಾರ್ಟನಲ್ಲಿ ಕುಳಿತಿದ್ದಾರೆ. ಹೋಗಲಿ ರೆಸಾರ್ಟದಿಂದ ಬಂದಮೇಲಾದರೂ ಮಂತ್ರಿಗಳು ಸರ್ಕಾರವನ್ನು ಚೆನ್ನಾಗಿ ನಡೆಸುತ್ತಾರೆಂದರೆ, ಮಂತ್ರಿಗಳು ಮಾಯ ಆದರೆ ಏನು ಮಾಡುವುದು? ಮಾನ್ಯ ಅಲ್ಲಮಪ್ರಭು ಪಾಟೀಲ್‌ರವರು ಪಾಪ ಕಳೆದ ಅಧಿವೇಶನದಲ್ಲಿ ಕಣ್ಣೀರಿಟ್ಟಿದ್ದಾರೆ.

**ಉಪ ಸಭಾಪತಿಯವರು :** ಇವೊತ್ತು ಅವರಿಗೆ ಆರೋಗ್ಯ ಸರಿ ಇಲ್ಲ ಎನ್ನುವ ಕಾರಣಕ್ಕಾಗಿ ಬಂದಿಲ್ಲ ಅಷ್ಟೆ.

**ಶ್ರೀ ಅಲ್ಲಮಪ್ರಭು ಪಾಟೀಲ್ :** ಮಾನ್ಯ ಸಭಾಪತಿಯವರೆ, ಮಾನ್ಯ ರೇಣುಕಾಚಾರ್ಯ ಮಂತ್ರಿಗಳು ಜೇವರ್ಗಿಯವಲ್ಲಿದ್ದಾರೆ. ಅಲ್ಲಿ 101 ಸಾಮೂಹಿಕ ವಿವಾಹ ನಡೆಯುತ್ತಿದೆ. ಅದರಲ್ಲಿ 7 ಜನ ಶಿಶುಗಳ ಅಂದರೆ ಬಾಲ್ಯ ವಿವಾಹ ನಡೆಯುತ್ತಿದೆ. ಅದೆಲ್ಲಾ ಟಿ.ವಿ.9ರಲ್ಲಿ ಬರುತ್ತಿದೆ. ಬೇಕಾದರೆ ತಾವು ಅದನ್ನು ನೋಡಬಹುದು.

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು 101 ಸಾಮೂಹಿಕ ವಿವಾಹ ನಡೆಯುತ್ತಿದೆ. ಅದರಲ್ಲಿ 7 ಜನ ಶಿಶುಗಳ ಅಂದರೆ ಬಾಲ್ಯ ವಿವಾಹ ನಡೆಯುತ್ತಿದೆ. ಅದೆಲ್ಲಾ ಟಿ.ವಿ.9ರಲ್ಲಿ ಬರುತ್ತಿದೆ. ಬೇಕಾದರೆ ತಾವು ಅದನ್ನು ನೋಡಬಹುದು ಎಂದು ಹೇಳುತ್ತಿದ್ದಾರೆ. ಆದರೆ ತಾವು ಆರೋಗ್ಯ ಸರಿ ಇಲ್ಲ ಎಂದು ಪತ್ರವನ್ನು ಬರೆದಿದ್ದಾರೆಂದು ಹೇಳುತ್ತಿದ್ದೀರಿ. ಹಾಗಾದರೆ ಅವರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಶಾಸನ ಸಭೆ ನಡೆಯುವಾಗ ಇವರು ಖಾಸಗಿ ಕಾರ್ಯಕ್ರಮಕ್ಕೆ ಹೋಗಬಹುದೇ?

**ಶ್ರೀ ವಿ. ಆರ್. ಸುದರ್ಶನ್ :** ಮಾನ್ಯ ಸಭಾಪತಿಯವರೆ, ತಾವು ಕೃಷಿ ಸಚಿವರು ಆರೋಗ್ಯ ಸರಿ ಇಲ್ಲ ಎಂದು ಪತ್ರವನ್ನು ಬರೆದಿದ್ದಾರೆಂದು ಹೇಳೀದ್ದೀರಿ. ಶ್ರೀ ರೇಣುಕಾಚಾರ್ಯರವರ ಅಧಿಕಾರಿಗಳು ಏನೋ ಒಂದು ಔಷಧಿಯನ್ನು ಕಳುಹಿಸಿದರೆ ಚೆನ್ನಾಗಿ ಆಗುತ್ತಾರೆನ್ನುವ ಒಂದು ವ್ಯವಸ್ಥೆ ಕೂಡ

ಆಗುತ್ತದೆ ಎಂದು ಇತ್ತಲ್ಲ. ಅಂದ ಮೇಲೂ ಅನಾರೋಗ್ಯಕ್ಕೆ ಒಳಗಾಗಿದ್ದಾರೆಯೇ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ಮಾನ್ಯ ಸಭಾಪತಿಯವರೆ, ಸರ್ಕಾರದಲ್ಲಿ ನಾವೆಲ್ಲಾ ಸಚಿವರು ಕೂಡ ಇಲ್ಲಿದ್ದೇವೆ. ನಾವು ನಾಲ್ಕು ಜನ ಇಲ್ಲಿ ಗಟ್ಟಿಯಾಗಿ ಕುಳಿತಿದ್ದೇವೆ. ಉಳಿದವರು ಅಲ್ಲಿ ಕೆಳಮನೆಯಲ್ಲಿದ್ದಾರೆ. ವಿಧಾನ ಸಭೆ ನಡೆಯುತ್ತಿದೆ.

**ಶ್ರೀಮತಿ ಮೋಟಮ್ಮ** : ಮಾನ್ಯ ಸಭಾಪತಿಯವರೆ, ಹತ್ತು ಜನ ಸಚಿವರು ಇಲ್ಲಿ ಉಳಿದವರು ಅಲ್ಲಿ ಎಂದು ನಿರ್ಣಯ ಆಗಿದೆ.

**ಶ್ರೀ ಅಲ್ಲಮಪ್ರಭು ಪಾಟೀಲ್** : ಮಾನ್ಯ ಸಭಾಪತಿಯವರೆ, ನಾವು ಮತ್ತೆ ಕೆಲವು ಪ್ರಶ್ನೆಗಳನ್ನು ಕೇಳಿದಾಗ ಮಾನ್ಯ ಕೃಷಿ ಸಚಿವರನ್ನು ಕೇಳಿ ನಾಳೆ ಮತ್ತೆ ಉತ್ತರ ಕೊಡುತ್ತೇನೆಂದು ಈ ಸಚಿವರು ಉತ್ತರ ಹೇಳಿದರೆ ಉತ್ತರ ಕೊಟ್ಟ ಹಾಗೆ ಆಗುತ್ತದೆಯೇ?

**ಉಪ ಸಭಾಪತಿಯವರು** : ಸನ್ಮಾನ್ಯ ಸಿ. ಎಂ. ಉದಾಸಿಯವರು ಉತ್ತರವನ್ನು ಕೊಡುತ್ತಾರೆ.

**ಶ್ರೀ ಬಸವರಾಜ ಹೊರಟ್ಟಿ** : ಮಾನ್ಯ ಸಭಾಪತಿಯವರೆ, ಮಾನ್ಯ ಕಾಗೇರಿಯವರು ಇನ್‌ಚಾರ್ಜ ಸಭಾನಾಯಕರು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ಮಾನ್ಯ ಸಭಾಪತಿಯವರೆ, ಸರ್ಕಾರದಲ್ಲಿದ್ದವರು ನಾವೆಲ್ಲರೂ ಇಲ್ಲಿದ್ದೇವೆ. ಕೃಷಿ ಸಚಿವರು ಅನಾರೋಗ್ಯದ ಕಾರಣ ಪತ್ರವನ್ನು ಕಳುಹಿಸಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ** : ಮಾನ್ಯ ಸಭಾಪತಿಯವರೆ, ಎಲ್ಲರೂ ಎಂದು ಹೇಳುವುದು ಬೇಡ. ನಾಲ್ಕು ಜನ ಎಂದು ಮಾತ್ರ ಹೇಳಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟ ಅಧಿಕಾರಿಗಳೂ ಸಹ ಇದ್ದಾರೆ. ನಿಮಗೆ ಏನೇ ಮಾಹಿತಿ ಬೇಕಾದರೂ ತಿಳಿದುಕೊಂಡು ಉತ್ತರವನ್ನು ಕೊಡುತ್ತೇವೆ.

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೆ, ನಾವೇ ಉತ್ತರ ಕೊಡುತ್ತೇವೆ. ನಾವೇ ಉತ್ತರ ಕೊಡುತ್ತೇವೆ ಎಂದು ಹೇಳುತ್ತಿರುವುದರಿಂದಲೇ 16 ಖಾತೆಗಳನ್ನು ಮಾನ್ಯ ಮುಖ್ಯಮಂತ್ರಿಗಳು ಒಬ್ಬರೇ ಇಟ್ಟುಕೊಂಡಿದ್ದಾರೆ ಅವರು ಸಂಪುಟವನ್ನು ವಿಸ್ತರಣೆ ಮಾಡಿ ಖಾತೆಗಳನ್ನು ಹಂಚಿಕೆ ಮಾಡಲಿಲ್ಲ. ಹೀಗೆ ಎಲ್ಲರೂ ಎಲ್ಲಾ ಇಲಾಖೆಯ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳುವ ಹಾಗೆ ಆದರೆ ಸಂಪುಟ ಏಕೆ ಬೇಕು? ಈಗ ಸಚಿವರು ನಿಮಗೆ, ಆರೋಗ್ಯ ಸರಿ ಇಲ್ಲ ಎಂದು ಪತ್ರವನ್ನು ಬರೆದಿದ್ದಾರೆ. ಅಲ್ಲಿ ನೋಡಿದರೆ ಅವರು ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ ಇದು ಸರಿಯೇ?

**ಉಪ ಸಭಾಪತಿಯವರು :** ಮಾನ್ಯ ವಿರೋಧ ಪಕ್ಷದ ನಾಯಕರೆ, ಮಾನ್ಯ ರೇಣುಕಾಚಾರ್ಯರ ಖಾತೆ ಯಾವುದು? ಇಲ್ಲಿ ಕೃಷಿ ಖಾತೆಗೆ ಸಂಬಂಧಪಟ್ಟಂಥ ವಿಷಯ ಬಂದಿದೆ. ಕೃಷಿ ಸಚಿವರು ಪತ್ರವನ್ನು ಬರೆದು ಕೇಳಿಕೊಂಡಿದ್ದಾರೆ. ತಾವು ವಿರೋಧ ಪಕ್ಷದವರು ದಯಮಾಡಿ ಸಹಕರಿಸಿ. ಸರಿಯಾದ ಉತ್ತರವನ್ನು ಸಚಿವರಾದ ಶ್ರೀ. ಸಿ. ಎಂ. ಉದಾಸಿಯವರು ಕೊಡುತ್ತಾರೆ. ಸರಿ ಬರದೆ ಇದ್ದರೆ ಮತ್ತೆ ಸಚಿವರು ಬಂದಾಗ ತಾವು ಉತ್ತರವನ್ನು ಪಡೆಯಬಹುದು.

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೆ, ಸರ್ಕಾರದಿಂದ ಕಾರ್ಯಕಲಾಪಗಳಿಗೆ ಇಂತಹ ದುಸ್ಥಿತಿ ಬಂದಿದೆಯಲ್ಲ. ಅದಕ್ಕಾಗಿ ನನಗೆ ಏನು ಹೇಳಬೇಕೆಂದು ಗೊತ್ತಾಗುತ್ತಿಲ್ಲ. ನೀವುಗಳು ಈಗ ನೆಲಕ್ಕೆ ಬಿದ್ದರೆ ಮೀಸೆ ಮಣ್ಣಾಗಿಲ್ಲ ಎಂದು ಹೇಳುವ ಜನ ಆಗಿದ್ಧೀರಿ.

**ಶ್ರೀ ಬಸವರಾಜ ಹೊರಟ್ಟಿ :** ಮಾನ್ಯ ಸಭಾಪತಿಯವರೆ, ಅವರಿಗೆ ಮೀಸೆಯೇ ಇಲ್ಲ.

**ಶ್ರೀ ಡಿ. ಎಸ್. ವೀರಯ್ಯ :** ಮಾನ್ಯ ಸಭಾಪತಿಯವರೆ, ಎಲ್ಲಾ ಕಡೆ ಈಗ ವಿಟ್ರಿಫೈಡ್ ಟೈಲ್ಸ್ ಹಾಕಿರುತ್ತಾರೆ. ಆದ್ದರಿಂದ ಮೀಸೆ ಮಣ್ಣಾಗುವುದಿಲ್ಲ.

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೆ, ಮಾನ್ಯ ವೀರಯ್ಯನವರು ಸುಮ್ಮನೆ ಏಕೆ ಡಿಫೆಂಡ್ ಮಾಡಿಕೊಳ್ಳುತ್ತಿದ್ಧಾರೆಂದು

ಗೊತ್ತಾಗುತ್ತಿಲ್ಲ. ಇದೆಲ್ಲಾ ಜಗತ್ತಿಗೆ ಗೊತ್ತಾಗಿದೆ. ನೀವು ಏಕೆ ಡಿಫೆಂಡ್ ಮಾಡಿಕೊಳ್ಳುತ್ತೀರಿ.

**ಶ್ರೀ ಬಸವರಾಜ ಹೊರಟ್ಟಿ** : ಮಾನ್ಯ ಸಭಾಪತಿಯವರೆ, ಶ್ರೀ ಯಡಿಯೂರಪ್ಪನವರ ಗ್ಯಾಂಗ್‌ನವರು ಕೃಷಿ ಸಚಿವರಿದ್ದಾರೆ. ದೇವಸ್ಥಾನದ ಮುಂದೆ ಬಸವಣ್ಣ ಹೇಗಿರುತ್ತಾನೆ. ಹಾಗೆ ಅವರು ಕೂಡ ಇದ್ದಾರೆ. ಅದರ ಸಲುವಾಗಿ ಹೋಗಿರಬಹುದು. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರೇ ಏಕೆ ತಲೆ ಕೆಡಿಸಿಕೊಳ್ಳುತ್ತೀರಿ?

**ಶ್ರೀಮತಿ ಮೋಟಮ್ಮ** : ಮಾನ್ಯ ಸಭಾಪತಿಯವರೆ, ಅದು ಏನೇ ಇರಲಿ, ಇದರ ಬಗ್ಗೆ ತಮ್ಮಿಂದ ಒಂದು ರೂಲಿಂಗ್ ಆಗಬೇಕು. ಎಲ್ಲರಿಗೂ ಒಂದು ನಿಯಮ ಇದ್ದೇ ಇರುತ್ತದೆ. ನಿಯಮದಂತೆ ಅವರು ನಡೆದುಕೊಳ್ಳಬೇಕು. ಶಾಸನ ಸಭೆ ನಡೆಯುವಂಥ ಸಂದರ್ಭದಲ್ಲಿ ತುಂಬಾ ಸೀರಿಯಸ್ ಆದಾಗ ಮಾತ್ರ ಅವರು ರಜೆಯನ್ನು ಕೇಳಬಹುದು. ಅವರು ಅಧಿವೇಶನ ಸಮಯದಲ್ಲಿ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಬಾರದು. ಅವರು ಶನಿವಾರ, ಭಾನುವಾರ ಭಾಗವಹಿಸಬಹುದು. ಆದ್ದರಿಂದ ಕಾರ್ಯಕಲಾಪದ ದಿನಗಳಲ್ಲಿ ಸಚಿವರು ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಬಾರದು. ಎಲ್ಲಾ ಸಚಿವರು ಸದನದಲ್ಲಿರಬೇಕೆಂದು ತಾವು ಒಂದು ರೂಲಿಂಗ್ ಅನ್ನು ನೀಡಬೇಕು. ದಯಮಾಡಿ ಆ ರೂಲಿಂಗ್ ಅನ್ನು ತಾವು ಕೊಡಿ.

**(5.30 ಗಂಟೆ)**

**ಶ್ರೀ ಎಂ. ಸಿ. ನಾಣಯ್ಯ (ವಿಧಾನ ಸಭಾ ಕ್ಷೇತ್ರ)** : ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರವನ್ನು ಎತ್ತಿದ್ದಾರೆ. ನೇರವಾಗಿ ನಾನು ಹೇಳುವುದೇನೆಂದರೆ ಆಡಳಿತ ಪಕ್ಷದಲ್ಲಿರುವಂತಹ ಸದಸ್ಯರುಗಳು ಅದರಲ್ಲಿಯೂ ಕೂಡ ಬಹಳ ವಿಶೇಷವಾಗಿ ಅವರಿಗೆ ಅವರ ನಾಯಕರ ವಿರುದ್ಧ, ಅವರ ಸರ್ಕಾರದ ವಿರುದ್ಧ ಮಾತನಾಡುವುದಕ್ಕೆ ಅಧಿಕಾರ ಇರುವಂಥದ್ದು ಅದನ್ನು ಚಲಾವಣೆ

ಮಾಡಲಿ. ಆದರೆ ಸಚಿವ ಸಂಪುಟದಲ್ಲಿರತಕ್ಕಂತಹ ಮಂತ್ರಿಗಳು ನಾಯಕರಾಗಿರತಕ್ಕಂತಹ ಮಾನ್ಯ ಮುಖ್ಯಮಂತ್ರಿಗಳ ವಿರುದ್ಧ ಮತ್ತು ಅವರ ನಾಯಕತ್ವದ ವಿರುದ್ಧ ಮತ್ತು ನಾಯಕತ್ವದ ಬದಲಾವಣೆಗೆ ಅವರು ಹೇಳುವಂಥಹ ಅಧಿಕಾರ ಅವರಿಗೆ ಸಂಪೂರ್ಣವಾಗಿದೆ. ಆದರೆ ಆ ಅಧಿಕಾರವನ್ನು ಯಾವಾಗ ಚಲಾವಣೆ ಮಾಡಬೇಕೆಂದರೆ, ಆ ಸಚಿವ ಸಂಪುಟ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟು ಹೊರ ಬರಲಿ. ಬಂದಾದ ಮೇಲೆ ಅವರು ಆ ಕೆಲಸವನ್ನು ಮಾಡಬೇಕು. ಅಲ್ಲಿಯವರೆಗೆ ನಾನು ಹೇಳುತ್ತೇನೆ. ಅವರಿಗೆ ಆ ಅಧಿಕಾರ ಇಲ್ಲ. ಇದು ರಾಜ್ಯಾಂಗ ಬದ್ಧವಾಗಿ ಅವರಿಗೆ ಇರತಕ್ಕಂತಹ ಅಧಿಕಾರವಾಗಿದೆ. ಶ್ರೀ ಡಿ.ವಿ. ಸದಾನಂದಗೌಡರು ಈಗಾಗಲೇ ಅನುಭವಿಸುತ್ತಿರುವಂತಹ ಕಷ್ಟ ನಮಗೆ ಗೊತ್ತಿದೆ. ಮತ್ತೆ ಈಗ ಸಚಿವ ಸಂಪುಟವನ್ನು ವಿಸ್ತರಣೆ ಮಾಡಿ ಎಂದು ಹೇಳಿ ಅವರ ತಲೆಗೆ ಇನ್ನೊಂದು ಕಲ್ಲನ್ನು ಹಾಕುತ್ತೀರಿ. ಈಗ ಅವರ ಕೈಯಲ್ಲಿ 16 ಖಾತೆಗಳಿವೆ. ಇನ್ನು ಬೇಕಾದರೆ 24 ಇಲ್ಲದೇ ಇದ್ದರೆ 34 ಖಾತೆಯನ್ನು ಅವರೇ ಒಪ್ಪಿಕೊಂಡು ಅವರ ಸಮಯವನ್ನು, ಅವರ ಅವಧಿಯನ್ನು ಪೂರೈಸುವುದಕ್ಕೆ ಅವಕಾಶವನ್ನು ಮಾಡಿಕೊಡೋಣ. ಇಲ್ಲದಿದ್ದರೆ ಇದು ಯಾವ ಹಿಂಸೆ? ಇದನ್ನು ಸರ್ಕಾರ ಎಂದು ಯಾರೂ ಹೇಳುವುದಕ್ಕಾಗುವುದಿಲ್ಲ. ಈಗ ಶ್ರೀ ಉಮೇಶ್ ವಿ. ಕತ್ತಿಯವರು ಅವರ paternity ಯಾವ ರೀತಿಯಾಗಿ ಉಂಟು ಎನ್ನುವುದನ್ನು ನೋಡಿ. ಅವರ paternity ಯಾವ ರೀತಿಯಾಗಿದೆ ಎಂದರೆ, ಆ ಸಾಮೀಪ್ಯ, ಆ ಸಂಬಂಧ, ಶ್ರೀ ಉಮೇಶ ಕತ್ತಿಯವರು ಅವರ ಖಾತೆಯ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಶ್ರೀ ಸಿ.ಎಂ. ಉದಾಸಿಯವರಿಗೆ ಕೊಡುತ್ತಾರೆ. ಅದನ್ನು ಅವರು ಬೇರೆಯವರಿಗೆ ಕೊಡುವುದಿಲ್ಲ. ಇದು ಅವರ paternity ಅದನ್ನು ಸಭಾ ನಾಯಕರಿಗೆ ಕೊಡುವುದಿಲ್ಲ. ಅವರಿಗೇನೇ ಕೊಡಬೇಕು. ಅದೇ sympathizer ಎಂದರೆ paternity ಗುಂಪುಗಾರಿಕೆ ಯಲ್ಲಿಯೂ ಕೂಡ ನೋಡಿ ಯಾವ ರೀತಿಯಾಗಿ ಮೆರೆಯುತ್ತಾರೆಂದು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :** ಮಾನ್ಯ ಸಭಾಪತಿಯವರೆ, ಈಗ ಅನಾಗತ್ಯವಾಗಿ ವ್ಯಾಖ್ಯಾಯನ

ಬೇರೆ ಕಡೆಗೆ ಎಲ್ಲೆಲ್ಲಿಗೋ ಹೋಗುತ್ತಿದೆ. ಈಗ ನಾವು ಸರ್ಕಾರದಲ್ಲಿ ನಮ್ಮ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಚಿವ ಸಂಪುಟದ ಎಲ್ಲಾ ಸದಸ್ಯರುಗಳು ಸಹಾ ಒಗ್ಗಟ್ಟಾಗಿ ಒಂದಾಗಿ, ರಾಜ್ಯದ ಅಭಿವೃದ್ಧಿಯ ಬಗ್ಗೆ ನಮ್ಮೆಲ್ಲಾ ಜವಾಬ್ದಾರಿಗಳನ್ನು ತೆಗೆದುಕೊಂಡಿದ್ದೇವೆ.

**ಶ್ರೀ ಬಸವರಾಜ ಹೊರಟ್ಟಿ :** ಮಾನ್ಯ ಸಭಾಪತಿಯವರೆ, ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರೆ ನೀವು ಮತ್ತು ಶ್ರೀ ರಾಮದಾಸ್‌ರವರು ಒಂದು ಪಾರ್ಟಿ, ಶ್ರೀ ಸಿ.ಎಂ. ಉದಾಸಿಯವರು ಮತ್ತು ಶ್ರೀ ಉಮೇಶ್ ವಿ. ಕತ್ತಿಯವರು ಒಂದು ಪಾರ್ಟಿ. ನೋಡಿ ಶ್ರೀ ಆರ್. ಅಶೋಕ್‌ರವರು ಎರಡೂ ಪಾರ್ಟಿಯಲ್ಲಿರುತ್ತಾರೆ. ಸುಮ್ಮನೆ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೋಗಬೇಡಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :** ಮಾನ್ಯ ಸಭಾಪತಿಯವರೆ, ನಾವೆಲ್ಲರೂ ಒಂದೇ ಪಾರ್ಟಿಯವರು.

**ಶ್ರೀ ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು) :** ಮಾನ್ಯ ಸಭಾಪತಿಯವರೆ, ಆರ್. ಅಶೋಕ್‌ರವರು, ಶ್ರೀ ರಾಮದಾಸ್‌ರವರು, ಶ್ರೀ ಸಿ. ಎಂ. ಉದಾಸಿಯವರು, ಶ್ರೀ ಉಮೇಶ್ ವಿ. ಕತ್ತಿಯವರು ನಾವೆಲ್ಲರೂ ಒಂದೇ ಪಾರ್ಟಿಯವರು, ನಮ್ಮಗಳ ಮಧ್ಯೆದಲ್ಲಿ ಭಿನ್ನಾಭಿಪ್ರಾಯವನ್ನು ತೆಗೆದುಕೊಂಡು ಬರಬೇಡಿ, ನಾವೆಲ್ಲರೂ ಒಂದಾಗಿ ಚುನಾವಣೆಯಲ್ಲಿ ಗೆದ್ದು ಬಂದಿದ್ದೇವೆ ಮತ್ತು ಮುಂದೆಯೂ ಬರುತ್ತೇವೆ.

**ಶ್ರೀ ವೀರಣ್ಣ ಮತ್ತಿಕಟ್ಟಿ :** ಮಾನ್ಯ ಸಭಾಪತಿಯವರೆ, ನಾವುಗಳು ಯಾರೂ ನಿಮ್ಮಗಳ ಮಧ್ಯೆದಲ್ಲಿ ಭಿನ್ನಾಭಿಪ್ರಾಯಗಳನ್ನು ತೆಗೆದುಕೊಂಡು ಬರುವುದಿಲ್ಲ. ಭಿನ್ನಾಭಿಪ್ರಾಯಗಳನ್ನು ನೀವು ನೀವೇ ತಂದು ಕೊಳ್ಳುತ್ತೀರಿ. ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರೆ ನೀವು ಆ ಮಾತನ್ನು ಹೇಳಬಾರದು. ನೀವು ಸ್ವಲ್ಪ ನಿಮ್ಮ ಎದೆಯನ್ನು ಮುಟ್ಟಿಕೊಂಡು ಹೇಳಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :** ಮಾನ್ಯ ಸಭಾಪತಿಯವರೆ, ಎದೆಯ ಮೇಲೆ ಕೈ ಇಟ್ಟುಕೊಂಡೇ ಹೇಳುತ್ತಿದ್ಧೇನೆ. ಇದೆಲ್ಲಾ ನಮ್ಮ ಪಾರ್ಟೀಯ

ಆಂತರಿಕವಾದಂತಹ ವಿಷಯಗಳು ಕೆಲವು ಇರುತ್ತದೆ. ಆಂತರಿಕ ವಿಷಯಗಳನ್ನು ನಾವುಗಳು ಆಂತರಿಕವಾಗಿಯೇ ಬಗೆಹರಿಸಿಕೊಳ್ಳುತ್ತೇವೆ. ಹೊರತು, ಅದರಿಂದಾಗಿ ರಾಜ್ಯದ ಆಡಳಿತಕ್ಕೆ ತೊಂದರೆ ಮಾಡುವುದಿಲ್ಲ ಮತ್ತು ಮಾಡಿಯೂ ಇಲ್ಲ.

**ಶ್ರೀ ಬಸವರಾಜ ಹೊರಟ್ಟಿ :** ಸಭಾಪತಿಯವರೆ, ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮೈಗೆ ಯಾವಾಗಲು ಎಣ್ಣೆಯನ್ನು ಹಚ್ಚಿಕೊಂಡೇ ಇರುತ್ತಾರೆ ಯಾರ ಕೈಗೂ ಸಿಗುವುದಿಲ್ಲ.

**ಶ್ರೀ ವೀರಣ್ಣ ಮತ್ತಿಕಟ್ಟಿ :** ಮಾನ್ಯ ಸಭಾಪತಿಯವರೆ, ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರೆ ದೇವರ ಸಾಕ್ಷಿಯಾಗಿ ಹೇಳಲಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :** ಮಾನ್ಯ ಸಭಾಪತಿಯವರೆ, ಎದೆ ಬಗೆದು ಹೇಳುವುದಕ್ಕೆ ನನಗೆ ಬರುವುದಿಲ್ಲ. ಅದಕ್ಕೆ ಮುಕ್ತವಾಗಿ ಹೇಳಿದ್ದೇನೆ.

**ಉಪ ಸಭಾಪತಿಯವರು :** ಮಾನ್ಯ ಸಭಾಪತಿಯವರೆ, ಈಗ ನಮ್ಮ ಅಲ್ಲಮ್ಮಪ್ರಭು ಪಾಟೀಲ್‌ರವರು ಕಳೆದ ಬಾರಿ ಅಧಿವೇಶನದಲ್ಲಿಯೂ ಸಹಾ ತೊಗರಿ ಬೆಳೆ ಬಗ್ಗೆ ಬಹಳ ಮನನೊಂದು ಮಾತನಾಡಿದ್ದರು. ಈಗಲೂ ಕೂಡ ಅದೇ ವಿಷಯವನ್ನು ತೆಗೆದುಕೊಂಡು ಬಂದಿದ್ದಾರೆ. ಅವರ ಕಳಕಳಿಯನ್ನು ಈ ಸದನ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕೆ ಹೆಚ್ಚಿನ ಅವಕಾಶವನ್ನು ಕೋಡೋಣ. ದಯಮಾಡಿ ವಿರೋಧ ಪಕ್ಷದ ನಾಯಕರು ವಿಷಯಾಂತರ ಮಾಡದೇ ಮಾತನಾಡಿ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು) :** ಮಾನ್ಯ ಸಭಾಪತಿಯವರೆ, ಖಂಡಿತ ನಾನು ವಿಷಯಾಂತರ ಮಾಡುವುದಿಲ್ಲ.

**ಶ್ರೀ ವೀರಣ್ಣ ಮತ್ತಿಕಟ್ಟಿ :** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಲ್ಲಿ ಬ್ಲೂ ಫಿಲಂ ಹಗರಣದ ದಿವಸ ಶ್ರೀ ಉಮೇಶ್ ವಿ. ಕತ್ತಿಯವರು ಈ ಸದನದಲ್ಲಿ ಇದ್ದುದರಿಂದ ಉಳಿದುಕೊಂಡರು. ಇಲ್ಲದಿದ್ದರೆ ಖಂಡಿತ ಅವರು ಕೂಡ ತಮ್ಮ ಸಚಿವ ಸ್ಥಾನವನ್ನು ಕಳೆದುಕೊಳ್ಳುತ್ತಿದ್ದರು.

**ಶ್ರೀಮತಿ ಮೋಟಮ್ಮ** : ಮಾನ್ಯ ಸಭಾಪತಿಯವರೆ, ಅವತ್ತಿನ ದಿವಸ ಈ ಸದನದಲ್ಲಿ ಸಹಕಾರ ಸಚಿವರ ಪಕ್ಕದಲ್ಲಿಯೇ ಕುಳಿತುಕೊಂಡಿದ್ದರು. ಅಲ್ಲಿಗೆ ಹೋಗಿದ್ದರೆ ಬೇರೆ ರೀತಿಯಲ್ಲಿಯೇ ಆಗುತ್ತಿತ್ತು.

**ಉಪ ಸಭಾಪತಿಯವರು** : ಕೊನೆಯ ಪಕ್ಷ ತೊಗರಿ ಬೆಳೆಗಾರರಿಗೆ ಒಂದಿಷ್ಟು ನ್ಯಾಯವಾದರೂ ಸಿಗಲಿ.

**ಶ್ರೀ ಬಸವರಾಜ ಹೊರಟ್ಟಿ** : ಮಾನ್ಯ ಸಭಾಪತಿಯವರೆ, ಸರ್ಕಾರ ನಡೆಸಬೇಕು, ಉತ್ತರ ಹೇಳಬೇಕು. ಓ. ಕೆ. ಮಾನ್ಯ ವಿರೋಧ್ ಪಕ್ಷದ ನಾಯಕರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗ ವಿಷಯವನ್ನು ಪ್ರಸ್ತಾಪ ಮಾಡಿ. ಉಮೇಶ್ ವಿ. ಕತ್ತಿಯವರು ಏನು ಬರೆದಿರುತ್ತಾರೆ ಅಷ್ಟನ್ನು ಶ್ರೀ ಉದಾಸಿಯವರು ಹೇಳಿಬಿಡುತ್ತಾರೆ. ಬೇಕಾದರೆ ಯಾವುದಾದರೂ ರಸ್ತೆ ಬಗ್ಗೆ ಕೇಳಿ ಹೇಳುತ್ತಾರೆ ಆದುದರಿಂದ ಕೃಷಿ ಸಚಿವರು ಸದನಕ್ಕೆ ಬಂದಾಗ ಈ ವಿಷಯವನ್ನು ಪ್ರಸ್ತಾಪ ಮಾಡಲಿ.

**ಶ್ರೀ ಸಿ. ಎಂ. ಉದಾಸಿ** : ಮಾನ್ಯ ಸಭಾಪತಿಯವರೆ, ಅದು ಬೇಡ. ಈಗ ಕೃಷಿ ಸಚಿವರು ನನ್ನ ಜೊತೆಯಲ್ಲಿ ದೂರವಾಣಿಯಲ್ಲಿ ಮಾತನಾಡಿದ್ದಾರೆ. ಇದಕ್ಕೆ ಉತ್ತರ ಹೇಳಬೇಕಾಗಿತ್ತು ಹೇಳಿದ್ದೇನೆ. ಆ ವಿಷಯದ ಬಗ್ಗೆ ಇಲಾಖಾಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಅವರಿಗೆ ತೃಪ್ತಿಯಾಗದಿದ್ದರೆ ಮತ್ತೆ ಕೃಷಿ ಸಚಿವರ ಜೊತೆಯಲ್ಲಿ ಪ್ರಶ್ನೆ ಕೇಳುವುದಕ್ಕೆ ಬರುತ್ತದೆ. ವಿಷಯದ ಗಾಂಭೀರ್ಯತೆಯನ್ನು ಕಳೆಯುವುದು ಬೇಡ. ಇದು ಗಂಭೀರವಾದಂತಹ ವಿಷಯ ಇದೆ. ದಯವಿಟ್ಟು ವಿರೋಧ ಪಕ್ಷದ ನಾಯಕರು ಮಾತನ್ನು ಮುಂದುವರೆಸಲಿ.

**ಶ್ರೀಮತಿ ಮೋಟಮ್ಮ** : ಮಾನ್ಯ ಸಭಾಪತಿಯವರೆ, ನಮಗೆ ಈ ವಿಷಯದ ಬಗ್ಗೆ seriousness ಇದೆ. ಸರ್ಕಾವನ್ನು ನಡೆಸುವವರಿಗೆ seriousness ಇಲ್ಲವಲ್ಲ ಎನ್ನುವ ಚಿಂತೆ ಏಕೆಂದರೆ ಬರಗಾಲ ಇದೆ. ರೈತರು ಬೆಳೆದಂತಹ ಬೆಳೆಗೂ ಕೂಡ ಬೆಲೆ ಕುಸಿತವಾಗಿದೆ. ಸರ್ಕಾರ ರೈತರು ಆಪತ್ತಿನಲ್ಲಿರುವುದರಿಂದ ಅವರಿಗೆ ಸಹಾಯ ಮಾಡಬೇಕು ಎನ್ನುವುದು ನಮ್ಮ

ಇರಾದೆಯಾದರೆ, ಸರ್ಕಾರದಲ್ಲಿರುವವರು ಗೋಲ್ಡನ್ ರೇಸಾರ್ಟಗೆ ಹೋಗಿ ವಿದೇಶಿ ಮಧ್ಯವನ್ನು ಕುಡಿದು ಮಜ ಮಾಡುತ್ತಿದ್ದಾರಲ್ಲಾ ಇದು ನಮ್ಮ ಪ್ರಶ್ನೆ. ಈ ರೈತರ ಬಗ್ಗೆ ಕಳಕಳಿ ಇಲ್ಲವಲ್ಲಾ, ಅದಕ್ಕೆ ನಾನು ಹೇಳಿದ್ದು.

**ಶ್ರೀ ನಾರಾಯಣ ಸಾ. ಭಾಂಡಗೆ :** ಮಾನ್ಯ ಸಭಾಪತಿಯವರೆ, ಇದು ವಿಷಯಾಂತರವಾಗುತ್ತಿದೆ.

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೆ, ಇದು ವಿಷಯಾಂತರವಲ್ಲ, ಇರುವಂತಹ ವಿಷಯವನ್ನೇ ನಾನು ಹೇಳುತ್ತಿರುವಂಥದ್ದು,

(ಗೊಂದಲ)

**ಉಪ ಸಭಾಪತಿಯವರು :** ಮಾನ್ಯ ಸಚಿವರು ಹೇಳುತ್ತಾರೆ. ಮಾನ್ಯ ನಾರಾಯಣ ಸಾ. ಭಾಂಡಗೆಯವರೆ ದಯವಿಟ್ಟು ನೀವು ಕುಳಿತುಕೊಳ್ಳಿ.

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೆ, ನಾನು ಕೃಷಿಯ ಬಗ್ಗೆ ಮಾತನಾಡುತ್ತಿರುವುದು. ವಿಷಯ ಅಲ್ಲಿಗೆ ಬರುತ್ತದೆ. ಸರ್ಕಾರ ನಡೆಸುವುದರಲ್ಲಿ seriousness ಇಲ್ಲ. ರೈತರ ಬಗ್ಗೆ seriousness ಇಲ್ಲ. ಬರಗಾಲದಲ್ಲಿ ಜನ ಮತ್ತು ಧನಗಳು ಸಾಯುತ್ತಿದೆ. ಜೊತೆಗೆ ತೊಗರಿ ಬೆಳೆಗೆ ಬೆಂಬಲ ಬೆಲೆ ಇಲ್ಲ.

**ಶ್ರೀ ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು) :** ಮಾನ್ಯ ಸಭಾಪತಿಯವರೆ, ಇಲ್ಲಿ ಕೃಷಿ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದೆ.

**ಶ್ರೀ ಬಸವರಾಜ ಹೊರಟ್ಟಿ :** ಈಗ ಎಣ್ಣೆ ಬಗ್ಗೆ ಚರ್ಚೆ ನಡೆಯುತ್ತಿರುವುದು.

**ಶ್ರೀ ಆರ್. ಅಶೋಕ್ :** ಮಾನ್ಯ ಸಭಾಪತಿಯವರೆ, ಈಗ ಗಣಿ ಬಗ್ಗೆ ಚರ್ಚೆ ನಡೆಯುತ್ತದೆ. ಇತಿಹಾಸದ ಬಗ್ಗೆ ಚರ್ಚೆ ಬೇಡ. ಹಿಂದೆ ಎಲ್ಲಾ ಎಣ್ಣೆ ಬಗ್ಗೆಯೇ ಚರ್ಚೆ ನಡೆಯುತ್ತಿತ್ತು. ಹಿಂದೆ ಎಲ್ಲಾ ಎಣ್ಣೆಯಿಂದಲೇ ಸರ್ಕಾರಗಳು ಎದ್ದೇಳುತ್ತಿತ್ತು ಮತ್ತು ಬಿದ್ದು ಹೋಗುತ್ತಿತ್ತು. ಈಗ ಆ ಸುದ್ದಿ

ಬೇಡ. ಇಲ್ಲಿ ಕೃಷಿ ಚರ್ಚೆ ನಡೆಯುತ್ತಿದೆ. ಬಹಳ ಮುಖ್ಯವಾದುದ್ದು. ನಮ್ಮ ಹಿರಿಯ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ. ಆ ವಿಷಯ ಚರ್ಚೆಯಾಗಬೇಕು. ಇದು ಎಲ್ಲಿಯೋ ಒಂದು ಕಡೆ ರಾಜಕಾರಣದ ಕಡೆ ಹೋಗುತ್ತಿರುವುದನ್ನು ನೋಡಿದರೆ, ರಾಜಕೀಯ ಎಂದರೆ ಇದೇ, ರಾಜಕಾರಣ ಎಂದರೂ ಕೂಡ ಇದೇ. ಏಳು ಬೀಳು ಎಲ್ಲಾ ಇದ್ದೇ ಇರುತ್ತದೆ. ಹಿಂದಿನ ಕಾಲದಿಂದಲೂ ಇದು ನಡೆದುಕೊಂಡು ಬಂದಿದೆ. ಇದೇನು ಇವತ್ತಿನ ದಿವಸ ಹುಟ್ಟಿಕೊಂಡಿರುವಂಥದ್ದಲ್ಲ. ರಾಜ ಮಹಾರಾಜರ ಕಾಲದಿಂದಲೂ ಕೂಡ ಇದೆಲ್ಲಾ ನಡೆದುಕೊಂಡು ಬಂದಿರುವಂಥದ್ದೇ. ಇದು ನಮ್ಮ ಪಕ್ಷದ ಆಂತರಿಕ ವಿಚಾರ. ನಮ್ಮ ಪಕ್ಷದ ಆಂತರಿಕ ವಿಚಾರಗಳನ್ನು ಮಾತನಾಡಲು ನಮ್ಮ ಪಕ್ಷದ ವೇದಿಕೆ ಇದೆ. ಅಲ್ಲಿ ನಾವು ಚರ್ಚೆ ಮಾಡಿಕೊಳ್ಳುತ್ತೇವೆ ಬಿಡಿ. ಕಳೆದ 50–60 ವರ್ಷದ ಇತಿಹಾಸವನ್ನು ನೋಡಿ. ಶ್ರೀ ವಿರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭ ನೋಡಿ, ಅವರನ್ನು ಏಕಾಏಕಿ ತೆಗೆದು ಹಾಕಿದರು. ಶ್ರೀ ಎಸ್. ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಏನಾಯಿತು. ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ, ಶ್ರೀ ಹೆಚ್. ಡಿ. ದೇವೇಗೌಡರು ಮುಖ್ಯಂತ್ರಿಗಳಾಗಿದ್ದಾಗ ಏನಾಯಿತು?

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೆ, ಈ ರೀತಿ ರೆಸಾರ್ಟ್ ವ್ಯವಹಾರ ಇರಲಿಲ್ಲ.

**ಶ್ರೀ ಆರ್. ಅಶೋಕ್ :** ಮಾನ್ಯ ಸಭಾಪತಿಯವರೆ, ಅವತ್ತಿನ ದಿವಸ ಬೆಂಗಳೂರಿನ ಸುತ್ತಮುತ್ತ ರೆಸಾರ್ಟಗಳು ಇರಲಿಲ್ಲ. ಇದ್ದಿದ್ದರೆ ಅಲ್ಲಿಗೂ ನೀವು ಹೋಗುತ್ತಿದ್ದೀರಿ. ಅವತ್ತಿನ ದಿವಸ ರೆಸಾರ್ಟ್‌ಗಳು ಇದ್ದಿದ್ದರೆ ಖಂಡಿತ ಹೋಗುತ್ತಿದ್ದರು. ಇವರೆಲ್ಲಾ ದಾರಿ ದೀಪವಾಗುತ್ತಿದ್ದರು. ಇವರೆಲ್ಲಾ ಮಾರ್ಗದರ್ಶಕರಾಗುತ್ತಿದ್ದರು.

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೆ, ಖಂಡಿತ ಇಲ್ಲ. ಆಗ ಇಷ್ಟೊಂದು ಕುರ್ಚಿಯ ವ್ಯಾಮೋಹ ಇರಲಿಲ್ಲ.

**ಶ್ರೀ ಆರ್. ಅಶೋಕ್ :** ಮಾನ್ಯ ಸಭಾಪತಿಯವರೆ, ಇಂತಹ ವಿಚಾರಗಳು ಅವರವರ ಪಾರ್ಟಿಗೆ ಸಂಬಂಧಿಸಿದ್ದರೂ ಪಾರ್ಟಿಯ ವೇದಿಕೆಯಲ್ಲಿ ಚರ್ಚೆಯಾಗುತ್ತದೆ. ಇಂತಹ ವಿಷಯಗಳನ್ನು ಸದನದಲ್ಲಿ ಚರ್ಚೆ ಮಾಡುವುದಕ್ಕೆ ದಯಮಾಡಿ ಅವಕಾಶ ಮಾಡಿಕೊಡಬೇಡಿ. ಪಾರ್ಟಿ ರಾಜಕಾರಣವನ್ನು ಬಿಡಿ.

**ಉಪ ಸಭಾಪತಿಯವರು :** ಶ್ರೀ ಅಲ್ಲಮ ಪ್ರಭು ಪಾಟೀಲ್‌ರವರೆ, ಇದು ಬಹಳ ಒಳ್ಳೆಯ ವಿಷಯವನ್ನು ತೆಗೆದುಕೊಂಡು ಬಂದಿದ್ದೀರಿ. ಈ ಸದನದ ಮೂಲಕ ತೊಗರಿ ಬೆಳೆಗಾರರಿಗೆ ನ್ಯಾಯ ಸಿಕ್ಕಿದರೆ ನಿಜಕ್ಕೂ ಸದನಕ್ಕೆ ಬೆಲೆ ಬರುತ್ತದೆ. ಈ ವಿಷಯವನ್ನು serious ಆಗಿ ತೆಗೆದುಕೊಳ್ಳೋಣ.

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೆ, ನೀವು serious ಆಗಿ ತೆಗೆದುಕೊಂಡಿದ್ದೀರಿ. ಸರ್ಕಾರದವರು ಕೂಡ serious ಆಗಿ ತೆಗೆದುಕೊಳ್ಳಬೇಕೆಂದು ನಮ್ಮ ಇರಾದೆ. ನಿಮ್ಮ ಮುಖಾಂತರವಾದರೂ ಹೇಳಿ. ಅದಕ್ಕೆ ನಾನು ಹೇಳುತ್ತಿರುವುದು. ಈಗ ಜನವರಿ 26ನೇ ತಾರೀಖು ಸಂಬಂಧಪಟ್ಟಂತಹ ಜಿಲ್ಲಾ ಉಸ್ತುವಾರಿ ಸಚಿವರು ಕೆಲವೊಂದು ಸರ್ಕಾರದ ಸಂದೇಶವನ್ನು ಹೇಳುತ್ತಾರೆ. ಆ ರೀತಿಯ ಸಂದೇಶವನ್ನು ಹೇಳುವಂತಹ ಸಮಯದಲ್ಲಿ ತೊಗರಿ ಬೆಳೆಯನ್ನು ಬೆಳಯುವಂತಹ ಹೆಚ್ಚಿನ ರೈತರು ಏನಿದ್ದಾರೆ ಅವರಿಗೆ ತೊಗರಿ ಮಂಡಲಿಯ ಮುಖಾಂತರ ಬೆಳೆದಂತಹ ಎಲ್ಲಾ ತೊಗರಿ ಬೆಳೆಯನ್ನು ಬೆಂಬಲ ಬೆಲೆಗೆ ಖರೀದಿ ಮಾಡುತ್ತೇವೆ, ರೈತರಿಗೆ ಯಾವುದೇ ರೀತಿಯಲ್ಲಿ ಅನ್ಯಾಯವಾಗದ ರೀತಿಯಲ್ಲಿ ಬೆಂಬಲ ಬೆಲೆಯನ್ನು ಒದಗಿಸುತ್ತೇವೆಂದು ಒಂದು ಕಡೆ ಹೇಳಿದರೆ, ಬೆಲೆ ಕುಸಿತವಾದಾಗ 4,000 ರೂಪಾಯಿಗಳನ್ನು ತೊಗರಿ ಬೆಳೆಗೆ ಬೆಂಬಲ ಬೆಲೆಯನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಈಗ ಖರೀದಿ ಕೇಂದ್ರ ಅಥವಾ ತೊಗರಿ ಮಂಡಳಿಯನ್ನು ಗುಲ್ಬರ್ಗಾದಲ್ಲಿ ಮಾಡಿದ್ದಾರೆ. ಅಲ್ಲಿ ಒಬ್ಬನೇ ಅಧಿಕಾರ ಮತ್ತು ಒಂದು ಕುರ್ಚಿ ಹಾಗೂ ಒಂದು ಟೇಬಲ್ ಮಾತ್ರ ಇದೆ ಎಂದು ನಮ್ಮ ಸ್ನೇಹಿತರೇ ಹೇಳಿದ್ದು, ಇಷ್ಟು ಇದ್ದರೆ ತೊಗರಿ ಮಂಡಲಿ ಯಾವ ರೀತಿಯಾಗಿ ಕೆಲಸ ಮಾಡಬಹುದೆಂದು ನೀವೇ ಹೇಳಿ. ಮತ್ತೆ ಸಚಿವರು ಆ ಜಿಲ್ಲೆ ಅಕ್ಕ

ಪಕ್ಕದಲ್ಲಿಯೇ 4–5 ತೊಗರಿ ಬೆಳೆಯ ಬೆಂಬಲ ಬೆಲೆ ತೊಗರಿ ಖರೀದಿ ಕೇಂದ್ರವನ್ನು ತೆರೆಯುತ್ತೇವೆಂದು ಹೇಳಿದ್ದಾರೆ. ಆದರೆ ಇದುವರೆಗೂ ಕೂಡ ಆ ಸೆಂಟರ್‌ಗಳು ಓಪನ್ ಆಗಿಲ್ಲ. ಉಸ್ತುವಾರಿ ಸಚಿವರು ಗಣ ರಾಜ್ಯೋತ್ಸವದ ದಿನದಂದು ಕೊಟ್ಟಂತಹ ಸಂದೇಶವನ್ನು ಕೇಳಿ ಆ ರೈತರೆಲ್ಲಾ ಒಂದು ರೀತಿಯಲ್ಲಿ . . . . . .

**ಶ್ರೀ ವಿ. ಆರ್. ಸುದರ್ಶನ್ :** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯ ಪ್ರಸ್ತಾವನೆಗಳ ನಂತರ ತಾವು ಗಮನ ಸೆಳೆಯುವ ಸೂಚನೆಯ ಅಡಿಯಲ್ಲಿರುವಂತಹ ವಿಷಯವನ್ನು ತೆಗೆದುಕೊಂಡಿದ್ದೀರಿ. ಆದರೆ ನಿಲುವಳಿ ಸೂಚನೆಯ ಅಡಿಯಲ್ಲಿ ಬರಗಾಲ ಮತ್ತು ಕಾವೇರಿ ನದಿ ನೀರಿನ ವಿಚಾರವಾಗಿ ಪ್ರಸ್ತಾಪಿಸಲು ಅವಕಾಶ ಕೋರಿ ಪ್ರಸ್ತಾವನೆಗಳನ್ನೇನು ನಾವು ಕಳುಹಿಸಿಕೊಟ್ಟಿದ್ದೇವೆ ಆ ವಿಷಯಗಳನ್ನು ಗಮನ ಸೆಳೆಯುವ ಸೂಚನೆಯ ವಿಷಯಕ್ಕೂ ಮೊದಲು ತಾವು ತೆಗೆದುಕೊಳ್ಳಬೇಕಾಗಿತ್ತು. ಗಮನ ಸೆಳೆಯುವ ಸೂಚನೆಯ ನಂತರ ನಿಲುವಳಿ ಸೂಚನೆಯ ಅಡಿಯಲ್ಲಿನ ವಿಷಯಗಳನ್ನು ಪ್ರಸ್ತಾಪಿಸಲು ಅವಕಾಶವಿರುವುದಿಲ್ಲ. ಆ ವಿಷಯಗಳನ್ನು ಗಮನ ಸೆಳೆಯುವ ಸೂಚನೆಗೆ ಮೊದಲೇ ತೆಗೆದುಕೊಳ್ಳಬೇಕಾಗಿತ್ತು.

**ಉಪ ಸಭಾಪತಿಯವರು :** ಈಗಾಗಲೇ ಗಮನ ಸೆಳೆಯುವ ಸೂಚನೆಯ ಅಡಿಯಲ್ಲಿನ ವಿಷಯವನ್ನು ಪ್ರಾರಂಭಿಸಲಾಗಿದೆ.

**ಶ್ರೀ ವಿ. ಆರ್. ಸುದರ್ಶನ್ :** ಮಾನ್ಯ ಸಭಾಪತಿಯವರೇ, ಪ್ರಾರಂಭವಾಗಿಬಿಟ್ಟಿದೆ ಎಂದು ಅದನ್ನು ಮುಂದುವರೆಸುವುದಕ್ಕಾಗುವುದಿಲ್ಲ, ಹಾಗಾದರೆ ನಾವು ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರಿ ಕಳುಹಿಸಿಕೊಟ್ಟಿರುವ ವಿಷಯಗಳ ಗತಿಯೇನು?

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೇ, ತಾವು ಅಲ್ಲಿ ಸ್ವಲ್ಪ ತಪ್ಪು ಮಾಡಿದಿರಿ ಎಂದು ಅನಿಸುತ್ತಿದೆ. ನಿಲುವಳಿ ಸೂಚನೆಯ ಬಗ್ಗೆ ನೀವು ವಿಷಯವನ್ನೇ ಪ್ರಸ್ತಾಪಿಸಿದೆ ಗಮನ ಸೆಳೆಯುವ ಸೂಚನೆಯ

ಅಡಿಯಲ್ಲಿನ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದರಿಂದ ನಾನು ಆ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ವಿ. ಆರ್. ಸುದರ್ಶನ್ :** ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆಯ ಅಡಿಯಲ್ಲಿನ ವಿಷಯವನ್ನು ತಾವು ಗಾಳಿಗೆ ಬಿಟ್ಟುಬಿಟ್ಟರೆ ಹೇಗೆ?

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರು ಅಲ್ಲಿ ಸ್ವಲ್ಪ ತಪ್ಪಿದರು.

**ಉಪ ಸಭಾಪತಿಯವರು :** ನಾನು ಶೂನ್ಯವೇಳೆಯ ಅಡಿಯಲ್ಲಿನ ವಿಷಯಗಳು ಮುಗಿದ ನಂತರ ಗಮನ ಸೆಳೆಯುವ ಸೂಚನೆಯ ಅಡಿಯಲ್ಲಿನ ವಿಷಯವನ್ನು ತೆಗೆದುಕೊಂಡ ಸಂದರ್ಭದಲ್ಲಿ ತಾವು ಯಾರೂ ಈ ಬಗ್ಗೆ ಮಾತನಾಡಲಿಲ್ಲ.

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೇ, ಒತ್ತಡ ಹಾಕುವ ಪ್ರಶ್ನೆ ಅಲ್ಲ. ತಮಗೆ ನೋಟೀಸ್ ಇತ್ತಲ್ಲ, ಇದರ ಬಗ್ಗೆ ತಾವು ತೀರ್ಮಾನ ಹೇಳಬೇಕಾಗಿತ್ತು.

(ಗೊಂದಲ)

**ಉಪ ಸಭಾಪತಿಯವರು :** ದಯಮಾಡಿ ಎಲ್ಲರೂ ಒಂದು ಸೆಕೆಂಡ್ ಕುಳಿತುಕೊಳ್ಳಿ. ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ, ಈಗ ಸಭಾಪತಿಯವರು ದಿನಾಂಕವನ್ನು ಗೊತ್ತುಪಡಿಸಿ ಅದಕ್ಕೆ ಅವಕಾಶ ಕೊಡುತ್ತಾರೆ. ಈಗ ಗಮನ ಸೆಳೆಯುವ ಸೂಚನೆಯ ಅಡಿಯಲ್ಲಿನ ವಿಷಯವನ್ನೇನು ಪ್ರಾರಂಭ ಮಾಡಿದ್ದೇವೆ ಅದನ್ನು ಮೊದಲು ಮುಗಿಸೋಣ.

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೇ, ಇಲ್ಲ, ಇಲ್ಲ. ಇದು ಬಹಳ ಮಹತ್ವದ ವಿಚಾರ. ಈಗ ನೀವು ಸಭಾಪತಿಗಳ ಸ್ಥಾನದಿಂದ ಈ ಬಗ್ಗೆ ಒಂದು ತೀರ್ಮಾನ ಕೊಡಬೇಕಾಗುತ್ತದೆ. ಹಾಗಾಗಿ ಈ ನಿಲುವಳಿ ಸೂಚನೆಯ ಬಗ್ಗೆ ನೀವೇನು ನಿರ್ಣಯ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಿದ ನಂತರ ಗಮನ ಸೆಳೆಯುವ ಸೂಚನೆಯ ಅಡಿಯಲ್ಲಿನ ವಿಷಯಕ್ಕೆ

ಬರಬೇಕಾಗಿತ್ತು. ನೀವು ಸಡನ್ ಆಗಿ ನನಗೆ ಗಮನ ಸೆಳೆಯುವ ಸೂಚನೆಯ ಅಡಿಯಲ್ಲಿನ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಕೊಟ್ಟಿರಿ. ನಾನೂ ಕೂಡ ಅದರ ಬಗ್ಗೆ ಗಮನಹರಿಸದೆಯೇ ತೆಗೆದುಕೊಂಡೆ. ನಿಮಗೆ ಕಾರ್ಯದರ್ಶಿಯವರಾದರೂ ಮಾರ್ಗದರ್ಶನ ಮಾಡಬೇಕಾಗಿತ್ತು.

**ಶ್ರೀ ಗೋ. ಮಧುಸೂದನ್ :** ನಿಲುವಳಿ ಸೂಚನೆ ಬಗ್ಗೆ ನಿಮಗೆ ನೆನಪೇ ಇಲ್ಲ.

**ಶ್ರೀಮತಿ ಮೋಟಮ್ಮ :** ಇಲ್ಲ, ಇಲ್ಲ, ನೆನಪಿಲ್ಲ ಎಂದಲ್ಲ, ಅವರು ಕರೆದಿದ್ದರಿಂದ ಸಡನ್ ಆಗಿ ನಾನು ತೊಗರಿ ಬೆಳೆಯ ವಿಚಾರವಾದ್ದರಿಂದ ಎದ್ದು ನಿಂತು ಈ ವಿಷಯವನ್ನು ಪ್ರಸ್ತಾಪಿಸಿದೆ ಅಷ್ಟೆ.

**ಶ್ರೀ ಎಂ. ಸಿ. ನಾಣಯ್ಯ :** ಮಾನ್ಯ ಸಭಾಪತಿಯವರೇ, ನಾವು . . . . .

**ಉಪ ಸಭಾಪತಿಯವರು :** ಇದು ಅರ್ಧ ಗಂಟೆಯಲ್ಲಿ ಮುಗಿಯಲಿ, ನಂತರ ನಿಲುವಳಿ ಸೂಚನೆಯ ವಿಷಯವನ್ನು ತೆಗೆದುಕೊಳ್ಳೋಣ.

**ಶ್ರೀ ಎಂ. ಸಿ. ನಾಣಯ್ಯ :** ಮಾನ್ಯ ಸಭಾಪತಿಯವರೇ, ಇಲ್ಲ, ಆ ರೀತಿ ಮಾಡುವುದಕ್ಕಾಗುವುದಿಲ್ಲ, ನಾನು ಹೇಳುವುದನ್ನು ಸ್ವಲ್ಪ ಕೇಳಿ.

**ಶ್ರೀ ವಿ. ಆರ್. ಸುದರ್ಶನ್ :** ಮಾನ್ಯ ಸಭಾಪತಿಯವರೇ, ಆ ರೀತಿ ಮಾಡುವುದಕ್ಕಾಗುವುದಿಲ್ಲ.

**ಉಪ ಸಭಾಪತಿಯವರು :** ನಾಳೆ ಮತ್ತೆ ಆ ವಿಷಯವನ್ನು ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶವನ್ನು ಕೋರಿ ಸೂಚನಾ ಪತ್ರವನ್ನು ಕಳುಹಿಸಿಕೊಡಿ.

**ಶ್ರೀ ಎಂ. ಸಿ. ನಾಣಯ್ಯ :** ಮಾನ್ಯ ಸಭಾಪತಿಯವರೇ, ತಾವು ದಯವಿಟ್ಟು ಕೇಳಿ. ವಿರೋಧ ಪಕ್ಷದ ನಾಯಕರು ಮತ್ತು ಇತರರು ನಿಲುವಳಿ ಸೂಚನೆಯ ಅಡಿಯಲ್ಲಿ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಕೋರಿ ಸೂಚನೆಯೊಂದನ್ನು ಕಳುಹಿಸಿಕೊಟ್ಟಿದ್ದರು. ಆದರೆ ಏನಾಗಿದೆ ಎಂದರೆ

ಇವೊತ್ತಿನ ಕಾರ್ಯಕಲಾಪಗಳ ಪಟ್ಟಿಯ ಪ್ರಕಾರ ಪ್ರಶ್ನೋತ್ತರ ಕಲಾಪವನ್ನು ತೆಗೆದುಕೊಳ್ಳಲಾಯಿತು, ನಂತರ ಶೂನ್ಯವೇಳೆಯ ಪ್ರಸ್ತಾವಗಳನ್ನು ತೆಗೆದುಕೊಳ್ಳಲಾಯಿತು. ಆದರೆ ತಾವು ಯಾರೂ ದಯವಿಟ್ಟು ತಪ್ಪು ತಿಳಿದುಕೊಳ್ಳಬಾರದು. ಶೂನ್ಯವೇಳೆಯ ನಂತರ ಈಗ ಗಮನ ಸೆಳೆಯುವ ಸೂಚನೆಯ ಅಡಿಯಲ್ಲಿನ ವಿಷಯವನ್ನು ತೆಗೆದುಕೊಳ್ಳಲಾಗಿದೆ. ಗಮನ ಸೆಳೆಯುವ ಸೂಚನೆಯ ಅಡಿಯಲ್ಲಿನ ವಿಷಯವನ್ನು ಈಗಾಗಲೇ ತೆಗೆದುಕೊಂಡಿರುವುದರಿಂದ ಈಗ ಪುನಃ ಹಿಂದಕ್ಕೆ ಸರಿದು ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ನಮ್ಮಲ್ಲಿ ಖಂಡಿತ ಅವಕಾಶ ಇಲ್ಲ. ಆ ರೀತಿಯ ಸಂಪ್ರದಾಯಗಳನ್ನು ನಾವು ಖಂಡಿತವಾಗಿಯೂ ಬದಲಾವಣೆ ಮಾಡಕೂಡದು. ಯಾರು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದಾರೆ ಅವರು ಶೂನ್ಯವೇಳೆಯ ನಂತರ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ಮೊದಲು ನೇರವಾಗಿ ಪ್ರಸ್ತಾಪ ಮಾಡಿ ತಮ್ಮ ಅಧಿಕಾರವನ್ನು ಚಲಾವಣೆ ಮಾಡಬೇಕಾಗಿತ್ತು. ಯಾವಾಗ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಅಧಿಕಾರವನ್ನು ಚಲಾವಣೆ ಮಾಡಲಿಲ್ಲ, ನಾಳೆ ಬೆಳಗ್ಗೆ ಪುನಃ ಇದೇ ವಿಷಯವನ್ನು ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶವನ್ನು ಕೋರಿ ಮತ್ತೊಂದು ಸೂಚನೆಯನ್ನು ಕಳುಹಿಸಿಕೊಡಲಿ. ಅದನ್ನು ಬಿಟ್ಟು ಹೊಸ ಸಂಪ್ರದಾಯವನ್ನು ಖಂಡಿತವಾಗಿಯೂ ಸಹ ಸೃಷ್ಟಿ ಮಾಡಬಾರದು.

**ಉಪ ಸಭಾಪತಿಯವರು :** ನಾಳೆ ನಿಲುವಳಿ ಸೂಚನೆಯ ಅಡಿಯಲ್ಲಿ ಇದೇ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಕೋರಿ ಸೂಚನೆಯನ್ನು ಕಳುಹಿಸಿಕೊಟ್ಟರೆ ನಾಳೆ ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಡಿ. ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) :** ಮಾನ್ಯ ಸಭಾಪತಿಯವರೇ, ಈಗಾಗಲೇ ಕಲಾಪಗಳು ಮುಂದುವರೆದಿವೆ. ಎಲ್ಲಿಯೋ ಒಂದು ಕಡೆ ಸಣ್ಣಪುಟ್ಟ ಲ್ಯಾಪ್ಸ್‌ಗಳಾಗಿರಬಹುದು, ಇಲ್ಲವೆಂದು ನಾವು ಅಲ್ಲಗಳೆಯುವುದು ಬೇಡ. ಆದರೆ ನನಗೆ ಇಲ್ಲಿ ಅನಿಸುವಂಥದ್ದು ಈ ವಿಷಯವನ್ನು ಗಮನ ಸೆಳೆಯುವ ಸೂಚನೆಯ ವಿಷಯವನ್ನು

ಪ್ರಸ್ತಾಪಿಸುವುದಕ್ಕೆ ಮೊದಲು ತೆಗೆದುಕೊಳ್ಳಬೇಕಾಗಿತ್ತು. ಈಗ ಈ ವಿಷಯವನ್ನು ನಿಯಮ 68ಕ್ಕೆ ಕನ್ವರ್ಟ ಮಾಡಿ ನಾಳೆ ಆ ವಿಷಯದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಬಹುದು. ಅದಕ್ಕೇನೂ ತೊಂದರೆ ಇಲ್ಲ. ಈಗ ಏನು ಕಲಾಪಗಳನ್ನು ಕೈಗೆತ್ತಿಕೊಳ್ಳಲಾಗಿದೆ ಇದನ್ನು ಮುಂದುವರೆಸಿ, ಮಾನ್ಯ ಸದಸ್ಯರಾದ ಶ್ರೀ ವೀರಣ್ಣ ಮತ್ತಿಕಟ್ಟಿಯವರು ಹಿರಿಯರಿದ್ದಾರೆ. ಅವರಿಗೆ ಈ ಎಲ್ಲ ವಿಚಾರ ಸಹ ಗೊತ್ತಿದೆ. ಈ ವಿಷಯವನ್ನು ನಿಯಮ 68ಕ್ಕೆ ಕನ್ವರ್ಟ ಮಾಡಿ ಆ ವಿಷಯವನ್ನು ನಾಳೆ ತೆಗೆದುಕೊಳ್ಳಬಹುದಾಗಿದೆ. ಈ ಸರ್ಕಾರ ನಿಮ್ಮ ಯಾವುದೇ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ನೂರಕ್ಕೆ ನೂರರಷ್ಟು ಸಿದ್ಧವಿದೆ. ಯಾವೊತ್ತೂ ಸಹ ನಾವು ಅದಕ್ಕೆ ತಯಾರಿದ್ದೇವೆ, ಎಲ್ಲಿಯಾದರೂ ಸಣ್ಣಪುಟ್ಟ ವ್ಯತ್ಯಾಸಗಳಾಗಿದ್ದರೆ ಅದನ್ನು ಗಂಭೀರವಾಗಿ ಪರಿಗಣಿಸದೆ ವಿಚಾರಕ್ಕೆ ಗಂಭೀರತೆಯನ್ನು ಕೊಟ್ಟು ನಾವು ಚರ್ಚೆಯನ್ನು ಮಾಡೋಣ. ಈಗ ಗಮನ ಸೆಳೆಯುವ ಸೂಚನೆಯ ಅಡಿಯಲ್ಲಿ ತೊಗರಿ ಬೆಳೆ ವಿಚಾರವನ್ನೇನು ಪ್ರಸ್ತಾಪಿಸಲಾಗುತ್ತಿದೆ ಅದಕ್ಕೆ ನಾನು ಉತ್ತರ ಕೊಡುತ್ತೇನೆ.

**ಉಪ ಸಭಾಪತಿಯವರು** : ನಿಲುವಳಿ ಸೂಚನೆಯ ಅಡಿಯಲ್ಲಿ ಇವೊತ್ತು ಪ್ರಸ್ತಾಪಿಸಲು ಅವಕಾಶ ಕೋರಿ ಕಳುಹಿಸಿಕೊಟ್ಟಿದ್ದ ವಿಷಯವನ್ನು ನಾಳೆ ನಿಯಮ 68ರ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಲಾಗುತ್ತದೆ.

**ಶ್ರೀ ವಿ. ಆರ್. ಸುದರ್ಶನ್** : ಮಾನ್ಯ ಸಭಾಪತಿಯವರೇ, 'ಈ ಸರ್ಕಾರ' ಎಂದರೆ ನಮಗೆ ಯಾವ ಸರ್ಕಾರ ಎಂಬುದು ಗೊತ್ತಾಗಲಿಲ್ಲ.

**ಉಪ ಸಭಾಪತಿಯವರು** : ಈಗ ನಾನು ಹೇಳುತ್ತೇನೆ, ಕುಳಿತುಕೊಳ್ಳಿ.

**ಶ್ರೀ ಬಸವರಾಜ ಹೊರಟ್ಟಿ** : ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು 'ಈ ಸರ್ಕಾರ' ಎಂದರು, ಅದು ಯಾವ ಸರ್ಕಾರ ಎಂದು ಗೊತ್ತಾಗಲಿಲ್ಲವಾದ ಕಾರಣ ನಾವು ಈ ಪ್ರಶ್ನೆಯನ್ನು ಕೇಳುತ್ತಿದ್ದೇವೆ.

**ಡಾ : ಎ. ಹೆಚ್. ಶಿವಯೋಗಿಸ್ವಾಮಿ (ಸರ್ಕಾರದ ಮುಖ್ಯ ಸಚೇತಕರು)** : ಈ ಸರ್ಕಾರ ಎಂದರೆ ನಿಮ್ಮೆದುರಿಗಿರುವ ಸರ್ಕಾರ ಎಂದು ಅರ್ಥ.

**ಶ್ರೀ ಬಸವರಾಜ ಹೊರಟ್ಟಿ :** ಹಾಗೆ ಹೇಳಿ, ನಾವು ಮಾನ್ಯ ಸದಾನಂದಗೌಡರ ಸರ್ಕಾರ ಎಂದು ತಿಳಿದುಕೊಂಡೆವು.

**ಶ್ರೀ ಎಂ. ಸಿ. ನಾಣಯ್ಯ :** ಮಾನ್ಯ ಸಭಾಪತಿಯವರೇ, ನಾವು ಈ ಪ್ರಶ್ನೆಯನ್ನು ಕೇಳುವುದಕ್ಕೆ ಕಾರಣವೇನೆಂದರೆ ಆಡಳಿತ ಪಕ್ಷದವರಿಂದಲೇ ಬಿ.ಜೆ.ಪಿ. ಮುಖ್ಯಮಂತ್ರಿ, ಬಿ.ಜೆ.ಪಿ. ಮುಖ್ಯಮಂತ್ರಿ ಎಂದು ಹೇಳುತ್ತಿದ್ದರು. ನಮಗೆ ಗೊತ್ತಿರುವ ಪ್ರಕಾರ ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿಗಳು, ಆದರೆ ಈ ಸಂಶಯ ಏಕೆಂದರೆ ನೀವು ನಿಮ್ಮೊಳಗಡೆ ಇರತಕ್ಕಂತಹ ದ್ವಂದ್ವವನ್ನು ಇಡೀ ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಬಿತ್ತರಿಸಿಕೊಂಡು ಕಡೆಗೆ ನಾವು ಬಹಳ ಸಾಚಾ ಇದ್ದೇವೆ ಎಂದು ಹೇಳುವುದಕ್ಕೆ ದಯವಿಟ್ಟು ಪ್ರಯತ್ನ ಮಾಡಬೇಡಿ. ನಮಗೆ ಇವೊತ್ತು ಬೇಕಾಗಿರತಕ್ಕಂಥದ್ದೇನೆಂದರೆ, ಮುಖ್ಯಮಂತ್ರಿಗಳು ಯಾರು ಎಂದು ಕೇಳಿದಾಗ ಬಿ.ಜೆ.ಪಿ. ಮುಖ್ಯಮಂತ್ರಿ ಎಂದು ಹೇಳಿದರೆ ಹೇಗೆ? ಅವರಿಗೆ ಹೆಸರಿಲ್ಲವೆ? ಸನ್ಮಾನ್ಯ ರಾಜ್ಯಪಾಲರಿಂದ ಪ್ರಮಾಣ ವಚನವನ್ನು ಸ್ವೀಕರಿಸುವಾಗ ಬಿ.ಜೆ.ಪಿ. ಮುಖ್ಯಮಂತ್ರಿ ಎಂಬುದಾಗಿ ಪ್ರಮಾಣ ವಚನವನ್ನು ಸ್ವೀಕರಿಸುತ್ತಾರೆಯೇ? ಅವರು ಪ್ರಮಾಣ ವಚನವನ್ನು ಬೋಧಿಸುವಾಗ Mr. Sadananda Gowda, Chief Minister ಎಂಬುದಾಗಿಯೇ ಹೇಳಿರುತ್ತಾರೆ. ಬಿ.ಜೆ.ಪಿ. ಮುಖ್ಯಮಂತ್ರಿ ಎಂದು ಪ್ರಮಾಣ ವಚನವನ್ನು ಬೋಧಿಸುವುದಿಲ್ಲ. ದಯವಿಟ್ಟು ಯಾರೂ ಸಹ ತಪ್ಪು ತಿಳಿದುಕೊಳ್ಳಬಾರದು. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಬರುವುದಕ್ಕೆ ಮೊದಲು ಕೂಡ ಈ ವಿಚಾರದ ಬಗ್ಗೆ ಸ್ವಲ್ಪ ಮಟ್ಟಿಗೆ ಚರ್ಚೆಯಾಗಿತ್ತು. ಆದ್ದರಿಂದ ಈ ವಿಚಾರ ಚರ್ಚೆಯಾಗಲಿ, ಏಕೆಂದರೆ ಈ ವಿಚಾರ ಪ್ರಸ್ತಾಪವಾಗಿರುವುದೇಕೆಂದರೆ ಮಾನ್ಯ ಸಚಿವರಾದ ಉಮೇಶ್ ವಿ. ಕತ್ತಿ ಮತ್ತು ಶ್ರೀ ಸಿ. ಎಂ. ಉದಾಸಿಯವರು ಜೊತೆಯಲ್ಲಿಯೇ ಬಂದಿರುವ ಕಾರಣದಿಂದಾಗಿ, ಅವರಿಬ್ಬರೂ ಒಂದೇ ಎಂಬುದು ಗೊತ್ತಿದೆ. ಮಾನ್ಯ ಉಮೇಶ್ ವಿ. ಕತ್ತಿಯವರಿಗೆ ಆರೋಗ್ಯ ಸರಿಯಿಲ್ಲದಿದ್ದರೆ ಅವರ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರ ಕೊಡಲು ಸನ್ಮಾನ್ಯ ಸಿ. ಎಂ. ಉದಾಸಿಯವರಿಗೆ ಅವಕಾಶವನ್ನು ಕೊಡುತ್ತಾರೆಯೇ ಹೊರತು ಬೇರೆ

ಯಾರಿಗೂ ಕೊಡುವುದಿಲ್ಲ. ಆ ಅವಕಾಶವನ್ನು ಅವರು ಮಾನ್ಯ ಸಭಾನಾಯಕರಿಗೆ ಕೂಡ ಕೊಡುವುದಿಲ್ಲ.

**ಶ್ರೀ ವೈ.ಎಸ್.ವಿ.ದತ್ತ :** ಮಾನ್ಯ ಸಭಾಪತಿಯವರೇ, ಇದು ಏರ್ ಟಿಕೆಟ್ ಓಪನ್ ಇಟ್ಟಂತೆ, ಬಿ.ಜೆ.ಪಿ. ಚೀಫ್ ಮಿನಿಸ್ಟರ್, ಕರ್ನಾಟಕ ಚೀಫ್ ಮಿನಿಸ್ಟರ್‌ದು ಓಪನ್ ಟಿಕೆಟ್ ಇಟ್ಟಂತೆ ಇಟ್ಟಿದ್ದಾರೆ.

**ಶ್ರೀ ಎಂ. ಸಿ. ನಾಣಯ್ಯ :** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ ರಾಜಕಾರಣ ಇಷ್ಟು ಕೆಳಹಂತಕ್ಕೆ ಹೋಗುತ್ತಿರುವುದನ್ನು ಎಲ್ಲಾ ಪಕ್ಷದಲ್ಲಿರುವ ನಾವೆಲ್ಲಾ ರಾಜಕಾರಣಿಗಳು ಸಹ ಅರಿತುಕೊಳ್ಳೋಣ. ಈ ರಾಜಕಾರಣ ಇಷ್ಟು ಕೆಳಹಂತಕ್ಕೆ ಹೋಗಬೇಕಾದಂತಹ ಅವಶ್ಯಕತೆ ಇಲ್ಲ. ಅಧಿಕಾರಕ್ಕೋಸ್ಕರ ಹೋರಾಟ ಮಾಡುತ್ತಿರುವುದು ಒಂದು ಭಾಗ. ಆದರೆ ಮುಖ್ಯಮಂತ್ರಿಗಳು ಯಾರು ಎಂದರೆ, ಅವರ ಹೆಸರನ್ನು ಹೇಳುವಷ್ಟು ಕೂಡ ಅವರಿಗೆ ಮಾನವೀಯತೆಯ ಚಿಂತನೆ ಇಲ್ಲದಿರುವುದನ್ನು ನೋಡಿದಾಗ ನಿಜಕ್ಕೂ ವಿಪರ್ಯಾಸವೆನಿಸುತ್ತದೆ. ನಮ್ಮ ರಾಜಕಾರಣ ಯಾವ ಮಟ್ಟಕ್ಕೆ ಹೋಗಿದೆ ಎಂಬುದಕ್ಕೆ ಇದು ಒಂದು ನಿದರ್ಶನ ಅಷ್ಟೆ.

**ಶ್ರೀ ಬಸವರಾಜ ಹೊರಟ್ಟಿ :** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರನ್ನು ಇವರು ಯಾರೂ ಒಪ್ಪಿಕೊಳ್ಳುವುದೇ ಇಲ್ಲ. ಮಾನ್ಯ ಸದಾನಂದಗೌಡರು ನಮ್ಮ ಮುಖ್ಯಮಂತ್ರಿಗಳು ಎಂದು ಇವರು ಯಾರೂ ಹೇಳುವುದೇ ಇಲ್ಲ. ಇವರಲ್ಲಿ ಎಷ್ಟು ಜನ ಆ ಮಾತನ್ನು ಹೇಳುತ್ತಾರೆ?

**ಶ್ರೀ ಆರ್. ಅಶೋಕ :** ಮಾನ್ಯ ಸಭಾಪತಿಯವರೇ, ವಿಷಯಾಂತರವಾಗುವುದು ಬೇಡ.

**ಶ್ರೀ ಬಸವರಾಜ ಹೊರಟ್ಟಿ :** ಮಾನ್ಯ ಸಭಾಪತಿಯವರೇ, ಏಕೆ ಬೇಡ?

**ಶ್ರೀ ವೀರಣ್ಣ ಮತ್ತಿಕಟ್ಟಿ :** ಮಾನ್ಯ ಸಭಾಪತಿಯವರೇ, ಅವರ ನಾಯಕರ ಹೆಸರನ್ನು ವಿರೋಧ ಪಕ್ಷದವರು ಹೇಳುತ್ತಾರೆ ಎಂದು ಆಡಳಿತ ಪಕ್ಷದವರು ಖುಷಿಯಾಗಬೇಕು.

**ಶ್ರೀ ಆರ್. ಅಶೋಕ :** ಮಾನ್ಯ ಸಭಾಪತಿಯವರೇ, ಮಾನ್ಯ ಸದಾನಂದಗೌಡರೇ ನಮ್ಮ ಮುಖ್ಯಮಂತ್ರಿಗಳು, ದಯವಿಟ್ಟು ಈ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸಬೇಕೆಂದು ವಿನಂತಿಸುತ್ತೇನೆ.

(ಗೊಂದಲ)

ನಮ್ಮ ಪಕ್ಷದ ವಿಚಾರವನ್ನು ಇಲ್ಲಿ ತರುವುದು ಸೂಕ್ತವಲ್ಲ. ನಮ್ಮ ಸರ್ಕಾರದ ಮುಖ್ಯಮಂತ್ರಿಗಳಾಗಿ ಸನ್ಮಾನ್ಯ ಸದಾನಂದಗೌಡರು ಕೆಲಸ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಮಾನ್ಯ ಸದಾನಂದಗೌಡರ ನೇತೃತ್ವದ ಸರ್ಕಾರ ಇದೆ. ಇಲ್ಲಿ ಯಾರು ಮುಖ್ಯಮಂತ್ರಿಯಾಗುತ್ತಾರೆ, ಯಾರು ಆಗುವುದಿಲ್ಲ ಎನ್ನುವಂತಹ ವಿಚಾರಗಳೆಲ್ಲಾ ತಂದು ದಯವಿಟ್ಟು ವಿಷಯಾಂತರವಾಗುವುದು ಬೇಡ.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ :** ಮಾನ್ಯ ಸಭಾಪತಿಯವರೇ, ನಾವು ಅಡ್ಡ ಮಾತನಾಡಿಲ್ಲ.

(ಗೊಂದಲ)

**ಉಪ ಸಭಾಪತಿಯವರು :** ಈಗ ವಿಷಯಕ್ಕೆ ಬರೋಣ. ಸದನದ ಕಲಾಪಗಳನ್ನು ಮುಂದುವರೆಸೋಣ.

**ಶ್ರೀ ಬಸವರಾಜ ಹೊರಟ್ಟಿ :** ಮಾನ್ಯ ಸಭಾಪತಿಯವರೇ, ವಿಷಯಕ್ಕೆ ಬರೋಣ, ಆದರೆ ನಾವು ಈ ರಾಜ್ಯದ ಜನತೆಯ ಬಗ್ಗೆ ಕೂಡ ವಿಚಾರ ಮಾಡಬೇಕಾಗುತ್ತದೆ. ನಮ್ಮ ಪ್ರಶ್ನೆ ಏನೆಂದರೆ ಇವರ ಗೊಂದಲ ರಾಜ್ಯದ ಜನತೆಯ ಮೇಲೆ ಪರಿಣಾಮ ಬೀರುತ್ತಿದೆ.

**ಶ್ರೀ ಡಿ. ಎಸ್. ವೀರಯ್ಯ :** ಮಾನ್ಯ ಸಭಾಪತಿಯವರೇ, ವಿಷಯಾಂತರವಾಗುತ್ತಿದೆ.

**ಶ್ರೀ ಬಸವರಾಜ ಹೊರಟ್ಟಿ :** ಮಾನ್ಯ ಸಭಾಪತಿಯವರೇ, ಮಾನ್ಯ ವೀರಯ್ಯನವರ ಲಿಸ್ಟ್ ಇನ್ನೂ ಬಹಳ ದೂರ ಇದೆ.

**ಶ್ರೀ ಆರ್. ಅಶೋಕ :** ಮಾನ್ಯ ಸಭಾಪತಿಯವರೇ, ಚರ್ಚೆ ನಡೆಯುತ್ತಿರುವುದು ತೊಗರಿಬೆಳೆ ವಿಚಾರವಾಗಿ. ಮುಖ್ಯಮಂತ್ರಿಗಳ ಬಗ್ಗೆ ಏಕೆ ಚರ್ಚೆ ನಡೆಯುತ್ತಿದೆ. ಮುಖ್ಯಮಂತ್ರಿಗಳು ಯಾರು ಎನ್ನುವಂತಹ ಪ್ರಶ್ನೆಯನ್ನು ವಿರೋಧ ಪಕ್ಷದವರಾದರೂ ಈ ಸದನದಲ್ಲಿ ಪ್ರಸ್ತಾಪ ಮಾಡಿಲ್ಲ. ಯಾವುದಾದರೂ ರೂಪದಲ್ಲಿ ಆ ವಿಚಾರದ ಬಗ್ಗೆ ಚರ್ಚೆ ಮಾಡಲು ಅವರು ತಮ್ಮಲ್ಲಿ ಅವಕಾಶ ಕೋರಿದ್ದಾರೆಯೆ? ಆ ವಿಷಯದಲ್ಲಿ ಅವರಿಗೇನಾದರೂ ಸಂಶಯವಿದ್ದರೆ ಅವರು ಚರ್ಚೆಗೆ ಬರಲಿ, ನಾವು ಉತ್ತರ ಕೊಡುತ್ತೇವೆ.

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಗಳಾದ ಮಾನ್ಯ ಸದಾನಂದಗೌಡರು ನಮ್ಮ ಸರ್ಕಾರ ಉತ್ತರ ಕೊಡುತ್ತದೆ ಎಂದಿದ್ದರೆ ಈ ಪ್ರಶ್ನೆ ಬರುತ್ತಿರಲಿಲ್ಲ. ಆದರೆ ಅವರು 'ಈ ಸರ್ಕಾರ' ಉತ್ತರ ಕೊಡುತ್ತದೆ ಎಂದು ಹೇಳಿದರು.

(ಗೊಂದಲ)

**ಶ್ರೀ ಆರ್. ಅಶೋಕ :** ಮಾನ್ಯ ಸಭಾಪತಿಯವರೇ, 'ಈ ಸರ್ಕಾರ' ಎಂದರೆ ಬಿ.ಜೆ.ಪಿ. ಸರ್ಕಾರ.

(ಗೊಂದಲ)

**ಡಾ: ಎ. ಎಚ್. ಶಿವಯೋಗಿಸ್ವಾಮಿ :** ಮಾನ್ಯ ಸಭಾಪತಿಯವರೇ, ಈ ಸರ್ಕಾರ ಎಂದರೆ ಅವರ ಎದುರಿಗಿರುವ ಸರ್ಕಾರ ಎಂದಷ್ಟೇ ಅರ್ಥ.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ :** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಆರ್. ಅಶೋಕ ಅವರು ಬುದ್ದಿವಂತರಾದ್ದರಿಂದ ಮೈಸೂರಿಗೆ ಓಡಿ ಹೋದರು. ಉಳಿದವರಿಗೆ ಬುದ್ಧಿ ಇರಲಿಲ್ಲ. ಅಲ್ಲಿ ಇಲ್ಲಿ ಉಳಿದರಷ್ಟೆ.

**ಶ್ರೀ ವೈ. ಎಸ್. ವಿ. ದತ್ತ :** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಒಂದು ಸೆಕೆಂಡ್ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಉಪ ಸಭಾಪತಿಯವರು :** ಇಲ್ಲ, ಒಂದು ಸೆಕೆಂಡ್ ಕೂಡ್ ಅವಕಾಶ ಕೊಡುವುದಕ್ಕಾಗುವುದಿಲ್ಲ. ಎಲ್ಲರೂ ದಯಮಾಡಿ ಕುಳಿತುಕೊಳ್ಳಿ. ನೀವು ಕುಳಿತುಕೊಳ್ಳದಿದ್ದರೆ ನಾನು ಎದ್ದುನಿಲ್ಲಬೇಕಾಗುತ್ತದೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಾನು ಬಹಳ ಗಂಭೀರವಾಗಿ ಈ ವಿಚಾರವನ್ನು ಹೇಳುತ್ತಿದ್ದೇನೆ, ಕಳೆದ ಅಧಿವೇಶನದಲ್ಲಿ ಮಾನ್ಯ ಸದಸ್ಯರಾದ ಅಲ್ಲಮಪ್ರಭು ಪಾಟೀಲ್‌ರವರು ತೊಗರಿ ಬೆಳೆ ವಿಚಾರವನ್ನು ಪ್ರಸ್ತಾಪ ಮಾಡಿದ್ದರು. ಆ ವಿಚಾರದ ಬಗ್ಗೆ ಸದನದಲ್ಲಿ ಬಹಳ ಗಂಭೀರವಾಗಿ ಚರ್ಚೆಯಾಯಿತು. ಅವರು ಮನನೊಂದು ಆವೋತ್ತು ಸದನದಲ್ಲಿ ಕಣ್ಣೀರು ಹಾಕಿದರು. ಅದರ ಪರಿಣಾಮ ಬೇರೆಯೇ ಆಯಿತು, ಅದರ ಬಗ್ಗೆ ಯಾರೂ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ಈಗ ಮಾನ್ಯ ವಿರೋಧ ಪಕ್ಷದ ನಾಯಕರೇ ತಾವು ನೇರವಾಗಿ ವಿಷಯಕ್ಕೆ ಬನ್ನಿ.

**ಶ್ರೀ ವೈ. ಎಸ್. ವಿ. ದತ್ತ :** ಮಾನ್ಯ ಸಭಾಪತಿಯವರೇ, ಪರಿಣಾಮ ಏನಾಯಿತು ಎಂದು ನಮಗೆ ಗೊತ್ತಾಗಲಿಲ್ಲ.

**ಉಪ ಸಭಾಪತಿಯವರು :** ಇವೊತ್ತು ವಿರೋಧ ಪಕ್ಷದವರು ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರಿ ವಿಷಯವನ್ನೇನು ಕಳುಹಿಸಿಕೊಟ್ಟಿದ್ದರು ಅದನ್ನು ನಾಳೆ ನಿಯಮ 68ರ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಮಾಡಿಕೊಡಲಾಗುತ್ತದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ :** ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಸ್ಪಷ್ಟವಾಗಿ ಹೇಳಲೇಬೇಕಾಗುತ್ತದೆ. ತೊಗರಿ ಬೆಳೆ ವಿಚಾರ ಚರ್ಚೆಯಾಗುವಾಗ ಯಾರು ಇಲ್ಲಿ ಬದ್ಧತೆಯಿಂದ ಇರುತ್ತಾರೆ ಅವರೆಲ್ಲಾ ಉಳಿಯುತ್ತಾರೆ, ಕಳೆದ ಸಲ ಕೂಡ ಅದೇ ರೀತಿಯಾಯಿತು. ಮಾನ್ಯ ಸಚಿವರಾದ ಮಾನ್ಯ ಉಮೇಶ್ ವಿ. ಕತ್ತಿಯವರು ಇಲ್ಲಿ ಉಳಿದರು, ಉಳಿದವರು ಇಲ್ಲಿಂದ ಏನು ಎದ್ದು ಹೋದರು, ಅವರು ಹೋಗಿಯೇಬಿಟ್ಟರು. ಮಾನ್ಯ ಉಮೇಶ್ ವಿ. ಕತ್ತಿಯವರು ಮಾತ್ರ ಮತ್ತೆ ಮಂತ್ರಿಯಾಗಿ ಉಳಿದರು. ಅದಕ್ಕೆ ಆ ಬಗ್ಗೆ ಅವರೇನೂ ಚಿಂತೆ ಮಾಡುವುದು ಬೇಡ, ಅವರು ಸದನದಲ್ಲಿಯೇ ಇರಲಿ. ರೈತರ ಸಮಸ್ಯೆಗಳ ಬಗ್ಗೆ ಸದನದಲ್ಲಿ

ಚಿಂತನೆ ನಡೆಯುತ್ತಿದ್ದಾಗ ಯಾರು ಉಪಸ್ಥಿತರಿರುತ್ತಾರೆ ಅವರು ಖಂಡಿತವಾಗಿಯೂ ಅಧಿಕಾರದಲ್ಲಿರುತ್ತಾರೆ.

**ಉಪ ಸಭಾಪತಿಯವರು** : ನಾನು ಈಗ ಹೇಳುವುದೇನೆಂದರೆ, ಈಗ ಸದನ್ನದಲಿ ಮಾನ್ಯ ಮುಖ್ಯಮಂತ್ರಿಗಳಿದ್ದಾರೆ. ಇವತ್ತಂತೂ ಅದಕ್ಕೆ ಪರಿಹಾರ ಸಿಕ್ಕೇ ಸಿಗುತ್ತದೆ. ನಿಜವಾದ ರಿಸಲ್ಟ್ ಬರುತ್ತದೆ ದಯಮಾಡಿ ಮಾತನಾಡಿ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು)** : ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಯಾರೂ ಇಲ್ಲದೆ ಇದ್ದರೂ ಪರವಾಗಿಲ್ಲ. ಈ ಸರ್ಕಾರ ಇದೆ ಉತ್ತರ ಕೊಡುತ್ತದೆ ಎಂದು ಏನು ಹೇಳಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ.

**ಉಪ ಸಭಾಪತಿಯವರು** : ಮಾನ್ಯ ಮುಖ್ಯಮಂತ್ರಿಗಳು ಮಂಗಳೂರಿನ ಜನ ಆಗಿರುವುದರಿಂದ ಆ ರೀತಿ ಹೇಳಿದ್ದಾರೆ.

**ಶ್ರೀಮತಿ ಮೋಟಮ್ಮ** : ಮಾನ್ಯ ಸಭಾಪತಿಯವರೇ ಬಜೆಟ್ ಮಂಡನೆ ಮಾಡುವ ಸಮಯದಲ್ಲಿಯೂ ಸಹ ಒಂದು ಅನುಮಾನವಿತ್ತು, ಅಂತಹ ಸಂದರ್ಭದಲ್ಲಿಯೂ ಸಹ ಮಾನ್ಯ ಮುಖ್ಯಮಂತ್ರಿಗಳು ಎದೆಗುಂದದೆಯೇ ಬಂದು ಬಜೆಟ್ ಮಂಡನೆ ಮಾಡಿದ್ದಾರೆ.

(ಗೊಂದಲ)

**ಶ್ರೀ ಆರ್. ಅಶೋಕ** : ಮಾನ್ಯ ಸಭಾಪತಿಯವರೇ, ಕಳೆದ ಸಲ ತೊಗರಿ ಬೆಳೆಯ ಬಗ್ಗೆ ಮಾತನಾಡುವಾಗ ಯಾರು ತೊಂದರೆ ಮಾಡಿದರೋ ಅವರಿಗೆ ಸಮಸ್ಯೆಯಾಯಿತು ಎಂದು ಹೇಳಿದಿರಿ. ಆದರೆ ಈಗ ವಿರೋಧ ಪಕ್ಷದ ನಾಯಕರೇ ತೊಂದರೆ ಮಾಡುತ್ತಿದ್ದಾರೆ, ಹಾಗಾಗಿ ವಿರೋಧ ಪಕ್ಷಕ್ಕೆ ತೊಂದರೆಯಾಗುತ್ತದೆ ನೋಡಿ ಹೇಳಿದ್ದೇನೆ. ಈ ಸಲ ಅವರೇ ತೊಂದರೆ ಮಾಡುತ್ತಿದ್ದಾರೆ ಅವರಿಗೆ ತೊಂದರೆ ಆಗುತ್ತದೆ.

**ಶ್ರೀಮತಿ ಮೋಟಮ್ಮ** : ಮಾನ್ಯ ಸಭಾಪತಿಯವರೇ, ನಾನು ಅವರ ಸಹಾಯಕ್ಕೆ ಬರುತ್ತಿದ್ದೇನೆ.

(ಗೊಂದಲ)

**ಉಪ ಸಭಾಪತಿಯವರು** : ತಮ್ಮ ಕಳಕಳಿ ನಿಜವಾಗಿಯೂ ಉತ್ತಮವಾಗಿದೆ. ದಯಮಾಡಿ ಇವತ್ತಿನ ದಿವಸ ಈ ವಿಷಯಕ್ಕೆ ನ್ಯಾಯ ಸಿಗಬೇಕು.

**ಶ್ರೀ ಎಂ. ಸಿ. ನಾಣಯ್ಯ** : ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕಿಯವರು ಹೇಳಿದ್ದು ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಎದ್ದುನಿಂತು ಮಾತನಾಡುವಾಗ "ಈ ಸರ್ಕಾರ" ಎಂದು ಹೇಳಿದರು. ಅವರ ಚಿಂತನೆ ಮತ್ತು ನನ್ನ ಚಿಂತನೆ ಏನಿತ್ತು ಎಂದರೆ, "ನನ್ನ ಸರ್ಕಾರ" ಎಂದು ಹೇಳಲಿ ಎಂದು. ಅಷ್ಟೇ ವಿನಃ ಬೇರೇನಿಲ್ಲ.

**ಡಾ॥ ಶ್ರೀನಾಥ್** : ಮಾನ್ಯ ಸಭಾಪತಿಯವರೇ, ಅವರಿಗೆ "ಅಹಂ" ಇಲ್ಲ. ಏನು ಇಲ್ಲದೆ ಇದ್ದವರೇ ನಮ್ಮದು ನಮ್ಮದು ಎಂದು ಹೇಳುವುದು. ನಮ್ಮ ಮುಖ್ಯಮಂತ್ರಿಗಳಿಗೆ "ಅಹಂ" ಇಲ್ಲ. ಆದ್ದರಿಂದ "ನನ್ನದು" ಎಂದು ಹೇಳುವುದಿಲ್ಲ.

**ಶ್ರೀ ವೈ. ಎಸ್. ವಿ. ದತ್ತಾ** : ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಗೆ "ಅಹಂ" ಇಲ್ಲ ಎನ್ನುವುದನ್ನು ಒಪ್ಪಿಕೊಳ್ಳೋಣ. ಆದರೆ ಅನುಮಾನ ಇದೆಯೇ?

**ಶ್ರೀ ಬಸವರಾಜ ಹೊರಟ್ಟಿ** : ಮಾನ್ಯ ಸಭಾಪತಿಯವರೇ, ಇಂದು ಬೆಳಿಗ್ಗೆ ಮಾನ್ಯ ಸಭಾಪತಿಯವರು ಶ್ರೀ ಡಿ. ವಿ. ಸದಾನಂದಗೌಡರು ಈ ಸದನದ ಸಭಾ ನಾಯಕರು ಎಂದು ಹೇಳಿದರು. ಅದಕ್ಕೆ ನಾವೆಲ್ಲರೂ ಚಪ್ಪಾಳೆ ಹೊಡೆದೆವು, ಆದರೆ ಆಡಳಿತ ಪಕ್ಷದವರು ಯಾರೂ ಸಹ ಚಪ್ಪಾಳೆಯನ್ನು ಹೊಡೆಯಲಿಲ್ಲ.

**ಶ್ರೀಮತಿ ಮೋಟಮ್ಮ** : ಮಾನ್ಯ ಸಭಾಪತಿಯವರೇ, ನಿಜವಾಗಿಯೂ ಮಾನ್ಯ ಮುಖ್ಯಮಂತ್ರಿಗಳ ಸ್ಪಿರಿಟ್ ಬಗ್ಗೆ ನನಗೆ ಖುಷಿಯಾಗುತ್ತಿದೆ. ಏಕೆಂದರೆ, ಒಂದು ಕ್ರಿಕೇಟ್ ಟೀಂ ಎಂದರೆ 11 ಜನರು ಇರುತ್ತಾರೆ. ಅದರಲ್ಲಿ ಬ್ಯಾಟಿಂಗ್ ಮಾಡುವವರದು ಒಂದು ಜವಾಬ್ದಾರಿ ಇರುತ್ತದೆ, ಅದೇ ರೀತಿ ಕ್ಯಾಚ್

ಹಿಡಿಯುವವರದು ಒಂದು ಜವಾಬ್ದಾರಿ ಇರುತ್ತದೆ, ಅದೇ ರೀತಿ ರನ್ avoid ಮಾಡುವುದು ಒಂದು ಜವಾಬ್ದಾರಿ ಇರುತ್ತದೆ. ಆದರೆ ನಮಗೆ ಏನು ಅನ್ನಿಸುತ್ತಿದೆ ಎಂದರೆ ಮಾನ್ಯ ಸದಾನಂದಗೌಡರು ಒಬ್ಬರೇ ಈ ಸರ್ಕಾರದಲ್ಲಿ ಬ್ಯಾಟ್ ಹಿಡಿದುಕೊಂಡು ಓಡಾಡುತ್ತಿದ್ದಾರೆ. ಅವರಿಗೆ ಕ್ಯಾಚ್ ಹಿಡಿಯುವವರು ಇಲ್ಲ, ರನ್ avoid ಮಾಡುವವರು ಇಲ್ಲವಲ್ಲ. ಈ ರೀತಿಯಾದಂತಹ ಪರಿಸ್ಥಿತಿ ಇದ್ದರೂ ಸಹ ಉತ್ತರ ಕೊಡುವುದಕ್ಕೆ ತಯಾರಿದ್ದೇನೆ ಎಂದು ಹೇಳುತ್ತಾರಲ್ಲ ಅದಕ್ಕೋಸ್ಕರ ನಾನು ಶ್ಲಾಘಿಸುತ್ತೇನೆ.

**ಉಪ ಸಭಾಪತಿಯವರು :** ಮಾನ್ಯ ವಿರೋಧ ಪಕ್ಷದ ನಾಯಕರೇ, ಸಚಿನ್ ತೆಂಡೂಲ್ಕರ್ ಅವರ ಹೇಳಿಕೆಯನ್ನು ನೋಡಿಯೂ ಸಹ ತಾವು ಈ ರೀತಿಯಾದಂತಹ ಮಾತನ್ನು ಹೇಳುತ್ತಿದ್ದೀರಲ್ಲ, ಸಚಿನ್ ತೆಂಡೂಲ್ಕರ್‌ರವರು ಎಷ್ಟು ಸ್ಪೋಟೀವ್ ಆಗಿ ಹೇಳಿದ್ದಾರೆ.

**ಶ್ರೀಮತಿ ಮೋಟಮ್ಮ :** ಅವರು ಎಲ್ಲಾ ಸಂದರ್ಭಗಳಲ್ಲಿಯೂ ಆಟವಾಡಿದ್ದಾರೆ. ಆದರೆ ಮ್ಯಾಚ್ ಫಿಕ್ಸಿಂಗ್ ಆದಾಗ ಅವರಿಗೆ ಆಟ ಆಡುವುದಕ್ಕೇ ಆಗಿಲ್ಲ.

**ಉಪ ಸಭಾಪತಿಯವರು :** ಈಗ ವಿಷಯಾಂತರವಾಗುತ್ತಿದೆ. ತೊಗರಿಬೆಳೆಯ ವಿಷಯಕ್ಕೆ ಬನ್ನಿ.

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೇ, ನಾವು ಎಲ್ಲಿಯೂ ಸಹ ದಾರಿ ತಪ್ಪುತ್ತಿಲ್ಲ. ಆದರೆ ನಿಮಗೆ ಕೇಳುವುದಕ್ಕೆ ಮುಜುಗರವಾಗುತ್ತಿದೆ ಅಷ್ಟೆ. ನಾನು ಸತ್ಯವನ್ನೇ ಹೇಳುತ್ತಿರುವುದು.

**ಶ್ರೀ ಎಂ. ಸಿ. ನಾಣಯ್ಯ :** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಒಬ್ಬರೇ ಬ್ಯಾಟಿಂಗ್ ಮಾಡುತ್ತಾರೆ. ಯಾರಿಗೂ ಕ್ಯಾಚ್ ಕೊಡುವುದಿಲ್ಲ, L.B.W. ಆಗುವುದಿಲ್ಲ. RUN OUT ಆಗುವುದಿಲ್ಲ. Hats of you.

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೇ, ಗಣರಾಜ್ಯೋತ್ಸವದ ದಿವಸ ಮಾನ್ಯ ಕೃಷಿ ಸಚಿವರು ಹಾಗೂ ಉಸ್ತುವಾರಿ

ಸಚಿವರಾದಂತವರು ತೊಗರಿ ಮಂಡಳಿಯಿಂದ ರೈತರು ಬೆಳೆದಂತಹ ತೊಗರಿಬೆಳೆಯನ್ನು ಕೊಂಡುಕೊಳ್ಳುತ್ತೇವೆಂದು ಹಾಗೂ ಅದಕ್ಕೆ ಆವರ್ತನಿಧಿಯನ್ನು ಸಹ ಕೊಡುತ್ತೇವೆಂದು ಹೇಳಿದ್ದರು. ಆದರೆ ಅದು ಒಂದೂ ಮಾಡಿಲ್ಲ. ಈಗ ಅಲ್ಲಿ ಸುಮಾರು 2011ರ ಮುಂಗಾರಿನ ಹಂಗಾಮಿನಲ್ಲಿ 7,52,909 ಹೆಕ್ಟೇರ್ ವಿಸ್ತೀರ್ಣದಲ್ಲಿ 3,38,950 ಮೆಟ್ರಿಕ್ ಟನ್ ತೊಗರಿ ಉತ್ಪಾದನೆಯಾಗಿದೆ. ಆದರೆ ಈ ಒಂದು ಬೆಳಗೆ ಪರಿಹಾರವಾಗಿ ಅವರಿಗೆ ಸರಿಯಾದ ಬೆಲೆ ಕೊಡುವುದಕ್ಕಾಗಲಿ ಅಥವಾ ಅವರ ಸಹಾಯಕ್ಕಾಗಲಿ ಸರ್ಕಾರ ಮುಂದೆ ಬರುತ್ತಿಲ್ಲ. ಆದರೆ ಘೋಷಣೆ ಮಾತ್ರ ಆಗುತ್ತಿದೆ. ಘೋಷಣೆ ಮೂಲಕ ಈ ತೊಗರಿಬೇಳೆ ಬೆಳೆಯುವ ರೈತರ ಶೋಷಣೆ ಆಗುತ್ತಿದೆಯಲ್ಲ ಇದನ್ನು ತಡೆಗಟ್ಟುವುದಕ್ಕೆ ಸರ್ಕಾರ ಮುಂದಾಗುತ್ತದೆಯೇ ಎಂಬ ವಿಷಯವನ್ನು ತಿಳಿಸಬೇಕು. ಮುಖ್ಯವಾಗಿ ಮಧ್ಯವರ್ತಿಗಳ ಕೈಯಿಂದ ಈ ರೈತರನ್ನು ಪಾರು ಮಾಡಬೇಕಾಗಿದೆ. ಮಧ್ಯವರ್ತಿಗಳು ಬೆಲೆ ಕುಸಿತವಾದಂತಹ ಸಂದರ್ಭದಲ್ಲಿ ಮಾರುಕಟ್ಟೆಯಲ್ಲಿ ಒಂದು ಕೆ. ಜಿ. ತೊಗರಿಬೇಳೆಗೆ 100/– ರೂ. ಗೆ ಮಾರಾಟ ಮಾಡಿದ್ದಾರೆ. ಆದರೆ ಬೆಳೆದಂತಹ ರೈತನಿಗೆ ಇದರಿಂದ ಯಾವ ರೀತಿಯಾದಂತಹ ಪ್ರಯೋಜನವು ಆಗಲಿಲ್ಲ. ಹಾಗಾಗಿ ರೈತ ಸಂಕಷ್ಟದಲ್ಲಿದ್ದಾನೆ. ಇದನ್ನು ತಡೆಗಟ್ಟುವುದಕ್ಕೆ ಸರ್ಕಾರ ಎ.ಪಿ.ಎಂ.ಸಿ ಮೂಲಕ ಅಥವಾ ಕೋ–ಆಪರೇಟೀವ್–ಸೊಸೈಟಿ ಮೂಲಕ ಅಥವಾ ಸರ್ಕಾರ ಮಾಡಿರುವಂತಹ ತೊಗರಿ ಮಂಡಳಿಯಿಂದ ಸರಿಯಾದಂತಹ ಆವರ್ತನಿಧಿಯನ್ನು ನೀಡಿ. ತೊಗರಿಬೇಳೆ ಬೆಳೆದಿರುವಂಥಹ ಯಾದಗಿರಿ, ಬೀದರ್, ಬಿಜಾಪುರ, ರಾಯಚೂರು ಹಾಗೂ ಬಾಗಲಕೋಟೆಯಲ್ಲಿ ಬೆಳೆದಂತಹ ತೊಗರಿಬೇಳೆಯನ್ನು ಸರ್ಕಾರವೇ ಪರ್ಚೇಸ್ ಮಾಡಿ ರೈತರನ್ನು ಉಳಿಸುವಂತಹ ಕೆಲಸ ಮಾಡಿ ಅವರ ಸಂಕಷ್ಟಕ್ಕೆ ಮುಂದಾಗಬೇಕು ಎನ್ನುವುದು ನಮ್ಮ ಒಂದು ಕಳಕಳಿ.

**ಶ್ರೀ ವಿ. ಆರ್. ಸುದರ್ಶನ್ :** ಮಾನ್ಯ ಸಭಾಪತಿಯವರೇ, ದಯಮಾಡಿ ಅನ್ಯಥಾ ಭಾವಿಸಬೇಡಿ, ಗಮನ ಸೆಳೆಯುವ ಸೂಚನೆಗೆ ಉತ್ತರ

ಸರ್ಕಾರದ ಕಡೆಯಿಂದ ಬರಬೇಕು ಆದರೆ ಸರ್ಕಾರದ ಕಡೆಯಿಂದ ಉತ್ತರವೇ ಬಂದಿಲ್ಲ, ಆನಂತರ ನಾವು ಕ್ಲಾರಿಫಿಕೇಶನ್ ಕೇಳಬೇಕು. ಇಲ್ಲಿ ಏನು ಕಾರ್ಯಕಲಾಪಗಳು ನಡೆಯುತ್ತಿದೆ ಎಂಬುದು ನನಗೆ ಅರ್ಥ ವಾಗುತ್ತಿಲ್ಲ. ಉತ್ತರ ಕೊಟ್ಟವರು ಯಾರು? ಉತ್ತರ ಪಡೆದುಕೊಂಡವರು ಯಾರು? ಉತ್ತರ ಎಲ್ಲಿಗೆ ಬಂದಿದೆ?

**ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಉತ್ತರವನ್ನು ಹಿಡಿದುಕೊಂಡು ಓದುತ್ತಿರುವಾಗ ನಿಮಗೆ ಉತ್ತರ ಸಿಗಬೇಕಾಗಿತ್ತು. ನಾನು ಹೇಳುವುದನ್ನು ಸ್ವಲ್ಪ ಸಮಾಧಾನದಿಂದ ಕೇಳಿ. ನಾವು ಹೇಳುವುದನ್ನು ನೀವು ಕೇಳುವುದಕ್ಕೆ ತಯಾರಿಲ್ಲ, ನಾವೂ ಮಾತನಾಡುತ್ತೇವೆಂದು ಎದ್ದು ನಿಂತಿರಿ. ನೀವು ಗಾಂಭೀರ್ಯವಾಗಿ ಮಾತನಾಡುವುದನ್ನು ಬಿಟ್ಟು ಬೇರೆ ದಿಕ್ಕಿಗೆ ಹೋದಿರಿ.

**ಶ್ರೀ ವಿ. ಆರ್. ಸುದರ್ಶನ್ :** ಪಾರ್ಲಿಮೆಂಟರಿ ಅಫೇರ್ಸ್‌ನಲ್ಲಿ ಅದೆಲ್ಲವೂ ಇರುತ್ತದೆ.

(ಗೊಂದಲ)

**ಶ್ರೀಮತಿ ಮೋಟಮ್ಮ :** ಬಹಳ ಸಭ್ಯರು, ಒಳ್ಳೆಯವರು, ಈಗ ಸರ್ಕಾರ ನಡೆಸುತ್ತಿರುವ ರೀತಿ . . . .

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ :** ಮಾನ್ಯ ಉದಾಸಿಯವರೇ, ತಾವು ಹಿರಿಯ ಸಚಿವರು, ಆದಕಾರಣ ಗಾಂಭೀರ್ಯತೆ ಬಗ್ಗೆ ಮಾತನಾಡುವಂತಹ ಅವಶ್ಯಕತೆ ಇಲ್ಲ. ಕಾರಣವೇನೆಂದರೆ ಗಾಂಭೀರ್ಯತೆ ಎರಡೂ ಕಡೆಯಿಂದ ಬರಬೇಕು. ಗಾಂಭೀರ್ಯತೆ ಹಾಗೂ ಬದ್ಧತೆ ಎರಡೂ ಕಡೆ ಇರಬೇಕು. ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಮಾತನಾಡಿ ಎಂದು ಹೇಳಿದರೆ ಸಾಕು. ಅದು ಬಿಟ್ಟು ಗಾಂಭೀರ್ಯತೆ ಇಲ್ಲವೆಂದು ಹೇಳಬಾರದು.

**ಶ್ರೀ ಸಿ. ಎಂ. ಉದಾಸಿ :** ನಿಮಗೆ ಉತ್ತರ ಬಂದಿಲ್ಲವೆ? ಎಲ್ಲಾ ಮಾನ್ಯ ಸದಸ್ಯರಿಗೂ ಉತ್ತರ ಕೊಡಿ.

(ಗೊಂದಲ)

**ಶ್ರೀ ಸಿ. ಎಂ. ಉದಾಸಿ :** ನೀವು ಮಾತನಾಡುವಾಗಲೇ ಉತ್ತರ ಕಳಿಸುವುದಕ್ಕೆ ವ್ಯವಸ್ಥೆ ಮಾಡಿದ್ದೆವು. ಆದರೆ ಉತ್ತರ ಕೊಡುವುದಕ್ಕಿಂತ ಮೊದಲೇ ನೀವು ಆ ಗಾಂಭೀರ್ಯತೆಯನ್ನು ಬಿಟ್ಟು ಬೇರೆ ಬೇರೆ ವಿಷಯಗಳನ್ನು ಮಾತನಾಡಿದಿರಿ.

**ಶ್ರೀ ವೀರಣ್ಣ ಮತ್ತಿಕಟ್ಟಿ :** ಮಾನ್ಯ ಸಚಿವರೇ, ಗಾಂಭೀರ್ಯತೆ ಎರಡೂ ಕಡೆ ಇರಬೇಕು.

**ಶ್ರೀಮತಿ ಮೋಟಮ್ಮ :** ಗಮನ ಸೆಳೆಯುವ ಸೂಚನೆಯನ್ನು ಕೊಟ್ಟವರು ಅದರ ಮುಖ್ಯವಾದಂತಹ ಅಂಶಗಳನ್ನು ಹೇಳಲೇ ಬೇಕು. ಅದಕ್ಕೆ ಸರ್ಕಾರ ಉತ್ತರವನ್ನು ಕಳುಹಿಸಬೇಕು.

**ಶ್ರೀ ಡಿ. ವಿ. ಸದಾನಂದಗೌಡರು (ಮುಖ್ಯಮಂತ್ರಿ) :** ಮಾನ್ಯ ಸಭಾಪತಿಯವರೇ, ಈಗಾಗಲೇ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈಗ ಉತ್ತರವನ್ನು ಓದಿ ಹೇಳುತ್ತಾರೆ, ಅನಂತರ ಚರ್ಚೆಯನ್ನು ಮುಂದುವರೆಸಿ.

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಿಗೆ ತಿಳಿಸುವವುದೇನೆಂದರೆ, ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಮೇಲೆ ಅದನ್ನು ಓದಬೇಕು. ಅದು ಓದುವುದರ ಬದಲಾಗಿ ಅದರಲ್ಲಿರುವಂತಹ ಮುಖ್ಯವಾದಂತಹ ಅಂಶಗಳನ್ನು ಹೇಳುವುದರಲ್ಲಿ ಯಾವುದೇ ತಪ್ಪಿಲ್ಲ.

**ಶ್ರೀ ಡಿ. ವಿ. ಸದಾನಂದಗೌಡ :** ಮಾನ್ಯ ಸಭಾಪತಿಯವರೇ, ಸದನದ ಕಲಾಪಗಳು ಯಾವಾಗಲೂ ಸುಸೂತ್ರವಾಗಿ ನಡೆಯುತ್ತಲೇ ಇತ್ತು. ಆದರೆ ಇವತ್ತು ಸ್ವಲ್ಪ ದಾರಿ ತಪ್ಪಿ, ಅಂಕುಡೊಂಕಾಗಿ ಹೋದ ಕಾರಣ ಎಲ್ಲೋ ಸ್ವಲ್ಪ ವ್ಯತ್ಯಾಸವಾಗಿದೆ. ಅದನ್ನು ಸೆಟ್‌ರೈಟ್ ಮಾಡಿಕೊಂಡು ಪುನಃ ಸರಿ ದಾರಿಯಲ್ಲಿ ಹೋಗುವಂಥದ್ದು ನಮ್ಮ ನಿಮ್ಮೆಲ್ಲರ ಜವಾಬ್ದಾರಿ ಇದೆ.

ಈಗಾಗಲೇ ತಾವು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ಉದಾಸಿಯವರು ಓದುತ್ತಾರೆ ಆಮೇಲೆ ತಾವು ಮುಂದುವರೆಸಿ, ಇನ್ನು ಅದರ ಬಗ್ಗೆ ಮಾತನಾಡಬೇಡಿ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆ ಎಂದ ಮೇಲೆ ನಾವು ಏನು ನೋಟೀಸ್ ಕೊಟ್ಟಿರುತ್ತೇವೆ ಅದನ್ನು ಓದಬೇಕು. ಓದುವ ಸಮಯದಲ್ಲಿ ಸರ್ಕಾರ ನಮಗೆ ಉತ್ತರವನ್ನು ಒದಗಿಸುತ್ತದೆ. ಅದನ್ನು ಓದುವ ಬದಲಾಗಿ ನಾನು ಮುಖ್ಯವಾದಂತಹ ಅಂಶಗಳನ್ನು ಸದನದ ಗಮನಕ್ಕೆ ತರುವಂತಹ ಸಂದರ್ಭದಲ್ಲಿ ಕೆಲವೊಂದು ವಿಷಯಗಳನ್ನು ಹೇಳಿದ್ದೇನೆ ಅಷ್ಟೆ. ತಪ್ಪೇನು ಆಗಿಲ್ಲ. ಮೊದಲು ಸರ್ಕಾರ ಉತ್ತರ ಕೊಡಲಿ, ಆನಂತರ ಕಾಮೆಂಟ್ಸ್ ಮಾಡುವುದು ಇದ್ದೇ ಇದೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

ಮಾನ್ಯ ಸಭಾಪತಿಯವರೇ, ನಾನು ಓದುವ ಬದಲು ಮುಖ್ಯಾಂಶಗಳನ್ನು ಹೇಳಿದೆ. ನೀವು ತೊಗರಿ ಮಂಡಳಿಯ ವತಿಯಿಂದ ತೊಗರಿ ಬೆಳೆಗೆ ಬೆಂಬಲ ಬೆಲೆ ಕೊಡುತ್ತೇವೆಂದು ಘೋಷಣೆ ಮಾಡಿದ ಪ್ರಕಾರ ಮಾಡಿಲ್ಲ, ಪ್ರಾರಂಭ ಮಾಡುತ್ತೇವೆ ಎಂದು ಘೋಷಣೆ ಮಾಡಿದ ಪ್ರಕಾರ ಮಾಡಿಲ್ಲ, ಇಲ್ಲಿ ಇರುವುದನ್ನೇ ನಾನು ಬಾಯಲ್ಲಿ ಹೇಳಿ ಸರ್ಕಾರದ ಗಮನವನ್ನು ಸೆಳೆದಿದ್ದೇನೆ ಅದಕ್ಕೆ ಸರ್ಕಾರ ಉತ್ತರ ಕೊಡಬೇಕು. ಸರ್ಕಾರದ ಗಮನ ಸೆಳೆಯುವ ಸಂದರ್ಭದಲ್ಲಿ ಕೆಲವೊಂದು ಮಾತುಗಳನ್ನಾಡಿದ್ದೇವೆ ಹೊರತು ನಾವೆಲ್ಲೂ ದಾರಿ ತಪ್ಪಿಲ್ಲ, ನಮಗೂ ಸಹ ಗಾಂಭೀರ್ಯತೆ ಇದೆ. ಗಾಂಭೀರ್ಯತೆಯನ್ನು ಬಿಟ್ಟು ಯಾರೂ ಮಾತನಾಡುವುದಕ್ಕೆ ಹೋಗುವುದಿಲ್ಲ.

ಮಾನ್ಯ ಸಭಾಪತಿಯವರೇ, ಸರ್ಕಾರವು ಪ್ರತಿ ಕ್ವಿಂಟಾಲ್ ತೊಗರಿಬೇಳೆಗೆ ನಾಲ್ಕು ಸಾವಿರ ರೂಪಾಯಿಗಳ ಬೆಂಬಲ ಬೆಲೆಯನ್ನು ನಿಗದಿಪಡಿಸಿ, ಹೈದ್ರಾಬಾದ್ ಕರ್ನಾಟಕ ತೊಗರಿ ಮಂಡಳಿ ವತಿಯಿಂದ ಖರೀದಿಸುತ್ತಿದ್ದ ಪ್ರಕ್ರಿಯೆಯನ್ನು ಹಣದ ಮುಗ್ಗಟ್ಟಿನಿಂದ ಏಕಾಏಕಿ

ನಿಲ್ಲಿಸಿರುವುದರಿಂದ ರೈತರಿಗೆ ಉಂಟಾಗಿರುವ ತೊಂದರೆ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಈ ಲಿಖಿತ ಹೇಳಿಕೆಯನ್ನು ಸದನದ ಗಮನಕ್ಕೆ ತರಬಯಸುತ್ತಿದ್ದೇನೆ.

2011–12ನೇ ಸಾಲಿನ ಮುಂಗಾರು ಹಂಗಾಮಿನ ಎಫ್.ಎ.ಕ್ಯೂ. ಗುಣಮಟ್ಟದ ತೊಗರಿಗೆ ರೂ. 3,200/– ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸಿ, ತೊಗರಿ ಕಟಾವಿನ ಮೊದಲ ಎರಡು ತಿಂಗಳ ಕಾಲಾವಧಿಗೆ (ಜನವರಿ ಮತ್ತು ಫೆಬ್ರವರಿ ತಿಂಗಳಿಗೆ ಮಾತ್ರ) ಪ್ರತಿ ಕ್ವಿಂಟಾಲ್‌ಗೆ ರೂ. 500/–ಗಳ ಹೆಚ್ಚುವರಿ ಪ್ರೋತ್ಸಾಹ ಧನವನ್ನು ಘೋಷಿಸಿದೆ. ಈ ಪ್ರೋತ್ಸಾಹಧನವನ್ನು ತೊಗರಿಯ ಮಾರುಕಟ್ಟೆ ಬೆಲೆಯು ಪ್ರತಿ ಕ್ವಿಂಟಾಲ್‌ಗೆ ರೂ. 3,200/– ಗಳಿಗಿಂತಲೂ ಕಡಿಮೆಯಾದ ಸಂದರ್ಭದಲ್ಲಿ ನೀಡಲಾಗುವುದಾಗಿ ಭಾರತ ಸರ್ಕಾರದಿಂದ ನಿಗದಿಪಡಿಸಲಾಗಿದೆ.

ಪ್ರಸ್ತುತ ವರ್ಷ ಅಂದರೆ 2011–12ನೇ ಸಾಲಿನಲ್ಲಿಯೂ ಸಹ ಮಾರುಕಟ್ಟೆಯಲ್ಲಿ ತೊಗರಿ ಬೆಲೆಯು ಪ್ರತಿ ಕ್ವಿಂಟಾಲ್‌ಗೆ ರೂ. 3,200/–ಕ್ಕಿಂತ ಹೆಚ್ಚಿದ್ದರೂ ಸಹ ಆ ಭಾಗದ ಎಲ್ಲಾ ಮಾನ್ಯ ಶಾಸಕರುಗಳು ಹಾಗೂ ಇತರೆ ಶಾಸಕರ ಕೋರಿಕೆಯಂತೆ ರೈತರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ತೊಗರಿ ಅಭಿವೃದ್ಧಿ ಮಂಡಳಿಯಿಂದ ಕ್ವಿಂಟಾಲ್‌ಗೆ ರೂ. 4,000/– ಗಳಂತೆ ತೊಗರಿ ಮಂಡಳಿಯಲ್ಲಿನ ರೂ. 1.70 ಕೋಟಿಗಳ ಲಭ್ಯವಿದ್ದ ಅನುದಾನವನ್ನು ಬಳಸಿಕೊಂಡು ರೈತರಿಂದ ಎಫ್. ಎ. ಕ್ಯೂ. ಗುಣಮಟ್ಟದ ತೊಗರಿಯನ್ನು ಕ್ವಿಂಟಾಲ್‌ಗೆ ರೂ. 4,000/– ಗಳಂತೆ ಖರೀದಿಸಲಾಗಿದೆ. ಅಲ್ಲದೆ, ಹೆಚ್ಚುವರಿಯಾಗಿ ರೂ. 10.00 ಕೋಟಿಗಳ ರಾಜ್ಯ ಸರ್ಕಾರದ ಅನುದಾನವನ್ನು ಹಂತ ಹಂತವಾಗಿ ತೊಗರಿ ಅಭಿವೃದ್ಧಿ ಮಂಡಳಿಗೆ ನೀಡಿ ರೈತರಿಂದ ತೊಗರಿಯನ್ನು ಖರೀದಿಸಲಾಗಿದೆ. ಈ ರೀತಿ ಖರೀದಿಸಿದ ತೊಗರಿಯನ್ನು ಶಿಕ್ಷಣ ಇಲಾಖೆಯ ಮಧ್ಯಾಹ್ನ ಬಿಸಿಯೂಟದ ಕಾರ್ಯಕ್ರಮಕ್ಕೆ ಬಳಸಿಕೊಳ್ಳಲು ಉದ್ದೇಶಿಸಿದೆ.

ಸರ್ಕಾರದ ಆದೇಶದ ಮೇರೆಗೆ 2011–12ನೇ ಸಾಲಿನಲ್ಲಿ ತೊಗರಿ ಮಂಡಳಿಯ ವತಿಯಿಂದ ಎಫ್.ಎ.ಕ್ಯೂ. ಗುಣಮಟ್ಟದ ತೊಗರಿಯನ್ನು ಕ್ವಿಂಟಾಲ್‌ಗೆ ರೂ. 4,000/– ಗಳಂತೆ ಖರೀದಿಸಲು ಗುಲ್ಬರ್ಗಾ, ಯಾದಗಿರಿ ಮತ್ತು ಬೀದರ್ ಜಿಲ್ಲೆಗಳ್ಲಲಿ ಒಟ್ಟಾರೆ 16 ಖರೀದಿ ಕೇಂದ್ರಗಳನ್ನು ತೆರೆಯಲಾಗಿದ್ದು, NCDEX spot Exchange Limited ಮೂಲಕ ಖರೀದಿ ಪ್ರಕ್ರಿಯೆಯನ್ನು ದಿನಾಂಕ 15.02.2012 ರಂದು ಪ್ರಾರಂಭಿಸಲಾಗಿದೆ. ಪ್ರಾರಂಭಿಕವಾಗಿ ಮಂಡಳಿಯಲ್ಲಿ ಲಭ್ಯವಿರುವ ರೂ. 1.70 ಕೋಟಿ ಹಣವನ್ನು ಬಳಸಿಕೊಳ್ಳಲಾಗಿರುತ್ತದೆ. ತದನಂತರದಲ್ಲಿ, ಆವರ್ತನಿಧಿಯಿಂದ ಮಂಡಳಿಗೆ ನೇರವಾಗಿ ಬಿಡುಗಡೆ ಮಾಡಲಾದ ರೂ. 2.00 ಕೋಟಿ (ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಮೊದಲು ಬಿಡುಗಡೆ ಮಾಡಿ ನಂತರ ಬಡ್ಡಿ ರಹಿತ ಸಾಲವನ್ನಾಗಿ ಪರಿವರ್ತಿತ) ಸಾಲವನ್ನು ಮತ್ತು ರೂ. 3.00 ಕೋಟಿ (ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಮೊದಲು ಬಿಡುಗಡೆ ಮಾಡಿ ನಂತರ ಬಡ್ಡಿ ರಹಿತ ಸಾಲವನ್ನಾಗಿ ಪರಿವರ್ತಿತ) ಸಾಲವನ್ನು ಉಪಯೋಗಿಸಿಕೊಳ್ಳಲಾಗಿರುತ್ತದೆ. ಈ ಸಾಲಕ್ಕೆ ಸಂಬಂಧಿಸಿದಂತೆ ದಿನಾಂಕ 27.02.2012ರಂದು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಇವರೊಂದಿಗೆ ಕರಾರು ಮಾಡಿಕೊಳ್ಳಲಾಗಿರುತ್ತದೆ. ಇದಾದ ನಂತರ ದಿನಾಂಕ 05.03.2012ರಂದು ಬಿಡುಗಡೆ ಮಾಡಲಾದ ರೂ. 2.50 ಕೋಟಿ ಮತ್ತು ದಿನಾಂಕ 08.03.2012 ರಂದು ಬಿಡುಗಡೆ ಮಾಡಿರುವ ರೂ. 2.50 ಕೋಟಿ ಸಾಲಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಇವರೊಂದಿಗೆ ಕರಾರು ಮಾಡಿಕೊಳ್ಳಲಾಗಿರುತ್ತದೆ. ಇದರಿಂದಾಗಿ NCDEX spot Exchange Limited ಸಂಸ್ಥೆಯ ನಿಯಮಗಳಲ್ಲಿ third party liability ಗೆ ಅವಕಾಶವಿಲ್ಲದ ನಿಮಿತ್ತ ಪ್ರತಿ ದಿನದ ಖರೀದಿ ರೂ. 1.25 ಕೋಟಿ ವೆಚ್ಚವನ್ನು ಗಮನದಲ್ಲಿಟ್ಟುಕೊಂಡು ಖರೀದಿ ಕೇಂದ್ರಗಳನ್ನು ಪ್ರಾರಂಭಿಸುವುದರೊಂದಿಗೆ ಖರೀದಿಯನ್ನು ಸಹ ಸೀಮಿತಗೊಳಿಸಲಾಗಿದೆ.

ಪ್ರಸ್ತುತ, 2011–12ನೇ ಸಾಲಿನ ಮುಂಗಾರು ಹಂಗಾಮಿನ ತೊಗರಿ ಖರೀದಿಗೆ ಸಂಬಂಧಿಸಿದಂತೆ ರೂ. 11.73 ಕೋಟಿ ಹಣವನ್ನು ಬಳಸಿಕೊಂಡು

ಇದುವರೆಗೆ 25837.7 ಕ್ವಿಂಟಾಲ್ ತೊಗರಿಯನ್ನು ಖರೀದಿಸಲಾಗಿರುತ್ತದೆ ಮತ್ತು ಇದರಿಂದ ಅಂದಾಜು 1796 ರೈತರು ಪ್ರಯೋಜನವನ್ನು ಪಡೆದಿರುತ್ತಾರೆ. ಮಾರುಕಟ್ಟೆ ದರದಲ್ಲಿ ಸುಧಾರಣೆ ಇಲ್ಲದಿರುವುದರಿಂದ ಖರೀದಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ. ಖರೀದಿ ಪ್ರಕ್ರಿಯೆ ಸ್ಥಗಿತಗೊಳಿಸಲು ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿಯಮಿತವು ಈ ಕೆಳಗಿನ ಕಾರಣಗಳನ್ನು ಪರಿಗಣಿಸಿರುತ್ತದೆ :

- ಮಂಡಳಿಯ ವತಿಯಿಂದ ಮಾರುಕಟ್ಟೆ ಮಧ್ಯೆ ಪ್ರವೇಶ ಕಾರ್ಯಕ್ರಮದಡಿ, ಇದುವರೆಗೆ ರೂ. 11.73 ಕೋಟಿ ವೆಚ್ಚವನ್ನು ಭರಿಸಿ, ಜರುಗುತ್ತಿರುವ ಖರೀದಿ ಕಾರ್ಯಾಚರಣೆಯಿಂದ ಮಾರುಕಟ್ಟೆಯಲ್ಲಿ ಮಾದರಿ ದರವು ಹೆಚ್ಚಿರುವುದಿಲ್ಲ.
- ಸಣ್ಣ ಮತ್ತು ಮಧ್ಯಮ ರೈತರ ಸಮುದಾಯಕ್ಕೆ ಹೆಚ್ಚಿನ ನಿರೀಕ್ಷಿತ ಲಾಭ ನೀಡುವುದು ಸಾಧ್ಯವಾಗುತ್ತಿಲ್ಲ.
- ಮಂಡಳಿಗೆ ಸಾಲವನ್ನು ಪಡೆದು ಖರೀದಿಸುವಲ್ಲಿ ಹಾಗೂ ಹೆಚ್ಚಿನ ದರದಲ್ಲಿ ಖರೀದಿಸಲಾದ ತೊಗರಿಗೆ ನಿರೀಕ್ಷಿತ ಮಾರಾಟ ದರ ದೊರೆಯದಿದ್ದಲ್ಲಿ ಮಂಡಳಿಯು ಹೆಚ್ಚಿನ ನಷ್ಟವನ್ನು ಅನುಭವಿಸುವ ಸಂಭವವಿರುತ್ತದೆ.
- 2011–12ನೇ ಸಾಲಿನ ಮುಂಗಾರು ಹಂಗಾಮಿನ ತೊಗರಿಯು ಮಾರುಕಟ್ಟೆಗೆ ಬರುವ ಋತುಕಾಲವು ಮುಗಿದ್ದಿದ್ದು ಅದರಂತೆ ಎಫ್.ಎ.ಕ್ಯೂ. ಗುಣಮಟ್ಟದ ತೊಗರಿಯು ಮಾರುಕಟ್ಟೆಗೆ ಬರುವ ಪ್ರಮಾಣವು ಸಹ ಗಣನೀಯವಾಗಿ ಕಡಿಮೆಯಾಗುತ್ತಿದೆ.
- 2010–11ನೇ ಸಾಲಿನಲ್ಲಿ ಇದೇ ತರಹ ಮಾರುಕಟ್ಟೆ ಮಧ್ಯ ಪ್ರವೇಶ ಮಾಡಿರುವುದರಿಂದ ಮಾರುಕಟ್ಟೆ ದರದಲ್ಲಿ ಸುಧಾರಣೆ ಆಗಿ ರೈತರು ತಮ್ಮ ತೊಗರಿಯನ್ನು ಮಾರಾಟ ಮಾಡಲು

ಮಾರುಕಟ್ಟೆಗೆ ಧಾವಿಸುತ್ತಾರೆ. ಆದರೆ, 2011–12ನೇ ಸಾಲಿನ ಮುಂಗಾರು ಹಂಗಾಮಿನ ತೊಗರಿಯ ಮಾರುಕಟ್ಟೆ ದರದಲ್ಲಿ ಸುಧಾರಣೆ ಇಲ್ಲದಿರುವುದರಿಂದ ಖರೀದಿ ಕೇಂದ್ರಕ್ಕೆ ಬರುವ ರೈತರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲಿದೆ. ಅಲ್ಲದೆ, ರೈತರನ್ನು ಮಾರುಕಟ್ಟೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಲ್ಲಾಳಿಗಳು ಖರೀದಿ ಕೇಂದ್ರಕ್ಕೆ ಕರೆ ತಂದು ಈ ಮೊದಲೆ ಕಡಿಮೆ ದರದಲ್ಲಿ ವ್ಯಾಪಾರಸ್ಥರು ರೈತರಿಂದ ಖರೀದಿಸಿದ ತೊಗರಿಯನ್ನು ದುರ್ಲಾಬ ಪಡೆಯುವ ದುರುದ್ದೇಶದಿಂದ ರೈತರ ಮುಖಾಂತರ ಅದೆ ತೊಗರಿಯನ್ನು ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿಗೆ ಮಾರಾಟ ಮಾಡಿಸುತ್ತಿದ್ದಾರೆ. ಇದರಿಂದಾಗಿ ನಿಜವಾದ ರೈತನಿಗೆ ಸರ್ಕಾರದ ನೆರವು ಸಿಗದೆ ವ್ಯಾಪಾರಸ್ಥರು ಹಾಗೂ ದಲ್ಲಾಳಿಗಳು ಪ್ರಯೋಜನ ಪಡೆಯುತ್ತಿದ್ದಾರೆ. ರೈತರಿಗೆ ಸಿಗಬೇಕಾದ ಲಾಭದಲ್ಲಿ ಪಾಲುದಾರರಾಗುತ್ತಿರುವುದು ಬಲ್ಲ ಮೂಲಗಳಿಂದ ತಿಳಿದು ಬಂದಿರುತ್ತದೆ.

ಕೇಂದ್ರ ಸರ್ಕಾರದವರು ಮಾರುಕಟ್ಟೆ ಬೆಲೆಯು ಪ್ರತಿ ಕ್ವಿಂಟಾಲ್‌ಗೆ ರೂ. 3,200/–ಗಳಿಗಿಂತಲೂ ಕಡಿಮೆಯಾದಾಗ ಮಾತ್ರ ನಮ್ಮ ನೆರವಿಗೆ ಬರುತ್ತಾರೆ. ಎನ್ನುವಂತಹ ವಿಚಾರವನ್ನು ನಾನು ಮತ್ತೊಮ್ಮೆ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತಿದ್ದೇನೆ. ಇದೆಲ್ಲಕ್ಕಿಂತ ಮುಖ್ಯವಾಗಿ ಈ ದೇಶದ ಬೇರೆ ಯಾವ ರಾಜ್ಯದಲ್ಲಿಯೂ ಸಹಿತ ತೊಗರಿಯನ್ನು ಖರೀದಿ ಮಾಡುವಂತಹ ವ್ಯವಸ್ಥೆಯನ್ನು ಮಾಡಿಲ್ಲ ಎನ್ನುವಂತಹ ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತಿದ್ದೇನೆ.

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

ತೊಗರಿಯನ್ನು ಬೆಳೆಯುತ್ತಿರುವಂತಹ ಪಂಜಾಬ್, ಆಂಧ್ರಪ್ರದೇಶ, ಮಹಾರಾಷ್ಟ್ರ ಮುಂತಾದ ಯಾವುದೇ ರಾಜ್ಯಗಳಲ್ಲಾಗಲಿ ತೊಗರಿ ಬೆಲೆ ಎಷ್ಟಿದೆ ಎಂಬುದನ್ನು ಗಮನಿಸಿದಾಗ ಇವೊತ್ತು ಮಹಾರಾಷ್ಟ್ರದಲ್ಲಿ ತೊಗರಿಯ

ಮಾರುಕಟ್ಟೆ ಬೆಲೆ ಕ್ವಿಂಟಾಲ್‌ಗೆ 2300 ರಿಂದ 3000 ರೂಪಾಯಿಗಳವರೆಗಿದೆ. ಈ ರೀತಿ ಬೆಲೆ ಇದ್ದಾಗ್ಯೂ ಸಹಿತ ಅಲ್ಲಿ 3700 ರೂಪಾಯಿಗಳಿಗೆ ತೊಗರಿಯನ್ನು ಖರೀದಿ ಮಾಡುವಂತಹ ವ್ಯವಸ್ಥೆ ಕೇಂದ್ರ ಸರ್ಕಾರದಿಂದ ಆಗಿಲ್ಲ ಎನ್ನುವಂತಹ ವಿಚಾರವನ್ನು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತಿದ್ದೇನೆ. ಆಂಧ್ರ ಪ್ರದೇಶದಲ್ಲಿ ಸಹ ಇವೊತ್ತು ಕ್ವಿಂಟಾಲ್‌ಗೆ ರೂ. 2600/– ರಿಂದ 3400/– ರವರೆಗಿನ ಮಾರುಕಟ್ಟೆ ಬೆಲೆಯಲ್ಲಿ ತೊಗರಿಯನ್ನು ಖರೀದಿ ಮಾಡಲಾಗುತ್ತಿದೆ. ಮೊನ್ನೆ 24ನೇ ತಾರೀಖಿನ ದಿವಸ ನಮ್ಮ ದೇಶದ ಅನೇಕ ರಾಜ್ಯಗಳ ಮಾರುಕಟ್ಟೆ ಬೆಲೆಗಳ ಮಾಹಿತಿಯ ಲೆಕ್ಕವನ್ನು ನಾನು ದಾಖಲೆಗಳೊಡನೆ ನಿಮ್ಮ ಮುಂದಿಡುತ್ತಿದ್ದೇನೆ. ಇವೊತ್ತು ಕೇಂದ್ರ ಸರ್ಕಾರದವರು ಕ್ವಿಂಟಾಲ್‌ಗೆ ರೂ. 4000/– ದಂತೆ ಖರೀದಿ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಆದ್ದರಿಂದ ಇವೊತ್ತು ರಾಜ್ಯ ಸರ್ಕಾರವೇ ತನ್ನ ಜವಾಬ್ದಾರಿಯಿಂದ ಕ್ವಿಂಟಾಲ್‌ಗೆ ರೂ. 3200/– ಕ್ಕಿಂತ ಹೆಚ್ಚಾದಾಗ ಹೆಚ್ಚಿನ ಬೆಲೆಯನ್ನು ಗೊತ್ತುಪಡಿಸಿಲ್ಲ ಎನ್ನುವಂತಹ ವಿಚಾರವನ್ನು ಸಹ ತಮ್ಮ ಗಮನಕ್ಕಿರಲಿ ಎನ್ನುವಂತಹ ಉದ್ದೇಶದಿಂದ ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ.

**ಶ್ರೀಮತಿ ಮೋಟಮ್ಮ :** ಮಾನ್ಯ ಸಭಾಪತಿಯವರೇ, ಇದುವರೆಗೆ ಮಾನ್ಯ ಸಚಿವರು ನೀಡಿದಂತಹ ಉತ್ತರವನ್ನು ಕೇಳಿದ್ದೇವೆ. ಹಾಗಾದರೆ ಸರ್ಕಾರ ತೊಗರಿ ಮಂಡಳಿಯನ್ನು ಸ್ಥಾಪನೆ ಮಾಡಿರುವುದರ ಉದ್ದೇಶವೇನು? ಸಾಲ ಮಾಡಿ ಬೆಂಬಲ ಬೆಲೆ ಕೊಟ್ಟು ಆವರ್ತನಿಧಿಯಿಂದ ಖರೀದಿಸುವುದಕ್ಕೆ ಸಾಧ್ಯವಿಲ್ಲ. ಎನ್ನುವಂತಹ ಮಾತನ್ನು ಇಲ್ಲಿ ಹೇಳಲಾಗುತ್ತಿದೆ. ಹಾಗಾದರೆ ತೊಗರಿ ಮಂಡಳಿಯನ್ನು ಸ್ಥಾಪನೆ ಮಾಡಿರು ವುದರ ಉದ್ದೇಶವೇನು, ಅದರಿಂದ ರೈತರಿಗೆ ಸಹಾಯವಾಗುತ್ತದೆಯೇ? ಒಂದು ವೇಳೆ ನಷ್ಟವಾದರೂ ಸಹ ಸರ್ಕಾರ ಆ ರಿಸ್ಕನ್ನು ತೆಗೆದುಕೊಂಡು ರೈತರಿಗೆ ಸಹಾಯವಾಗುವ ರೀತಿಯಲ್ಲಿ ಮತ್ತಷ್ಟು ಆವರ್ತನಿಧಿಯನ್ನು ಕೊಡಬೇಕಾಗುತ್ತದೆ. ಆ ರೀತಿ ಹೆಚ್ಚಿನ ಹಣವನ್ನು ಕೊಟ್ಟು ತೊಗರಿಯನ್ನು ಖರೀದಿ ಮಾಡಿ ಆ ರೈತರ ಸಹಾಯಕ್ಕೆ ಬರಬೇಕಾಗುತ್ತದೆ. ಸಾಲ ಮಾಡಿ

ನಿರೀಕ್ಷಿತ ಮಾರಾಟ ದರ ಇಲ್ಲದಿದ್ದಲ್ಲಿ ಮಂಡಳಿಯು ಹೆಚ್ಚಿನ ನಷ್ಟವನ್ನು ಅನುಭವಿಸುವ ಸಂಭವ ಇರುತ್ತದೆ ಎಂದು ನಾವು ಖರೀದಿಯನ್ನು ನಿಲ್ಲಿಸಿದ್ದೇವೆ ಎಂದರೆ ಅದು ರೈತರಿಗೆ ಸಹಾಯ ಮಾಡುವ ಸರಿಯಾದ ರೀತಿಯಲ್ಲ. ನಮ್ಮ ರಾಜ್ಯದಲ್ಲಿ ಮಾತ್ರ ಈ ವ್ಯವಸ್ಥೆ ಇದ್ದು ನಮ್ಮ ದೇಶದ ಬೇರೆ ಯಾವುದೇ ರಾಜ್ಯದಲ್ಲಿಯೂ ಈ ರೀತಿಯ ವ್ಯವಸ್ಥೆ ಇಲ್ಲ ಎನ್ನುವಂತಹ ವಿಚಾರವನ್ನು ಮಾನ್ಯ ಸಚಿವರು ತಿಳಿಸಿದ್ದಾರೆ. ಬೇರೆ ರಾಜ್ಯದಲ್ಲಿಲ್ಲ ಎಂದ ಮಾತ್ರಕ್ಕೆ ನಮ್ಮಲ್ಲಿ ಕೂಡ ಇರಬಾರದೆಂಬ ನಿಯಮವೇನೂ ಇಲ್ಲ.

**ಶ್ರೀ ಸಿ. ಎಂ. ಉದಾಸಿ :** ಮಾನ್ಯ ಸಭಾಪತಿಯವರೇ, ಬೆಲೆ ಕುಸಿತದ ಪರಿಣಾಮ ಇಡೀ ದೇಶಾದ್ಯಂತ ತೊಗರಿ ಬೆಳೆಯುತ್ತಿರುವಂತಹ ಎಲ್ಲ ರೈತರ ಮೇಲೂ ಆಗಿರುತ್ತದೆ ಎನ್ನುವಂತಹ ವಿಚಾರವನ್ನು ತಮ್ಮ ಗಮನಕ್ಕೆ ತರುವ ಉದ್ಧೇಶದಿಂದ ನಾನು ಆ ಮಾತನ್ನು ಹೇಳಿದ್ದೇನೆಯೋ ಹೊರತು 3200 ರೂಪಾಯಿಗಳಿಗಿಂತ ಕಡಿಮೆ ಇದ್ದಾಗ ಮಾತ್ರ ನಾವು ಕೇಂದ್ರ ಸರ್ಕಾರದವರು ಗೊತ್ತುಪಡಿಸಿದ ದರದಲ್ಲಿ ಖರೀದಿ ಮಾಡಬೇಕಾಗುತ್ತದೆ ಎನ್ನುವಂತಹ ವಿಚಾರವನ್ನು ತಮ್ಮ ಗಮನಕ್ಕೆ ತರಬಯಸಿದ್ದೇನೆ.

**ಶ್ರೀಮತಿ ಮೋಟಮ್ಮ :** ಬೆಂಬಲ ಬೆಲೆ ಅಲ್ಲ, ಕೊಳ್ಳುವ ಬೆಲೆ.

**ಶ್ರೀ ಸಿ. ಎಂ. ಉದಾಸಿ :** ಮಾನ್ಯ ಸಭಾಪತಿಯವರೇ, ಈಗ ನಾವು ಗೊತ್ತುಪಡಿಸಿರುವ 4000 ರೂಪಾಯಿಗಳ ಬೆಲೆ ಏನಿದೆ ಅದನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾತ್ರ ಗೊತ್ತುಪಡಿಸಿದ್ದೇವೆ ಎನ್ನುವಂತಹ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಗಮನಿಸಬೇಕಾಗುತ್ತದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ :** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗ ಏನು ಕಾಮೆಂಟ್ ಮಾಡಿದ್ದಾರೆ ಅದರ ಬಗ್ಗೆ ಅಷ್ಟೇ ನಾನು ಮಾತನಾಡಬಯಸುತ್ತೇನೆ. ಕೇಂದ್ರ ಸರ್ಕಾರ ಗೊತ್ತುಪಡಿಸಿರುವುದಕ್ಕಿಂತ ಹೆಚ್ಚಿನ ಹಣವನ್ನು ಕೊಟ್ಟು ನಾವು ಬೇರೆ ಬೇರೆ ರೈತರಿಗೆ ಸಹಾಯ

ಮಾಡುವಂತಹ ಉದ್ದೇಶದಿಂದ ಮಾಡಿದ್ದೇವೆ. ಈ ಸರ್ಕಾರದಲ್ಲಿ ಆ ಉದಾಹರಣೆಗಳಿವೆ.

**ಶ್ರೀ ಸಿ. ಎಂ. ಉದಾಸಿ** : ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಾನು ಹೇಳುವಂತಹ ವಿಚಾರವನ್ನು ಸಹ ಕೇಳಬೇಕಾಗುತ್ತದೆ. ಈಗ ಏನಾಗಿದೆ ಎಂದರೆ ಬಹುತೇಕ ರೈತರಿಗೆ ಬೆಳೆದಂತಹ ಬೆಳೆಯನ್ನು ಆವು ಸಂಪೂರ್ಣವಾಗಿ ಮಾರುಕಟ್ಟೆಯಲ್ಲಿ ಈಗಾಗಲೇ ಖರೀದಿ ಮಾಡಿ ಆಗಿದೆ. ಈಗ ಬರುತ್ತಿರತಕ್ಕಂತಹ ಮಾಲು ಏನಾಗಿದೆ ಎಂದರೆ ವ್ಯಾಪಾರಸ್ಥರು ಮೊದಲು ಕಡಿಮೆ ದರದಲ್ಲಿ ಖರೀದಿ ಮಾಡಿದಂತಹ ಮಾಲೇನಿದೆ ಅದನ್ನು ವ್ಯಾಪಾರಸ್ಥರು ರೈತರ ಮುಖೇನ ಈ ಖರೀದಿ ಕೇಂದ್ರಕ್ಕೆ ತರುವಂತಹ ವ್ಯವಸ್ಥೆ ನಡೆಯುತ್ತಿದೆ ಎನ್ನುವಂತಹ ವಿಚಾರ ನಮ್ಮ ಇಲಾಖಾ ಅಧಿಕಾರಿಗಳ ಗಮನಕ್ಕೆ ಬಂದಿದೆ ಎನ್ನುವಂತಹ ಮಾತನ್ನು ಸಹಿತ ಈ ಉತ್ತರದಲ್ಲಿ ನೀಡಲಾಗಿದೆ. ಆ ಕಾರಣದಿಂದ ಇದು ದುರುಪಯೋಗವಾಗಬಾರದು. ರೈತರ ಶೋಷಣೆ ಆಗಬಾರದು. ಈಗ 4000 ರೂಪಾಯಿಗಳಿಗೆ ತೆಗೆದುಕೊಳ್ಳುವಂಥ ವ್ಯವಸ್ಥೆ ಮಾಡಿದ್ದೇವೆ ಎನ್ನುವಂತಹ ವಿಚಾರವನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಅಲ್ಲಮಪ್ರಭು ಪಾಟೀಲ್** : ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಮಾನ್ಯ ಸಿ. ಎಂ. ಉದಾಸಿಯವರ ಕಡೆಯಿಂದ ತಪ್ಪು ಮಾಹಿತಿಯನ್ನು ನುಡಿಸಲಾಗುತ್ತಿದೆ. ಅವರು ಬಹಳ ಸಮಂಜಸವಾದ ಉತ್ತರವನ್ನು ಕೊಟ್ಟಿದ್ದಾರೆ. ಅದನ್ನು ನಾನು ಅಲ್ಲಗಳೆಯುವುದಿಲ್ಲ. ಇದು ಒಪ್ಪಿಕೊಳ್ಳುವಂತಹ ವಿಚಾರವೇ ಆಗಿದೆ. ಆದರೆ ಇಲ್ಲಿರುವಂತಹ ಪ್ರಶ್ನೆ ಏನೆಂದರೆ ಇಡೀ ದೇಶದಲ್ಲಿ ಎಲ್ಲಿಯೂ ಸಹ ತೊಗರಿಯನ್ನು ಖರೀದಿ ಮಾಡುವಂತಹ ಈ ಪದ್ಧತಿ ಬೇರೆ ಎಲ್ಲಿಯೂ ಇಲ್ಲ, ನಮ್ಮಲ್ಲಿ ಮಾತ್ರ ಇದೆ ಎನ್ನುವಂತಹ ವಿಚಾರವನ್ನು ಮಾನ್ಯ ಸಚಿವರು ತಿಳಿಸಿದರು. ಇಡೀ ದೇಶದಲ್ಲಿ ಯಾರೂ ಸಹ ಕೃಷಿ ಬಜೆಟ್‌ನ್ನು ಮಂಡನೆ ಮಾಡಿಲ್ಲ. ಕೃಷಿ ಬಜೆಟ್‌ನ್ನು ಮಂಡನೆ ಮಾಡಿರತಕ್ಕಂತಹ ಮಾನ್ಯ ಯಡಿಯೂರಪ್ಪನವರು ಹಸಿರು

ಶಾಲನ್ನು ಧರಿಸಿ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿ ಇವೊತ್ತು ಆ ಕೃಷಿಕರನ್ನು ನೋಡದೆ ಹೋಗತಕ್ಕಂತಹ ಪರಿಸ್ಥಿತಿಯಿಂದಾಗಿ, ಕರ್ನಾಟಕದಲ್ಲಿ ಸರ್ಕಾರ ಈ ರೀತಿಯ ಅಲ್ಲೋಲಕಲ್ಲೋಲಕ್ಕೆ ಒಳಗಾಗಿದೆ. ಇದನ್ನು ಸರ್ಕಾರದವರು ಮೊದಲು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಕೃಷಿ ಬಜೆಟ್‌ನ್ನು ಮಂಡನೆ ಮಾಡಿದಾಗ ಕಳೆದ ಸಲವಾದರು ಅದರಲ್ಲಿ ಆವರ್ತನಿಧಿಯನ್ನು ಇಡಲಾಗಿತ್ತೇನು? ಕಳೆದ ಬಾರಿ ಪ್ರತಿ ಕ್ವಿಂಟಾಲ್ ತೊಗರಿಯನ್ನು ರೂ. 4200/– ರಂತೆ ಖರೀದಿಸಲಾಗಿತ್ತು. ಏತಕ್ಕೆ ಖರೀದಿ ಮಾಡಿದಿರಿ? ಕಳೆದ ಬಾರಿ ಖರೀದಿ ಮಾಡಿದ ಸುಮಾರು 10,000 ಕ್ವಿಂಟಾಲ್ ತೊಗರಿ ಅಲ್ಲಿದೆ, ಇವೊತ್ತು ಬಿಸಿ ಊಟಕ್ಕಾಗಿ, ಆಸ್ಪತ್ರೆಗಳಿಗಾಗಿ, ಬಂದಿಖಾನೆಗಳಿಗಾಗಿ ಈ ರೀತಿ ಬೇರೆ ಬೇರೆ ಇಲಾಖೆಗಳವರು 130 ಕೋಟಿ ರೂಪಾಯಿಗಳಷ್ಟು ಮೌಲ್ಯದ ತೊಗರಿ ಬೇಳೆಯನ್ನು ಖರೀದಿ ಮಾಡಿ ಉಪಯೋಗಿಸುವಂತಹ ಅವಶ್ಯಕತೆ ಇರುತ್ತದೆ. ಈ ಬಾರಿ ಸುಮಾರು 2 ಲಕ್ಷ ಟನ್‌ಗಳಷ್ಟು ತೊಗರಿಯನ್ನು ಅಲ್ಲಿನ ರೈತರೇನು ಬೆಳೆದಿದ್ದಾರೆ ಅದನ್ನು ಸರ್ಕಾರ ಸುಮಾರು 50 ಕೋಟಿ ರೂಪಾಯಿಗಳನ್ನು ಕೊಟ್ಟು ಖರೀದಿಸಬಹುದಾಗಿತ್ತು. ಉದಾಹರಣೆಗೆ ನಮ್ಮ ಊರಿನಲ್ಲಿಯೇ ಸುಮಾರು 10 ಜನ ಶ್ರೀಮಂತ ರೈತರು ತಾವು ಬೆಳೆದಂತಹ ತೊಗರಿಯನ್ನು ಮಾರಾಟ ಮಾಡಿ ಬಂದರು.

ಸನ್ಮಾನ್ಯ ಸಭಾಪತಿಯವರೇ, ಇನ್ನೂ 75 ಜನ ರೈತರು ತೊಗರಿ ಬೆಳೆಯ ಚೀಲಗಳನ್ನು ಇಟ್ಟುಕೊಂಡು ಕುಳಿತುಕೊಂಡಿದ್ದಾರೆ. ನಮ್ಮ ತೊಗರಿ ಇನ್ನೂ ಹೋಗಿಲ್ಲ ಆಗಲೇ ಬಂದ್ ಮಾಡಿದ್ದಾರೆ ಎಂದು ಅವರು ಅಳುತ್ತಿದ್ದಾರೆ. ಜನವರಿ 26ನೇ ತಾರೀಖಿನಂದು ಗಣರಾಜ್ಯೋತ್ಸವ ದಿನ ಮಾನ್ಯ ಮಂತ್ರಿಗಳಾದ ಬಸವರಾಜ ಬೊಮ್ಮಾಯಿಯವರು ಅಲ್ಲಿಗೆ ಬಂದಿದ್ದರು, ಮಾನ್ಯ ರೇವೂ ನಾಯಕ್‌ರವರು ಸಹ ಉಪಸ್ಥಿತರಿದ್ದರು. ಅವರಿಗೂ ಈ ವಿಚಾರ ಗೊತ್ತಿದೆ. ಆ ದಿನ ವೇದಿಕೆಯ ಮೇಲೆ 'ಎಂಥ ಕಷ್ಟ ಕಾಲದಲ್ಲಿಯೂ ಕೂಡ ಈ ಸರ್ಕಾರ ರೈತರ ಪರವಾಗಿರುತ್ತದೆ, ನಾವು ಒಂದು

ಕ್ವಿಂಟಾಲ್‌ಗೆ 4000 ರೂಪಾಯಿಗಳ ಬೆಂಬಲ ಬೆಲೆಯನ್ನು ಕೊಟ್ಟು ತೊಗರಿಯನ್ನು ಖರೀದಿ ಮಾಡುತ್ತೇವೆ' ಎನ್ನುವಂತಹ ಆಶ್ವಾಸನೆಯನ್ನು ಕೊಟ್ಟಿದ್ದರು. ಇಂತಹ ಆಶ್ವಾಸನೆಯನ್ನು ಅವರು ಏತಕ್ಕಾಗಿ ಕೊಟ್ಟರು ಎನ್ನುವುದು ನಮ್ಮ ಪ್ರಶ್ನೆಯಾಗಿದೆ. ಅವರ ಮೇಲೆ ನಾವು ಕೇಸ್ ದಾಖಲು ಮಾಡಬೇಕಾಗುತ್ತದೆ. ರೈತರ ಶಾಪ ಅವರಿಗೆ ತಟ್ಟುತ್ತದೆ. ರೈತರ ಬಗ್ಗೆ ಅವರಿಗೆ ಕಳಕಳಿಯಿದ್ದರೆ, ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಹೈದ್ರಾಬಾದ್ ಕರ್ನಾಟಕ ತೊಗರಿ ಬೋರ್ಡ್‌ನ್ನು ರಚನೆ ಮಾಡಿ ದಶಕಗಳು ಕಳೆದರು ಸಹ ಇಲ್ಲಿಯವರೆಗೆ ಯಾವುದೇ ರೀತಿಯ ಸೌಲಭ್ಯಗಳು ಅಲ್ಲಿ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ರೈತರ ಪರವಾಗಿ ಆ ತೊಗರಿ ಮಂಡಳಿಗೆ ಇನ್ನೊಂದು 20 ಕೋಟಿ ರೂಪಾಯಿಗಳ ಆವರ್ತ ನಿಧಿಯನ್ನು ನೀಡಿ ತೊಗರಿಯನ್ನು ಖರೀದಿ ಮಾಡಿದರೆ ಅವರಿಗೆ ಹೆಸರು ಮತ್ತು ಕೀರ್ತಿ ಬರುತ್ತದೆ.

**ಶ್ರೀ ಸಿ. ಎಂ. ಉದಾಸಿ :**, ಸನ್ಮಾನ್ಯ ಸಭಾಪತಿಯವರೇ, ನಮ್ಮ ನೆರೆಯ ರಾಜ್ಯವಾಗಿರುವಂತಹ ಮಹಾರಾಷ್ಟ್ರದಲ್ಲಿ ಒಂದು ಕ್ವಿಂಟಾಲ ತೊಗರಿಬೇಳೆಗೆ ಅಲ್ಲಿನ ಸರ್ಕಾರ 2600–2800 ರೂಪಾಯಿಗಳ ಬೆಂಬಲ ಬೆಲೆಯನ್ನು ನೀಡುತ್ತಿದೆ. ನಮ್ಮ ರಾಜ್ಯದಲ್ಲಿ ಒಂದು ಕ್ವಿಂಟಾಲ್ ತೊಗರಿಬೇಳೆಗೆ 4000 ರೂಪಾಯಿಗಳ ಬೆಂಬಲ ಬೆಳೆಯನ್ನು ನೀಡಿದರೆ ಮಹಾರಾಷ್ಟ್ರದ ತೊಗರಿಬೇಳೆ ನಮ್ಮ ರಾಜ್ಯದ ಮಾರುಕಟ್ಟೆಯಲ್ಲಿ ಮಾರಾಟವಾಗುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ದೇಶದ ಇತರ ಕಡೆಗಳಲ್ಲಿ ಬೆಲೆಯ ಪರಿಸ್ಥಿತಿ ಏನಿದೆ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅವೈಜ್ಞಾನಿಕವಾಗಿ ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾವು ಹೋಗಬಾರದು. ಮಾರುಕಟ್ಟೆ ಬೆಲೆಯಲ್ಲಿ ಪ್ರಗತಿಯಾಗಿ ರೈತರಿಗೆ ಅನುಕೂಲವಾಗಲಿ ಎನ್ನುವಂತಹ ಸದುದ್ದೇಶದಿಂದ 4000 ರೂಪಾಯಿಗಳ ಬೆಂಬಲ ಬೆಲೆಯನ್ನು ನೀಡಿ ಖರೀದಿ ಮಾಡುತ್ತೇವೆ ಎಂದು ಘೋಷಣೆ ಮಾಡಲಾಯಿತು. ಮಾರುಕಟ್ಟೆಯ ಬೆಲೆ ಇಡೀ ದೇಶದಲ್ಲಿ ಎಲ್ಲಿಯೂ ಹೆಚ್ಚಾಗುವುದಕ್ಕೆ

ಕಾರಣಗಳಿಲ್ಲ. ಇಂತಹ ಸಂದರ್ಭದಲ್ಲಿ ನಾವು 25,000 ಕ್ವಿಂಟಾಲ್‌ಗಿಂತ ಹೆಚ್ಚು ತೊಗರಿಯನ್ನು ಖರೀದಿ ಮಾಡಿ ರೈತರಿಗೆ ಅನುಕೂಲ ಮಾಡುವಂತಹ ಕೆಲಸವನ್ನು ಮಾಡಿದೆ. ಮಾನ್ಯ ಸದಸ್ಯರು ಮಾತನಾಡುತ್ತಾ '130 ಕೋಟಿ ರೂಪಾಯಿಗಳಷ್ಟು ತೊಗರಿಯನ್ನು ಖರೀದಿ ಮಾಡುವಂತಹ ಅವಶ್ಯಕತೆ ಬರುತ್ತದೆ' ಎಂದು ಹೇಳಿದರು. ಕೇಂದ್ರ ಸರ್ಕಾರದ ನಿಯಮಾವಳಿಗಳಿಗೆ ಅನುಗುಣವಾಗಿ ಮಹಿಳಾ ಮತ್ತು ಮಕ್ಕಳ ಇಲಾಖೆಯವರು ಖರೀದಿ ಮಾಡಬೇಕಾದರು ಸಹ ನೇರವಾಗಿ ನಾವು ಖರೀದಿ ಮಾಡಿರುವಂತಹ ತೊಗರಿಯನ್ನು ಅವರಿಗೆ ಕೊಡುವುದಕ್ಕೆ ಆಗುವುದಿಲ್ಲ. ಟೆಂಡರ್ ಕರೆದು ಖರೀದಿ ಮಾಡಬೇಕಾಗುತ್ತದೆ. ಈ ಯೋಜನೆ ಕೇಂದ್ರ ಸರ್ಕಾರದ ಸಹಾಯಧನದೊಂದಿಗೆ ಇದೆ ಎನ್ನುವುದನ್ನು ಸಹ ನಾವು ಗಮನಿಸಬೇಕಾಗುತ್ತದೆ. ಆ ಕಾರಣದಿಂದಾಗಿಯೇ ಇವತ್ತು ನಾವು ಈ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ಮಧ್ಯವರ್ತಿಗಳು ಮತ್ತು ವ್ಯಾಪಾರಸ್ಥರಿಂದ ಈ ಯೋಜನೆಯ ದುರುಪಯೋಗ ಆಗಬಾರದೆನ್ನುವ ಉದ್ದೇಶದಿಂದ ಈ ಯೋಜನೆಯನ್ನು ಸ್ಥಗಿತಗೊಳಿಸಲಾಗಿದೆ ಎನ್ನುವ ಅಂಶವನ್ನು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ.

**ಶ್ರೀ ಅಲ್ಲಮಪ್ರಭು ಪಾಟೀಲ್** : ಸನ್ಮಾನ್ಯ ಸಭಾಪತಿಯವರೇ, ಏತಕ್ಕಾಗಿ ತೊಗರಿ ಬೆಲೆ ಹೆಚ್ಚಾಗಲಿಲ್ಲ ಎನ್ನುವುದಕ್ಕೆ ಕಾರಣವನ್ನು ನೀಡಲು ಬಯಸುತ್ತಿದ್ದೇನೆ. ಮೊದಲಿನಿಂದಲೂ ತೊಗರಿ ಮಂಡಳಿಗೆ 1.2 ಕೋಟಿ ರೂಪಾಯಿಗಳ ಆವರ್ತನಿಧಿಯನ್ನು ನೀಡಲಾಗಿದೆ. ತೊಗರಿ ಮಂಡಳಿ ಯವರು, 'ದುಡ್ಡು ಎಲ್ಲಿದೆ? ದುಡ್ಡೇ ಕೊಟ್ಟಿಲ್ಲ, ಇವತ್ತೊಂದು ದಿನ ತಕ್ಕಡಿ ಹಾಕಿದ್ದೇವೆ ನಾಳೆಯಿಂದ ಬಂದ್ ಆಗುತ್ತದೆ' ಎನ್ನುವುದನ್ನು ಎಲ್ಲ ಕಡೆಗಳಲ್ಲಿ ಪ್ರಚಾರ ಮಾಡಿಬಿಟ್ಟರು. ಈ ರೀತಿ ಪ್ರಚಾರ ಮಾಡಿದರೆ ತೊಗರಿ ಬೆಲೆ ಹೇಗೆ ಹೆಚ್ಚಾಗುತ್ತದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಹಿಂದಿನ ವರ್ಷ ತೊಗರಿ ಬೆಲೆ ಹೆಚ್ಚಾಗಿತ್ತು ಅದಕ್ಕೆ ಕಾರಣವೇನೆಂದರೆ, ಸರ್ಕಾರದವರು, 'ಎಷ್ಟೇ ತೊಗರಿ ಬೆಳೆ ಬಂದರೂ ಅದನ್ನು ಖರೀದಿ ಮಾಡುವುದಕ್ಕೆ ನಾವು

ಸಿದ್ಧರಿದ್ದೇವೆ' ಎಂದು ಘೋಷಣೆ ಮಾಡಿದ ಹಿನ್ನೆಲೆಯಲ್ಲಿ ತೊಗರಿ ಬೆಳೆ ಹೆಚ್ಚಾಯಿತು. ಈ ಸಾರಿ ಒಮ್ಮೆ 2 ಕೋಟಿ ರೂಪಾಯಿಗಳನ್ನು ಕೊಟ್ಟರು ಮತ್ತೊಮ್ಮೆ 2 ಕೋಟಿ ರೂಪಾಯಿಗಳನ್ನು ಕೊಟ್ಟರು. ಆ 2 ಕೋಟಿ ರೂಪಾಯಿಗಳು ಮುಗಿದ ನಂತರ ತೊಗರಿ ಖರೀದಿ ಬಂದ್ ಆಯಿತು. ದಲ್ಲಾಳಿಗಳು ಇದನ್ನು ಪ್ರಚಾರ ಮಾಡಿದಾಗ, ತೊಗರಿ ಬೆಲೆ ಹೆಚ್ಚಾಗಲಿಲ್ಲ. ಮತ್ತೊಂದು ಅಂಶವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಕೇಂದ್ರ ಸರ್ಕಾರದಲ್ಲಿ ತೊಗರಿಯ ಬೆಂಬಲ ಬೆಲೆ ಏತಕ್ಕಾಗಿ ಹೆಚ್ಚಾಗುವುದಿಲ್ಲ ಎಂದರೆ, ಹೆಸರು ಕಾಳಿನ ಬೆಳೆ 60 ದಿನದಲ್ಲಿ ಬರುತ್ತದೆ ಅದನ್ನು 4000 ಕ್ವಿಂಟಾಲ್‌ಗೆ ಮಾರಾಟ ಮಾಡುತ್ತಾರೆ. ಅದಕ್ಕೆ ಖರ್ಚು ಏನೂ ಇರುವುದಿಲ್ಲ. ಆದರೆ, ತೊಗರಿ ಬೆಳೆಯುವುದಕ್ಕೆ ಒಂದು ಎಕರೆಗೆ 5000 ರೂಪಾಯಿಗಳ ಖರ್ಚು ಬೀಳುತ್ತದೆ 120 ದಿವಸಕ್ಕೆ ಈ ಬೆಳೆ ಬರುತ್ತದೆ. ತೊಗರಿ ಬೆಲೆ ಒಂದು ಕ್ವಿಂಟಾಲ್‌ಗೆ 3700 ರೂಪಾಯಿಗಳಾಗಿದೆ. ಮೊನ್ನೆ ನಾನು ಒಂದು ನಿಯೋಗದೊಡನೆ ಕೇಂದ್ರ ಮಂತ್ರಿಗಳಾದ ಮಾನ್ಯ ಶರತ್‌ಪವಾರ್‌ರವನ್ನು ಭೇಟಿ ಮಾಡಿ, ಅವರಿಗೆ ಒಂದು ಭಿನ್ನಹವನ್ನು ಕೊಟ್ಟು, 'price fixation' ನಲ್ಲಿ ನೀವು 9 ಜನ ನಿಮ್ಮ ಕಡೆಯವರನ್ನು ಇಟ್ಟುಕೊಂಡಿದ್ದೀರಿ, ತೊಗರಿ ನಮ್ಮ ಕಡೆ ಬಹಳ ವಿಶೇಷವಾಗಿರುಂತಹ ಬೆಳೆಯಾಗಿದೆ. 'price fixation' ನ ಸಮಯದಲ್ಲಿ ದಯಮಾಡಿ ಬೆಂಬಲ ಬೆಲೆಯನ್ನು 4000 ದಿಂದ 5000 ರೂಪಾಯಿಗಳೆಂದು ಮಾಡಬೇಕು' ಎಂದು ಕೇಳಿಕೊಂಡಾಗ, ಅವರು 'ನಿಮ್ಮ ಕರ್ನಾಟಕ ಸರ್ಕಾರದಿಂದ ಪ್ರಸ್ತಾವನೆ ಬರಬೇಕು, ನಿಮ್ಮ ಸರ್ಕಾರದಿಂದ ಏನಾದರೂ 'price' ಕೊಟ್ಟರೆ, ನಾವು ಅದನ್ನು ಪರಿಶೀಲನೆ ಮಾಡುತ್ತೇವೆ' ಎನ್ನುವಂತಹ ಮಾತನ್ನು ಹೇಳಿದರು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೂ ಸಹ ಈ ಬಗ್ಗೆ ಅವರಿಗೆ ಪತ್ರವನ್ನು ಬರೆದಿದ್ದಾರೆ. ಅದು ಪರಿಶೀಲನೆಯಲ್ಲಿದೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ತೊಗರಿ ಮತ್ತು ರೈತರು ಬೆಳೆಯುವಂತಹ ಇತರೆ ಬೇಳೆ ಕಾಳುಗಳ 'price fixation' ನ ಸಮಯದಲ್ಲಿ ಕೇಂದ್ರ ಸರ್ಕಾರಕ್ಕೆ

ಒಂದು ನಿಯೋಗವನ್ನು ತೆಗೆದುಕೊಂಡು ಹೋಗುವುದು ಬಹಳ ಸೂಕ್ತ ಎನ್ನುವುದು ನನ್ನ ಭಾವನೆಯಾಗಿದೆ. ರಾಜ್ಯ ಸರ್ಕಾರ ತೊಗರಿ ಖರೀದಿ ಮಾಡುತ್ತೇವೆ ಎನ್ನುವಂತಹ ಘೋಷಣೆ ಏನು ಮಾಡಿದೆ ಆದರಂತೆ ನಡೆದುಕೊಳ್ಳಬೇಕಾಗುತ್ತದೆ. ಸರ್ಕಾರ ಕಳೆದ ಮೂರುವರೆ ವರ್ಷಗಳಲ್ಲಿ ಸುಮಾರು 750 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಮಠಮಾನ್ಯಗಳಿಗೆ ನೀಡಿದೆ. ಮೊನ್ನೆ ಮಂಡಿಸಿದಂತಹ ಆಯವ್ಯಯದಲ್ಲಿ ಮಠಗಳಿಗೆ 75 ಕೋಟಿ ರೂಪಾಯಿಗಳನ್ನು ಈ ಸರ್ಕಾರ ನೀಡಿದೆ. ಹಸಿರು ಶಾಲು ಹೊದ್ದುಕೊಂಡು ಪ್ರಮಾಣ ವಚನ ಸ್ವೀಕಾರ ಮಾಡಿರುವ ಈ ಸರ್ಕಾರ ಮತ್ತು ಕೃಷಿ ಆಯವ್ಯಯವನ್ನು ಮಂಡನೆ ಮಾಡಿರುವಂತಹ ಈ ಸರ್ಕಾರ ವಿಶೇಷವಾಗಿ ರೈತರಿಗೆ ಸಹಾಯ ಮಾಡಬೇಕೆನ್ನುವುದು ನನ್ನ ಕಳಕಳಿಯ ವಿನಂತಿಯಾಗಿದೆ. ಸರ್ಕಾರ ಈ ವಿಚಾರವನ್ನು ತಾಂತ್ರಿಕ ಅಂಶಗಳ ಹಿನ್ನೆಲೆಯಲ್ಲಿ ನೋಡುವುದು ಬೇಡ. ತಾಂತ್ರಿಕ ಅಂಶಗಳನ್ನು ಬದಿಗಿಟ್ಟು, ಸಚಿವ ಸಂಪುಟದಲ್ಲಿ ನಿರ್ಧಾರವನ್ನು ತೆಗೆದುಕೊಂಡು ರೈತರಿಗೆ ಹಣವನ್ನು ಕೊಡಬೇಕೆನ್ನುವುದು ನನ್ನ ಒತ್ತಾಯವಾಗಿದೆ.

**ಶ್ರೀ ಡಿ. ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)** ಸನ್ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ರೈತರ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಿರುವುದು ಮತ್ತು ಕೃಷಿ ಆಯವ್ಯಯವನ್ನು ಮಂಡನೆ ಮಾಡಿರುವುದು ಇಡೀ ರಾಜ್ಯದಲ್ಲಿ ಮತ್ತು ದೇಶದಲ್ಲಿ ಪ್ರಸಂಶೆಗೆ ಒಳಗಾಗಿದೆ. ಇದನ್ನು ಯಾರೂ ಅಲ್ಲಗಳೆಯುವಂತಿಲ್ಲ. ನಾನು ಈ ವರ್ಷದ ವಿಚಾರಗಳನ್ನು ಕೇಳುವುದಕ್ಕೆ ಬಯಸುತ್ತಿದ್ದೇನೆ. ರೈತರ ಪರವಾಗಿ ನಾವು ಇದ್ದೇವೆ ಎಂದು ತೋರಿಸಿ ಕೊಡುವುದಕ್ಕಾಗಿ ಕೆಲವೊಂದು ಉದಾಹರಣೆಗಳನ್ನು ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಕಳೆದ ಬಾರಿ ಭತ್ತದ ಬೆಲೆ ಕುಸಿತವಾಯಿತು. ಆಗ 150 ರೂಪಾಯಿಗಳ ಪ್ರೋತ್ಸಾಹ ಧನವನ್ನು ಕೊಟ್ಟು ಖರೀದಿ ಮಾಡಿದ್ದೇವೆ. ಈ ಬಾರಿ ಇನ್ನೂ ಒಂದು 100 ರೂಪಾಯಿಗಳನ್ನು ಹೆಚ್ಚು ಮಾಡಬೇಕೆಂದು ರೈತರು ಮನವಿಯನ್ನು

ಮಾಡಿಕೊಂಡರು. ನಾವು ಸುಮ್ಮನೆ ಕುಳಿತುಕೊಳ್ಳಲಿಲ್ಲ 250 ರೂಪಾಯಿಗಳ ಪ್ರೋತ್ಸಾಹಧನವನ್ನು ನೀಡಿ ಭತ್ತವನ್ನು ಖರೀದಿ ಮಾಡಿದ್ದೇವೆ. ಕೇಂದ್ರ ಸರ್ಕಾರದವರು ಆಮದು ಶುಲ್ಕವನ್ನು ಇಳಿಸಿದ ಕಾರಣ ರೇಷ್ಮೆಯ ಬೆಲೆ ಕುಸಿತವಾಯಿತು. ಈ ವಿಚಾರವಾಗಿ ಕೇಂದ್ರ ಸರ್ಕಾರಕ್ಕೆ ನಿಯೋಗ ಹೋಗಿ ಹೋಗಿ ಸುಸ್ತಾಯಿತು, ನಮ್ಮ ಪರವಾಗಿ ಅವರು ಬರಲಿಲ್ಲ, ನೇಕಾರರ ಪರವಾಗಿ ಅವರು ನಿಂತರು. ನಾವು ಒಂದು ಕೆ. ಜಿ. ರೇಷ್ಮೆಗೂಡಿಗೆ 30 ರೂಪಾಯಿಗಳ ಪ್ರೋತ್ಸಾಹಧನವನ್ನು ಕೊಟ್ಟು ಖರೀದಿ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಮೊನ್ನೆ ಈರುಳ್ಳಿ ಬೆಲೆಯಲ್ಲಿ ಕುಸಿತವಾಯಿತು. ಈರುಳ್ಳಿ ಕೊಯದೇ ರೈತರ ಕಣ್ಣಲ್ಲಿ ನೀರು ಬಂತು. ಈರುಳ್ಳಿ ಬೆಳೆಗೆ ಬೆಂಬಲ ಬೆಲೆಯನ್ನು ಕೊಟ್ಟು ಯಾರಾದರೂ ಖರೀದಿ ಮಾಡಿದ್ದರೆ, ಅದು ನಮ್ಮ ಸರ್ಕಾರ ಎನ್ನುವುದನ್ನು ಎಲ್ಲರೂ ತಿಳಿದುಕೊಳ್ಳಬೇಕಾಗಿದೆ. ತೊಗರಿ ಬೆಲೆ ಕುಸಿತವಾಗಿದೆ ಎಂದು ಹೇಳುತ್ತಿದ್ದಾರೆ. ನಿಜವಾಗಿಯೂ ನಾವು ಯಾವಾಗ ಮಧ್ಯೆ ಪ್ರವೇಶ ಮಾಡಬೇಕೆಂದರೆ, 3200ಕ್ಕಿಂತ ಕೆಳಗಿನ ಧಾರಣೆ ಬಂದ ಮೇಲೆ ಕೇಂದ್ರದ ಮ್ಯಾಚಿಂಗ್ ಗ್ರ್ಯಾಂಟ್ 300–500 ಅನುಪಾತದಲ್ಲಿ ನಾವು ಖರೀದಿ ಮಾಡಬೇಕಾಗುತ್ತದೆ. ಇಲ್ಲಿ 3400–3500 ರೂಪಾಯಿಗಳ ಬೆಲೆ ಇದ್ದಾಗ, ನಮಗೆ ಕೇಂದ್ರ ಸರ್ಕಾರದಿಂದ ಯಾವುದೇ ರೀತಿಯ ಸಹಕಾರ ಸಿಗುವುದಿಲ್ಲ. ಆದರೂ ನಾವು ಮಾರುಕಟ್ಟೆಯಲ್ಲಲಿ ತೊಗರಿ ಬೆಲೆ ಹೆಚ್ಚಾಗಬೇಕು ಎನ್ನುವ ಕಾರಣದ ಹಿನ್ನೆಲೆಯಲ್ಲಿ ಮಧ್ಯಪ್ರವೇಶ ಮಾಡಬೇಕಾಯಿತು. ನಮ್ಮ ಬಳಿ 1.37 ಕೋಟಿ ರೂಪಾಯಿಗಳು ಮಾತ್ರ ಹಣವಿತ್ತು. ಮತ್ತೇ 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಯಿತು. ಒಟ್ಟಾರೆ. 11.37 ಕೋಟಿ ರೂಪಾಯಿಗಳಲ್ಲಿ ತೊಗರಿಯನ್ನು ಖರೀದಿ ಮಾಡುವಂತಹ ಪ್ರಕ್ರಿಯೆಯನ್ನು ಮಾಡುತ್ತಾ ಬಂದೆವು. ಆಗ ಧಾರಣೆ ಹೆಚ್ಚಾಗಲಿಲ್ಲ. ಆದರೆ, ಅಲ್ಲಿ ಮತ್ತೊಂದು ವ್ಯವಸ್ಥೆಗಳು ಪ್ರಾರಂಭವಾಯಿತು. ಮಧ್ಯವರ್ತಿಗಳು ಪರೋಕ್ಷವಾಗಿ 'ಯು' ಟರ್ನ ಹೊಡೆದು ಬೆಂಬಲ ಸಿಗುತ್ತದೆ ಎನ್ನುವ ಕಾರಣದ ಹಿನ್ನೆಲೆಯಲ್ಲಿ ಖರೀದಿ

ಮಾಡಿರುವುದನ್ನು ಮತ್ತೇ ಇಲ್ಲಿಗೆ ತಂದು ಮಾರಾಟ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಮಾನ್ಯ ಉದಾಸಿಯವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿನ ಧಾರಣೆಯ ಬಗ್ಗೆ ಸದನಕ್ಕೆ ತಿಳಿಸಿದ್ದಾರೆ. ಅಲ್ಲಿನ ಬೆಲೆ ನಮ್ಮ ರಾಜ್ಯಕ್ಕಿಂತ ಭಾರಿ ಕಡಿಮೆ ಪ್ರಮಾಣದಲ್ಲಿ ಇರುವುದನ್ನು ತಾವು ಗಮನಿಸಬೇಕಾಗುತ್ತದೆ. ಮಹಾರಾಷ್ಟ್ರದ ಮೋರ್ಷಿ, ಶೇಗಾಂವ್, ಶಿರೂರ್ ಮತ್ತು ಸೊಲ್ಲಾಪುರದಲ್ಲಿ 3000, 2300, 2857 ಈ ರೀತಿಯ ಧಾರಣೆಗಳು ಇದ್ದಾಗಲೂ ಕೂಡ ಆ ರಾಜ್ಯ ಸರ್ಕಾರ ಮಾರುಕಟ್ಟೆಯನ್ನು ಪ್ರವೇಶ ಮಾಡಲಿಲ್ಲ. ಆದರೆ, ರೈತರ ಹೆಸರಿನಲ್ಲಿ ಪ್ರತಿಜ್ಞಾ ವಿಧಿಯನ್ನು ಸ್ವೀಕಾರ ಮಾಡಿದವರು ಮತ್ತು ರೈತರ ಹೆಸರಿನಲ್ಲಿ ಕೃಷಿ ಆಯವ್ಯಯವನ್ನು ಕೊಟ್ಟಂಥ ಸರ್ಕಾರ ಏನಾದರೂ ಮಾಡಬೇಕೆನ್ನುವ ತೀರ್ಮಾನ ಮಾಡಿತು. ಏಕೆಂದರೆ, ನಮ್ಮಲ್ಲಿ ಬೆಂಬಲ ಬೆಲೆ 3400 ರೂಪಾಯಿಗಳಷ್ಟು ಇದ್ದರೂ ಸಹ ನಾವು ಖರೀದಿ ಮಾಡುವಂತಹ ಪ್ರಯತ್ನವನ್ನು ಮಾಡಿದ್ದೇವೆ. ಏಕೆಂದರೆ ನಾವು ರೈತರ ಪರವಾಗಿದ್ದೇವೆ. ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚಾಗಬೇಕೆನ್ನುವ ಹಿನ್ನೆಲೆಯಲ್ಲಿ ಪ್ರಯತ್ನ ಮಾಡಿದ್ದೇವೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಮಾತ್ರ ಈ ಪರಿಸ್ಥಿತಿ ಉಂಟಾಗಿದೆ. ಇಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದೆ. ಬೀದರ್ ಮತ್ತು ಯಾದಗಿರಿಗೆ ನಿನ್ನೆ ಮತ್ತೇ ಒಂದೊಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ತೊಗರಿಯನ್ನು ಖರೀದಿ ಮಾಡುವಂತಹ ಪ್ರಯತ್ನವನ್ನು ಮಾಡಿದ್ದೇವೆ. ಅಲ್ಲಿರುವ ರೈತರ ಸಮಸ್ಯೆಗಳು ಮತ್ತು ಅವರ ಆತಂಕ ನನಗೆ ಅರ್ಥವಾಗುತ್ತದೆ. ಮಧ್ಯವರ್ತಿಗಳು ಇದನ್ನು ದುರುಪಯೋಗ ಮಾಡುತ್ತಿದ್ದಾರೆ. ಎನ್ನುವಂತಹ ಮಾಹಿತಿ ಅಲ್ಲಿಂದ ಬಂದ ಹಿನ್ನೆಲೆಯಲ್ಲಿ ನಾವು ಅದನ್ನು ಸ್ಥಗಿತಗೊಳಿಸಿದ್ದೇವೆ. ನಾಳೆ ನಾಡಿದ್ದು ಇದರ ಬಗ್ಗೆ ಮತ್ತೆ ಪರಿಶೀಲನೆ ಮಾಡುತ್ತೇನೆ. ಮಧ್ಯವರ್ತಿಗಳ ಪ್ರವೇಶ ಆಗದಿದ್ದರೆ ಮುಂದೆ ಏನು ಮಾಡಬಹುದು ಎನ್ನುವ ನಿಟ್ಟಿನಲ್ಲಿ ಸರ್ಕಾರ ಚಿಂತನೆ ಮಾಡುವುದಕ್ಕೆ

ಬದ್ಧವಾಗಿರುತ್ತದೆ. ಆದರೆ, ರೈತರ ಪರವಾಗಿ ಸರ್ಕಾರ ಇಲ್ಲವೆನ್ನುವ ಮಾತು ಸತ್ಯಕ್ಕೆ ಬಹಳ ದೂರವಾಗಿದೆ ಮತ್ತು ನೋವನ್ನುಂಟು ಮಾಡುತ್ತದೆ. ಇದರ ಬಗ್ಗೆ ಮತ್ತೆ ಪರಿಶೀಲನೆ ಮಾಡಲಾಗುತ್ತದೆ. ಬೀದರ್ ಮತ್ತು ಯಾದಗಿರಿಗೆ ಒಂದೊಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದರಿಂದ ಮತ್ತೆ ತೊಗರಿ ಖರೀದಿಯನ್ನು ಪ್ರಾರಂಭ ಮಾಡುತ್ತೇವೆ.

**ಶ್ರೀಮತಿ ಮೋಟಮ್ಮ** : ಸನ್ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ಸಹಾಯ ಮಾಡಲಿಲ್ಲವೆಂದು ಹೇಳುತ್ತಿದ್ದಾರೆ. ಅವರು ಸಹಾಯ ಮಾಡದಿದ್ದರೆ, ರಾಜ್ಯ ಸರ್ಕಾರ ಒಂದು ಕ್ವಿಂಟಾಲ್ ತೊಗರಿಬೇಳೆಗೆ 3700 ರೂಪಾಯಿಗಳ ಬೆಂಬಲ ಬೆಲೆಯನ್ನು ಹೇಗೆ ಕೊಡುತ್ತದೆ ಎನ್ನುವುದು ನಮ್ಮ ಪ್ರಶ್ನೆಯಾಗಿದೆ. ಅದಕ್ಕೆ 300 ರೂಪಾಯಿಗಳನ್ನು ಸೇರಿಸಿ 4000 ರೂಪಾಯಿಗಳ ಬೆಂಬಲ ಬೆಲೆಯನ್ನು ಘೋಷಣೆ ಮಾಡಿದೆ.

**ಶ್ರೀ ಡಿ. ವಿ. ಸದಾನಂದಗೌಡ** : ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಗೊಂದಲವಾಗಿರಬಹುದು.

**ಶ್ರೀಮತಿ ಮೋಟಮ್ಮ** : ಸನ್ಮಾನ್ಯ ಸಭಾಪತಿಯವರೇ, ಗೊಂದಲವೇನೂ ಇಲ್ಲ.

**ಶ್ರೀ ಡಿ. ವಿ. ಸದಾನಂದಗೌಡ** : ಸನ್ಮಾನ್ಯ ಸಭಾಪತಿಯವರೇ, ನಾವು ಕೇಂದ್ರ ಸರ್ಕಾರದಿಂದ ಸಹಾಯವನ್ನು ತೆಗೆದುಕೊಂಡಿಲ್ಲ. 3200 ರೂಪಾಯಿಗಳಿಗಿಂತ ಕಡಿಮೆ ಬೆಲೆ ಬಿದ್ದರೆ ರೈತರಿಗೆ ಬೆಂಬಲ ಬೆಲೆಯನ್ನು ಕೊಟ್ಟು ನಾವು ಖರೀದಿ ಮಾಡುವುದಕ್ಕೆ ಕೇಂದ್ರ ಸರ್ಕಾರ ನಮಗೆ ಸಹಾಯ ನೀಡುತ್ತದೆ. ಆದರೆ, ಇಲ್ಲಿ ಆ ರೀತಿ ಆಗಲಿಲ್ಲ. ಇಲ್ಲಿ 3400–3500 ರೂಪಾಯಿಗಳಷ್ಟು ಬೆಲೆ ಇತ್ತು. ಆದರೆ, ರೈತರಿಗೆ 4000 ರೂಪಾಯಿಗಳಿಗಿಂತ ಕಡಿಮೆ ಬೆಲೆಯನ್ನು ಕೊಟ್ಟರೆ, ಅವರು ಬೆಳೆಸಿದ ಬೆಳೆಯಿಂದ ಯಾವುದೇ ಲಾಭ ಬರುತ್ತಿರಲಿಲ್ಲ. ಈ ಕಾರಣಕ್ಕಾಗಿ ಸರ್ಕಾರ ಮಧ್ಯೆ ಪ್ರವೇಶ ಮಾಡಿತು. ಅವರು ಹೇಳುತ್ತಿರುವುದು ಸರಿಯಾಗಿದೆ.

**ಶ್ರೀಮತಿ ಮೋಟಮ್ಮ** : ಸನ್ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ಬೆಂಬಲ ಬೆಲೆಯನ್ನು ನಿಗದಿ ಮಾಡಿದೆ.

**ಶ್ರೀ ಡಿ. ವಿ. ಸದಾನಂದ** : ಸನ್ಮಾನ್ಯ ಸಭಾಪತಿಯವರೇ, ನಾವು ಒಂದು ಕ್ವಿಂಟಾಲ್‌ಗೆ 4000 ರೂಪಾಯಿಗಳ ಬೆಂಬಲ ಬೆಲೆಯನ್ನು ಕೊಟ್ಟು ಖರೀದಿ ಮಾಡುತ್ತೇವೆಂದು ಹೇಳಿದ ಮೇಲೆ ಹಾಗೂ ಅಲ್ಲಿ ಮಾರುಕಟ್ಟೆ ಬೆಲೆ ಹೆಚ್ಚಳವಾಗಲಿಲ್ಲವೆಂದು ಸ್ಥಗಿತಗೊಳಿಸಿದ ಮೇಲೆ ರೈತರು ಮಾರುಕಟ್ಟೆ ಧಾರಣೆ ಹೆಚ್ಚಾಗಬಹುದು ಎಂದು ಆಲೋಚನೆ ಮಾಡಿದರು. ಆದರೆ, ಅದರಲ್ಲಿ ಆದಂತಹ ವ್ಯತ್ಯಾಸಗಳಿಂದ ಅವರು ಕಷ್ಟಕ್ಕೆ ಒಳಗಾಗಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನು ಎರಡು ಮೂರು ದಿನಗಳಲ್ಲಿ ಇದರ ಬಗ್ಗೆ ವರದಿಯನ್ನು ತರಿಸಿಕೊಂಡು ಪರಿಶೀಲನೆ ಮಾಡುತ್ತೇನೆ. ತೊಗರಿ ಬೆಳೆಗಾರರಿಗೆ ನಮ್ಮ ನೆರವಿನ ಅಗತ್ಯವಿದೆ ಎನ್ನುವುದಾದರೆ, we will interfere without any hesitation and we will go ahead.

**ಶ್ರೀ ಅಲ್ಲಮಪ್ರಭು ಪಾಟೀಲ್** : ಸನ್ಮಾನ್ಯ ಸಭಾಪತಿಯವರೇ, . . . .ದಯಮಾಡಿ. . . .

**ಸಭಾಪತಿಯವರು** : ಈಗ ಮಾನ್ಯ ವಿರೋಧ ಪಕ್ಷದ ನಾಯಕರು ವಿತ್ತೀಯ ಕಾರ್ಯಕಲಾಪಗಳ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಬೇಕು.

**(ಈ ಹಂತದಲ್ಲಿ ಮಾನ್ಯ ಅಲ್ಲಮಪ್ರಭು ಪಾಟೀಲ್‌ರವರು ಸದನದ ಬಾವಿಯೊಳಗೆ ಆಗಮಿಸಿದರು)**

**ಸಭಾಪತಿಯವರು** : ಮಾನ್ಯ ಮುಖ್ಯಮಂತ್ರಿಗಳು ಸರಿಯಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಆದ್ದರಿಂದ ದಯಮಾಡಿ ಮಾನ್ಯ ಅಲ್ಲಮಪ್ರಭು ಪಾಟೀಲ್‌ರವರು ಹೋಗಿ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಬೇಕು. ಈ ಗಮನ ಸೆಳೆಯುವ ಸೂಚನೆಗೆ ಸುಮಾರು ಒಂದೂವರೆ ಗಂಟೆಗಳ ಕಾಲಾವಕಾಶವನ್ನು ನೀಡಲಾಗಿದೆ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ :** ಸನ್ಮಾನ್ಯ ಸಭಾಪತಿಯವರೇ, ಮಧ್ಯವರ್ತಿಗಳನ್ನು ತಡೆಗಟ್ಟುವ ಕೆಲಸ . .

**ಸಭಾಪತಿಯವರು :** ಮಾನ್ಯ ಅಲ್ಲಮಪ್ರಭು ಪಾಟೀಲ್‌ರವರು ತಮ್ಮ ಸ್ಥಾನಕ್ಕೆ ಮರಳಿ ಸದನ ನಡೆಸುವುದಕ್ಕೆ ಅನುವು ಮಾಡಿಕೊಡಬೇಕು.

**ಶ್ರೀ ಅಲ್ಲಮಪ್ರಭು ಪಾಟೀಲ್ :** ಸನ್ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . . . (ಸದನದ ಬಾವಿಯೊಳಗಿನಿಂದ)

**ಸಭಾಪತಿಯವರು :** ಹಾಗಾದರೆ ಒಂದು ಕೆಲಸ ಮಾಡೋಣ, ಇದೇ ಚರ್ಚೆಯನ್ನು ನಾಳೆನೂ ಮಾಡೋಣ, ನಾನು ಸದನವನ್ನು ಮುಂದಕ್ಕೆ ಹಾಕುತ್ತೇನೆ.

**(ಈ ಹಂತದಲ್ಲಿಲ ಮಾನ್ಯ ಅಲ್ಲಮಪ್ರಭು ಪಾಟೀಲ್‌ರವರು ತಮ್ಮ ಸ್ಥಾನಕ್ಕೆ ಮರಳಿದರು)**

**ಶ್ರೀ ಅಲ್ಲಮಪ್ರಭು ಪಾಟೀಲ್ :** ಸನ್ಮಾನ್ಯ ಸಭಾಪತಿಯವರೇ, ಒಂದು ಹತ್ತು ನಿಮಿಷಗಳ ಅವಕಾಶವನ್ನು ಕೊಡಿ ಡಿ. ಸಿ. ಯವರ ಅಧ್ಯಕ್ಷತೆಯಲ್ಲಿ ನಾಳೆಯಿಂದ ವಿಶೇಷ ಅಧಿಕಾರಿಗಳನ್ನು ನೇಮಕ ಮಾಡಲಿ, ಇದರಲ್ಲಿ ಪರಿಶೀಲಿಸುವುದು ಏನಿದೆ.

**ಸಭಾಪತಿಯವರು :** ಒಂದು ಗಮನ ಸೆಳೆಯುವ ಸೂಚನೆಗೆ ಎರಡು ಗಂಟೆಗಳ ಕಾಲಾವಕಾಶವನ್ನು ನೀಡಲಾಗಿದೆ. ಎಷ್ಟು ಹೊತ್ತು ಸಮಯ ನೀಡುವುದು. ಮಾನ್ಯ ಮುಖ್ಯಮಂತ್ರಿಗಳು ವರದಿಯನ್ನು ತರಿಸಿಕೊಂಡು ಪರಿಶೀಲಿಸುತ್ತೇನೆ ಎಂದು ಹೇಳಿದ್ದಾರೆ.

(ಗೊಂದಲ)

**ಸಭಾಪತಿಯವರು :** ಸಭೆ ನಡೆಸುವುದಕ್ಕೆ ಇಷ್ಟವಿಲ್ಲವೆಂದರೆ ನನ್ನದೇನೂ ಇಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್** : ಸನ್ಮಾನ್ಯ ಸಭಾಪತಿಯವರೇ, ಪಾಯಿಂಟ್ ಆಫ್ ಆರ್ಡರ್.

**Mr. CHAIRMAN :** No point of order. ಕುಳಿತುಕೊಳ್ಳಿ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಅಲ್ಲಮಪ್ರಭು ಪಾಟೀಲ್‌ರವರು ಸದನದ ಬಾವಿಯೊಳಗೆ ಆಗಮಿಸಿದರು)

**ಸಭಾಪತಿಯವರು** : ನೀವು ಸಹಕಾರ ಮಾಡಿ ಸಭೆ ನಡೆಸೋಣ ಎಂದರೆ ಸಭೆ ನಡೆಸೋಣ, ನಿಮಗೆ ಸಭೆ ನಡೆಸುವುದಕ್ಕೆ ಇಷ್ಟವಿಲ್ಲ. ಒಂದೇ ವಿಷಯವನ್ನು ಎರಡು ಗಂಟೆಗಳ ಕಾಲ ಚರ್ಚೆ ಮಾಡುತ್ತೇವೆ ಎಂದರೆ, ನಾನು ಸದನವನ್ನು ನಡೆಸುವುದಕ್ಕೆ ಆಗುವುದಿಲ್ಲ. ದಯಮಾಡಿ ಕ್ಷಮಿಸಬೇಕು. ಒಂದು ಗಮನ ಸೆಳೆಯುವ ಸೂಚನೆಗೆ ಎರಡು ಗಂಟೆಗಳ ಕಾಲಾವಕಾಶವನ್ನು ತೆಗೆದುಕೊಂಡರೆ ಹೇಗೆ?

(ಗೊಂದಲ)

**ಸಭಾಪತಿಯವರು** : ನಾನು ಹೇಳಿದ ಹಾಗೆ ನಡೆಯಬೇಕು ಎಂದರೆ ಆಗುವುದಿಲ್ಲ. ನೀವು ಹೇಳುವುದನ್ನು ನೀವು ಹೇಳಿದ್ದೀರಿ. ಅವರು ಹೇಳುವುದನ್ನು ಅವರು ಹೇಳಿದ್ದಾರೆ. ನನಗೆ ನೀವು ಸಹಕಾರವನ್ನು ನೀಡಬೇಕು. ಬೇಡವೆಂದರೆ ಬೇಡ. ಗಂಟೆ 6.30 ಆಗಿದೆ. ನಾನು ಸಭೆಯನ್ನು ಮುಗಿಸುತ್ತೇನೆ.

(ಈ ಹಂತದಲ್ಲಿ ಮಾನ್ಯ ಅಲ್ಲಮಪ್ರಭು ಪಾಟೀಲರವರು ಬಾವಿಯೊಳಗಿನಿಂದ ನಾನು ವಾಕ್‌ಔಟ್ ಮಾಡುತ್ತೇನೆ ಎಂದು ಕೂಗುತ್ತಿದ್ದರು)

**ಸಭಾಪತಿಯವರು** : ನೀವು ಏನುಬೇಕಾದರೂ ಮಾಡಬಹುದು ಅದು ನಿಮ್ಮಿಷ್ಟು ನಾನು ಹೀಗೆ ಮಾಡಿ ಎಂದು ಯಾರಿಗೂ ಹೇಳುವುದಿಲ್ಲ.

ಸರ್ಕಾರಕ್ಕೂ ಹೇಳುವುದಿಲ್ಲ. ನಿಮಗೂ ಹೇಳುವುದಿಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಈಗ ಮಾನ್ಯ ವಿರೋಧ ಪಕ್ಷದ ನಾಯಕಿಯವರು ವಿತ್ತೀಯ ಕಾರ್ಯಕಲಾಪಗಳ ಮೇಲಿನ ಚರ್ಚೆಯನ್ನು ಪ್ರಾರಂಭ ಮಾಡಬೇಕಾಗಿದೆ. ತಾವು ತಯಾರಿದ್ದರೆ, ಇವತ್ತು ಪ್ರಾರಂಭ ಮಾಡಿ ಇವತ್ತು ಎಷ್ಟು ಹೊತ್ತು ಆಗುತ್ತದೆ ಅಷ್ಟು ಹೊತ್ತು ಚರ್ಚೆ ಮಾಡೋಣ ಉಳಿದಿರುವುದನ್ನು ನಾಳೆ ತೆಗೆದುಕೊಳ್ಳೋಣ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು) :** ಸನ್ಮಾನ್ಯ ಸಭಾಪತಿಯವರೇ, ದಯಮಾಡಿ ತಾವು ಕ್ಷಮಿಸಬೇಕು. ಈಗಾಗಲೇ ಸಮಯವಾಗಿದೆ. ಇಷ್ಟು ಹೊತ್ತಿನಲ್ಲಿ ನಾನು ಮಾತನಾಡಲ್ಲ. ನಾನು ನಾಳೆ ಬೆಳಿಗ್ಗೆ ಮಾತನಾಡುತ್ತೇನೆ.

**ಸಭಾಪತಿಯವರು :** ಹಾಗಾದರೆ ನಾಳೆ ಚರ್ಚೆ ಮಾಡೋಣವೇ?

**ಶ್ರೀಮತಿ ಮೋಟಮ್ಮ :** ನಾಳೆ ಮಾಡೋಣ.

**ಸಭಾಪತಿಯವರು :** ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11 ಗಂಟೆಗೆ ಸೇರುವುದು.

**(ಸದನವು ಸಂಜೆ 6 ಗಂಟೆ 15 ನಿಮಿಷಗಳಿಗೆ ಮುಕ್ತಾಯಗೊಂಡು ಪುನಃ ದಿನಾಂಕ 27ನೇ ಮಾರ್ಚ್ ಮಾಹೆ 2012ರ ಮಂಗಳವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು.)**